ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

11 ಜನವರಿ 2017 ಪುಟ 20 ರೂ. 15/-

ಹಾಸ್ಯಲೇಖನ
ಮದುವೆ
ನ್ಯಾಯ



'ದಂಗಲ್' ಎಂಬ ಅದ್ಭುತ

ಾರವಾರ: ಬಿಜೆಪಿ ಬಿಡಾರದಲ್ಲಿ ಅಸ್ನೋಟಿಕರ್

ಂಡ್ಯ: ಕಾಂಗ್ರೈ ಪುಢಾರಿಗಳಿಗೆ ಅಮಾಯಕರ ಬಲಿ

ಾಯಕೊಂಡ: ಹಳೆ 'ನಾಯ್ಕ'ರಿಗೆ ಗೇಟ್‌ಪಾಸ್?

ೋಣ: ಜೆಡಿಎಸ್‌ನಲ್ಲಿ ಟಿಕೆಟ್ ವಾರ್

ಕೊಡಗು ಪ್ಲಾಂಟೇಶನ್ ರಿಪಬ್ಲಿಕ್



ದಿಡ್ಡಳ್ಳಿ ಘಟನೆ: ಆದಿವಾಸಿಗಳ ಅಸ್ತಿತ್ವದ ಪ್ರಶ್


ಕೊಡಗಿನ ದಿಡ್ಡಳ್ಳಿ ಅರಣ್ಯ ಪ್ರದೇಶದ ಆದಿವಾಸಿಗಳನ್ನು ದಿಢೀರನೆ ಅರಣ್ಯ ಇಲಾಖೆಯವರು ಒಕ್ಕಲೆಬ್ಬಿಸಿದ್ದಾರೆ. ಒಕ್ಕಲೆಬ್ಬಿಸುವ ಕ್ರಿಯೆ ಎಷ್ಟು ಕ್ರೂರವಾಗಿತ್ತೆಂದರೆ, ಹಲವು ಜೆಸಿಬಿಗಳನ್ನು ಏಕಕಾಲಕ್ಕೆ ಅವರ ಟೆಂಟ್ ಮನೆಗಳ ಮೇಲೆ ನುಗ್ಗಿಸಿ ಗುಡಿಸಲುಗಳಲ್ಲಿ ನಿತ್ಯದ ಆಹಾರಕ್ಕಾಗಿ ಸಂಗ್ರಹಿಸಿದ್ದ ಕಾಳುಕಡ್ಡಿಗಳನ್ನು, ಟೆಂಟ್‌ಗಳಲ್ಲಿದ್ದ ಸಾಮಾನುಗಳನ್ನು ನೆಲಸಮ ಮಾಡಲಾಗಿದೆ. ಪ್ರತಿಭಟಿಸಿದ ಆದಿವಾಸಿ ಸಮುದಾಯದ ಹೆಂಗಸರನ್ನು ಬೆತ್ತಲು ಮಾಡಿ ಥಳಿಸಲಾಗಿದೆ. ಇಲ್ಲಿನ ಅರಣ್ಯವು ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯಲ್ಲಿ ಬರುವುದರಿಂದ ಆದಿವಾಸಿಗಳು ಇಲ್ಲಿ 'ಅಕ್ರಮ'ವಾಗಿ ವಾಸ್ತವ್ಯ ಹೂಡಿ ಕಾನೂನನ್ನು ಉಲ್ಲಂಘಿಸಿದ್ದಾರೆ ಎಂಬುದು ಅರಣ್ಯ ಇಲಾಖೆಯವರ ಮಾಮೂಲಿನ ಸಮಜಾಯಿಷಿ. ಸರಕಾರದ ಅಧಿಕಾರಿಗಳು, ಸಚಿವರು ಮುಂತಾದ ಜನ ಕಾನೂನಿನ ತೊಡಕು, ಆದಿವಾಸಿಗಳ ಕುರಿತು ಇರುವ ಕಾಯ್ದೆಗಳಲ್ಲಿನ ಗೊಂದಲಗಳನ್ನು ಎತ್ತಿತೋರಿಸಿ ತಮ್ಮ ದಿವ್ಯ ಅಸಹಾಯಕತೆಯನ್ನು ವ್ಯಕ್ತಪಡಿಸಿ ಸುಮ್ಮನಾಗುತ್ತಾರೆ. (ಎಷ್ಟೋ ಸಂದರ್ಭಗಳಲ್ಲಿ ಆದಿವಾಸಿಗಳಿಗೆ ಅನುಕೂಲಕರವಾಗಿರುವ ಕಾಯ್ದೆಗಳನ್ನು ಓದದೇ ಕಳ್ಳ ಮುಗ್ಧತೆಯನ್ನೋ, ದಿವ್ಯ ಉಡಾಫೆಯನ್ನೋ ಈ ಅಧಿಕಾರಿಗಳು ತೋರುತ್ತಾರೆ.) ಒಕ್ಕಲೆದ್ದ ಆದಿವಾಸಿಗಳು ದಿಕ್ಕೆಟ್ಟು ನಗರಗಳ ಸ್ಲಮ್‌ಗಳ ಪಾಲಾಗುತ್ತಾರೆ, ಇಲ್ಲವೆ ಸ್ಥಳೀಯ ಕಾಫಿತೋಟಗಳ ಲೈನ್‌ಮನೆಗಳಲ್ಲಿ ಬಂಧಿಗಳಾಗುತ್ತಾರೆ. ಅಲ್ಲಿಗೆ ಸರಕಾರ ನಡೆಸಿದ ಈ ಅನ್ಯಾಯದ ನಡೆ ಇತಿಹಾಸವಾಗಿಬಿಡುತ್ತದೆ. ಆದಿವಾಸಿಗಳಂತಹ ಸಮುದಾಯಗಳು ಕೇವಲ ಬದುಕುವುದಕ್ಕಾಗಿ ನಡೆಸಿದ ಈ ಹೋರಾಟ ಮೊದಲನೆಯದೂ ಅಲ್ಲ, ಕೊನೆಯದಂತೂ ಅಲ್ಲವೇ ಅಲ್ಲ. ಈ ದೇಶದಲ್ಲಿ ಬದುಕುವ ಹಕ್ಕಿಗಾಗಿ ಆದಿವಾಸಿಗಳು ನಡೆಸಿದ ಹೋರಾಟಗಳಿಗೆ ಸುದೀರ್ಘ ಇತಿಹಾಸವಿದೆ.

ವಸಾಹತುಶಾಹಿ ಆಡಳಿತದ ಆರಂಭದಲ್ಲಿ ಅರಣ್ಯ ನೀತಿ ಮತ್ತು ಭೂಹಿಡುವಳಿಗಳಿಗೆ ಸಂಬಂಧಿಸಿದಂತೆ ಅದು ರೂಪಿಸಿದ ಅಮಾನವೀಯ ಕಾನೂನುಗಳ ವಿರುದ್ಧ ಆದಿವಾಸಿಗಳು ಅನೇಕ ಹೋರಾಟಗಳಲ್ಲಿ ಪಾಲ್ಗೊಂಡಿದ್ದಾರೆ. ಅರಣ್ಯ ಮತ್ತು ಕೃಷಿಭೂಮಿಯ ಮೇಲೆ ಇರುವ ತಮ್ಮ ಪಾರಂಪರಿಕ ಅವಲಂಬನೆಯನ್ನು 'ನಾಗರಿಕ' ಜಗತ್ತಿಗೆ ಮನವರಿಕೆ ಮಾಡಿಸಲು ಆದಿವಾಸಿಗಳು ತಮ್ಮ ಭೂಹೋರಾಟಗಳ ಮೂಲಕ ಇನ್ನೂ ಪ್ರಯತ್ನಿಸುತ್ತಲೇ ಇದ್ದಾರೆ. ಅರಣ್ಯ ಮತ್ತು ಭೂಮಿಯ ಜೊತೆ ಹೊಂದಿರುವ ಅನನ್ಯ ಅನುಸಂಧಾನದಿಂದಾಗಿಯೇ ಭಾರತದ ಆದಿಮ ಸಮಾಜಗಳ ಸಂಸ್ಕೃತಿ ರೂಪುಗೊಂಡಿದೆ. ಆದಿವಾಸಿಗಳಿಗೆ 'ಭೂಮಿ' ಕೇವಲ ಆರ್ಥಿಕ ಭದ್ರತೆಯನ್ನು ಒದಗಿಸುವ ಸಂಪನ್ಮೂಲ ಮಾತ್ರವಲ್ಲ, ಅವರ ಸ್ಮೃತಿ ಜಗತ್ತಿನಲ್ಲಿ ಬೆರೆತು ಹೋದ ಒಂದು ದಿವ್ಯ ಮೋಹ. ಆದಿವಾಸಿಗಳು ಭೂಮಿಯ ಜೊತೆಗೆ ಒಂದು ಬಗೆಯ ಆಧ್ಯಾತ್ಮಿಕ ಸಂಬಂಧವನ್ನು ಏರ್ಪಡಿಸಿಕೊಂಡಿದ್ದಾರೆ. ನೇಗಿಲಿನಿಂದ ಉಳುಮೆ ಮಾಡಿದರೆ ಭೂಮಿಯ ಎದೆ ಸೀಳಿದಂತೆ ಎಂದು ಭಾವಿಸಿದ್ದರಿಂದಲೇ, ಆದಿಮ ಸಮಾಜಗಳು ಕುಮ್ರಿ ಬೇಸಾಯ ಕ್ರಮವನ್ನು ಅನುಸರಿಸುತ್ತಿದ್ದವು. ಈ ಕಾರಣಕ್ಕಾಗಿ ಆದಿವಾಸಿಗಳು ಪುಟ್ಟ ಉಪಕರಣಗಳಿಂದ ಲಘು ಕೃಷಿಯಲ್ಲಿ ತೊಡಗುತ್ತಿದ್ದರು. ಒಂದೇ ಕಡೆ ನಿರಂತರವಾಗಿ ಭೂಮಿಯನ್ನು ಉಳುಮೆ ಮಾಡಿದರೆ ಪರಿಸರ ಅಸಮತೋಲನವಾಗುವುದೆಂದು ಅರಣ್ಯದ ಹಲವು ಕಡೆ ಲಘು ಬೇಸಾಯದಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಈಗಲೂ ಆದಿವಾಸಿಗಳು ಕಾಡಲ್ಲಿಯ ಒಂದು ಮರ ಕಡಿಯುವುದೆಂದರೆ ಒಬ್ಬ ಮನುಷ್ಯನನ್ನು ಕೊಂದಂತೆಯೇ ಎಂದು ಭಾವಿಸುತ್ತಾರೆ. ಇಂದಿಗೂ ಬಿಳಿಗಿರಿ ರಂಗನಬೆಟ್ಟದ ಸೋಲಿಗರು ತಮ್ಮ ಜೊತೆಗಿದ್ದ ವ್ಯಕ್ತಿಯೊಬ್ಬ ಸತ್ತಾಗ ಅನುಭವಿಸುವ ದುಃಖವನ್ನು, ಮರವೊಂದನ್ನು ಕಡಿದಾಗಲೂ ಅನುಭವಿಸುತ್ತಾರೆ. ಹೀಗಾಗಿ ಅರಣ್ಯ ಮತ್ತು ಭೂಮಿಯ ಒಡೆತನವೆನ್ನುವುದು ಆದಿವಾಸಿಗಳಿಗೆ ಕಾನೂನುಬದ್ಧವಲ್ಲ, ಈ ಎರಡರ ಜೊತೆಗಿನ ಅವರ ಸಂಬಂಧ ಪಾರಂಪರಿಕವಾದದ್ದು. ಈ ಬಗೆಯ ಅಮಾಯಕ ಸಂಬಂಧ ಆಧುನಿಕ ಜಗತ್ತಿನ 'ನಾಗರಿಕ ಆಕ್ರಮಣಕಾರರಿಗೆ' ವರದಾನವಾಯ್ತು. ಕಾನೂನುಗಳು ಕೇಳುವ ಮೂರ್ತ ಸಾಕ್ಷಿಗಳು ಆದಿವಾಸಿಗಳ ಬಳಿ ಇಲ್ಲವಾಗಿ ಅವರ ಜಮೀನುಗಳು ವಶಪಡಿಸಿಕೊಳ್ಳಲ್ಪಟ್ಟವು. ವಸಾಹತು ಆಡಳಿತ ಅರಣ್ಯ ಮತ್ತು ಕೃಷಿ ಭೂಮಿಯ ಮೇಲೆ ರೂಪಿಸಿದ ಕಾನೂನುಗಳು ಆದಿವಾಸಿಗಳ ಜೊತೆ ಎಲ್ಲ ದುಡಿವ ಸಮುದಾಯಗಳು ನೆಲೆ ತಪ್ಪುವಂತೆ ಮಾಡಿದವು.

18 ಮತ್ತು 19ನೇ ಶತಮಾನದಲ್ಲಿ ಬ್ರಿಟಿಷರು ತಂದ ಅರಣ್ಯನೀತಿ ಮತ್ತು ಕೃಷಿಭೂಮಿಯ ಕುರಿತು ತಂದ ಕಾಯ್ದೆಗಳು ವಸಾಹತು ಆಡಳಿತದ ಹಿತ ಕಾಯಲೆಂದೇ ರೂಪಿಸಲ್ಪಟ್ಟವು. ಈ ಕಾಯ್ದೆಗಳು ಭಾರತದ ಆದಿಮ ಕೃಷಿಕ ಸಮಾಜಗಳ ಭೂಮಿ ಮತ್ತು ಅರಣ್ಯಗಳ ಮೇಲಿನ ಪಾರಂಪರಿಕ ಅವಲಂಬನೆಯನ್ನು ನಾಶಮಾಡಿದವು.



ಕಾನೂನುಬದ್ಧ ಒಡೆತನವನ್ನು ಮಾತ್ರ ಈ ಕಾಯ್ದೆಗಳು ಅನುಮೋದಿಸಿದವು. ಆದಿವಾಸಿಗಳು ವಾಸಿಸುವ ಘಟ್ಟ ಪ್ರದೇಶಗಳಲ್ಲಿ ತಮ್ಮ ಕಾಫಿ ಮತ್ತು ಟೀ ಎಸ್ಟೇಟ್‌ಗಳನ್ನು ವಿಸ್ತರಿಸಲು ಪ್ಲಾಂಟರುಗಳು ವಸಾಹತು ಸೈನ್ಯದ ಮೂಲಕ ಆದಿವಾಸಿಗಳಿಗೆ ಮುಖಾಮುಖಿಯಾದರು. ಅರಣ್ಯವನ್ನು ಪ್ರಭುತ್ವ 'ರಾಷ್ಟ್ರೀಕರಣಗೊಳಿಸಿತು'. ಮೇಲ್ನೋಟಕ್ಕೆ 'ರಾಷ್ಟ್ರೀಕರಣಗೊಂಡ' ಅರಣ್ಯ ಸರ್ಕಾರದ 'ಸ್ವತ್ತಾ'ಗಿ ಪರಿಗಣಿಸಲ್ಪಟ್ಟಿತು. ರಾಷ್ಟ್ರದ ಹಿತದ ದೃಷ್ಟಿಯಿಂದ ಅರಣ್ಯವನ್ನು ಆದಿವಾಸಿಗಳು ಬಿಟ್ಟುಹೋಗಬೇಕೆಂದು ಅರಣ್ಯ ಕಾಯ್ದೆ ಆದಿವಾಸಿಗಳಿಗೆ ಆಜ್ಞಾಪಿಸಿತು. ಆದಿವಾಸಿಗಳು ಈ ಕಾಯ್ದೆಯನ್ನು ಆಗಿನಿಂದಲೇ ಪ್ರತಿಭಟಿಸುತ್ತಾ ಬಂದರು. ಅರಣ್ಯ ಮತ್ತು ಕೃಷಿ ಭೂಮಿಯ ಕುರಿತು ತಮ್ಮ ಪಾರಂಪರಿಕ ಅವಲಂಬನೆಯನ್ನು ಮುಂದುವರಿಸಿಕೊಂಡು ಹೋಗಲು ವಸಾಹತು ಆಡಳಿತದ ಕಾಲದಿಂದ ಇಲ್ಲಿಯವರೆಗೂ ಆದಿವಾಸಿಗಳು ಹೋರಾಟ ಮಾಡುತ್ತಲೇ ಬಂದಿದ್ದಾರೆ. ಯಾವುದನ್ನು ನಾವು ಭಾರತದ ಸ್ವಾತಂತ್ರ್ಯ ಚಳವಳಿ ಎಂದು ಕರೆಯುತ್ತೇವೋ ಅದರ ಬೇರುಗಳಿರುವುದು ಆದಿವಾಸಿಗಳ ಇಂತಹ ವಿಮೋಚನಾ ಹೋರಾಟಗಳಲ್ಲಿ. ಕೃಷಿ ಭೂಮಿ, ಅರಣ್ಯಗಳ ಅತಿಕ್ರಮಣ, ದುರ್ಭರವಾದ ಕಂದಾಯ ನೀತಿಗಳನ್ನು ಜಾರಿಗೆ ತಂದ ವಸಾಹತು ಆಡಳಿತದ ವಿರುದ್ಧ ಆದಿವಾಸಿಗಳು ಮತ್ತು ರೈತರು ಸಾಂಘಿಕ ಹೋರಾಟ ಮಾಡುತ್ತಲೇ ಬಂದಿದ್ದಾರೆ. 18ನೇ ಶತಮಾನದ ಕೊನೆಯ ಹೊತ್ತಿಗೆ ಸನ್ಯಾಸಿ ಫಕ್ಕೀರರ ದಂಗೆ ಆರಂಭಗೊಂಡಿತು. ಆನಂತರ ಭಾರತದ ದಂಡಕಾರಣ್ಯ, ಈಶಾನ್ಯ ಭಾರತದ ಎಲ್ಲೆಡೆ ಆದಿವಾಸಿಗಳು ಈ ದೇಶದ ನಿಜವಾದ ವಿಮೋಚನಾ ಹೋರಾಟಗಳನ್ನು ಸಂಘಟಿಸಿದರು. ಈ ಹೋರಾಟಗಳು ವಸಾಹತು ಆಡಳಿತದಿಂದ ಯಾಂತ್ರಿಕ 'ಬಿಡುಗಡೆ'ಯನ್ನು ಬಯಸಿರಲಿಲ್ಲ, ನಮಗೆ ಸಿಗುವ 'ಸ್ವಾತಂತ್ರ್ಯ' ಸಮಗ್ರ ವಿಮೋಚನೆಯನ್ನು ಅಂತರ್ಗತವಾಗಿರಿಸಿಕೊಂಡಿರಬೇಕು ಎಂಬುದು ಈ ಹೋರಾಟಗಳ ಬಹುಮುಖ್ಯ ಆಶಯವಾಗಿತ್ತು. ಈ ಕಾರಣಗಳಿಗಾಗಿ ಆದಿವಾಸಿಗಳನ್ನೂ ಒಳಗೊಂಡಂತೆ ದುಡಿವ ಸಮುದಾಯಗಳ ವಿಮೋಚನಾ ಹೋರಾಟಗಳಲ್ಲಿ ಪಾರ್ಶ್ವಿಕ ಮತ್ತು ಸ್ಥಿತಿಶಾಸಕ್ತಿಗಳಿಗೆ ಪೂರಕವಾದ ಆಶಯಗಳಿರಲಿಲ್ಲ. ಈ ಕಾರಣಕ್ಕಾಗಿಯೇ 'ಸ್ವಾತಂತ್ರ್ಯ ಬಂದ' ಖುಷಿಯನ್ನು ತೆಲಂಗಾಣದ ರೈತರು ಅನುಭವಿಸಲಾಗದೆ 'ನಮ್ಮದೇ' ಸೈನ್ಯದ ತುಪಾಕಿಗಳಿಗೆ ಬಲಿಯಾಗಿ ಹೋದರು.



ವಸಾಹತುಶಾಹಿ ಅರಣ್ಯನೀತಿ

ವಸಾಹತು ಆಡಳಿತವು 1865ರಲ್ಲಿ ರೂಪಿಸಿದ ಅರಣ್ಯನೀತಿಯು, ವಸಾಹತುಶಾಹಿಗಳು ಅರಣ್ಯ ಮತ್ತು ಆದಿವಾಸಿಗಳ ಕುರಿತು ಹೇಗೆ ಯೋಚಿಸುತ್ತಿದ್ದರು ಎಂಬುದನ್ನು ಎತ್ತಿ ತೋರಿಸುತ್ತದೆ. ಲ್ಯಾಟಿನ್ ಅಮೆರಿಕ ಮತ್ತು ಆಫ್ರಿಕಾದ ದೇಶಗಳಲ್ಲಿ ವಸಾಹತುಶಾಹಿಗಳು ಯಾವ ಬಗೆಯಲ್ಲಿ ನಿಸರ್ಗವನ್ನು ಮತ್ತು ಮಾನವ ಸಂಪನ್ಮೂಲಗಳನ್ನು ಕೊಳ್ಳೆಹೊಡೆದು ತಮ್ಮ ಸಾಮ್ರಾಜ್ಯಗಳನ್ನು ಕಟ್ಟಿಕೊಂಡರೋ, ಅದಕ್ಕಿಂತ ಹೀನಾಯವಾಗಿ ಭಾರತದಲ್ಲಿ ನಡೆದುಕೊಂಡರು. ಸೈನ್ಯದ ಬಲ ನಡೆಯದಿದ್ದ ಕಡೆ ಬ್ರಿಟಿಷರು ಅಮಾನವೀಯ ಕಾನೂನುಗಳನ್ನು ಹೇರಿ ತಮ್ಮ ಆಡಳಿತವನ್ನು ಸುಗಮಗೊಳಿಸಿಕೊಳ್ಳುತ್ತಿದ್ದರು. ತಮ್ಮ ಕಾಫಿ ಎಸ್ಟೇಟುಗಳನ್ನು ಬೆಳೆಸಲು, ರೈಲು ಮಾರ್ಗ ಹಾಕಲು, ಎಲ್ಲಕ್ಕಿಂತ ಮುಖ್ಯವಾಗಿ ಗೆರಿಲ್ಲಾ ಮಾದರಿಯ ಯುದ್ಧದಲ್ಲಿ ವಸಾಹತು ಆಡಳಿತವನ್ನು ಇನ್ನಿಲ್ಲದಂತೆ ಸೋಲಿಸಿಬಿಟ್ಟಿದ್ದ ಆದಿವಾಸಿಗಳನ್ನು ಮಟ್ಟಹಾಕಲು ಕಂಪನಿ ಆಡಳಿತ ತಮಗೆ ಅನುಕೂಲವಾದ ಅರಣ್ಯನೀತಿಯನ್ನು ಜಾರಿಗೆ ತರಲೇಬೇಕಿತ್ತು. ಅರಣ್ಯ ಯಾರದು? ಯಾರು ಅದನ್ನು ಬಳಸಬೇಕು? ಅರಣ್ಯದಲ್ಲಿ ಯಾರಿರಬೇಕು? ಯಾರಿರಬಾರದು? ಎಂಬೆಲ್ಲ ಸಂಗತಿಗಳು ಈ ಅರಣ್ಯ ನೀತಿಯಿಂದ ಸ್ಪಷ್ಟಗೊಂಡವು. ಇವತ್ತಿನ ಸಂರಕ್ಷಿತ ಅರಣ್ಯ, ಅಭಯಾರಣ್ಯ, ವನ್ಯಮೃಗ ಸಂರಕ್ಷಣೆ, ರಾಷ್ಟ್ರೀಯ ಉದ್ಯಾನ ಎಂಬ 'ಕಾಡುಳಿಸುವ' ಆಧುನಿಕ ಸೋಗಲಾಡಿತನದ ಬೇರುಗಳು ಈ ಪುರಾತನ ಕಾಯ್ದೆಯಲ್ಲಿವೆ. ಭಾರತಕ್ಕೆ ಸ್ವಾತಂತ್ರ್ಯ ಬಂದು 70 ವರ್ಷ ಕಳೆದರೂ ಇಲ್ಲಿನ ಅರಣ್ಯನೀತಿ, ವಸಾಹತು ಆಡಳಿತದ ಅರಣ್ಯನೀತಿಯ ಯಥಾವತ್ತು ನಕಲಾಗಿಯೇ ಉಳಿದುಕೊಂಡಿದೆ. ವಸಾಹತು ಆಡಳಿತದ ಸಂದರ್ಭದಲ್ಲಿ ಕಂಪನಿ ಸರ್ಕಾರ ಮೊದಲ ಬಾರಿಗೆ **The Madras Forest Act 1865** ಎಂಬ ಕಾಯ್ದೆಯನ್ನು ಜಾರಿಗೆ ತಂದಿತ್ತು. ಆನಂತರ ಕಾಲಕಾಲಕ್ಕೆ ವಸಾಹತು ಆಡಳಿತ ಈ ಕೆಳಗಿನಂತೆ ಅರಣ್ಯ ನೀತಿಯನ್ನು ಪುನರೂಪಿಸುತ್ತಲೇ ಬಂದಿದೆ. ಆ ಕಾಯ್ದೆಗಳು ಹೀಗಿವೆ.

1. **The Indian Forest Act 1878,**
2. **The Forest Act 1890,**
3. **The Amending Act 1891,**
4. **The Indian Forest (Amending) Act 1901,**
5. **The Indian Forest (Amending) Act 1911,**
6. **The Repealing and Amending Act 1914,**
7. **The Indian Forest Amendment Act 1918,**
8. **The Devolution Act 1920**

ಹೀಗಾಗಿ ಭಾರತದಲ್ಲಿ ಬ್ರಿಟಿಷರು ಜಾರಿಗೆ ತಂದ ಅರಣ್ಯನೀತಿ ವಸಾಹತು ಆಡಳಿತದ ಉದ್ದೇಶಗಳ ಈಡೇರಿಕೆಗೆ ನೂರಕ್ಕೆ ನೂರು ಪೂರಕವಾಗಿತ್ತು. ಹೆಸರಿಗೆ ಮಾತ್ರ ಪರಿಸರ ಕಾಳಜಿ ಮತ್ತು ರಾಷ್ಟ್ರದ ಹಿತಾಸಕ್ತಿ ಎಂಬ ಮಾಯೆಯ ಪರದೆಯನ್ನು ತಮ್ಮ ಅಮಾನವೀಯ ಹುನ್ನಾರಗಳಿಗೆ ವಸಾಹತು ಆಡಳಿತ ಹೊದಿಸುತ್ತಿತ್ತು. ರಾಷ್ಟ್ರೀಯ ಉದ್ಯಾನ, ಸಂರಕ್ಷಿತ ಅರಣ್ಯ, ಅಭಯಾರಣ್ಯ ಎಂಬ ಪರಿಕಲ್ಪನೆಗಳೇ ಅನೇಕ ವೈರುಧ್ಯಗಳನ್ನು ತಮ್ಮಲ್ಲಿಟ್ಟುಕೊಂಡಿವೆ. ಈ ಎಲ್ಲ ಪರಿಕಲ್ಪನೆಗಳ ಹಿಂದೆ ಅತ್ಯಂತ ಸ್ಪಷ್ಟವಾಗಿ ವಸಾಹತುಶಾಹಿಗಳ ದುರುದ್ದೇಶಗಳು ಎದ್ದು ಕಾಣುತ್ತವೆ. ರಾಷ್ಟ್ರೀಯ ಉ... ಮತ್ತು ಅಭಯಾರಣ್ಯಗಳನ್ನು ರೂಪಿಸಲು ಇವರ ಕ... ಕಾರಣಗಳು ಎರಡು.

1. ಅರಣ್ಯಗಳು ಭೂಮಿಯ ವಾತಾವರಣ... ಕಾಪಾಡುತ್ತವೆ, ಆದಕ್ಕಾಗಿ ಅವುಗಳನ್ನು ಕಾಪಾಡ...
2. ವನ್ಯಮೃಗಗಳು ನಾಶವಾಗುತ್ತಿವೆ. ಅವುಗಳ... ಅಭಿವೃದ್ಧಿಪಡಿಸುವುದರ ಜೊತೆಗೆ ಅವುಗ... ಸಂರಕ್ಷಿಸುವ ಹೊಣೆ ಸರ್ಕಾರದ್ದು.

ಹೀಗೆಂದ ಸರ್ಕಾರ, ರಾಷ್ಟ್ರೀಯ ಉದ್ಯಾ... ಹೃದಯಭಾಗದಲ್ಲಿ ಗಣಿಗಾರಿಕೆಗೆ ಮತ್ತು ಬೃಹತ್ ಡ್ಯಾ... ಕಟ್ಟಲು ಸಾವಿರಾರು ಎಕರೆ ಪ್ರದೇಶವನ್ನು ಯಾ... ಹೇಳದೇ ಕೇಳದೆ ಬಲಿಕೊಟ್ಟಿರುವ ಅನೇಕ ಉದಾಹರ... ನಮ್ಮೆಲ್ಲರ ಕಣ್ಣೆದುರಿಗೆ ನಡೆದುಹೋಗಿವೆ. ಸ... ಅರಣ್ಯಗಳಲ್ಲಿ ಬಂಡವಾಳಶಾಹಿಗಳು ಹೋ... ಉದ್ಯಮವನ್ನು ಸ್ಥಾಪಿಸಲು ಭೂಮಿ ಕೇಳಿದಾ... ಬಿಟ್ಟುಕೊಡುವ ಧಾರಾಳ ಗುಣವನ್ನು ನಮ್ಮ ಸರ್ಕಾ... ಪ್ರದರ್ಶಿಸಿವೆ. ಯಾವುದಾದರೂ ಉದ್ಯಮಿ ಅರಣ್ಯದ ... ಕಾರ್ಖಾನೆ ಸ್ಥಾಪಿಸಲೆಂದು ಉದ್ದೇಶಿಸಿ ಬಿಟ್ಟರೆ ಅ... ಸಕಲ ಸೌಕರ್ಯವನ್ನು ನೀಡಲು ಸರ್ಕಾರಗಳು ಮುಂ... ಘಟನೆಗಳು ಜರುಗಿಹೋಗಿವೆ. ಇಂತಹ ವಸಾಹತು ... ನೀತಿಯೇ ಸ್ವಾತಂತ್ರ್ಯಾನಂತರ ಭಾರತದ ಅರಣ್ಯ ನೀತಿ... ಮುಂದುವರೆಯಿತು. ವಸಾಹತು ಆಡಳಿತ ಭೌತಿಕ... ಭಾರತವನ್ನು ಬಿಟ್ಟುತೊಲಗಿದರೂ, ತನ್ನ ಮಾಜಿ ಮ... ಗಳ ಅಂತಸ್ಥ ಜಗತ್ತಿನಲ್ಲಿ ತನ್ನೆಲ್ಲ ವಿರೂಪಗಳನ್ನು ... ಅಮಾನವೀಯ ಕಾಯ್ದೆಗಳ ರೂಪದಲ್ಲಿ ಕಾಲಕಾ... ಜೀವಂತವಾಗಿಡುತ್ತಲೇ ಬಂದಿತು.

ಅರಣ್ಯಗಳನ್ನು ಅನೇಕ ಕಾರಣಗಳಿಗಾಗಿ ರಕ್ಷಿಸಬೇ... ಉದ್ದೇಶದಿಂದ ಸರ್ಕಾರ ಒಂದು ಇಲಾಖೆಯನ್ನೇ ರೂ... ಗೃಹ ಮತ್ತು ರಕ್ಷಣಾ ಸಚಿವಾಲಯದಷ್ಟೇ ಪ್ರಬಲ... ಇಲಾಖೆಯಾಗಿ ಅರಣ್ಯ ಇಲಾಖೆ ಪರಿಗಣಿಸಲ್ಪಟ್ಟಿದೆ. ಮೊದಲೇ ಹೇಳಿದಂತೆ ಅರಣ್ಯ ಇಲಾಖೆಗೆ ಸಂಬಂ... ಕಾಯ್ದೆ ಕಾನೂನುಗಳು ವಸಾಹತು ಆಡಳಿತ ರ... ಅರಣ್ಯ ನೀತಿಗೆ ಪೂರಕವಾಗಿಯೇ ಇವೆ. ಸ್ವಾತಂತ್ರ್ಯಾ... ಭಾರತ ಸರ್ಕಾರ ವಸಾಹತುಶಾಹಿ ಕಾನೂನುಗಳನ್ನೇ ... ಬದಲಿಸಿ ಜಾರಿಗೆ ತಂದಿತು. ಅದರಲ್ಲೂ ವಸಾಹತು ಆ... ಅರಣ್ಯದಲ್ಲಿಯ ಬುಡಕಟ್ಟು ಸಮುದಾಯಗಳ ಕು... ಹೆಚ್ಚಾಗಿ ಬಿಗಿ ನಿಲುವನ್ನೇ ತಾಳಿತ್ತು. ಈ ಆದಿವಾಸಿ... ವ್ಯವಸ್ಥಿತವಾಗಿ ಅವರ ವಾಸಸ್ಥಾನಗಳಿಂದ ಹೊರಹಾಕಬೇ... ವಸಾಹತು ಆಡಳಿತಕ್ಕೆ ಪ್ರಬಲ ಪ್ರತಿರೋಧ ಒಡ್ಡ... ಆದಿವಾಸಿಗಳ ಆತ್ಮವಿಶ್ವಾಸ ನಾಶವಾಗಿ, ಅವರ ಸಾ... ಬದುಕು ವಿಘಟಿತವಾಗಬೇಕೆಂಬುದೇ ವಸಾಹತು ಆಡ... ಉದ್ದೇಶವಾಗಿತ್ತು. ವಿಶ್ವಭಾರತಿ ವಿಶ್ವವಿದ್ಯಾಲಯದ ಪ್ರ... ಮಾನವಶಾಸ್ತ್ರಜ್ಞ ರಾಯ್ ಬರ್ಮನ್ ಹೀಗೆ ಹೇಳು... "ಅರಣ್ಯದಲ್ಲಿ ವಾಸಿಸುವ ಬಹುತೇಕ ಜನ ಆದಿ... ಸಮುದಾಯಗಳಿಗೆ ಸೇರಿದವರಾಗಿದ್ದಾರೆ. ಇವರು ಕೇ... ಅರಣ್ಯವಾಸಿಗಳು ಮಾತ್ರವಲ್ಲ, ಆ ಅರಣ್ಯದ ಜೊತೆ... ಯಲ್ಲೇ ತಮ್ಮ ಬದುಕುಗಳನ್ನು ರೂಪಿಸಿಕೊಳ್ಳು... ಇನ್ನೊಂದೆಡೆ ಅರಣ್ಯದ ಸ್ನಿಗ್ಧ ಪರಿಸರವನ್ನು ಕಾಪಾಡು... ಕಾಡುಗಳ್ಳರಿಂದ, ಕಾಳ್ಗಿಚ್ಚುಗಳಿಂದ ಅರಣ್ಯದ ಬೆಲೆಬಾ... ಸಂಪತ್ತನ್ನು ಕಾಯ್ದುಕೊಂಡು ಬಂದಿದ್ದಾರೆ. ಅರಣ್ಯ ಮ... ಆದಿವಾಸಿಗಳ ಈ ಸಹಬಾಳ್ವೆಗೆ ಕುತ್ತು ಬಂದದ್ದು ವಸಾ... ಆಡಳಿತದ ಸಂದರ್ಭದಲ್ಲಿ. ವಸಾಹತು ಆಡ... ಸಂದರ್ಭದಲ್ಲಿ ಅರಣ್ಯ ಕಂಪನಿಯ ಆದಾಯವನ್ನು ಹೆಚ್ಚ... ಒಂದು ಆರ್ಥಿಕ ಮೂಲವಾಗಿ ಮಾತ್ರ ಪರಿಗಣಿಸಲ್ಪ... ಈ ಭೂಗೋಳದ ವಾತಾವರಣವನ್ನು ಸಮತೋ... ಗೊಳಿಸುವ ಮತ್ತು ಮನುಷ್ಯನ ಬದುಕನ್ನು ಹಸನುಮಾ... ಒಂದು ಜೈವಿಕ ಪ್ರಕ್ರಿಯೆಯೆಂದು ಅರಣ್ಯವನ್ನು ವಸಾ... ಆಡಳಿತ ಪರಿಗಣಿಸಲೇ ಇಲ್ಲ." (ಡಾ. ರಾಯ್ ಬರ್ಮ... **Report of Committe on Forest a... Tribals in India 1982).**

ಭಾರತ ಸರ್ಕಾರದ ಅರಣ್ಯನೀತಿ ಮತ್ತು ಆದಿವಾಸಿಗಳು

ಆದಿವಾಸಿಗಳ ಅಸ್ತಿತ್ವದ ಕುರಿತು, ಹಲವು ಮಾ... ಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು ಮತ್ತು ರಾಜಕಾರಣಿ... ವಿವಿಧ ರೀತಿಯಲ್ಲಿ ಪ್ರತಿಕ್ರಿಯಿಸಿದ್ದಾರೆ. ಆದಿವಾಸಿ... ಅರಣ್ಯದಲ್ಲಿರಬೇಕೆ? ಬೇಡವೇ? ಅರಣ್ಯದ ಉಪಉತ್ಪನ್ನ... ಯಾರು ಸಂಗ್ರಹಿಸಬೇಕು? ಅರಣ್ಯ ಮತ್ತು ಆದಿವಾಸಿ... ಸಂಬಂಧದ ಸ್ವರೂಪವೇನು? ಆದಿವಾಸಿಗಳ ಅಭಿವೃದ್ಧಿ... ಸಾಧಿಸುವ ಬಗೆ ಯಾವುದು? ಆದಿವಾಸಿಗಳು ಅರಣ್ಯದ... ಬೇಕೆ ಅಥವಾ ಅರಣ್ಯದ ಆಚೆಗೆ 'ಮುಖ್ಯಪ್ರವಾ...


⇨ 1

'ದಂಗಲ್' ಎಂಬ ಅದ್ಭುತ



• ಗೌರಿ ಲಂಕೇಶ್

editorlankesh@gmail.com



ಹಲವು ತಿಂಗಳುಗಳ ಹಿಂದೆ ಒಂದು ಸಭೆಯಲ್ಲಿ ...ಮಿರ್ ಖಾನ್ "ಭಾರತದಲ್ಲಿ ಹೆಚ್ಚುತ್ತಿರುವ ಅಸಹಿಷ್ಣುತೆ ...ಂದ ಕಂಗಾಲಾಗಿರುವ ನನ್ನ ಪತ್ನಿ 'ಬೇರೆ ಯಾವುದಾದರೂ ...ಶಕ್ಕೆ ವಲಸೆ ಹೋಗೋಣವೇ?' ಎಂದು ಕೇಳಿದಳು. ...ಯಲ್ಲಿ ಅಂತಹ ಚಿಂತನೆ ಮೂಡಿದ್ದೇ ನನಗೆ ಅಚ್ಚರಿ ...ಾಯಿತು" ಎಂದಿದ್ದ. ಆಗ ಪರಮ ದೇಶಭಕ್ತರಾದ ...ಗಳು ಮತ್ತು ಮೋದಿ ಭಕ್ತರು "ಆಮಿರ್ ಖಾನ್ ...ಕಿಸ್ತಾನಕ್ಕೆ ತೊಲಗಲಿ", "ಆತನ ಸಿನಿಮಾಗಳನ್ನು ...ಶಸ್ವಿಗೊಳಿಸಿದ್ದು ಭಾರತೀಯರು ಎಂಬುದು ಅವನಿಗೆ ...ತ್ತೋ?", "ಆಮಿರ್ ಖಾನನ 'ದಂಗಲ್' ಸಿನಿಮಾವನ್ನು ...ಹಿಷ್ಕರಿಸಿ" ಎಂದೆಲ್ಲ ಚೀರಾಡಿದ್ದರು. ಆದರೀಗ ಅದೇ ...ಮಿರ್ ಖಾನ್ ನಿರ್ಮಿಸಿ-ನಟಿಸಿರುವ ಅದೇ 'ದಂಗಲ್' ...ಮಾ ಎಲ್ಲಾ ದಾಖಲೆಗಳನ್ನು ಮುರಿದು ಬಿಡುಗಡೆಗೊಂಡ ...ೊದಲ ಮೂರು ದಿನಗಳಲ್ಲೇ ನೂರು ಕೋಟಿ ...ಪಾಲಿಗಳಿಗಿಂತಲೂ ಹೆಚ್ಚು ಮೊತ್ತವನ್ನು ಗಲ್ಲಾಪೆಟ್ಟಿಗೆಯಲ್ಲಿ ...ಸಿದೆ. ಹಾಗೆ ಮಾಡುವ ಮೂಲಕ ಒಂದು ಒಳ್ಳೆಯ ...ಮಾವನ್ನು ಭಾರತೀಯರು ಬೆಂಬಲಿಸುತ್ತಾರೆ ಎಂದೂ, ...ಮ್ಮ ದೇಶದಲ್ಲಿ ಕೋಮುವಾದಿ ಚಿಡ್ಡಿಗಳಿಗಿಂತ ಇನ್ನೂ ...ಹಾರ್ದವನ್ನು ಬಯಸುವ, ಸಹಿಷ್ಣುತೆಯಲ್ಲಿ ನಂಬಿಕೆ ...ಟ್ಟಿರುವ ಜನರೇ ಬಹುಸಂಖ್ಯಾತರಾಗಿದ್ದಾರೆ ಎಂದೂ ...ಬೀತುಪಡಿಸಿದ್ದಾರೆ. ಅಂದರೆ ಸಹಬಾಳ್ವೆಯನ್ನು ಬಯಸುವ ...ರತೀಯರು ಆಮಿರ್ ಖಾನನ 'ದಂಗಲ್' ಸಿನಿಮಾವನ್ನು ...ಸುವ ಮೂಲಕ ತಾವೂ ಗೆದ್ದಿದ್ದಾರೆ ಎನ್ನಬಹುದು.

ಆಮಿರ್ ಖಾನ್ ಇತರೆ ಬಾಲಿವುಡ್ ನಟರಂತೆ ...ಪರ್‌ಸ್ಟಾರ್ ಹೌದು. ಆದರೆ ಆತ ಮತ್ತು ಶಾರುಖ್ ...ನ್ ಮತ್ತು ಸಲ್ಮಾನ್ ಖಾನ್ ತರಹದ ಸೂಪರ್ ...ರ್‌ಗಳ ನಡುವೆ ದೊಡ್ಡ ವ್ಯತ್ಯಾಸವಿದೆ. ಅದೇನೆಂದರೆ ...ರರಿಗೆ ತಮ್ಮ ಸ್ಟಾರ್ ಇಮೇಜ್ ಮುಖ್ಯವಾದರೆ ...ಮಿರನಿಗೆ ಸಿನಿಮಾದ ತಿರುಳೇ ಮುಖ್ಯವಾಗುತ್ತದೆ. ಆ ...ಣಕ್ಕೇ ಇವತ್ತಿಗೂ ಶಾರುಖ್ 'ಡಿಯರ್ ಜಿಂದಗಿ' ...ಹದ ಸಿನಿಮಾದಲ್ಲಿ ರೋಮ್ಯಾಂಟಿಕ್ ಹೀರೋ ...ದಿದ್ದರೂ ತನ್ನ ತುಂಟ ನಗೆ ಮತ್ತು ಇತರೆ ಹಾವಭಾವ ...ನ್ನು ತೊರೆಯುವುದಿಲ್ಲ; ಸಲ್ಮಾನ್ ಖಾನ್ ಕೂಡ ...ಲ್ತಾನ್' ಸಿನಿಮಾದಲ್ಲಿ ತನ್ನ ಕಟ್ಟುಮಸ್ತಾದ ಮೈಕಟ್ಟನ್ನೇ ...ದರ್ಶನ ಮಾಡಿಕೊಳ್ಳುತ್ತಾನೆಯೇ ಹೊರತು ಬೇರೆ ಯಾವ ...ಶಗಳನ್ನೂ ಅಲ್ಲ. ಆದರೆ ಆಮಿರ್ ಹಾಗಲ್ಲ. 'ತಾರೆ ...ಮೀನ್ ಪರ್' ಎಂಬ ಸಿನಿಮಾದ ಹೀರೋ ಆಮಿರ್ ..., ಬದಲಾಗಿ ಒಬ್ಬ ಎಂಟು ವರ್ಷದ ಬಾಲಕ. '3 ...ಡಿಯಟ್ಸ್' ಮತ್ತು 'ರಂಗ್‌ದೆ ಬಸಂತಿ' ಸಿನಿಮಾಗಳಲ್ಲೂ ...ಮಿರ್‌ನೊಂದಿಗೆ ಇನ್ನಿಬ್ಬರು/ಮೂವರು ಪ್ರಮುಖ ನಟರು ...ಮಾನಾಂತರ ಸ್ಥಾನ ಪಡೆಯುತ್ತಾರೆ. 'ದಂಗಲ್'ನಲ್ಲಂತೂ ...ಮಿರ್ ಇನ್ನೊಂದು ಹೆಜ್ಜೆ ಮುಂದೆ ಹೋಗಿ ಚಿತ್ರದ ...ರಡನೆ ಭಾಗದಲ್ಲಿ ಹೆಣ್ಣು ಮಕ್ಕಳಿಗೆ ಸ್ಕ್ರೀನ್ ಮೇಲೆ ...ಜಾಗವನ್ನು ಬಿಟ್ಟುಕೊಟ್ಟಿದ್ದಾನೆ. ಹಾಗೆ ಮಾಡುವ ಮೂಲಕ ...ಒಂದು ಅದ್ಭುತವಾದ ಸಿನಿಮಾವನ್ನು ಭಾರತೀಯರಿಗೆ ...ಕೊಟ್ಟಿದ್ದಾನೆ.

'ದಂಗಲ್' ಸಿನಿಮಾದಲ್ಲಿ ವಿಶೇಷವಾದದ್ದು ಏನಿದೆ ...ದು ನೋಡುವುದು ಅಗತ್ಯ. ಈ ಸಿನಿಮಾ ಆಧರಿಸಿರು...ದು ಹರ್‍ಯಾಣದ ಒಂದು ಕುಗ್ರಾಮದಲ್ಲಿ ವಾಸಿಸುತ್ತಾ ...ಇಬ್ಬರು ಹೆಣ್ಣು ಮಕ್ಕಳನ್ನು ಅಂತರರಾಷ್ಟ್ರೀಯ ಮಟ್ಟದ ...ಪಟುಗಳಾಗಿ ರೂಪಿಸಿದ ಮಹಾವೀರ್ ಸಿಂಗ್ ...ಫೋಗಟ್ ಎಂಬ ಮಾಜಿ ಕುಸ್ತಿಪಟುವಿನ ಜೀವನಗಾಥೆ ...ನ್ನು. ಈ ನಿಜಗಾಥೆಗೆ ಹಲವು ಸಿನಿಮೀಯ ಅಂಶಗಳನ್ನು ...ಸೇರಿಸಲಾಗಿದೆ.

ಮಹಾವೀರ್ ಕೂಡ (ಸಿನಿಮಾದಲ್ಲಿ) ರಾಷ್ಟ್ರಮಟ್ಟದಲ್ಲಿ ...ದ ಪದಕ ಗಳಿಸಿದ್ದ ಕುಸ್ತಿಪಟುವೇ. ಆತನಿಗೆ ...ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶಕ್ಕೆ ಒಂದು ಚಿನ್ನದ ...ಕ ಗಳಿಸಬೇಕೆಂಬ ಹೆಬ್ಬಯಕೆ. ಆದರೆ ಜೀವನ ನಡೆಸಲು ...ಕ ಗಳಿಕೆ ಅಗತ್ಯವಾದ್ದರಿಂದ ಆತ ತನ್ನ ಕನಸನ್ನು ...ದು ಹಳ್ಳಿಯೊಂದರಲ್ಲಿ ಒಂದು ಸಾಮಾನ್ಯ ನೌಕರಿ ಮಾಡುತ್ತಿರುತ್ತಾನೆ. ತನ್ನ ಚಿನ್ನದ ಪದಕದ ಕನಸನ್ನು ತನ್ನ ಮಗ ಈಡೇರಿಸುತ್ತಾನೆಂಬ ನಂಬಿಕೆ ಆತನಿಗಿರುತ್ತದೆ. ಆದರೆ ಆತನಿಗೆ ಮೊದಲು ಹೆಣ್ಣು ಮಗು ಹುಟ್ಟುತ್ತದೆ. ಎರಡನೆಯದಾದರೂ ಗಂಡಾಗಲಿ ಎಂದು ಗಂಡಹೆಂಡತಿ ಪ್ರಾರ್ಥಿಸುತ್ತಾರೆ, ಹರಕೆಗಳನ್ನು ಹೊರುತ್ತಾರೆ, ತಾಯತಗಳನ್ನು ಕಟ್ಟಿಸಿಕೊಳ್ಳುತ್ತಾರೆ, ಪೂಜೆ ಇತ್ಯಾದಿಗಳನ್ನೆಲ್ಲ ನೆರವೇರಿಸುತ್ತಾರೆ. ಆದರೂ ಹೆಂಡತಿಗೆ ಎರಡನೆ, ಮೂರನೆ ಮತ್ತು ನಾಲ್ಕನೆ ಬಾರಿಯೂ ಹೆಣ್ಣು ಮಕ್ಕಳೆ ಹುಟ್ಟುತ್ತಾರೆ. ಇದರಿಂದಾಗಿ ಮಹಾವೀರನಿಗೆ ಗಂಡು ಮಗ ಹಡೆಯಲಿಲ್ಲ ಎಂದು ತನ್ನ ಹೆಂಡತಿ ಬಗ್ಗೆ ಕೋಪವಿಲ್ಲ, ಬದಲಾಗಿ ತನ್ನ ಕನಸು ನನಸಾಗುವುದಿಲ್ಲ ಎಂಬ ಅಪಾರ ನಿರಾಶೆಯಂತೂ ಆಗುತ್ತದೆ.

ಒಮ್ಮೆ ಆತನ ಪಕ್ಕದ ಮನೆಯವರ ಇಬ್ಬರು ಹುಡುಗರನ್ನು ಯಾರೋ ಹೊಡೆದಿದ್ದಾರೆ ಎಂದು ಆ ಮಕ್ಕಳ ತಂದೆತಾಯಂದಿರು ದೂರು ಹೊತ್ತು ಬರುತ್ತಾರೆ. ತಕ್ಷಣವೇ ಮಹಾವೀರ್ ಅವರಿಬ್ಬರಿಗೆ ಹೊಡೆದವನು ತನ್ನ ಸಹೋದರನ ಪುತ್ರ ಎಂದೆನಿಸಿ ಆತನಿಗೆ ಬಾರಿಸುತ್ತಾನೆ. ಆದರೆ ಆನಂತರ ಆತನಿಗೆ ಗೊತ್ತಾಗುತ್ತದೆ, ಆ ಹುಡುಗರನ್ನು ಹೊಡೆದಿರುವುದು ತನ್ನ ಇಬ್ಬರು ಹಿರಿಯ ಪುತ್ರಿಯರೆಂದು. "ಹೇಗೆ ಹೊಡೆದಿರಿ?" ಎಂದು ವಿಚಾರಿಸಿದಾಗ ಆ ಹೆಣ್ಣುಮಕ್ಕಳು "ಅವರು ನಮ್ಮನ್ನು ಕಿಚಾಯಿಸಿದರು. ಅದಕ್ಕೆ ಬಾರಿಸಿದೆವು" ಎಂದು ವಿವರಿಸುತ್ತಾರೆ. ಆಗ ಮಹಾವೀರನಿಗೆ ತನ್ನ ಹೆಣ್ಣುಮಕ್ಕಳಲ್ಲೂ ಕುಸ್ತಿಪಟುತ್ವ ಇದೆ ಎಂದು ಅರ್ಥವಾಗಿ "ಚಿನ್ನದ ಪದಕ ಚಿನ್ನದ ಪದಕವೇ, ಅದನ್ನು ಮಗ ತಂದರೂ ಒಂದೇ, ಮಗಳು ತಂದರೂ ಒಂದೇ" ಎಂದು ನಿರ್ಧರಿಸುತ್ತಾನೆ.

ಆಗ ಶುರುವಾಗುತ್ತದೆ ಆ ಹೆಣ್ಣುಮಕ್ಕಳ ಸಮಸ್ಯೆ. ಅವರಿಬ್ಬರಿಗೆ ಕುಸ್ತಿಪಟುಗಳಾಗಬೇಕೆಂಬ ಆಸಕ್ತಿ ಇಲ್ಲದಿದ್ದರೂ ಅಪ್ಪ ಅವರಿಬ್ಬರನ್ನು ಬಲವಂತವಾಗಿ ತರಬೇತಿಗೆ ಹಚ್ಚುತ್ತಾನೆ. ಸಲ್ವಾರ್ ಕಮೀಜ್ ತೊಟ್ಟು ಮುಂಜಾನೆ ಓಡುವುದು ಕಷ್ಟ ಎಂದು ಅವರಿಬ್ಬರು ರಾಗ ತೆಗೆದಾಗ ತನ್ನ ಸಹೋದರನ ಮಗನ ಪ್ಯಾಂಟುಗಳನ್ನು ಕತ್ತರಿಸಿ ಅವುಗಳನ್ನು ತೊಡುವಂತೆ ಆದೇಶಿಸುತ್ತಾನೆ. ಮಣ್ಣಿನಲ್ಲಿ ತರಬೇತಿ ಪಡೆಯುತ್ತಿರುವುದರಿಂದ ತಮ್ಮ ಉದ್ದ ಕೂದಲು ಗಲೀಜಾಗುತ್ತದೆಂದು ಅವರು ಜಾರಿಕೊಳ್ಳಲು ಪ್ರಯತ್ನಿಸಿದಾಗ ಅವರಿಬ್ಬರ ಕೂದಲನ್ನೇ ಕತ್ತರಿಸುತ್ತಾನೆ. ಇನ್ನು ಮುಂದೆ ತನ್ನ ಹೆಣ್ಣುಮಕ್ಕಳಿಗೆ ಮನೆ ಕೆಲಸ ಕೊಡಕೂಡದೆಂದು ಪತ್ನಿಗೆ ಹೇಳುವ ಮಹಾವೀರ್ ಆಕೆಯ ವಿರೋಧದ ನಡುವೆಯೂ ಹೆಣ್ಣುಮಕ್ಕಳಿಗೆ ಮಾಂಸಾಹಾರ ರೂಢಿ ಮಾಡಿಸುತ್ತಾನೆ.

ಇದೆಲ್ಲ ಸುಖಾಸುಮ್ಮನೆ ಆಗುವುದಿಲ್ಲ. ತನ್ನ ಪತ್ನಿಯ ವಿರೋಧವನ್ನಲ್ಲದೆ, ಹಳ್ಳಿಯ ಸಂಪ್ರದಾಯಸ್ಥರ ಟೀಕೆಗಳನ್ನು ಮತ್ತು ಲೇವಡಿಗಳನ್ನೂ ಆತ ಎದುರಿಸುತ್ತಾನೆ. ಅದೂ ಇವತ್ತಿಗೂ ಹೆಣ್ಣು ಭ್ರೂಣಹತ್ಯೆ ಹೆಚ್ಚಾಗಿರುವ, ಖಾಪ್ ಪಂಚಾಯತ್‌ಗಳು ಹೆಣ್ಣುಮಕ್ಕಳ ನಡತೆಯನ್ನು ನಿಯಂತ್ರಿಸುವ ಹರ್‍ಯಾಣ ತರಹದ ರಾಜ್ಯದಲ್ಲಿ ಹೆಣ್ಣು ಮಕ್ಕಳನ್ನು ಕುಸ್ತಿಪಟುಗಳಾಗಿ ರೂಪಿಸುತ್ತೇನೆನ್ನುವುದು ಸುಲಭದ ಮಾತಲ್ಲ.

ಮಹಾವೀರ್ ತನ್ನ ಮಕ್ಕಳಾದ ಗೀತಾ ಮತ್ತು ಬಬಿತಾ ಶಿಸ್ತಿನ ಜೀವನ ನಡೆಸಬೇಕೆಂದು ಒತ್ತಾಯಿಸುತ್ತಿ ರುತ್ತಾನೆ. ಒಮ್ಮೆ ಅವರಿಬ್ಬರು ಆತನಿಗೆ ಗೊತ್ತಾಗದ ಹಾಗೆ ಗೆಳತಿಯ ಮದುವೆಗೆ ಹೋದಾಗ ಆತ ಉಗ್ರಗೊಂಡು ಅವರಿಬ್ಬರಿಗೂ ಬಾರಿಸುತ್ತಾನೆ. ತಮ್ಮ ತಂದೆ ತಮ್ಮನ್ನು ಕುಸ್ತಿಪಟು ಗಳಾಗಲು ಒತ್ತಾಯಿಸುತ್ತಿದ್ದಾನೆ ಎಂದು ಅವರಿಬ್ಬರು ಬೇಸರ ವ್ಯಕ್ತಪಡಿಸಿದಾಗ ಹಸಮಣೆ ಏರಲಿರುವ ಅವರ ಗೆಳತಿ "ನಿಮ್ಮ ಅಪ್ಪ ನಿಮಗೆ ಬೇರೆ ಅವಕಾಶಗಳನ್ನು ತೆರೆದಿಡುತ್ತಿದ್ದಾನೆ. ಆದರೆ ನನ್ನ ಅಪ್ಪ ನನಗೆ ಏನು ಬೇಕೆಂದೂ ಕೇಳದೆ ಮದುವೆ ಮಾಡಿ ಕೈತೊಳೆದುಕೊಳ್ಳುತ್ತಿದ್ದಾನೆ" ಎಂದು ಕಣ್ಣೀರಿಡುತ್ತಾಳೆ. ಆಗ ಗೀತಾ ಮತ್ತು ಬಬಿತಾರಿಗೆ ತಮ್ಮ ಅಪ್ಪ ಕಾಣುತ್ತಿರುವುದು ಸಾಮಾನ್ಯ ಕನಸಲ್ಲ ಬದಲಾಗಿ ಅವರ ಬದುಕನ್ನೇ ಹೊಸ ದಿಕ್ಕಿನತ್ತ ತೆಗೆದುಕೊಂಡು ಹೋಗಬಲ್ಲ ಮಾರ್ಗವನ್ನು ಎಂದು ಅರ್ಥವಾಗುತ್ತದೆ. ಅವತ್ತಿನಿಂದ ಅವರಿಬ್ಬರೂ ಆಸಕ್ತಿಯಿಂದ ಕುಸ್ತಿ ಕಲಿಯಲಾರಂಭಿಸುತ್ತಾರೆ.

ಸ್ವಲ್ಪ ದಿನಗಳ ನಂತರ ಅವರಿಬ್ಬರನ್ನೂ ಮಹಾವೀರ್ ಕುಸ್ತಿ ಪಂದ್ಯದಲ್ಲಿ ಭಾಗವಹಿಸಲು ಕರೆದುಕೊಂಡು ಹೋಗುತ್ತಾನೆ. ಆದರೆ ಹೆಣ್ಣುಮಕ್ಕಳಿಗೆ ಅವಕಾಶ ಇಲ್ಲವೆಂದು ಆತನಿಗೆ ಪಂದ್ಯದ ಆಯೋಜಕ ಬೈದು ಕಳುಹಿಸುತ್ತಾನೆ. ಆಗ ಆಯೋಜಕನ ಮಿತ್ರನೊಬ್ಬ "ಬರೀ ಹುಡುಗರು ಭಾಗವಹಿಸುವ ಪಂದ್ಯಕ್ಕೆ ಹೆಚ್ಚು ಟಿಕೆಟ್‌ಗಳು ಮಾರಾಟವಾಗುವುದಿಲ್ಲ. ಅದೇ ಹುಡುಗರೊಂದಿಗೆ ಹುಡುಗಿಯೊಬ್ಬಳು ಸ್ಪರ್ಧಿಸುತ್ತಾಳೆ ಎಂದರೆ ಜನ ನುಗ್ಗಿ ಬರುತ್ತಾರೆ" ಎಂಬ ಆರ್ಥಿಕ ಆಮಿಷ ಒಡ್ಡುತ್ತಾನೆ. ಇದಕ್ಕೆ ಒಪ್ಪುವ ಆಯೋಜಕ ಹುಡುಗಿಯೊಬ್ಬಳು ಅಖಾಡಕ್ಕೆ ಇಳಿಯುತ್ತಿದ್ದಾಳೆ ಎಂದು ಊರಲ್ಲೆಲ್ಲ ಡಂಗೂರ ಬಾರಿಸುತ್ತಾನೆ. ಅದನ್ನು ವೀಕ್ಷಿಸಲು ಜನ ಹರಿದುಬರುತ್ತಾರೆ. ಗೀತಾಳ ಮುಂದೆ ನಾಲ್ಕು ಯುವಕರನ್ನು ನಿಲ್ಲಿಸಿ ತನ್ನ ಪ್ರತಿಸ್ಪರ್ಧಿಯನ್ನು ಆಯ್ಕೆ ಮಾಡಿಕೊಳ್ಳಲು ಹೇಳುತ್ತಾರೆ. ಅವರಲ್ಲೇ ಗಟ್ಟಿಗನಾಗಿ ಕಾಣುವವನನ್ನೇ ಆಕೆ ಆಯ್ಕೆ ಮಾಡಿಕೊಳ್ಳುತ್ತಾಳೆ. ಆಗ ಕುಸ್ತಿಯ ಮೇಲ್ವಿಚಾರಕ ಹುಡುಗನಿಗೆ "ಹುಡುಗಿಯ ಜೊತೆ ಆಡುತ್ತಿದ್ದೀಯ ಎಂದು ನೆನಪಿರಲಿ" ಎನ್ನುತ್ತಾನೆ. ಅದಕ್ಕೆ ಗೀತಾ "ನಾನು ಹುಡುಗಿ ಅನ್ನುವುದನ್ನು ಮರೆ" ಎಂದು ಸವಾಲು ಹಾಕುತ್ತಾಳೆ.

ಆ ಪಂದ್ಯದಲ್ಲಿ ಆಕೆ ಸೋಲುತ್ತಾಳಾದರೂ ಆಕೆ ಉತ್ತಮ ಕುಸ್ತಿಪಟು ಎಂಬುದು ಜಗಜ್ಜಾಹೀರಾಗುತ್ತದೆ. ಆನಂತರ ಆಕೆ ಹಲವಾರು ಪಂದ್ಯಗಳಲ್ಲಿ ಗೆದ್ದು ರಾಜ್ಯಮಟ್ಟದ ಕುಸ್ತಿಪಟುವಾಗುತ್ತಾಳೆ. ಕೊನೆಗೆ ಆಕೆ ರಾಷ್ಟ್ರಮಟ್ಟದಲ್ಲೂ ಚಿನ್ನದ ಪದಕ ಗೆದ್ದು ಅಂತಾರಾಷ್ಟ್ರೀಯ ಪಂದ್ಯದಲ್ಲಿ ಭಾಗವಹಿಸಲು ಆಯ್ಕೆಯಾಗುತ್ತಾಳೆ. ಆದರೆ ಇನ್ನು ಮುಂದೆ ಮಹಾವೀರ್ ಆಕೆಯ ತರಬೇತುದಾರ ಆಗಿರುವುದಿಲ್ಲ ಬದಲಾಗಿ ರಾಷ್ಟ್ರಮಟ್ಟದ ಮಹಿಳಾ ಕುಸ್ತಿ ತಂಡದ ತರಬೇತುದಾರನ ಅಡಿ ಆಕೆ ಕಲಿಯಬೇಕೆಂದು ಸರ್ಕಾರ ಆದೇಶಿಸುತ್ತದೆ. ಇದರಿಂದ ಮಹಾವೀರನಿಗೆ ತುಂಬಾ ಬೇಸರವಾಗುತ್ತದೆ. ಎಲ್ಲಿ ತಾನು ಕಲಿಸಿಕೊಟ್ಟಿದ್ದನ್ನೆಲ್ಲ ಮಗಳು ಮರೆಯುತ್ತಾಳೋ, ಎಲ್ಲಿ ಶಿಸ್ತನ್ನು ತೊರೆಯುತ್ತಾಳೋ ಎಂದೆಲ್ಲ ಆತಂಕಗೊಳ್ಳುತ್ತಾನೆ.

ಗೀತಾ ಹಾಗೆಯೇ ಮಾಡುತ್ತಾಳೆ. ಅಪ್ಪ ಹೇಳಿಕೊಟ್ಟಿದ್ದ ಪಟ್ಟುಗಳನ್ನು ಬಿಟ್ಟು ತನ್ನ ಹೊಸ ಕೋಚ್ ಹೇಳಿಕೊಟ್ಟಿದ್ದನ್ನು ಪಾಲಿಸಲಾರಂಭಿಸು ತ್ತಾಳೆ. ಶಿಸ್ತಿನ ಬದುಕನ್ನು ತೊರೆದು ಗೆಳತಿಯ ರೊಂದಿಗೆ ಮಜಾ ಮಾಡುತ್ತಾಳೆ, ಮಾಲ್‌ಗಳನ್ನು ಸುತ್ತುತ್ತಾಳೆ, ಕೂದಲನ್ನು ಉದ್ದ ಬೆಳೆಸಿಕೊಂಡು, ನೈಲ್ ಪಾಲಿಶ್ ಹಾಕಿಕೊಂಡು ಶೋಕಿ ಮಾಡುತ್ತಾಳೆ. ಆಕೆ ಒಮ್ಮೆ ಹಳ್ಳಿಗೆ ಬಂದಾಗ ಅಪ್ಪ ಮತ್ತು ಮಗಳ ನಡುವೆ ಸಂಘರ್ಷ ವೇರ್ಪಡುತ್ತದೆ. ಇಬ್ಬರೂ ತಾವು ಮಾಡುತ್ತಿರುವುದೇ ಸೈ ಎನ್ನುವವರು. ಇದು ಅಪ್ಪ ಮತ್ತು ಮಗಳ ನಡುವಿನ ಕುಸ್ತಿಗೆ ಕಾರಣವಾಗುತ್ತದೆ. ಆ ದೃಶ್ಯವಂತೂ ಅದ್ಭುತವಾಗಿದೆ. ಅರವತ್ತು ವರ್ಷ ವಯಸ್ಸನ್ನು ತಲುಪುತ್ತಿರುವ ಅಪ್ಪ ಗಟ್ಟಿಮುಟ್ಟಾಗಿರುವ ಹರೆಯದ ಮಗಳು. ಅವರಿಬ್ಬರ ಕುಸ್ತಿ ಪೈಪೋಟಿಯಲ್ಲಿ ಮಗಳು ಗೆದ್ದು ಅಪ್ಪ ಸೋಲುತ್ತಾನೆ. ಕಾರಣ ಆತನಿಗಿಂತ ಆಕೆ ಉತ್ತಮ ಕುಸ್ತಿಪಟು ಎಂಬುದಲ್ಲ ಬದಲಾಗಿ ಆತನ ಮುಪ್ಪು.

ಹೀಗೆ ಅಪ್ಪನ ವಿರುದ್ಧವೇ ಗೆಲ್ಲುವ ಗೀತಾ ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಮಾತ್ರ ಸೋಲಿನ ಸರಮಾಲೆಯನ್ನೇ ಕಾಣುತ್ತಾಳೆ. ವರ್ಷಗಳು ಕಳೆದಂತೆ ಚಿನ್ನದ ಪದಕ ಗೆಲ್ಲುವ ಕನಸು ದೂರವಾಗುತ್ತಾ ಹೋಗುತ್ತದೆ. ಇದಕ್ಕೆ ಮುಖ್ಯ ಕಾರಣ ತಂದೆ ಹೇಳಿಕೊಟ್ಟಿದ್ದ ಆಕ್ರಮಣಕಾರಿ ಶೈಲಿಯನ್ನು ತೊರೆದು ಹೊಸ ಕೋಚ್ ಹೇಳಿಕೊಟ್ಟಿರುವ ರಕ್ಷಣಾತ್ಮಕ ಶೈಲಿಯನ್ನು ಆಕೆ ಅಳವಡಿಸಿಕೊಂಡಿರುವುದರಿಂದ.

ಅಷ್ಟುಹೊತ್ತಿಗೆ ಆಕೆಯ ತಂಗಿ ಬಬಿತಾ ಕೂಡ ರಾಷ್ಟ್ರಪದಕ ಪಡೆದು ಆಕೆಯೂ ಅದೇ ತರಬೇತಿ ಕೇಂದ್ರಕ್ಕೆ ಬಂದಿರುತ್ತಾಳೆ. ಅಪ್ಪನ ಜೊತೆ ಮಾತನ್ನೂ ಬಿಟ್ಟಿರುವ ಗೀತಾಳ ಮನವೊಲಿಸಿ ಅಪ್ಪನಿಂದ ಮಾರ್ಗದರ್ಶನ ಪಡೆಯಬೇಕೆಂದು ಬಬಿತಾ ಹೇಳುತ್ತಾಳೆ. ಗೀತಾ ಹಾಗೆಯೇ ಮಾಡುತ್ತಾಳೆ.

ಮಗಳ ನೆರವಿಗೆ ಧಾವಿಸುವ ಮಹಾವೀರ್ ಅದೇ ನಗರದಲ್ಲಿ ಮನೆಯನ್ನು ಹಿಡಿದು ಮಗಳಿಗೆ ಮಾರ್ಗದರ್ಶನ ಕೊಡಲು ನಿಲ್ಲುತ್ತಾನೆ. ಆಕೆ ಸೋತಿರುವ ಪಂದ್ಯಗಳ ಸೀಡಿಗಳನ್ನು ಪಡೆದು ಆಕೆ ಎಲ್ಲಿ ತಪ್ಪು ಮಾಡುತ್ತಿದ್ದಾಳೆಂದೂ, ಅದನ್ನು ಹೇಗೆ ಮೀರಬಹುದೆಂದೂ ಹೇಳಿಕೊಡುತ್ತಾನೆ. ಗೀತಾ ಮತ್ತೆ ಶಿಸ್ತಿನ ಸಿಪಾಯಿ ಆಗಿ ಅಭ್ಯಾಸ ಶುರುಮಾಡುತ್ತಾಳೆ.

ದೆಹಲಿಯಲ್ಲಿ 2010ರಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟ ನಡೆಯುತ್ತದೆ. ಅದು ಗೀತಾಳ ಪಾಲಿಗೆ ಮಾಡು ಇಲ್ಲವೆ ಮಡಿ ಎಂಬ ಪರಿಸ್ಥಿತಿ. ಅರ್ಹತಾ ಸ್ಪರ್ಧೆಗಳಲ್ಲಿ ಆಕೆ ವೀಕ್ಷಕರ ಕುರ್ಚಿಯಲ್ಲಿ ಕೂತು ಮಾರ್ಗದರ್ಶನ ಮಾಡುತ್ತಿರುವ ತನ್ನ ತಂದೆಯ ಮಾತನ್ನು ಪಾಲಿಸುತ್ತಿದ್ದಾಳೆಯೇ ಹೊರತು ತನ್ನ ಆದೇಶಗಳನ್ನಲ್ಲ ಎಂಬುದು ಕೋಚ್ ಗಮನಕ್ಕೆ ಬರುತ್ತದೆ. ಆಗ ರೊಚ್ಚಿಗೆ ಬೀಳುವ ಕೋಚ್ ನಿರ್ಣಾಯಕ ಪಂದ್ಯಕ್ಕೆ ತಂದೆ ಮಹಾವೀರ್ ಹಾಜರಾಗದಂತೆ ತಡೆದು ಆತನನ್ನು ಸ್ಟೇಡಿಯಂನ ಸ್ಟೋರ್‌ರೂಮಿನಲ್ಲಿ ಬಂಧಿಸುತ್ತಾನೆ. ಅತ್ತ ಅಪ್ಪ ಕಣ್ಮರೆಯಾಗಿರುವುದು ಗೀತಾಳಲ್ಲಿ ಆತಂಕ ಮೂಡಿಸಿದರೆ ಇತ್ತ ತನ್ನ ಮಗಳ ಬದುಕಿನ ಅತಿಮುಖ್ಯ ಪಂದ್ಯವನ್ನು ನೋಡುವ ಅವಕಾಶದಿಂದ ವಂಚಿತನಾದ ಅಪ್ಪ ಪರಿತಪಿಸುತ್ತಾನೆ. ಆಗ ಗೀತಾಳಿಗೆ ತನ್ನ ಅಪ್ಪ ಹಿಂದೊಮ್ಮೆ "ನಾನು ನನಗೆ ಗೊತ್ತಿರುವುದನ್ನೆಲ್ಲ ನಿನಗೆ ಹೇಳಿಕೊಡಬಹುದು. ಆದರೆ ಗೆಲ್ಲುವ ಕಿಚ್ಚು ನಿನ್ನೊಳಗಿಂದಲೇ ಬರಬೇಕು" ಎಂದದ್ದು ನೆನಪಾಗುತ್ತದೆ.

ಕೊನೆಗೆ ಬಂಧಿತನಾಗಿರುವ ಅಪ್ಪನಿಗೆ ಭಾರತ ರಾಷ್ಟ್ರಗೀತೆ ಕೇಳಿಬಂದಾಗ ಮಗಳು ಗೆದ್ದಿದ್ದಾಳೆ ಎಂದು ಗೊತ್ತಾಗಿ ಹರ್ಷಿತನಾಗುತ್ತಾನೆ. ಅಂತೂ ಭಾರತಕ್ಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಚಿನ್ನದ ಪದಕ ಗೆಲ್ಲುವ ಆತನ ಕನಸನ್ನು ಮಗಳು ಗೀತಾ

09



ಕಾರವಾರ


ಬಿರುಕುಬಿಟ್ಟ ಬಿಜೆಪಿ ಬಿಡಾರದಲ್ಲಿ ಅಸ್ನೋಟಿಕರ್ ಪ್ರತ್ಯಕ್ಷ!!


ವಿಧಾನಸಭೆ ಚುನಾವಣೆಗಿನ್ನೂ ಒಂದೂವರೆ ವರ್ಷದಷ್ಟು ಬಾಕಿಯಿದೆ. ಆಗಲೇ ಕಾರವಾರ-ಅಂಕೋಲಾದಲ್ಲಿ ಅಪ್ಪೂ ಪಕ್ಷದ ಎಮ್ಮೆಲ್ಲೆ ಟಿಬದಾರರು ಚುನಾವಣಾ ಚಮತ್ಕಾರ ಶುರು ಹಚಿಕೊಂಡು ಬಿಟ್ಟಿದ್ದಾರೆ. ಈ ಭೋರ್ಗರೆವ ಕಡಲು ಕ್ಷೇತ್ರದ ಖಾಲಿ ಬರಡು ರಾಜಕೀಯ ಎತ್ತಿಂದತ್ತ ಲೆಕ್ಕ ಹಾಕಿ ತಾಳೆ ನೋಡಿದರೂ ಕಾಂಗ್ರೆಸ್-ಬಿಜೆಪಿ ಎರಡೇ ಪಕ್ಷದ ನಡುವಿನ ತುರುಸು-ತಿಕ್ಕಾಟವಷ್ಟೇ ಕಾಣಿಸುತ್ತದೆ. ಜೆಡಿಎಸ್ ಮತ್ತಿತರ ಪಕ್ಷ ಹಾಗು ಪಾರ್ಟಿರಹಿತ ಪರಾಕ್ರಮಿಗಳು ತಪ್ಪಲೆ ಭರ್ತಿಗೆ ಮಾತ್ರ. ಇಡೀ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೇಸರಿಪಡೆಗೆ ನೆಲೆ-ಬೆಲೆ ಇಲ್ಲದ ಅಸೆಂಬ್ಲಿ ಕ್ಷೇತ್ರವೆಂದರೆ, ಅದು ಕಾರವಾರ-ಅಂಕೋಲಾ ಒಂದೇ ಒಂದಾಗಿತ್ತು. ಕಾಂಗ್ರೆಸ್ ಶಾಸಕನಾಗಿದ್ದ ಎಡಬಿಡಂಗಿ ಆನಂದ ಅಸ್ನೋಟಿಕರ್ ಯಾವಾಗ ಯಡ್ಡಿ-ರೆಡ್ಡಿ ಒಡ್ಡಿದ್ದ ಮಂತ್ರಿಗಿರಿ ಆಮಿಷಕ್ಕೆ ನಾಲಿಗೆ ತೆಗೆದು ಸಿಜರೀನ್ ಸಚಿವನಾದನೋ ಆಗಿಂದ ಇಲ್ಲೊಂದಿಷ್ಟು ಕೇಸರಿ-ಕಮಲ ಪತಾಕೆಗಳು ಹಾರತೊಡಗಿದೆ.

ಜಗದೀಶ್ ಶೆಟ್ಟರ್ ಸಚಿವ ಸಂಪುಟದಲ್ಲಿ ಪೇಮೆಂಟ್ ಕೋಟಾ ಮಂತ್ರಿಯಾಗಿದ್ದ ಅಸ್ನೋಟಿಕರ್ 2013ರ ಚುನಾವಣೆಯಲ್ಲಿ ಹೀನಾಯವಾಗಿ ಸೋತುಹೋದ. ಈ ಮುಖಭಂಗ ಅಸ್ನೋಟಿಕರ್‌ನನ್ನು ಅದೆಷ್ಟು ಕಂಗೆಡಿಸಿತೆಂದರೆ, ಆತ ಕಾರವಾರದಿಂದ ಕಣ್ಮರೆಯಾಗಿ ಹೋದ. ಕಟ್ಟಾ ಅಭಿಮಾನಿಗಳಿಗೆ, ನಿಷ್ಠಾವಂತ ಹಿಂಬಾಲಕರಿಗೂ ಅಸ್ನೋಟಿಕರ್‌ನ ಪತ್ತೆ ಹುಡುಕಲಾಗಲೇ ಇಲ್ಲ. ಆತ ಗೋವಾದ ನದಿಯ ನಡುವಿನ ಬೋಟಲ್ಲಿ ನಡೆಯುವ ಕ್ಯಾಸಿನೋ ಜೂಜಿನಲ್ಲಿ ನಿರತನಾಗಿದ್ದಾನೆಂದು ಕೆಲವರು ಹೇಳಿದರೆ, ಇನ್ನೂ ಕೆಲವರು ಆತ ಮುಂಬೈ-ಗುಜರಾತ್‌ನಲ್ಲಿ ಕೇಂದ್ರ ಮಂತ್ರಿ ಗಡ್ಕರಿ, ಉದ್ಯಮಿ ಆದಾನಿಗಳ ದಂಧೆಯಲ್ಲಿ ಪಾಲ್ಗೊಂಡಿದ್ದಾನೆಂದು ಮಾತಾಡಿಕೊಂಡರು. ಮತ್ತೊಂದಿಷ್ಟು ಜನ "ಇಲ್ಲಲ್ಲ ಅಸ್ನೋಟಿಕರ್ ಸಾಬಿಯೊಬ್ಬಳ ಮದುವೆಯಾಗಿ ದುಬೈ ಸೇರಿದ್ದಾನೆಂದು..." ಕಟ್ಟೆ ಪುರಾಣ ಹೇಳಿದರು. ಒಟ್ಟಿನಲ್ಲಿ ಐದು ವರ್ಷ ಮಂತ್ರಿಯಾಗಿ ಮೆರೆದ ಅಸ್ನೋಟಿಕರ್ ಸೋತು ಕ್ಷೇತ್ರಭ್ರಷ್ಟನಾಗಿ ಹೋದವನು ಮೂರೂವರೆ ವರ್ಷ ಯಾರ ಕೈಗೂ ಸಿಗಲೇ ಇಲ್ಲ!


ಇತ್ತ ಕಾರವಾರದಲ್ಲಿ ಪಕ್ಷೇತರ ಶಾಸಕನಾಗಿ ಗೆದ್ದು ಕಾಂಗ್ರೆಸ್ ಪಾಲಾಗಿದ್ದ ಸತೀಶ್ ಸೈಲ್‌ನದೇ ಒಕ್ಕೃ ಆಗಿಹೋಯ್ತು; ಗಣಿ ಕೇಸಲ್ಲಿ ಒಂದೂವರೆ ವರ್ಷ ಸೈಲ್ ಜೈಲು ಪಾಲಾಗಿ ಕ್ಷೇತ್ರ ಅನಾಥವಾದರೂ ಅಸ್ನೋಟಿಕರ್ ಮಾತ್ರ ಕಾರವಾರಕ್ಕೆ ಬಂದು ಪರಿಸ್ಥಿತಿಯನ್ನು ಬಳಸಿಕೊಂಡು ಬುಡಭದ್ರ ಮಾಡಿಕೊಳ್ಳಲೂ ಇಲ್ಲ. ಜೈಲಿಂದಲೇ ಸೈಲ್ ದರ್ಬಾರು ನಡೆಸಿದ. ಸೈಲ್‌ನ ಚೇಲಾ ಶಂಭು ಶೆಟ್ಟಿಯಂಥ ವಲಸಿಗರು ಮೆಂದು ದುಂಡಗಾಗಿಹೋದರು. ಅಸ್ನೋಟಿಕರ್ ಹಿಂಬಾಲಕರ ಮುರಿಮುರಿದು ಹಣಿದರು. ಆದರೂ ಆನಂದ ಅಸ್ನೋಟಿಕರ್ ಕಾರವಾರದತ್ತ ಕಣ್ಣೆತ್ತಿಯೂ ನೋಡಲಿಲ್ಲ.


ಅಸ್ನೋಟಿಕರ್ ಇಲ್ಲದೆ ಖಾಲಿಯಾಗಿದ್ದ ಬಿಜೆಪಿ ಕಬ್ಜಾ ಮಾಡಿಕೊಳ್ಳಲು ಮೂಲ ಚೆಡ್ಡಿಗಳು ಒಂದು ಕಡೆಯಲ್ಲಿ ಕರಾಮತ್ತು ನಡೆಸಿದರೆ, ಮತ್ತೊಂದು ಕಡೆಯಿಂದ ನಗರಸಭೆಯ ಮಾಜಿ ಅಧ್ಯಕ್ಷ ಕಮ್ ಬಂದರು ಬಿಸ್ನೆಸ್‌ದಾರ ಗಣಪತಿ ಉಳ್ವೇಕರ್ ಮತ್ತು ವರ್ಷಕ್ಕೊಂದು ಬಾರಿ ರೈತರ ಹೆಸರಲ್ಲಿ ಕಂಬಳಿ ಹಾಕಿಕೊಂಡು ಗದ್ದೆಗಿಳಿದು ಪೋಸು ಕೊಟ್ಟು ಫೋಟೋ ಪೇಪರ್-ಟಿವಿಯಲ್ಲಿ ಹಾಕಿಸಿಕೊಳ್ಳುವ ಖಯಾಲಿಯ ಪಹರೆ ನಾಗನಂಥವರು ಬಿಜೆಪಿ ಎಮ್ಮೆಲ್ಲೆಯಾಗುವ ತೆವಲಿಗೆ ಬಿದ್ದು ತಳಮಳಿಸತೊಡಗಿದರು.






ಯಡ್ಡಿ ಕೆಜೆಪಿಯನ್ನು ಬಿಜೆಪಿಯಲ್ಲಿ ಕರಗಿಸುವ ಮೊದಲು ಉತ್ತರ ಕನ್ನಡ ಬಿಜೆಪಿಗೆ ಮಾಜಿ ಮಂತ್ರಿ ಕಾಗೇರಿ ಮಾಣಿಯೇ ಮಾಲಿಕನಾಗಿದ್ದ. ಈ ಕಾಗೇರಿ ಕಣ್ಣು ಉಳ್ವೇಕರ್ ಬಂದರಲ್ಲಿ ದೋಚಿದ ದುಡ್ಡಿನ ಮೇಲೆ ಬಿದ್ದಿತ್ತು. "ನೀನೇ ಮುಂದಿನ ಬಿಜೆಪಿ ಎಮ್ಮೆಲ್ಲೆ... ನಿಂಗೇ ಟಿಕೇಟು ಗ್ಯಾರಂಟಿ... ನಿಂಗೆ.... ಜಿಲ್ಲಾ ಬಿಜೆಪಿ ಅಧ್ಯಕ್ಷನ ಮಾಡ್ತೇನೆ..." ಎಂದೆಲ್ಲಾ ಪುಸಲಾಯಿಸಿ ಉಳ್ವೇಕರ್‌ನ ಕಾಸು ಕರಗಿಸಿಬಿಟ್ಟ ಕಾಗೇರಿ "ಎಮ್ಮೆಲ್ಲೆ ಟಿಕೆಟ್ ಬೇಕೆಂದರೆ ಎಮ್ಮೆಲ್ಸಿಗೆ ಸ್ಪರ್ಧಿಸು...." ಎಂದು ಒತ್ತಡಹಾಕಿ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ವಿಧಾನ ಪರಿಷತ್ ಎಲೆಕ್ಷನ್‌ಗೆ ಉಳ್ವೇಕರ್‌ನ ತಳ್ಳಿದ ಕಾಗೇರಿ ಬಲಿ ಪಡೆದುಬಿಟ್ಟ!





ಯಾವಾಗ ಯಡ್ಡಿ ಪ್ರಭುತ್ವ ಬಿಜೆಪಿಯಲ್ಲಿ ಪುನರ್ ಪ್ರತಿಷ್ಠಾಪಿತವಾಯ್ತೋ ಆಗ ಉತ್ತರ ಕನ್ನಡ ಬಿಜೆಪಿಯ ಯಜಮಾನಿಕೆ ಕಾಗೇರಿಯ ಆಜನ್ಮ ವೈರಿ ಸಂಸದ ಅನಂತ್ಮಾಣಿ ಕೈಗೆ ಬಂತು. ಬಿಜೆಪಿ ರಾಜಕಾರಣದಿಂದ ಉದ್ಯಮದಲ್ಲಿ ಹಾನಿಗೀಡಾಗಿದ್ದ ಉಳ್ವೇಕರ್‌ಗೂ ಆ ಪಕ್ಷದ ಸಹವಾಸ ಸಾಕಾಗಿತ್ತು. ಕಾಂಗ್ರೆಸ್‌ನಲ್ಲಿ ನಿಗಮ-ಮಂಡಳಿಗೆ ವಿಫಲ ಯತ್ನ ಮಾಡಿದ್ದ ಪಹರೆ ನಾಗು ಮಂತ್ರಿ ದೇಶಪಾಂಡೆ, ಶಾಸಕ ಸೈಲ್ ಮೇಲೆ ಮುನಿಸಿಕೊಂಡು ಬುಸುಗುಡುತ್ತಿದ್ದ ಹೊತ್ತದು. ಅನಂತ್ಮಾಣಿಯನ್ನು ಒಲಿಸಿಕೊಂಡ ನಾಗು ಸಮಯ ಸಿಕ್ಕಾಗೆಲ್ಲ ಯಡ್ಡಿ ಮಾಮನ ಕಾಲಿಗೆ ಹೋಗಿ ಬೀಳಹತ್ತಿದ. ತನ್ನ ವಾರ್ಷಿಕ ಶೇತ್ಗಿ ಶೋಗೆ ಸಾಕ್ಷಾತ್ ಯಡ್ಡಿಯನ್ನೇ ಕರೆಸಿ ಬಿಜೆಪಿ ಪಾಲಾಗಿಹೋದ!

ಪಹರೆ ನಾಗು ಬಿಜೆಪಿಯಲ್ಲಿ ಹೆಡೆಯಾಡಿಸುವುದು ಅಂಕೋಲೆಯ ಮಯೂರ ನಾಯಕ್‌ಗೆ ಸಹಿಸಲಾಗಲಿಲ್ಲ. ತನ್ನ ಅಪ್ಪ (ಭೂಗತ ಪಾತಕಿ ಬನ್ನಂಜೆ ರಾಜಾನಿಂದ ಹತನಾದ ಧನನಾಯಕ್ ಯಾನೆ ಆರ್.ಎನ್. ನಾಯಕ್)ನ ಅಪಾರ ಹಣ-ಬೆವರಿಂದಲೇ ಬಿಜೆಪಿ ಕಾರವಾರ-ಅಂಕೋಲೆಯಲ್ಲಿ ಅಸ್ತಿತ್ವದಲ್ಲಿದೆ ಎಂಬ ನಂಬಿಕೆಯ ಮಯೂರ ಮತ್ತು ಪಹರೆ ನಾಗ ಜಾತಿ ಬಂಧುಗಳು. ಇವರಿಬ್ಬರ ನಡುವೆ ಅದ್ಯಾವ ಜನ್ಮದ ದ್ವೇಷಾಸೂಯೆಯೋ ಏನೋ? ತಾನೊಬ್ಬನೇ ಕಾರವಾರ-ಅಂಕೋಲಾದಲ್ಲಿ ಎಮ್ಮೆಲ್ಲೆಯಾಗಲು ಅರ್ಹ; ಉಳಿದವರ್‍ಯಾರಿಗೂ ಯೋಗ್ಯತೆಯೇ ಇಲ್ಲವೆಂಬ ಒಣ ಈಗೋದ ನಾಗು ಬಿಜೆಪಿ ಸೇರಿದ್ದೇ ತಡ ಮಯೂರನ ಒಂದೊಂದೇ ಗರಿ ತೆಗೆಯಲು ಹವಣಿಸಿದ್ದಾನೆ. ಸಂಸದ ಅನಂತ್ಮಾಣಿ ಬಲದಿಂದ ಅಂಕೋಲೆಯ ಬಿಜೆಪಿ ಅಧ್ಯಕ್ಷತೆ ಮಯೂರನ ಪಡೆ ಪಾಲಾಗದಂತೆ ಕರಾಮತ್ತು ಮಾಡಿದ್ದಾನೆ. ತಿರುಗಿಬಿದ್ದ ಮಯೂರ ತನ್ನ ಬಿಜೆಪಿ ಟಿಕೆಟ್‌ಗೆ ಕಲ್ಲು ಹಾಕುತ್ತಿರುವ ನಾಗುಗೆ ನೀರು ಕುಡಿಸಲು ಹಗಲಿರುಳೂ ಸ್ಕೆಚ್ ಹಾಕುತ್ತಲೇ ಇದ್ದಾನೆ!




ಈಗ ಈ ನಾಗು ಹಾಗು ಮಯೂರನ ನಡುವಿನ ಜಿದ್ದಾಜಿದ್ದಿ ಸುಪಾರಿ ರಾಜಕೀಯದ ಹಂತಕ್ಕೆ ಬಂದುನಿಂತಿದೆ ಎಂಬ ಆತಂಕ ಬಿಜೆಪಿ ವಲಯದಲ್ಲಿ ಪಿಸುಗುಡುತ್ತಿದೆ. ನಾಗು-ಮಯೂರ್ ಕಾಳಗದಿಂದ ನಾಡವ ಜಾತಿಯಷ್ಟೇ ಅಲ್ಲ, ಬಿಜೆಪಿಯೇ ಒಡೆದುಹೋಗಿದೆ. ಸ್ಥಳೀಯ ಬಿಜೆಪಿ ಎಂಬುದು ಎರಡರಲ್ಲ ಮೂರು ಹೋಳಾಗಿದೆ. ಒಂದು ನಾಗು ಬಣವಾದರೆ, ಮತ್ತೊಂದು ಮಯೂರನ ಮಂಡಳಿ. ಇವೆರಡೂ ಕಂಡು ಮೂಗುಮುರಿಯುವ ಪಕ್ಕಾ ಮಡಿ-ಮೈಲಿಗೆಯ ಚೆಡ್ಡಿ ಪಡೆಯದು ಮೂರನೇ ಗುಂಪು. ಮಯೂರನದು ಒಂದೇ ಹಠ. ತನಗೆ ಬಿಜೆಪಿ ಟಿಕೆಟ್ ಸಿಗದಿದ್ದರೂ ಇಲ್ಲ, ಪಹರೆ ನಾಗು ಬಿಜೆಪಿ ಕ್ಯಾಂಡಿಡೇಟಾಗಲೇಬಾರದೆಂಬ ಒಂದಂಶದ ರಾಜಕೀಯ ಕಸರತ್ತು ಆತನದು. ಜಿಪಂ ಸದಸ್ಯ ಜಗದೀಶ್ ನಾಯಕ್‌ನಂಥ ಗುದುಮುರಿಗೆ ಸೇನಾನಿಗಳ ಮುಂದಿಟ್ಟುಕೊಂಡು ಯುದ್ಧ ನಡೆಸಿರುವ ಮಯೂರನಿಗೆ ಮಾಜಿ ಮಂತ್ರಿ ಕಾಗೇರಿ ಕೃಪಾಶೀರ್ವಾದವಿದೆ; ರಾಯಣ್ಣ ಬ್ರಿಗೇಡ್ ಬಾಸ್ ಈಶ್ವರಿಯ ಆಶೀರ್ವಾದವೂ ಸಿಕ್ಕಿದೆ.

ಕಾರವಾರ ಬಿಜೆಪಿಯೊಳಗಿನ ಈ ಕಚ್ಚಾಟವನ್ನು ದೂರದಿಂದಲೇ ನೋಡುತ್ತಿದ್ದ ಅಸ್ನೋಟಿಕರ್ ಈಗ ಇದೇ ಸುಸಮಯವೆಂದು ಎದ್ದು ಕುಂತಿದ್ದಾನೆ. ತನ್ನ ನಂಬಿಗಸ್ಥ ಬಂಟರ ಛೂಬಿಟ್ಟು ಅಸ್ತಿತ್ವ ಪ್ರದರ್ಶನ ಮಾಡಲಾರಂಭಿಸಿದ್ದಾನೆ! ರಾಯಣ್ಣ ಬ್ರಿಗೇಡ್ ಸಂಘಟನೆ ನೆಪದಲ್ಲಿ ಈಶ್ವರಿಯನ್ನು ಅಂಕೋಲೆಗೆ ಬರುವಂತೆ ಮಾಡಿದ ಅಸ್ನೋಟಿಕರ್ ರಹಸ್ಯವಾಗಿ ತಾನೂ ಆತನ ಭೇಟಿ ಮಾಡಿದ್ದಾನೆ. ಯಡ್ಡಿ ಸಿಎಂ ಆಗಿದ್ದಾಗ ಆತನ ವಿರುದ್ಧ ಬಂಡೆದ್ದ ಶಾಸಕರ ಗ್ಯಾಂಗ್‌ನಲ್ಲಿದ್ದ ಅಸ್ನೋಟಿಕರ್ ಮಂತ್ರಿ-ಶಾಸಕ ಸ್ಥಾನ ಕಳೆದುಕೊಂಡು ಒದ್ದಾಡಿದ್ದ. ಆ ಬಳಿಕ ಸುಪ್ರೀಂಕೋರ್ಟ್‌ನಲ್ಲಿ ಗೆದ್ದು ಮತ್ತೆ ಎಮ್ಮೆಲ್ಲೆಗಿರಿ ಪಡೆದಿದ್ದ ಅಸ್ನೋಟಿಕರ್‌ಗೆ ಆಗ ಬಿಜೆಪಿಯಲ್ಲಿ ಇದೇ ಈಶ್ವರಿ ನಾಯಕಾಗ್ರೇಸನಾಗಿದ್ದರು. ಈ ಈಶ್ವರಿಗೆ ಕಾಸು ಕೊಟ್ಟೇ ಅಸ್ನೋಟಿಕರ್ ಜಗದೀಶ್ ಶೆಟ್ಟರ್ ಸರ್ಕಾರದ ಮಂತ್ರಿಗಿರಿ ಕೊಂಡುಕೊಂಡಿದ್ದ ಎಂಬ ಮಾತೂ ಕೇಳಿಬಂದಿತ್ತು. ಈಗ ಅದೇ ಈಶ್ವರಿ ಬಾಲ ಹಿಡಿದುಕೊಂಡು ಅಸ್ನೋಟಿಕರ್ ಬಿಜೆಪಿಯಲ್ಲಿ ಬೇಳೆ ಬೇಯಿಸಿಕೊಳ್ಳಲು ಹವಣಿಸುತ್ತಿದ್ದಾನೆ.


ಸ್ವಜಾತಿ ಆಪ್ತ ಬಂಟನೂ ಅಂಕೋಲಾ ಪಟ್ಟಣ ಪಂಚಾಯ್ತಿ ಮಾಜಿ ಅಧ್ಯಕ್ಷನೂ ಆಗಿರುವ ಗೋಲ್‌ಮಾಲ್ ಭಾಸ್ಕರ್ ನಾರ್ವೇಕರ್‌ನಂಥ ಹಿಂಬಾಲಕರನ್ನು ಜಿಲ್ಲಾ ರಾಯಣ್ಣ ಬ್ರಿಗೇಡ್‌ನ ಮುಂದಿನ ಸಾಲಿನಲ್ಲಿ ನಿಲ್ಲಿಸಿರುವ ಅಸ್ನೋಟಿಕರ್ ಈಗ ಕರಾರುವಾಕ್ ಆಟ ಆರಂಭಿಸಿದ್ದಾನೆ. ಕಾರವಾರದಲ್ಲಿ ಈಶ್ವರಿ ಜತೆ ಅಳಿವು-ಉಳಿವಿನ ಮಾತುಕತೆ ನಡೆಸಿದ ಅಸ್ನೋಟಿಕರ್ ಆತ ಬೆಳಗಾವಿಯತ್ತ ಹೋಗುತ್ತಲೇ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದಾನೆ. ಪತ್ರಿಕಾಗೋಷ್ಠಿ ಕರೆದ ಅಸ್ನೋಟಿಕರ್ 2017ರ ಏಪ್ರಿಲ್‌ತನಕ ಶನಿಪೀಡೆ ಕುಂಡಲಿಯಲ್ಲಿರುವುದರಿಂದ ಆ ಬಳಿಕ ರಾಜಕೀಯ ಶುರು ಮಾಡುತ್ತೇನೆ ಎಂದಿದ್ದಾನೆ. ಅಷ್ಟೇ ಅಲ್ಲ, ಈಶ್ವರಿ ತನ್ನ ನಾಯಕ, ಹಿಂದುಳಿದವರ ಸಂಘಟನೆ ಈಶ್ವರಪ್ಪ ಮಾಡೋದರಲ್ಲಿ ತಪ್ಪೇನಿಲ್ಲ ಎಂದಿದ್ದಾನೆ. ಒಂದೂವರೆ ವರ್ಷ ಜೈಲಲ್ಲಿ ಕಳೆದು ಬಂದಿರುವ ಸೈಲ್ ಮತ್ಯಾವಾಗ ಜೈಲು ಪಾಲಾಗುತ್ತಾನೋ ಹೇಳಲಾಗದು ಎಂದಿರುವ ಅಸ್ನೋಟಿಕರ್ ಸದ್ಯದಲ್ಲೇ ತಾನು ರಾಜಕೀಯಕ್ಕೆ ಬಂದು ಕಾರವಾರ ಕ್ಷೇತ್ರದ ಸಮಸ್ಯೆಗೆ ಸ್ಪಂದಿಸುತ್ತೇನೆಂದು ಹೇಳಿ ಮತ್ತೆ ಮಾಯವಾಗಿದ್ದಾನೆ. ಆದರೆ ಆತನ ಗ್ಯಾಂಗ್‌ನ ತಂತ್ರಗಾರಿಕೆ ಮಾತ್ರ ಜೋರಾಗುತ್ತಿದೆ.

ಅಸ್ನೋಟಿಕರ್ ಕಾರವಾರಕ್ಕೆ ಅಪ್ಪಳಿಸಿ ಹೋಗಿದ್ದೇ ತಡ, ಬಿಜೆಪಿ ಟಿಕೆಟ್ ಆಕಾಂಕ್ಷಿಗಳಾದ ಪಹರೆ ನಾಗು, ಅರಮನೆ ಮಯೂರ, ಬಂದರು ಉಳ್ವೇಕರ್ ಮತ್ತು ಅಸಲೀ ಚೆಡ್ಡಿಗಳೆಲ್ಲ ಗಡಿಬಿಡಿಗೆ ಬಿದ್ದಿದ್ದಾರೆ. ತಂತಮ್ಮ ಗಾಡ್‌ಫಾದರ್‌ಗಳ ಬೆನ್ನುಬಿದ್ದು ಅಸ್ನೋಟಿಕರ್ ಮತ್ತೆ ಬಿಜೆಪಿಗೆ ಬರದಂತೆ ಅಡ್ಡ ಹಾಕುತ್ತಿದ್ದಾರೆ. ಆದರೆ ಅಸ್ನೋಟಿಕರ್‌ನ ವಿರೋಧಿಗಳು ಅದೆಷ್ಟೇ ಹಾರಾಡಲಿ ಆತ ಮಾತ್ರ ತನ್ನ ಪ್ಲಾನ್ ಪಕ್ಕಾ ಮಾಡಿಕೊಂಡು ಕಾರ್ಯಾಚರಣೆಗೆ ಇಳಿದಿದ್ದಾನೆ. ಹಾಗೊಮ್ಮೆ ಅಸ್ನೋಟಿಕರ್ ಬಿಜೆಪಿ ಟಿಕೆಟ್ ಬಯಸಿದ್ದೇ ಆದರೆ ಅದನ್ನು ತಡೆಯಲು ಸಾಕ್ಷಾತ್ ಯಡ್ಡಿ, ಅನಂತ್ಮಾಣಿ, ಕಾಗೇರಿ ಮಾಣಿಗಳಿಂದಲೂ ಸಾಧ್ಯವಿಲ್ಲ ಎಂಬುದು ಆತನ ಹಿಂಬಾಲಕರ ಅಖಂಡ ನಂಬಿಕೆ. ಅಸ್ನೋಟಿಕರ್ ತಾಕತ್ತೇ ಹಾಗಿದೆ! ಮೋದಿ ಮಹಾರಾಜನಿಗೇ ಆಪ್ತರಾದ ಕೇಂದ್ರ ಸಾರಿಗೆ ಮಂತ್ರಿ ಮನೋಹರ ಗಡ್ಕರಿ ಮತ್ತು ಗುಜರಾತ್ ಮೂಲದ ಉದ್ಯಮಿ ಅದಾನಿಗಳ ಜತೆ ಅಸ್ನೋಟಿಕರ್‌ಗೆ ವ್ಯಾವಹಾರಿಕ ನಂಟಿದೆ; ಮಂತ್ರಿ ಗಡ್ಕರಿ ಉದ್ಯಮದಲ್ಲಿ ಅಸ್ನೋಟಿಕರ್ ಸಣ್ಣ ಪಾಲುದಾರಿಕೆಯೂ ಇದೆ. ಹೀಗಾಗಿ ಗಡ್ಕರಿ ತನ್ನ ದಂಧೆ ಸಂಗಾತಿ ಅಸ್ನೋಟಿಕರ್‌ಗೆ ಬಿಜೆಪಿ ಟಿಕೆಟ್ ಸಿಗುವಂತೆ ಪ್ರಯತ್ನ ಮಾಡದಿರುವರಾ?



ಕೇಂದ್ರದ ಪವರ್‌ಫುಲ್ ಮಂತ್ರಿ ಗಡ್ಕರಿ ಬಲ ಪ್ರಯೋಗಿಸಿ ಟಿಕೆಟ್ ತರುವುದು ಅಸ್ನೋಟಿಕರ್‌ನ ಪ್ಲಾನ್-ಎ.

ಸುಳ್ಳೇ.....ಸುಳ್ಳು!



ಬಿಜೆಪಿ ಭೂಪರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರೆಂಬುದು ಜಗಜ್ಜಾಹೀರಾಗಿ ಹೋಗಿದೆ. ರಂಗು-ರಂಗಿನ ಸುಳ್ಳನ್ನು ಮಾರ್ಕೆಟ್ ಮಾಡಿ ಓಟು ಪಡೆಯುವ ಕುಕಲಾ ಪ್ರವೀಣ ಮೋದಿಯನ್ನೇ ಮೀರಿಸುವ ಹಸಿಹಸೀ ಸುಳ್ಳು ಬುರುಕರು ಉತ್ತರ ಕನ್ನಡ ಬಿಜೆಪಿಯಲ್ಲಿ ತಯಾರಾಗಿದ್ದಾರೆ. ಸುಮಾರು ಮೂರು ದಶಕದಿಂದ ಸರಿಯಾದ ಪರಿಹಾರ ಸಿಗದೇ ಒದ್ದಾಡುತ್ತಿರುವ ಕಾರವಾರ-ಅಂಕೋಲಾದ ಸೀ ಬರ್ಡ್ ನೌಕಾನೆಲೆ ನಿರಾಶ್ರಿತರ ಹೆಸರಲ್ಲೀಗ ಬಿಜೆಪಿ ಭಂಡರು ರಾಜಕೀಯ ಮಾಡುತ್ತಿರುವುದು ಘೋರವಾಗಿದೆ! ಕೇಸರಿ ಪಕ್ಷದ ಸೀನಿಯರ್ ಸಂಸದ ತಾನೆಂದು ಬೀಗುವ ಅನಂತ್ಮಾಣಿ ಐದು ಬಾರಿ ಪಾರ್ಲಿಮೆಂಟಿಗೆ ಗೆದ್ದುಹೋಗಿದ್ದರೂ ಒಂದೇ ಒಂದು ಸಲ ಸೀಬರ್ಡ್ ನಿರಾಶ್ರಿತರ ಸಮಸ್ಯೆ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿಲ್ಲ. ಸ್ಥಳೀಯ ಬಿಜೆಪಿಯ ಯಾವ ಪುಣ್ಯಾತ್ಮನೂ ನೌಕಾನೆಲೆ ನಿರಾಶ್ರಿತರ ಗೋಳಿಗೆ ತಲೆ ಕೆಡಿಸಿಕೊಂಡ ಕುರುಹುಗಳಿಲ್ಲ. ಅಂಕೋಲಾ ಕ್ಷೇತ್ರದ ಶಾಸಕನೂ ಆಗಿದ್ದ ಕಾಗೇರಿಗೆ ಇವತ್ತಿಗೂ ಸೀ ಬರ್ಡ್ ನೌಕಾನೆಲೆ ನಿರಾಶ್ರಿತರ ಸಮಸ್ಯೆ ಏನೆಂದೇ ಗೊತ್ತಿಲ್ಲ! ಸತತ ಮಂತ್ರಿಗಿರಿ ಅನುಭವಿಸುತ್ತ ಬಂದಿರುವ ಕಾಂಗ್ರೆಸ್ ಕಿಂಗ್ ದೇಶಪಾಂಡೆ ಸಾಹೇಬರಿಗೂ ನೌಕಾನೆಲೆಯಿಂದಾದ ನೋವಿನ ಅರಿವಿಲ್ಲ.

ನೌಕಾನೆಲೆ ಸಂತ್ರಸ್ತರಿಗೆ ಸಮರ್ಪಕ ಭೂಪರಿಹಾರ ಕೊಡುವಂತೆ ಬೇಡಿಕೆ ಇಟ್ಟು ಹೋರಾಟ ರೂಪಿಸಿದ್ದು ಶಾಸಕ ಸೈಲ್. ಆತ ಕೈಯಿಂದ ಕಾಸು ಖರ್ಚು ಮಾಡಿ ರಕ್ಷಣಾ ಇಲಾಖೆ ನಿರಾಶ್ರಿತರಿಗೆ ಮಾಡುತ್ತಿರುವ ವಂಚನೆ ಬಗ್ಗೆ ದಿಲ್ಲಿ ಧಣಿಗಳ ಬಳಿ ಹೋಗಿಯೂ ದೂರಿದ್ದರು. ಸುಪ್ರೀಂಕೋರ್ಟಿಗೂ ಕೇಸು ಹೋಗುವಂತೆ ನೋಡಿಕೊಂಡಿದ್ದರು. ಅಲ್ಲಿ ನಿರಾಶ್ರಿತರ ಪರ ತೀರ್ಪು ಬಂದಿತ್ತು. ಆದರೆ ಇವತ್ತಿಗೂ ರಕ್ಷಣಾ ಇಲಾಖೆ ಭೂಪರಿಹಾರ ಕೊಡಲು ಮುಂದಾಗುತ್ತಿಲ್ಲ.

ಕೆಲದಿನಗಳ ಹಿಂದೆ ಇದ್ದಕ್ಕಿದ್ದಂತೆ ಬಿಜೆಪಿ ಮೂಲದಿಂದ ನೌಕಾನೆಲೆ ನಿರಾಶ್ರಿತರಿಗೆ ರಕ್ಷಣಾ ಇಲಾಖೆ ಹನ್ನೊಂದೂವರೆ ಸಾವಿರ ಕೋಟಿ ಬಿಡುಗಡೆ ಮಾಡಿದೆ- ಎಂಬ ಸುದ್ದಿಯೊಂದು ಹೊರಬಂದಿತ್ತು, ಇದಕ್ಕೆ ಕಾರಣ ದಿ ಗ್ರೇಟ್ ನಿದ್ದೆ ಬಡುಕ ಸಂಸದ ಅನಂತ್ಮಾಣಿ ಮತ್ತು ಕೇಂದ್ರ ರಕ್ಷಣಾ ಮಂತ್ರಿ ಮನೋಹರ ಪರಿಕ್ಕರ್ ಎಂಬುದು ಬಿಜೆಪಿ ಭಂಡರ ಬಡಿವಾರದ ತಿರುಳಾಗಿತ್ತು. ಬಿಜೆಪಿ ಟಿಕೆಟ್ ಮೇಲೆ ಕಣ್ಣಿಟ್ಟು ಕಸರತ್ತು ಮಾಡುತ್ತಿರುವ ಪಹರೆ ನಾಗುನಂತೂ ಪತ್ರಿಕೆಗಳಲ್ಲಿ ಜಾಹೀರಾತು ಬರೆಸಿ ಈ ಹುಸಿ ಪರಿಹಾರದ ಕ್ರೆಡಿಟ್ ತನ್ನ ಎದುರಾಳಿ ಶಾಸಕ ಸೈಲ್‌ಗೆ ಸಿಗದಂತೆ ಕರಾಮತ್ತು ನಡೆಸಿದ್ದ. ಹಾಗೊಮ್ಮೆ ನಿರಾಶ್ರಿತರಿಗೆ ಪರಿಹಾರ ಸಿಕ್ಕರೆ ಆದರ, ಶ್ರೇಯಸ್ಸು ಸೈಲ್ ಮತ್ತಾತನ ಜತೆಗೆ ಅಂದು ನಿಂತು ಹೋರಾಡಿದವರಿಗಷ್ಟೇ ಸಲ್ಲಬೇಕು. ಕರ್ಮಗೇಡಿ ಸಂಸದ ಅನಂತ್ಮಾಣಿ ಅಥವಾ ರಕ್ಷಣಾ ಮಂತ್ರಿ ಪರಿಕ್ಕರ್‌ಗೆ ಈ 'ಪುಣ್ಯ' ಸಿಗಲಾರದು.

ಬಿಜೆಪಿಗರು ಸುಳ್ಳು ಹೇಳುವುದಕ್ಕಾದರೂ ಒಂದು ತರ್ಕ ಬೇಡವಾ? 11,500 ಕೋಟಿ ಪರಿಹಾರ ಬಿಡುಗಡೆ ಮಾಡಿದೆ ಎನ್ನುತ್ತಿದೆ ಬಿಜೆಪಿ ಸುಳ್ಳರ ಬಳಗ. ಬಡ್ಡಿ ಸಹಿತ ಪರಿಹಾರ ವಿತರಿಸಿದರೂ 800 ಕೋಟಿಯಷ್ಟು ಹಣ ಸಾಕು. ಹೀಗಿರುವಾಗ 11,500 ಕೋಟಿ ಬಿಡುಗಡೆ ಸಾಧ್ಯವಾ? ಅಷ್ಟೇ ಅಲ್ಲ ಬಿಜೆಪಿ ಭಂಡರು ಪರಿಹಾರ ಬಿಡುಗಡೆಯ ಭೋಂಗು ಬಿಟ್ಟು ಹದಿನೈದು ದಿನಗಳೇ ಕಳೆದುಹೋಗಿದೆ. ಇವತ್ತಿಗೂ ಕೇಂದ್ರ ಸರ್ಕಾರದಿಂದ ಪರಿಹಾರ ಬಿಡುಗಡೆ ಬಗ್ಗೆ ಅಧಿಕೃತ ಮಾಹಿತಿ ಬಂದಿಲ್ಲ! ಈ 11,500 ಕೋಟಿಯಲ್ಲಿ ನೌಕಾನೆಲೆ ಎರಡನೇ ಹಂತದ ವಿಸ್ತರಣಾ ವೆಚ್ಚವೂ ಸೇರಿದೆ. ಇದರಲ್ಲಿ ಪರಿಹಾರ ಎಷ್ಟು? ಇದು ಬಿಜೆಪಿಗಳಿಗೆ ಗೊತ್ತಿಲ್ವಾ?

ಬಿಜಪಿ ಬಫೂನ್‌ಗಳ ಜೋಕಿಗೆ ಉತ್ತರ ಕನ್ನಡದ ಜನ ಬಿದ್ದು-ಬಿದ್ದು ನಗುತ್ತಿದ್ದಾರೆ; ನೌಕಾ ನೆಲೆ ನಿರಾಶ್ರಿತರು ವಿಷಾದದ ನಗೆ ಚೆಲ್ಲುತ್ತಿದ್ದಾರೆ!!

ರೋಣ ಜೆಡಿಎಸ್‌ನಲ್ಲಿ ಟಿಕೆಟ್ ವಾರ್



ಗದಗ ಜಿಲ್ಲೆಯ ರೋಣ ತಾಲೂಕಿನಲ್ಲೀಗ ಮುಂಬ ... ಎಂಎಲ್‌ಎ ಎಲೆಕ್ಷನ್‌ನ ಟಿಕೆಟ್ ಕೊಸರಾಟಗಳದ್ದೇ ... ಬಾರು. ರೋಣದಲ್ಲಿ ಕಾಂಗ್ರೆಸ್ ಶಾಸಕ ಜಿ.ಎಸ್. ... ಟೀಲ್ ಮತ್ತು ಬಿಜೆಪಿಯ ಮಾಜಿ ಶಾಸಕ ಕಳಕಪ್ಪ ... ಡಿ ರಾಜಕಾರಣವನ್ನು ತಮ್ಮ ಪಿತ್ರಾರ್ಜಿತ ಜಹಗೀರು ... ಂತೆ ಮರೆದಾಡುತ್ತಿರೋದರಿಂದ ಇನ್ನುಳಿದ ರಾಜಕೀಯ ... ಳು ತೃತೀಯ ಶಕ್ತಿಯಾಗಲು ತವಕಿಸುತ್ತಿವೆ. ಅಂತಹವುಗಳಲ್ಲಿ ... ಜೆಡಿಎಸ್ ಫೇವರಿಟ್ ಪಕ್ಷ. 2018ರ ಚುನಾವಣೆ ... ಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿಯವರಿ ... ಾ ಅಳಿವುಉಳಿವಿನ ಪ್ರಶ್ನೆ. ಹೀಗಾಗಿಯೇ ಕುಮಾರಣ್ಣ ... ರ ಕರ್ನಾಟಕದಲ್ಲಿ ತನ್ನ ಪೌರುಷ ಸಾಬೀತು ಪಡಿಸಲು ... ಬ್ಬಳ್ಳಿಯಲ್ಲಿ ಮನೆ ಮಾಡಿ, ಉತ್ತರ ಕರ್ನಾಟಕ ವನ್ನು ... ರ ಸುತ್ತುತ್ತಿದ್ದಾರೆ. ಇದು ಈ ಭಾಗದ ಜೆಡಿಎಸ್ ... ರ್ಯಕರ್ತರಿಗೆ ಒಂದಿಷ್ಟು ಆತ್ಮಸ್ಥೈರ್ಯ ಎಂಬುತ್ತದೆ ... ುದರ ಬಗ್ಗೆ ಅನುಮಾನವೇನೂ ಇಲ್ಲ. ಡಿಸೆಂಬರ್ ... ಂದು ಕುಮಾರಣ್ಣ ಗದಗ ಜಿಲ್ಲೆಗೆ ಬಂದು ಕಾಂಗ್ರೆಸ್-ಪಿ ವಿರುದ್ಧ ಗುಡುಗಿ ಹೋದನಂತರ ರೋಣದ ... ಎಸ್ ಪಾಳಯದಲ್ಲಿ ಕೊಸರಾಟಗಳು ಚೂರು ರಂಗೇರಲು ... ವಾಗಿವೆ.

ಜೆಡಿಎಸ್ ಟಿಕೆಟ್‌ಗಾಗಿ ರಾಜ್ಯ ಜೆಡಿಎಸ್ ಯುವ ... ಕದ ಉಪಾಧ್ಯಕ್ಷ ಡಾ. ಮಂಜುನಾಥ ವಿಶ್ವಬ್ರಾಹ್ಮಣ, ... ಎಸ್ ಮುಖಂಡ ಎಚ್.ಎಸ್.ಸೋಂಪೂರ ಮತ್ತು ... ನಗೌಡ ಪಾಟೀಲ್ ಕಣಗಿನಹಾಳ ಶತ ಪ್ರಯತ್ನದಲ್ಲಿದ್ದಾರೆ. ... ರೋಣ ತಾಲೂಕಾ ಜೆಡಿಎಸ್ ಅಧ್ಯಕ್ಷ ಮುಕ್ತುಂ ... ರ, ತಾಲೂಕಾ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ... ೇಶ ಮಲ್ಲಾಪುರ ಮತ್ತು ಇತರರು ಜೆಡಿಎಸ್ ಕಟ್ಟುವ ... ನಲ್ಲಿದ್ದಾರೆ.

ಡಾ. ಮಂಜುನಾಥನ ಮರಳಿ ಯತ್ನ

ರೋಣದಲ್ಲಿ ಕಾಂಗ್ರೆಸ್ ತನ್ನದೇ ಆದ ಕಬಂಧಬಾಹು ... ದ್ದು ಆಗಿಂದಾಗ್ಗೆ ಜನತಾ ಪರಿವಾರಕ್ಕೆ ತಕ್ಕ ಎದುರೇಟು ... ತ್ತಲೇ ಬಂದಿದೆ. ಇದಕ್ಕೆ ಮೂರು ದಶಕಗಳ ... ಾಸವಿದೆ. ಮುಖ್ಯವಾಗಿ 1999 ರಿಂದ ಇಲ್ಲಿಯವರೆಗೆ ... ಎಸ್‌ನ ಸಂಘಟನಾ ನಿಷ್ಠೆಯಲ್ಲಿ ಡಾ.ಮಂಜುನಾಥ್‌ಗೆ ... ೂ ಸಾಟಿಯಿಲ್ಲ ಎನ್ನಬಹುದು. ತಮ್ಮದೆ ಇತಿಮಿತಿ ... ಗೆ ಈ ವಿಶ್ವಬ್ರಾಹ್ಮಣ 25 ವರ್ಷಗಳ ಶ್ರಮ ಹಾಕಿ ... ಜ್ಞಾನದೇವ ದೊಡ್ಡ ಮೇಟಿ ಮತ್ತು ಶ್ರೀಶೈಲಪ್ಪ ... ೂರರನ್ನು ಶಾಸಕರನ್ನಾಗಿಸಲು ವಿಶ್ವಬ್ರಾಹ್ಮಣ ಶ್ರಮ ... ದ್ದರು. 2004ರ ಚುನಾವಣೆಯಲ್ಲಿ ಶ್ರೀಶೈಲಪ್ಪ ಬಿದರೂರನ್ನು ಜೆಡಿಎಸ್ ತನ್ನ ಅಭ್ಯರ್ಥಿಯಾಗಿ ಘೋಷಿಸಿತ್ತು, ಆದರೆ ಬಿದರೂರ ಜೆಡಿಎಸ್‌ಗೆ ಗುಡ್‌ಬೈ ಹೇಳಿ ಬಿಜೆಪಿ ಮನೆ ಹೊಕ್ಕಿದ್ದ. ಅಂತಹ ಕಷ್ಟಕರ ಸಂದರ್ಭದಲ್ಲಿ ಮಂಜುನಾಥ್ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಸೋತಿದ್ದರು. ಆ ಸೋಲು ಅವರನ್ನು ಆರ್ಥಿಕ ದಿವಾಳಿಯಾಗಿಸಿ ಮನೆ, ಆಸ್ತಿ ಕಳೆದುಕೊಳ್ಳುವಂತೆ ಮಾಡಿತ್ತು, ನಂತರ 2008ರಲ್ಲಿ ಮತ್ತೊಮ್ಮೆ ಜೆಡಿಎಸ್ ಟಿಕೆಟ್‌ಗಾಗಿ ಮಂಜುನಾಥ್ ಅರ್ಜಿ ಸಲ್ಲಿಸಿದರೂ ಟಿಕೆಟ್ ಮಾತ್ರ ರವಿ ದಂಡಿನವರ ಪಾಲಾಗಿತ್ತು, 2013ರಲ್ಲು ಸಹ ಜೆಡಿಎಸ್ ಹೇಮಗಿರಿಯ ಪಾಲಾಗಿ ಮಂಜುನಾಥ್‌ಗೆ ಪಕ್ಷದ ದಿಗ್ಗಜರಿಂದ ನಿರಾಸೆಯೇ ಸಿಕ್ಕಿತ್ತು. ಆ ಎರಡೂ ಬಾರಿ ಜೆಡಿಎಸ್ ಸೋತಿತ್ತು, ಇಷ್ಟಾದರೂ ಮಂಜುನಾಥರ ಜೆಡಿಎಸ್ ನಿಷ್ಠೆ ಬದಲಾಗಿಲ್ಲ, ಆ ಕಾರಣಕ್ಕೇ ಕುಮಾರಸ್ವಾಮಿಯವರು ಮಂಜುನಾಥ್‌ರನ್ನು ಜೆಡಿಎಸ್‌ನ ಬಾಂಬೆ-ಕರ್ನಾಟಕದ ಕೋರ್ ಕಮಿಟಿ ಸದಸ್ಯನ್ನಾಗಿ ನೇಮಿಸಿದ್ದಾರೆ. ಎಚ್.ಡಿ.ದೇವೆಗೌಡರ ಮಾನಸ ಪುತ್ರನೆಂದೇ ಗುರುತಿಸಲಾಗುವ ಮಂಜುನಾಥ್ ಕುಮಾರಸ್ವಾಮಿಯ ಆಪ್ತ ಒಡ್ಡೋಲಗದಲ್ಲೂ ಮಿಂಚುತ್ತಿದ್ದಾರೆ. ಇಂತಹ ಮಂಜುನಾಥ್ 2018ರ ಚುನಾವಣೆಗೆ ಟಿಕೆಟುಗಾಗಿ ಭಾರಿ ಲಾಬಿ ನಡೆಸಿದ್ದಾರೆ.

ಸೋಂಪೂರನಿಗೆ ಸೊಪ್ಪು ಹಾಕುವರೆ?


ಜೆಡಿಎಸ್‌ನ ಮತ್ತೊಬ್ಬ ಮುಖಂಡ ಎಚ್.ಎಸ್.ಸೋಂಪೂರ ಕೂಡ ಟಿಕೆಟಿನ ಪ್ರಬಲ ಆಕಾಂಕ್ಷಿ. ರೋಣ ವಿಧಾನಸಭಾ ಕ್ಷೇತ್ರದ ಬಹುದೊಡ್ಡ ನಗರ ಗಜೇಂದ್ರಗಡದ ಇವರು ಹೋರಾಟದ ಹಿನ್ನೆಲೆಯಿಂದ ಬಂದವರು. 21ನೇ ವಯಸ್ಸಿನಲ್ಲಿಯೆ ಗಜೇಂದ್ರಗಡದ ನಗರಸಭಾ ಸದಸ್ಯರಾಗಿ ಆಯ್ಕೆಯಾಗಿ, 1993ರಲ್ಲಿ ಅಖಂಡ ಜನತಾದಳದ ಯುವ ಘಟಕದ ತಾಲೂಕಾಧ್ಯಕ್ಷರಾಗಿ, ನಂತರ ಕನ್ನಡ ಹೋರಾಟಗಾರನಾಗಿ ಗಮನ ಸೆಳೆದವರು. ನಂತರ ಕೆಲವರ್ಷಗಳ ಕಾಲ ಜೆಡಿಎಸ್‌ನಿಂದ ದೂರ ಇದ್ದ ಸೋಂಪೂರ 2012ರಲ್ಲಿ ಗಜೇಂದ್ರಗಡಕ್ಕೆ ಕುಮಾರಸ್ವಾಮಿಯವರನ್ನು ಕರೆಸಿಕೊಂಡು, ಬೃಹತ್ ಸಭೆ ನಡೆಸಿ ಜೆಡಿಎಸ್ ಸೇರಿಕೊಂಡಿದ್ದರು. ಇನ್ನೇನು ಜೆಡಿಎಸ್ ಟಿಕೆಟ್ ನನಗೇ ಎಂಬ ಆತ್ಮವಿಶ್ವಾಸದಲ್ಲಿದ್ದ ಸೋಂಪೂರರಿಗೆ ಕೈಕೊಟ್ಟ ಕುಮಾರಣ್ಣ 2013ರ ಚುನಾವಣೆಯಲ್ಲಿ ಹೇಮಗಿರೀಶ್ ಹಾವಿನಾಳನಿಗೆ ಟಿಕೆಟ್ ಕೊಟ್ಟಿದ್ದರು. ಇದರಿಂದ ಬೇಸರಗೊಂಡ ಸೋಂಪೂರ ಜೆಡಿಎಸ್‌ಗೆ ಗುಡ್‌ಬೈ ಹೇಳಿ ಬಿಜೆಪಿ ಸೇರಿ, ಅಂದಿನ ಮಂತ್ರಿ ಕಳಕಪ್ಪ ಬಂಡಿ ಪರ ದುಡಿದಿದ್ದರು. ಆದರೆ ಬಂಡಿ ಚುನಾವಣೆಯಲ್ಲಿ ಸೋತುಹೋದ ನಂತರ ಬಂಡಿಗೂ ಮತ್ತು ಸೋಂಪೂರರಿಗೆ ಭಿನ್ನಾಭಿಪ್ರಾಯ ಉಂಟಾಗಿ ಕೆಲದಿನಗಳ ಹಿಂದಷ್ಟೇ ಗಜೇಂದ್ರಗಡಕ್ಕೆ ಜೆಡಿಎಸ್‌ನ ಮಾಜಿ ಸಚಿವ ಬಂಡೆಪ್ಪ ಕಾಶಂಪೂರರನ್ನು ಕರೆಸಿ ಮತ್ತೆ ಜೆಡಿಎಸ್ ಸೇರಿಕೊಂಡಿದ್ದಾರೆ. ಕುರುಬ ಜಾತಿಗೆ ಸೇರಿದ ಸೋಂಪೂರ ತನ್ನ ಕುಲಬಾಂಧವ ಬಂಡೆಪ್ಪ ಕಾಶಂಪೂರ ಟಿಕೇಟ್ ಕೊಡಿಸಿಯೇ ತೀರುತ್ತಾನೆ ಎಂಬ ವಿಶ್ವಾಸದಲ್ಲಿದ್ದಾರೆ.

ನಿಂಗನಗೌಡನ ದರ್ಬಾರು ನಡೆದೀತೆ?

ಇನ್ನು ಗದಗ ಜಿಲ್ಲೆಯವರಾದ ಸಹಕಾರಿ ರಂಗದ ಪಿತಾಮಹ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲರ ಮೊಮ್ಮಗನಾದ ನಿಂಗನಗೌಡ ಪಾಟೀಲ ಈ ಬಾರಿ ಜೆಡಿಎಸ್ ಟಿಕೆಟ್ ತನಗೇ ಎಂಬ ಅತಿಯಾದ ಉಮೇದಿಯಲ್ಲಿದ್ದಾರೆ. 2005ರಲ್ಲಿ ಜೆಡಿಎಸ್ ಸೇರಿಕೊಂಡು ಪಕ್ಷ ಸಂಘಟನೆಗಾಗಿ ಹಣ ಕಳೆದುಕೊಂಡವ ಈತ. ಈತನೂ ಈ ಕ್ಷೇತ್ರದ ಬಹುಸಂಖ್ಯಾತ ಕುರುಬ ಜಾತಿಗೆ ಸೇರಿದವ. 2008ರಲ್ಲಿ ಕ್ಷೇತ್ರದಲ್ಲಿ ಒಂದಿಷ್ಟು ಹವಾ ಕ್ರಿಯೇಟ್ ಮಾಡಿ ಚುನಾವಣೆಗೆ ಸಜ್ಜಾಗಿದ್ದ ನಿಂಗನಗೌಡನಿಗೆ ಕುಮಾರಸ್ವಾಮಿ ಟಿಕೇಟ ನೀಡಿರಲಿಲ್ಲ. ನಂತರ ಒಂದಿಷ್ಟು ಕಾಲ ರಾಜಕೀಯವಾಗಿ ತಟಸ್ಥರಾಗಿದ್ದ ನಿಂಗನಗೌಡ 2011ರಲ್ಲಿ ಕಾಂಗ್ರೆಸ್ ಸೇರ್ಪಡೆಯಾಗಿ ತಮ್ಮ ಕುಲಬಂಧು ಸಿದ್ದರಾಮಯ್ಯನವರ ಮೂಲಕ ಟಿಕೆಟಿಗೆ ಯತ್ನಿಸಿ ವಿಫಲರಾಗಿದ್ದರು. ಮೊನ್ನೆ ಜಿಪಂ ಚುನಾವಣೆ ಸಮಯದಲ್ಲಿ ಮತ್ತೆ ಜೆಡಿಎಸ್ ಕದ ತಟ್ಟಿ, ಜೆಡಿಎಸ್ ಟಿಕೆಟ್‌ನಡಿ ಸ್ಪರ್ಧಿಸಿದರೂ ಪರಾಭವಗೊಂಡಿದ್ದಾರೆ. ಬೆಂಗಳೂರಿನ ಬಿಬಿಎಂಪಿ ಗುತ್ತಿಗೆದಾರನಾಗಿ ಆರ್ಥಿಕವಾಗಿ ಬಲಾಢ್ಯನಾದ ನಿಂಗನಗೌಡ ಈ ಸಲ ರೋಣ ಕ್ಷೇತ್ರದ ಜೆಡಿಎಸ್ ಟಿಕೆಟ್‌ಗಾಗಿ ಭಾರಿ ಲಾಬಿ ನಡೆಸಿದ್ದಾರೆ.

ಹೇಳಿಕೇಳಿ ಅದು ಜೆಡಿಎಸ್ ಪಾರ್ಟಿ. ಅಲ್ಲಿ ಪಕ್ಷನಿಷ್ಠೆಗಿಂತಲೂ ಬೇರೇನೇನೊ ಮಾನದಂಡಗಳು ಟಿಕೆಟ್‌ಗಳನ್ನು ನಿರ್ಧರಿಸುತ್ತವೆ. ಹಾಗಾಗಿ 2018ರ ಹೊತ್ತಿಗೆ ಈ ಮೂವರಲ್ಲಿ ಯಾರಿಗೆ ಟಿಕೆಟ್ ಒಲಿಯುತ್ತೋ ಕಾದುನೋಡಬೇಕು. ಒಂದೊಮ್ಮೆ ಈ ಮೂವರನ್ನೂ ಬಿಟ್ಟು ನಾಲ್ಕನೇ ಮತ್ತಾರಿಗೋ ಜೆಡಿಎಸ್ ಟಿಕೇಟ್ ಸಿಕ್ಕರೂ ಅಚ್ಚರಿಪಡಬೇಕಿಲ್ಲ. ಯಾಕೆಂದರೆ ಅದು ಜೆಡಿಎಸ್ಸು!


■ ಸ.ಶರಣಪ್ಪ ಪಾಟೀಲ್ ಕರಮುಡಿ




... ಪ್ಲಾನ್-ಬಿ ಮತ್ತೂ ಕುತೂಹಲಕರ-ರೋಚಕವಾಗಿದೆ!! ಅಕಸ್ಮಾತ್ ತನಗೆ ಬಿಜೆಪಿ ಟಿಕೆಟ್ ಸಿಗದಂಥ ... ಾರ್ಯ ಸಂದರ್ಭ ಎದುರಾದರೆ ಆಗ ತನ್ನ ... ಾಪ್ತೆಯಾದ ರೂಪಾಲಿ ನಾಯಕ್‌ಗೆ ಬಿಜೆಪಿ ಅಭ್ಯರ್ಥಿ ... ಡುವ ತಂತ್ರಗಾರಿಕೆ ಆತನದು. ಕಾರವಾರದ ... ುಂದರಾಂಗಿ ರೂಪಾಲಿ ನಾಯಕ್ ಅಸ್ನೋಟಿಕರ್‌ನ ... ್ರಿಗಿರಿ ಯುಗದಲ್ಲಿ ರಾಜಕಾರಣಿಯಾಗಿ ಪಳಗಿದಾಕೆ. ... ೆ ಕಾರವಾರ ತಾಲ್ಲೂಕು ಪಂಚಾಯ್ತಿಯ ಅಧ್ಯಕ್ಷೆಯೂ ... ಳು. ಅಷ್ಟೇ ಅಲ್ಲ ಮಂತ್ರಿ ಅಸ್ನೋಟಿಕರ್ ಕೃಪೆಯಿಂದ ... ಲಿ ಸರ್ಕಾರಿ ಗುತ್ತಿಗೆದಾರಳಾಗಿ ಅವತರಿಸಿದ್ದಳು. ಆಕೆ ... ಕ್ಕರಿಗೆ ಕಂಪನಿ ತೆರೆದು ಕೊಪ್ಪರಿಗೆಗಟ್ಟಲೆ ಕಾಸೂ ... ಕೊಂಡಿದ್ದಾಳೆ!

ರೂಪಾಲಿ ಈಗ ಬಾಸ್‌ನ ರಹಸ್ಯ ಕಾರ್ಯಸೂಚಿಯಂತೆ ... ರಲ್ಲಿ ಬಿರುಸಿನ ಚಟುವಟಿಕೆಯಲ್ಲಿ ನಿರತಳಾಗಿದ್ದಾಳೆ. ... ಕ್ಷ ಹಣ ಹರಿಸುತ್ತ ಕ್ಷೇತ್ರ ಹದ ಮಾಡಿಕೊಳ್ಳುತ್ತಿದ್ದಾಳೆ. ... ಸಂಖ್ಯಾತ "ಕೋಮಾರಪಂತ" ಸಮುದಾಯದ ... ಲಿ ಮೇಡಮ್ ಬಡ-ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ... ತರ ಹಂಚಿದ್ದಾಳೆ. ಯಾರೇ ಕಷ್ಟ ಹೇಳಿ ಬಂದರೆ ... ಕೊಡುತ್ತಾಳೆ. ಕಾರವಾರ-ಅಂಕೋಲೆಯ ಸಾಂಸ್ಕೃತಿಕ-ಕಾರ್ಯಕ್ರಮಕ್ಕೆಲ್ಲ ಹಣ ಕೊಡುತ್ತಿದ್ದಾಳೆ. ರೂಪಾಲಿಯ ... ನ ದೌಲತ್ತು ಆಕೆಯ ಕಪ್ಪು ಕಂಟ್ರಾಕ್ಟರಿಕೆ ರಹಸ್ಯ ... ುತ್ತಿದೆ. ಒಂದು ವೇಳೆ ಈ ರೂಪಾಲಿಯೇ ಬಿಜೆಪಿಯ ... ದೇಟಾದರೆ ಪರಸ್ಪರ ಕಾಲಿಡಿದುಕೊಂಡಿರುವ ಸ್ಥಳೀಯ ... ಯಲ್ಲಿನ ಮೂರ್‍ನಾಲ್ಕು ಬಣಗಳಿಗೂ 'ಸಹ್ಯ'ವಾಗುವ ... ತೆಯಿದೆ. ಇದನ್ನು ಅರ್ಥಮಾಡಿಕೊಂಡಿರುವ ... ಟಿಕರ್ ತನಗಿಂತಲೂ ತನ್ನ ಶಿಷ್ಯೆಯೇ ಸುರಕ್ಷಿತ ... ರ್ಥ ಎಂಬುದು ಮನಗಂಡಿದ್ದಾನೆ.

ರೂಪಾಲಿಗೆ ತನ್ನ ಸುಪ್ತವೇ ಮುಳುವಾಗಬಾರದೆಂದು ... ೋಟಿಕರ್ ಆಕೆಯನ್ನು 'ದೂರ' ಇಟ್ಟಿದ್ದಾನೆ. ಪದೇ-... ತನ್ನ ಭೇಟಿಗೆ ಬಂದು ವಿರೋಧಿಗಳ ಕಣ್ಣುರಿಗೆ ... ಾಗದಂತೆ ಎಚ್ಚರಿಸಿದ್ದಾನೆ. ಮಂತ್ರಿ ಗದ್ದುಗೆ ... ದಿಂದ ರೂಪಾಲಿಗೆ ಟಿಕೆಟ್ ಕೊಡಿಸೋದೇನೋ ... ಟಿಕರ್‌ಗೆ ಕಷ್ಟವಲ್ಲ, ಆಕೆಗೆ ಬಿಜೆಪಿ ಟಿಕೆಟ್ ಸಿಕ್ಕರೆ ... ಆರ್ಥಿಕ ಗಂಗಾಧರ್ ಭಟ್ ಎಂಬ ಸೊನಗಾರ ಶ್ರೇಷ್ಠನ ಗೆಲ್ಲಿಸಲು ಹೆಣೆದ ತಂತ್ರಗಳನ್ನೆಲ್ಲ ಪ್ರಯೋಗಿಸುವ ಯೋಚನೆ ಅಸ್ನೋಟಿಕರ್‌ನದು. ಹೇಗೆ ಗಂಗಾಧರ ಭಟ್ ಎಂಬ 'ಮೂಕ' ಚಿನ್ನದ ದಂಧೆದಾರ ಎಮ್ಮೆಲ್ಲೆಯಾಗಿದ್ದಾಗ ಕಾಂಗ್ರೆಸ್‌ನಲ್ಲಿದ್ದುಕೊಂಡೇ ಅನಧಿಕೃತ ಎಮ್ಮೆಲ್ಲೆಯಂತೆ ಹಾರಾಡಿದ್ದ ಅಸ್ನೋಟಿಕರ್ ಆಜ್ಞಾನುಧಾರಿಣಿ ರೂಪಾಲಿ ಹೆಸರಲ್ಲಿ ರಾಜ್ಯಭಾರ ಮಾಡುವ ದೂರಾಲೋಚನೆ ಹಾಕಿದ್ದಾನೆ!





ಬಿಜೆಪಿ ಕಾರವಾರದಲ್ಲಿ ಯಾರು ಹಿತವರು ಎಂಬ ಸರ್ವೆ ನಡೆಸುತ್ತಿದೆ. ಯಡ್ಡಿಯ ನಿಯೋಜಿತ ಏಜೆನ್ಸಿ ಪಹರೆ ನಾಗು, ಆನಂದ ಅಸ್ನೋಟಿಕರ್, ಗಣಪತಿ ಉಳ್ವೇಕರ್ ಹಾಗು ರೂಪಾಲಿ ನಾಯಕ್‌ರಲ್ಲಿ ಯಾರು ಗೆಲ್ಲುವ ಕುದುರೆಯಾಗಬಹುದೆಂದು ಸಮೀಕ್ಷೆ ಮಾಡುತ್ತಿದೆ. ಯಾವ ಸಮೀಕ್ಷೆ ಏನೇ ಹೇಳಲಿ, ಕಾಂಗ್ರೆಸ್‌ನಿಂದ ಕಣಕ್ಕಿಳಿಯಲಿರುವ ಕೋಟ್ಯಾಧೀಶ ಕಳ್ಳ ಅದಿರು ಉದ್ಯಮಿ ಸತೀಶ್ ಸೈಲ್ ಎದುರು ಸೆಣಸಾಡುವ ತಾಕತ್ತು ಬಿಜೆಪಿಯಲ್ಲಿ ರೂಪಾಲಿ ನಾಯಕ್ ಬಿಟ್ಟರೆ ಮತ್ತಾರಿಗೂ ಇಲ್ಲ. ಕ್ಷೇತ್ರದಲ್ಲಿನ ಜಾತಿ ಸಮೀಕರಣ, ಸಂಘಟನಾ ತಾಕತ್ತು, ಹಣದ ಬಲ ಮತ್ತು ಒರಿಜಿನಲ್ ಬಿಜೆಪಿಗರ ಕಾಲೆಳೆಯುವಿಕೆ ಪರಿಗಣಿಸಿ ಕ್ಷೇತ್ರದೊಳಗಿನ ಗುಪ್ತಗಾಮಿ ಮೂಡ್‌ನ ವಿಶ್ಲೇಷಣೆ ನಡೆಸಿದರೆ ಪಹರೆ ನಾಗು ಗೆಲ್ಲುವ ಸಾಧ್ಯತೆ ಕಡಿಮೆ. ಈತ ಹಣ ಹರಿಸಬಲ್ಲನೇ ಹೊರತು ಕ್ಷೇತ್ರದ ದುರ್ಬಲ ವರ್ಗದ ಒಲವು ಗಳಿಸಲಾರನೆಂಬುದು ಯಾವ ಬಣಕ್ಕೂ ಸೇರದ ಬಿಜೆಪಿಗರ ವಾದ.

ಇದು ಪಹರೆ ನಾಗುನಿಗೂ ಗೊತ್ತಿದೆ. ಹಾಗಾಗಿ ಆತ ಎಮ್ಮೆಲ್ಲೆ ಟಿಕೆಟ್ ಪಡೆದು ಸೋತರೂ ಪರವಾಗಿಲ್ಲ, ಈ ಯುದ್ಧದಿಂದಾಗಿ ತಾನು ನಿಗಮ-ಮಂಡಳಿ ಅಥವಾ ಮಾನವ ಹಕ್ಕು ಆಯೋಗದ ಗೂಟದ ಕಾರಿನ ಮುಂದೆ ಹೋಗಿ ನಿಲ್ಲುವಂತಾಗುತ್ತದೆಂದು ಆಶಿಸಿದ್ದಾನೆ! ಮೀನುಗಾರ ಸಮುದಾಯದ ಗಣಪತಿ ಉಳ್ವೇಕರ್‌ಗೆ ಬಿಜೆಪಿಯವರು ಕರೆದು ಟಿಕೆಟ್ ಕೊಟ್ಟರೂ ಬೇದವಾಗಿದೆ. ಉದ್ಯಮದಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿರುವ ಉಳ್ವೇಕರ್ ಬೆಂಬಲ ಏನಿದ್ದರೂ ಪಹರೆ ನಾಗುಗೆ. ಮೊದಲ ಬಾರಿ ಅಸ್ನೋಟಿಕರ್ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದಾಗ ಈತ ಪಕ್ಷೇತರನಾಗಿ ಅಖಾಡಕ್ಕೆ ಇಳಿದಿದ್ದ. ಗುರು ವಸಂತ ಅಸ್ನೋಟಿಕರ್ ಪುತ್ರ ಆನಂದ್ ಬಂದರು ಉದ್ಯಮದಲ್ಲಿ ಮಾಡಿದ ದೋಖಾದ ಸೇಡು ತೀರಿಸಿಕೊಳ್ಳಲು ಬರತಕ್ಕ ಹಣ ವಸೂಲಿಗೆಂದು ಈತ ಎಲೆಕ್ಷನ್‌ಗೆ ಇಳಿದಿದ್ದ. ಆಗ ಪಹರೆ ನಾಗುನ ಟೀಮು ಉಳ್ವೇಕರ್‌ಗೆ ಪಂಗನಾಮ ಹಾಕಿತ್ತಂತೆ. ಆ ಹಳೆ ಬಾಕಿ ಚುಕ್ತಾಗ್ಗಿ ಉಳ್ವೇಕರ್ ಸಮಯ ಕಾಯುತ್ತಿದ್ದಾನೆ. ಆಗ ಹೋದ ಕಾಸು ಈಗ ನಾಗುನಿಂದ ಪಡೆಯುವ ಹಿಕಮತ್ತು ಉಳ್ವೇಕರ್‌ದು.

ಶಾಸಕ ಸೈಲ್ ಬಿಜೆಪಿಯೊಳಗಿನ ಟಿಕೆಟ್ ಕಸರತ್ತು ಕರಾರುವಾಕ್ಕಾಗಿ ಗಮನಿಸುತ್ತಿದ್ದಾನೆ. ಒಂದು ಹಂತದಲ್ಲಿ ಮಂತ್ರಿ ದೇಶಪಾಂಡೆಯ ಕಿರಿಕಿರಿ ತಡೆಯಲಾಗದೇ ಸೈಲ್ ಬಿಜೆಪಿ ಟಿಕೆಟ್‌ಗೆ ಯೋಚಿಸಿದ್ದೂ ಇದೆ. ಆದರೆ ಈಗಾತ ಕಾಂಗ್ರೆಸ್‌ನಲ್ಲೇ ಗಟ್ಟಿಯಾಗಿರುವ ತೀರ್ಮಾನಕ್ಕೆ ಬಂದಿದ್ದಾನೆ. ಇದಕ್ಕೆ ಕಾರಣ- ಕಾಂಗ್ರೆಸ್‌ಲ್ಲಿ ಆತನಿಗೆ ಟಿಕೆಟ್ ಪ್ರತಿಸ್ಪರ್ಧಿಗಳಿಲ್ಲ, ದೇಶಪಾಂಡೆ ಯೂ ಹೊಂದಿಕೊಂಡಿದ್ದಾರೆ. ಹೀಗಾಗಿ ಆತ ಬಿಜೆಪಿಯಿಂದ ತನಗೆ ಎದುರಾಗಿ ಪಹರೆ ನಾಗುನೇ ನಿಲ್ಲುವಂತಾಗಲೆಂದು ದೇವರಲ್ಲಿ ಬೇಡುತ್ತಿದ್ದಾನಂತೆ. ಕ್ಷೇತ್ರದ ಜಾತಿ ಕೆಮಿಸ್ಟ್ರಿ ಪಹರೆ ನಾಗುಗೆ ವಿರುದ್ಧವಾಗಿದೆ. ಅಸ್ನೋಟಿಕರ್ ನಾಗುಗಿಂತಲೂ ಬಲಾಢ್ಯ, ಅಸ್ನೋಟಿಕರ್‌ಗಿಂತ ರೂಪಾಲಿ ನಾಯಕ್ ಶಕ್ತಿಶಾಲಿ!! ಸೈಲ್ ಅಂಜುವುದು ರೂಪಾಲಿಗೆ ಮಾತ್ರ!! ಒಂದಂತೂ ಖರೆ. ಬಿಜೆಪಿಯ ಟಿಕೆಟ್ ಟ್ರಾಕ್ಟೀಸ್ ದಿನಕ್ಕೊಂದು ಮಗ್ಗಲು ಬದಲಿಸುತ್ತ ಎಮ್ಮೆಲೆ ಚುನಾವಣೆ ನಿದ್ದೆಗೆಡಿಸುತ್ತಿರುವುದು ಮೋಜಾಗಿದೆ!!

■ ವರದಿಗಾರ

ಮಂಡ್ಯ: ಕಾಂಗ್ರೆಸ್ ಪುಢಾರಿಗಳ ಜಿದ್ದಿಗೆ ಅಮಾಯಕರ ಬಲಿ

ಒಂದುಕಾಲಕ್ಕೆ ಶಿವಪುರ ಸತ್ಯಾಗ್ರಹದ ಮೂಲಕ ದೇಶದ ಗಮನ ಸೆಳೆದಿದ್ದ ಮದ್ದೂರು ಈಗ ಕ್ಷುಲ್ಲಕ ರಾಜಕಾರಣದ ರಕ್ತಚರಿತ್ರೆಯ ನೆಪದಲ್ಲಿ ಚರ್ಚೆಗೆ ಬಂದಿರೋದು ವಿಪರ್ಯಾಸ. ಮದ್ದೂರು ತಾಲ್ಲೂಕಿನ ಕೆ. ಹೊನ್ನಲಗೆರೆ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರಿದ ತೊಪ್ಪನಹಳ್ಳಿ ಅಂತಹದ್ದೊಂದು ದುರಂತಕ್ಕೆ ಸಾಕ್ಷಿಯಾಗಿ ನಿಂತಿದೆ. ಜೆಡಿಎಸ್ ಪಕ್ಷದ ಕಾರ್ಯಕರ್ತ ಮುತ್ತುರಾಜ್ ಹಾಗೂ ಏನೇನೂ ಅರಿಯದ ಮುಗ್ಧ ಯುವಕ ನಂದೀಶ್ ಎಂಬಿಬ್ಬರು ರಾಜಕೀಯ ವೈಷಮ್ಯದ ಬೆಂಕಿಯ ಕೆನ್ನಾಲಿಗೆಗೆ ಆಹುತಿಯಾಗಿ ದ್ದಾರೆ. ಆಡಳಿತಾರೂಢ ಕಾಂಗ್ರೆಸ್ ಪುಡಿಪುಢಾರಿಗಳು ತಮ್ಮ ರಾಜಕೀಯ ತೆವಲಿಗೆ ಜೋಡಿ ಬಲಿ ಪಡೆಯುವ ಮೂಲಕ ಮದ್ದೂರಿಗೆ ಹತ್ಯಾ ರಾಜಕಾರಣದ ಮಸಿ ಬಳಿದಿದ್ದಾರೆ.

ಕುಡಿಯುವ ನೀರಿನ ವಿಚಾರ, ಫ್ಲೆಕ್ಸ್ ಹರಿದುಹಾಕಿದ ಸಣ್ಣ ವಿಷಯವನ್ನೇ ದೊಡ್ಡದು ಮಾಡಿಕೊಂಡ ತೊಪ್ಪನಹಳ್ಳಿಯ ಕಾಂಗ್ರೆಸ್ ಪುಢಾರಿಗಳಾದ ಶಿವಣ್ಣ ದೇವರಾಜು, ನಿಂಗಯ್ಯ ಎಂಬ ಸಹೋದರರು ತಮ್ಮ ಮಕ್ಕಳ ಜೊತೆ ಸೇರಿ ರೌಡಿಗಳಂತೆ ಲಾಂಗ್-ಡ್ರ್ಯಾಗರ್‌ನಿಂದ ಮುತ್ತುರಾಜ್ ಅಲಿಯಾಸ್ ಕೋಟ ಹಾಗೂ ನಂದೀಶ್‌ನನ್ನು ಕೊಂದು ಹಾಕಿದ್ದಾರೆ. ಮದ್ದೂರಿನಿಂದ 9 ಕಿ.ಮೀ. ದೂರದಲ್ಲಿರುವ ತೊಪ್ಪನಹಳ್ಳಿಯಲ್ಲಿ 700ಕ್ಕೂ ಹೆಚ್ಚು ಮನೆಗಳಿದ್ದು 2500 ಜನ ಸಂಖ್ಯೆಯಿರುವ ದೊಡ್ಡ ಗ್ರಾಮ. ಯಥಾಪ್ರಕಾರ ಒಕ್ಕಲಿಗರದ್ದೇ ಪಾರುಪತ್ಯ. ಜೆಡಿಎಸ್ ಶಾಸಕ ಡಿ.ಸಿ.ತಮ್ಮಣ್ಣ ಹಾಗೂ ಕೆ.ಹೊನ್ನಲಗೆರೆಯ ಮಾಜಿ ವಿಧಾನಪರಿಷತ್ ಸದಸ್ಯ ಬಿ.ರಾಮಕೃಷ್ಣರ ಬಣದಲ್ಲಿ ಹಲವರು ಗುರುತಿಸಿಕೊಂಡಿದ್ದಾರೆ. ಕಾಂಗ್ರೆಸ್ ಪುಢಾರಿಗಳು ಜಿ.ಪಂ. ಮಾಜಿ ಅಧ್ಯಕ್ಷ ಗುರುಚರಣ್ ಬೆಂಬಲಿಗರಾಗಿದ್ದಾರೆ.


ಕಳೆದ 10 ವರ್ಷಗಳಿಂದ ಜೆಡಿಎಸ್ ಆಡಳಿತದಲ್ಲಿದ್ದ ಕೆ. ಹೊನ್ನಲಗೆರೆ ಗ್ರಾಮ ಪಂಚಾಯತಿ ಈ ವರ್ಷ ಕಾಂಗ್ರೆಸ್ ತೆಕ್ಕೆಗೆ ಬಂದಿತ್ತು, ಗ್ರಾಮದ ಶಿವರಾಮು ಎಂಬಾತನ ಪತ್ನಿಯೇ ಗ್ರಾಮ ಪಂಚಾಯತಿ ಅಧ್ಯಕ್ಷೆ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದನಂತರ ತೊಪ್ಪನಹಳ್ಳಿಯಲ್ಲಿ ಶಿವಣ್ಣ, ದೇವರಾಜು, ನಿಂಗಯ್ಯ ಎಂಬ ಕಿರಾತಕ ಕಾಂಗ್ರೆಸ್ ಲೀಡರ್‌ಗಳು ಮತ್ತವರ ರೌಡಿ ಮಕ್ಕಳದ್ದೇ ಆರ್ಭಟ ಹೆಚ್ಚಾಗಿತ್ತು, ಸಣ್ಣಪುಟ್ಟ ವಿಷಯವನ್ನೇ ದೊಡ್ಡದು ಮಾಡಿಕೊಂಡು ವಿರೋಧಿ ಪಕ್ಷದ ಕಾರ್ಯಕರ್ತರನ್ನು ಕಿಚಾಯಿಸುವುದು ನಡೆದಿತ್ತು. ಕಳೆದ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಮುತ್ತುರಾಜ್ ಅಲಿಯಾಸ್ ಕೋಟಿ ಎಂಬಾತ ಜೆಡಿಎಸ್ ಬೆಂಬಲದಿಂದ ಸ್ಪರ್ಧಿಸಿದ್ದ. ಆಗ ಮುತ್ತುರಾಜ್ ಹಾಗೂ ರಾಜು ಎಂಬ ಕಾಂಗ್ರೆಸ್ ಮುಖಂಡನ ಮಧ್ಯೆ ಮಾತಿನ ಚಕಮಕಿ ನಡೆದು ಹೊಡೆದಾಟದ ಹಂತಕ್ಕೆ ತಲುಪಿತ್ತು, ಆಗಿನಿಂದಲೂ ತೊಪ್ಪನಹಳ್ಳಿಯಲ್ಲಿ ಜೆಡಿಎಸ್-ಕಾಂಗ್ರೆಸ್ ಕಾರ್ಯಕರ್ತರ ನಡುವೆ ವೈಮನಸ್ಯ ಮುಂದುವರೆದಿತ್ತು.

ನಡೆದೇಹೋಯಿತು ಇಬ್ಬರ ಹತ್ಯೆ

ಆದರೆ ಈಗ್ಗೆ 10 ದಿನಗಳಿಂದ ಈ ವೈಮನಸ್ಸು ವಿಕೃತರೂಪ ಪಡೆದುಕೊಳ್ಳಲಾರಂಭಿಸಿತ್ತು, ರಾಜ ಎಂಬಾತ ನೀರುಗಂಟಿ ಮುತ್ತು ಮನೆಯ ಬಳಿ ಹೋಗಿ ನೀನು ನಮ್ಮ ಬೀದಿಗಳಿಗೆ ಸರಿಯಾಗಿ ನೀರು ಬಿಡುತ್ತಿಲ್ಲ, ಆದರೆ ಕಾಂಗ್ರೆಸ್ ಮುಖಂಡರ ಬೀದಿಗಳಿಗೆ ನೀರು ಹರಿಸುತ್ತೀಯ ಎಂದು ಬಾಯಿಗೆ ಬಂದಂತೆ ಕುಡಿದ ಮತ್ತಿನಲ್ಲಿ ಒದರಾಡಿದ್ದ, ಆಗ ಮುತ್ತು ಹಾಗೂ ಆತನ ಕಡೆಯ ನಾಲ್ಕೈದು ಜನ ಸೇರಿಕೊಂಡು ರಾಜನಿಗೆ ಚೆನ್ನಾಗಿ ಬಡಿದು ಮೂಳೆ ಮುರಿದಿದ್ದರು. ರಾಜ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದ, ಜೆಡಿಎಸ್ ಮುಖಂಡರು ರಾಜನಿಗೆ ನಿನ್ನದೇ ತಪ್ಪು, ಕುಡಿದು ಹೋಗಿ ಏಕೆ ಬಾಯಿಗೆ ಬಂದಹಾಗೆ ಅವರನ್ನು ಬೈದೆ ಎಂದು ಗದರಿದ್ದರು. ಮೂಳೆ ಮುರಿಸಿಕೊಂಡ ರಾಜ ಎಲ್ಲಿ ನಮ್ಮ ಮೇಲೆ ಕಂಪ್ಲೆಂಟ್ ಕೊಡುತ್ತಾನೋ ಎಂದು ಹೆದರಿದ ನೀರುಗಂಟಿ ಮುತ್ತು, ಗ್ರಾಮ ಪಂಚಾಯತಿ ಅಧ್ಯಕ್ಷೆ ಗಂಡ ಶಿವರಾಮು ಹಾಗೂ ಸದಸ್ಯೆಯೊಬ್ಬಳ ಗಂಡ ಮುತ್ತುರಾಜ್ ಎಂಬಾತನ ಜೊತೆ ಪೊಲೀಸ್ ಠಾಣೆಗೆ ಹೋಗಿ ರಾಜು ಕುಡಿದು ಬಂದು ನಮ್ಮ ಜೊತೆ ಗಲಾಟೆ ಮಾಡಿ ನಲ್ಲಿ ಮೇಲೆ ಕಲ್ಲು ಎತ್ತಿ ಹಾಕಿದ್ದಾನೆ ಎಂದು ಕಂಪ್ಲೆಂಟ್ ಕೊಡಲು ಮುಂದಾಗಿದ್ದರು. ಆಗ ತೊಪ್ಪನಹಳ್ಳಿಯ ಗ್ರಾಮದ ಹಿರಿಯರೇ ಕಂಪ್ಲೆಂಟ್ ಕೊಡುವುದು ಬೇಡ, ನಾವೇ ಊರಿನಲ್ಲಿ ಸೇರಿ ಬಗೆ ಹರಿಸಿಕೊಳ್ಳೋಣ ಎಂದು ಕಾಂಗ್ರೆಸ್ ಪುಢಾರಿಗಳಾದ ಶಿವರಾಮು, ಮುತ್ತುರಾಜನಿಗೆ ಹೇಳಿ ಕಂಪ್ಲೆಂಟ್ ಕೊಡದಂತೆ ಮಾಡಿದ್ದರು.

ತನ್ನನ್ನು ಹೊಡೆದಿದ್ದಲ್ಲದೇ ತನ್ನ ಮೇಲೆಯೇ ಕಂಪ್ಲೆಂಟ್ ಕೊಡಲು ಮುಂದಾಗಿದ್ದರಿಂದ ಸಿಟ್ಟಾಗಿದ್ದ ರಾಜ ಚೆನ್ನಾಗಿ ಕುಡಿದು ಕಾಂಗ್ರೆಸ್ ಪಕ್ಷದ ಮುಖಂಡರು ಹಾಕಿದ್ದ ಫ್ಲೆಕ್ಸ್ ಮೇಲೆ ಕಲ್ಲು ತೂರಿದ್ದ, ಡಿಸೆಂಬರ್ 24ರ ಶನಿವಾರ ಬೆಳಗ್ಗೆ ರಾಜನ ಮನೆ ಹತ್ತಿರ ಹೋದ ಕಾಂಗ್ರೆಸ್ ಪುಢಾರಿ ಶಿವಣ್ಣನ ಮಗ ಪ್ರಸನ್ನ, ಏಕೆ ಫ್ಲೆಕ್ಸ್‌ಗೆ ಕಲ್ಲು ಹೊಡೆದು ಹಾಳು ಹಾಕಿದ್ದೀಯ ಎಂದು ಪ್ರಶ್ನಿಸಿದ್ದ, ಆಗ ರಾಜನ



ಕೊಲೆಯಾದ ನಂದೀಶ್


ಕೊಲೆಯಾದ ಮುತ್ತುರಾಜು

ಅಕ್ಕ ತನ್ನ ತಮ್ಮನಿಗೆ ಬಡಿದದ್ದಲ್ಲದೆ ಅವನ ಮೇಲೆ ಕಂಪ್ಲೆಂಟ್ ಕೊಡೋದಿಕ್ಕೆ ಹೋಗಿದ್ದೀರಲ್ಲ ನಾಚಿಕೆಯಾಗುವುದಿಲ್ಲವಾ ಎಂದು ಕಾಂಗ್ರೆಸ್ ಪುಢಾರಿಗಳಾದ ಪ್ರಸನ್ನ, ಶಿವರಾಮು, ಮುತ್ತುರಾಜು ಮುಖಕ್ಕೆ ಹೊಡೆದಂತೆ ಮಾತನಾಡಿದ್ದಳು. ಮಾತಿನ ಚಕಮಕಿ ತಾರಕಕ್ಕೇರಿ ಪುಢಾರಿ ಪ್ರಸನ್ನ ರಾಜನ ತಾಯಿಗೆ ಕಪಾಳಕ್ಕೆ ಒಂದೇಟು ಬಿಟ್ಟಿದ್ದ. ಅಲ್ಲಿಯೇ ಇದ್ದ ರಾಜನ ಅಕ್ಕನ ಮಗ ಮುತ್ತು ಎಂಬಾತ ತನ್ನ ಅಜ್ಜಿಗೆ ಹೊಡೆಯುತ್ತೀಯ ಎಂದವನೇ ಇಟ್ಟಿಗೆಯೊಂದನ್ನು ತೆಗೆದು ಕೊಂಡು ಪ್ರಸನ್ನನ ಬುರುಡೆಗೆ ಬೀಸಿದ್ದ. ಇದಾದ ಕೂಡಲೇ ರಾಜ ಮದ್ದೂರು ಗ್ರಾಮಾಂತರ ಠಾಣೆಯಲ್ಲಿ ದೂರು ನೀಡಲು ಹೋಗಿದ್ದರೆ ಇತ್ತ ಪ್ರಸನ್ನ ಕೂಡ ರಾಜನ ವಿರುದ್ಧ ಪ್ರತಿ ದೂರು ಕೊಡಲು ಹೋಗಿದ್ದ. ಆಗಲೂ ಊರಿನ ಹಿರಿಯರು ಮಧ್ಯಪ್ರವೇಶಿಸಿ ನಾಳೆ ಬೆಳಗ್ಗೆ ಸೇರಿ ಮಾತನಾಡಿ ಬಗೆಹರಿಸೋಣ ಎಂದು ಸಮಾಧಾನಮಾಡಿದ್ದರು.

ಮಾರನೆ ದಿನ ಡಿಸೆಂಬರ್ 25ರ ಬೆಳಗ್ಗೆ ಕಾಂಗ್ರೆಸ್ ಪುಢಾರಿಗಳಾದ ಶಿವಣ್ಣ ದೇವರಾಜು, ನಿಂಗಯ್ಯ ಶಿವರಾಮು, ಮುತ್ತುರಾಜ್ ಜೊತೆ ಮಾತನಾಡಲು ಮುಂದಾಗಿದ್ದಾರೆ. ಆದರೆ ಇವರ್‍ಯಾರೂ ಸಿಕ್ಕಿರಲಿಲ್ಲ, ಪ್ರಸನ್ನನ ಬುರುಡೆಗೆ ಇಟ್ಟಿಗೆಯಲ್ಲಿ ಹೊಡೆದಿದ್ದರಿಂದ ಸಿಟ್ಟಾಗಿದ್ದ ಶಿವಣ್ಣನ ಮತ್ತೊಬ್ಬ ಮಗ ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದ ಮುತ್ತುರಾಜ್ ತಕ್ಷಣವೇ ಊರಿಗೆ ಬಂದಿದ್ದ. ಆಗ ಶಿವಣ್ಣ ಆತನ ಸಹೋದರರಾದ ದೇವರಾಜು, ನಿಂಗರಾಜು ಜೆಡಿಎಸ್‌ನವರಿಗೆ ಸರಿಯಾದ ಪಾಠ ಕಲಿಸಬೇಕೆಂದು ತೀರ್ಮಾನಿಸಿದ್ದರು. ಶಿವಣ್ಣನ ತಮ್ಮ ದೇವರಾಜುಗೆ ಇಬ್ಬರು ಹೆಂಡತಿಯರು. ನಾಲ್ವರು ಮಕ್ಕಳು. ದೇವರಾಜನ ನಾಲ್ವರು ಮಕ್ಕಳಾದ ಶಿವ, ಸ್ವಾಮಿ, ಹೇಮಂತ, ಯೋಗಿ, ಶಿವಣ್ಣನ ಮತ್ತೊಬ್ಬ ಸಹೋದರ ನಿಂಗಯ್ಯನ ಮಗ ಶಿವಕುಮಾರ, ರಾಮಲಿಂಗು, ಜಗದೀಶ, ಪುಟ್ಟಸ್ವಾಮಿ, ಕುಮಾರ್ ಎಲ್ಲಾ ಜಮಾಯಿಸಿದ್ದರು.

ಭಾನುವಾರ ಸಂಜೆ 6ರ ವೇಳೆಗೆ ಶಿವಣ್ಣ ದೇವರಾಜು, ನಿಂಗಯ್ಯ ತಮ್ಮ ರೌಡಿ ಮಕ್ಕಳ ಜೊತೆ ಸೇರಿ ಊರಿನ ಪ್ರಮುಖ ಸ್ಥಳಕ್ಕೆ ದೊಣ್ಣೆ, ಮಚ್ಚು-ಲಾಂಗು, ಡ್ರ್ಯಾಗರ್ ಸಮೇತ ನುಗ್ಗಿ ಬಂದಿದ್ದರು. ಅಲ್ಲಿದ್ದ ಜೆಡಿಎಸ್


ಕೊಲೆಗೆ ಕಾರಣರಾದ ಆರೋಪಿಗಳಾದ ಹೇಮಂತ, ಶಿವು, ಮುತ್ತುರಾಜು

ಮುಖಂಡರಾದ ಮುತ್ತುರಾಜು, ಹೊನ್ನಯ್ಯ, ಚನ್ನೇಗೌಡ, ಸಣ್ಣಪ್ಪ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿದ್ದಾರೆ, ದೇವರಾಜು ಮಗ ಸ್ವಾಮಿ, ನಿಂಗಯ್ಯನ ಮಗ ಶಿವ ಡ್ರ್ಯಾಗರ್‌ನಿಂದ ಮುತ್ತುರಾಜ್‌ಗೆ ಚುಚ್ಚಿದ್ದರು. ಆಗತಾನೆ ಡೈರಿಗೆ ಹಾಲುಹಾಕಿ ಬರುತ್ತಿದ್ದ 20 ವರ್ಷದ ಡಿಪ್ಲೊಮೋ ವಿದ್ಯಾರ್ಥಿ ನಂದೀಶ್ ಇವರ ಕೈಗೆ ಸಿಕ್ಕಿದ್ದ. ನಂದೀಶ್‌ನೂ ಜೆಡಿಎಸ್‌ನವನೇ ಎಂದು ಭಾವಿಸಿದ ಪುಂಡರು ಆತನಿಗೂ ಡ್ರ್ಯಾಗರ್‌ನಿಂದ ಎದೆಗೆ ಚುಚ್ಚಿದ್ದಾರೆ. ಕ್ಷಣಾರ್ಧದಲ್ಲಿ ಸಿಕ್ಕಸಿಕ್ಕವರಿಗೆ ಚುಚ್ಚಿ ಶಿವಣ್ಣನ ರೌಡಿ ವಂಶ ಪರಾರಿಯಾಗಿತ್ತು.

ಡ್ರ್ಯಾಗರ್‌ನಿಂದ ಚುಚ್ಚಿಸಿಕೊಂಡಿದ್ದ ಮುತ್ತುರಾಜ್ ಅಲಿಯಾಸ್ ಕೋಟ ಪಕ್ಕದಲ್ಲಿದ್ದ ತನ್ನ ಮನೆಗೆ ಬಂದು ಕುಸಿದುಬಿದ್ದಿದ್ದ. ಅವನ ಹೆಂಡತಿಯ ಆರ್ತನಾದ ಕೇಳಿದ ಗ್ರಾಮಸ್ಥರು ಮುತ್ತುರಾಜ್ ಹಾಗೂ ನಂದೀಶ್‌ನನ್ನು ಮದ್ದೂರು ಆಸ್ಪತ್ರೆಗೆ ಕರೆದುಕೊಡು ಹೋಗುವ ಮಾರ್ಗಮಧ್ಯೆಯೇ ನಂದೀಶ್ ಸತ್ತುಹೋಗಿದ್ದ. ಮದ್ದೂರಿನಲ್ಲಿ ಚಿಕಿತ್ಸೆ ಸಾಧ್ಯವಾಗದೆ ಮಂಡ್ಯಕ್ಕೆ ಕರೆದುಕೊಂಡು ಹೋಗುವ ವೇಳೆಗೆ ಮುತ್ತುರಾಜ್ ಕೂಡಾ ಸಾವನ್ನಪ್ಪಿದ್ದ.

ಘಟನೆ ಸುದ್ದಿ ಕೇಳಿ ಇಡೀ ಊರಿನ ಜನರೆಲ್ಲಾ ಒಂದಾಗಿದ್ದರು. ಘರ್ಷಣೆಯಲ್ಲಿ ಸಣ್ಣಪುಟ್ಟ ಗಾಯಗೊಂಡಿದ್ದ, ಶಿವಣ್ಣ ಮಗ ಮುತ್ತುರಾಜ, ನಿಂಗಯ್ಯನ ಮಗ ಶಿವ, ದೇವರಾಜನ ಮಗ ಹೇಮಂತ ಮದ್ದೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದರು. ಅಲ್ಲಿಗೆ ನುಗ್ಗಿದ ತೊಪ್ಪನಹಳ್ಳಿ ಗ್ರಾಮಸ್ಥರು ಮೂವರ ಮೇಲೆ ದಾಳಿ ನಡೆಸಲು ಮುಂದಾಗಿದ್ದರು. ಆದಾಗಲೆ ತಮ್ಮ ಅಧಿಕಾರ ಬಲ ಬಳಸಿಕೊಂಡು ಸಾಕಷ್ಟು ಪೊಲೀಸ್ ಸರ್ಪಗಾವಲು ಹಾಕಿಸಿಕೊಂಡಿದ್ದರಿಂದ ಆರೋಪಿಗಳು ಬಚಾವಾಗಿದ್ದರು. ಪೊಲೀಸರ ಸಮ್ಮುಖದಲ್ಲಿಯೇ ಉದ್ರಿಕ್ತ ಜನರು ಆಸ್ಪತ್ರೆಯ ಕಿಟಕಿ ಗಾಜುಗಳನ್ನು ಪುಡಿಪುಡಿ ಮಾಡಿ, ಬಾಗಿಲುಗಳನ್ನು ಚಚ್ಚಿ ಬಿಸಾಡಿದ್ದರು. ಗಂಭೀರತೆಯನ್ನು ಅರಿತ ಪೊಲೀಸರು ಆ ಮೂವರನ್ನೂ ಬೇರೆಡೆ ಸ್ಥಳಾಂತರ ಮಾಡಿ ಅನಾಹುತ ತಪ್ಪಿಸಿದ್ದರು.

ಮುಗ್ಧ ಯುವಕ ಬಲಿ

ಬಲಿಯಾದ ನಂದೀಶ್ 20ರ ಹರೆಯದ ಮುಗ್ಧ ಯುವಕ. ಪುಟ್ಟಸ್ವಾಮಿ-ಲಕ್ಷ್ಮಮ್ಮ ಎಂಬ ದಂಪತಿಗಳ ಏಕೈಕ ಪುತ್ರ ನಂದೀಶ್ ರಾಮನಗರದ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಡಿಪ್ಲೊಮಾ ಓದುತ್ತಿದ್ದ. ಈತನ ಹೆತ್ತವರು 5 ಗುಂಟೆ ಜಮೀನಿನಲ್ಲಿ ವ್ಯವಸಾಯ ಮಾಡುತ್ತಾ ಕೂಲಿ ಕೆಲಸ ಮಾಡುತ್ತಿದ್ದಾರೆ. ಇಬ್ಬರು ಸಹೋದರಿಯರಿದ್ದ ನಂದೀಶ್ ಇಂಜಿನಿಯರಿಂಗ್ ಓದುವ ಕನಸಿಟ್ಟುಕೊಂಡಿದ್ದ. ಜೆಡಿಎಸ್ ಪಕ್ಷದೊಂದಿಗೆ ಮಾತ್ರವಲ್ಲ ಯಾವ ರಾಜಕೀಯ ಪಕ್ಷದೊಂದಿಗೂ ಸಂಬಂಧ ಇರದಿದ್ದ ಆತ ಊರಿನ ರಾಜಕೀಯಕ್ಕೆ ಎಂದೂ ತಲೆಹಾಕಿದವನಲ್ಲ. ಅಂಥಾ ಅಮಾಯಕನನ್ನು ಕಾಂಗ್ರೆಸ್ ಪುಢಾರಿ ಶಿವಣ್ಣನ ರೌಡಿವಂಶ ಬರ್ಬರವಾಗಿ ಹತ್ಯೆ ಮಾಡಿದ್ದು ಎಂತಹವರ ಮನಸ್ಸನ್ನು ಕಲಕುತ್ತದೆ. ಮಗನನ್ನು ಕಳೆದುಕೊಂಡು 'ದೇವರೇ ಇನ್ನು ನಮ್ಗೆ ಯಾರು ದಿಕ್ಕು' ಅಂತ ರೋದಿಸುವ ಆ ಹೆತ್ತಕರುಳುಗಳ ರೋದನ ಕಣ್ಣೀರು ಮಿಡಿಸುತ್ತದೆ. ನಂದೀಶನ ಕೊಲೆಗೆ ಕಾರಣರಾದ ಹಂತಕರಿಗೆ ಕಠಿಣ ಶಿಕ್ಷೆಯಾಗಬೇಕಿದೆ.

ಇನ್ನು ಹತ್ಯೆಯಾದ ಜೆಡಿಎಸ್ ಮುಖಂಡ ಮುತ್ತುರಾಜು ಅಲಿಯಾಸ್ ಕೋಟ 42 ವರ್ಷದ ಎಳನೀರು ಮಾರುಕಟ್ಟೆಯ ದಲ್ಲಾಳಿ. ಪತ್ನಿ, ಇಬ್ಬರು ಮಕ್ಕಳಿದ್ದಾರೆ. ಕಳೆದ ಗ್ರಾ.ಪಂ. ಚುನಾವಣೆಯಲ್ಲಿ ಜೆಡಿಎಸ್ ಬೆಂಬಲದಿಂದ ಸ್ಪರ್ಧಿಸಿ ಸೋತಿದ್ದ ಮುತ್ತುರಾಜು ಎಲ್ಲರೊಂದಿಗೆ ಸಂತೋಷದಿಂದ ಬೆರೆಯುತ್ತಿದ್ದ. ಈತನನ್ನು ಕಳೆದುಕೊಂಡ ಅವರ ಕುಟುಂಬ ಕಂಗಾಲಾಗಿದೆ. ಜೋಡಿಕೊಲೆಯಿಂದ ತೊಪ್ಪನಹಳ್ಳಿ ಗ್ರಾಮದಲ್ಲಿ ಸೂತಕದ ಛಾಯೆ ಆವರಿಸಿದೆ. 70ಕ್ಕೂ ಹೆಚ್ಚು ಪೊಲೀಸರು ಗ್ರಾಮದಲ್ಲಿ ಬೀಡುಬಿಟ್ಟಿದ್ದಾರೆ.

ಜೆಡಿಎಸ್ ರಾಜ್ಯಾಧ್ಯಕ್ಷ ಕುಮಾರಸ್ವಾಮಿ ಬಂದು ಪೊಲೀಸ್ ಇಲಾಖೆಯನ್ನು ಸಖತ್ತಾಗೇ ಜಾಡಿಸಿದ ನಂತರ ಎಚ್ಚೆತ್ತಿರುವ ಮಂಡ್ಯ ಎಸ್ಪಿ ಸುಧೀರ್‌ಕುಮಾರ್ ರೆಡ್ಡಿ ಈ ಜೋಡಿಕೊಲೆ ಪ್ರಕರಣದಲ್ಲಿ ಕಾಂಗ್ರೆಸ್‌ನ ಶಿವಣ್ಣ, ಶಿವು, ಹೇಮಂತ, ಮುತ್ತುರಾಜ್, ಪ್ರಸನ್ನ, ಕುಮಾರ, ದೀಪಕ್ ಎಂಬುವರನ್ನು ಬಂಧಿಸಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ತೊಪ್ಪನಹಳ್ಳಿ ಗ್ರಾಮದಲ್ಲಿ ಹಿಂದೆ ಯಾವತ್ತೂ ಹೊಡೆದಾಟ, ಘರ್ಷಣೆ ನಡೆದಿರಲಿಲ್ಲ. ಆದರೆ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿರುವ ಕಾರಣದಿಂದ ರಾಜಕೀಯ ಪೊಗರು ನೆತ್ತಿಗೇರಿಸಿಕೊಂಡ ಪುಢಾರಿ ಶಿವಣ್ಣನ ರೌಡಿ ವಂಶ ಇಬ್ಬರು ಅಮಾಯಕರ ನೆತ್ತರು ಹರಿಸಿದೆ. ಮಂಡ್ಯ ಪೊಲೀಸರು ಯಾವುದೇ ರಾಜಕೀಯ ಒತ್ತಡಕ್ಕೆ ಮಣಿಯದೆ ಸೂಕ್ತ ತನಿಖೆ ನಡೆಸಿ ಆರೋಪಿಗಳ ವಿರುದ್ಧ ಸಮರ್ಪಕ ಚಾರ್ಜ್‌ಶೀಟ್ ಸಲ್ಲಿಸಿ ಕಠಿಣ ಶಿಕ್ಷೆಯಾಗುವಂತೆ ಮಾಡಿದಾಗಷ್ಟೆ ಅಮಾಯಕರಾದ ಮುತ್ತುರಾಜ್, ನಂದೀಶ್ ಕೊಲೆಗೆ ನ್ಯಾಯ ಸಲ್ಲಿಸಿದಂತಾಗುತ್ತದೆ.

■ ಮಂಡ್ಯ ನಾಗೇಶ್

ಕೈ ವಿರುದ್ಧ ಹೆಚ್‌ಡಿಕೆ ಗರಂ


ಜಿಲ್ಲೆಯ ಜೆಡಿಎಸ್ ಕಾರ್ಯಕರ್ತರ ಮೇಲೆ ಕಾಂಗ್ರೆಸ್ ಪುಢಾರಿಗಳು ಮುಗಿಬೀಳುತ್ತಿರೋದು ಇದೇ ಮೊದಲೇನಲ್ಲ, ಡಿಸೆಂಬರ್ 23ರಂದು ಮಳವಳ್ಳಿಯ ಹಲಗೂರಿನಲ್ಲಿ ಜೆಡಿಎಸ್ ಮುಖಂಡ ಕೇಬಲ್ ಕುಮಾರ್ ಎಂಬಾತನ ಬರ್ಬರ ಹತ್ಯೆ ನಡೆದಿತ್ತು. ಆಗ ಅಲ್ಲಿಗೆ ಬಂದಿದ್ದ ಕುಮಾರಸ್ವಾಮಿ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಅಪರಾಧ ಪ್ರಕರಣ ಜಾಸ್ತಿಯಾಗಿದೆ. ರೌಡಿಗಳಿಗೆ ಪೊಲೀಸರೆಂದರೆ ಭಯವಿಲ್ಲದ ವಾತಾವರಣ ಸೃಷ್ಟಿಯಾಗಿದೆ ಎಂದು ಹೇಳಿಕೆ ನೀಡಿದ್ದರು. ಆದಾದ ಮೇಲೆ ಮೈಸೂರಿನಲ್ಲಿ ಜೆಡಿಎಸ್ ಕಾರ್ಪೊರೇಟರ್ ಆಗಿದ್ದ ಅವ್ವಾ ಮಾದೇಶನ ಸಹಚರ ಬೆಣ್ಣೆ ಕೃಷ್ಣನನ್ನು ಮರ್ಡರ್ ಮಾಡಲಾಗಿತ್ತು, ಈಗ ಡಿಸೆಂಬರ್ 25ರಂದು ಮದ್ದೂರಿನ ತೊಪ್ಪನಹಳ್ಳಿಯಲ್ಲಿ ಜೆಡಿಎಸ್ ಕಾರ್ಯಕರ್ತ ಮುತ್ತುರಾಜ್ ಹಾಗೂ ನಂದೀಶ್‌ನ ಕೊಲೆ ನಡೆದಿದೆ. ಅವರ ಅಂತಿಮ ದರ್ಶನ ಪಡೆದು ಅವರ ಕುಟುಂಬಗಳಿಗೆ ತಲಾ ಒಂದು ಲಕ್ಷ ರೂಪಾಯಿ ಪರಿಹಾರ ನೀಡಿ ಸಾಂತ್ವನ ಹೇಳಿದ ಕುಮಾರಸ್ವಾಮಿ ಕಾಂಗ್ರೆಸ್ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದರು. ತಮ್ಮ ಕಾರ್ಯಕರ್ತರ ಸಾಲುಸಾಲು ಕೊಲೆಯಿಂದ ಸಿಟ್ಟಾಗಿದ್ದ ಕುಮಾರಸ್ವಾಮಿ ಸಿಎಂ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಪರಮೇಶ್ವರ್ ವಿರುದ್ಧ ಬಹಳ ಖಾರವಾಗೇ ಮಾತನಾಡಿದ್ದರು.

ಅಚ್ಚರಿಯೆಂದರೆ, ಇತ್ತೀಚೆಗೆ ಜೆಡಿಎಸ್‌ನಿಂದ ಅಮಾನತ್ತಾಗಿ ಕಾಂಗ್ರೆಸ್ ಪಕ್ಷದ ಬಾಗಿಲು ತಟ್ಟುತ್ತಿರುವ ಶಾಸಕ ಚಲುವರಾಯಸ್ವಾಮಿ ಕೂಡಾ ಗ್ರಾಮಕ್ಕೆ ಭೇಟಿ ನೀಡಿ ಮೃತ ಕುಟುಂಬಗಳಿಗೆ ಸಾಂತ್ವನ ಹೇಳಿ ಕೊಲೆ ಆರೋಪಿಗಳನ್ನು ಬಂಧಿಸುವಂತೆ ಹೇಳಿಕೆ ನೀಡಿದ್ದಾರೆ.







...ಮೂರ್ತಿ ನಾಯಕ್



ಬಸವಂತ ಅನಗೋಡು



ಲಿಂಗಪ್ಪ



ಒಡೋಗಂಗಪ್ಪ

ಮಾಯಕೊಂಡ: ಟಿಕೆಟು ತಪ್ಪಿಸಿಕೊಳ್ಳಲಿರುವ ಹಳೇ 'ನಾಯ್ಕ'ರು?

ದಾವಣಗೆರೆ ಜಿಲ್ಲೆಯ ಮಾಯಕೊಂಡ ವಿಧಾನಸಭಾ ...ದಲ್ಲಿ ಚುನಾವಣೆಗೆ ವರ್ಷವಿರುವಾಗಲೇ ಚುನಾವಣಾ ...ವಟಿಕೆಗಳು ಆರಂಭಗೊಂಡಿವೆ. ಹಾಲಿ ಕಾಂಗ್ರೆಸ್ ಶಾಸಕ ...ಮೂರ್ತಿ ನಾಯ್ಕನಿಗೆ ಕೈ ಪಾರ್ಟಿಯೇ 2018ರ ...ವಣೆಗೆ ಟಿಕೆಟು ನೀಡುವುದು ಗ್ಯಾರಂಟಿಯಿಲ್ಲ ...ವುದು ಒಂದೆಡೆಯಾದರೆ, ಮತ್ತೊಂದೆಡೆ ಕೈಪಾರ್ಟಿಯ ... ಆಕಾಂಕ್ಷಿಗಳು ಕಲರ್‌ಫುಲ್ಲಾಗಿ ಈಗಾಗಲೇ ಪಾರ್ಟಿಯ ...ರ ಮನೆಮುಂದೆ ಠಳಾಯಿಸುತ್ತಿದ್ದಾರೆ. ಇನ್ನೊಂದು ...ಬಿಜೆಪಿಯ ಮಾಜಿ ಶಾಸಕ ಬಸವರಾಜನಾಯ್ಕನಿಗೆ ...ಬಾರಿ ರಾಜ್ಯಾಧ್ಯಕ್ಷ ಯಡ್ಡಿ ಪಕ್ಷದಿಂದ ಟಿಕೆಟು ...ವುದು ಗ್ಯಾರಂಟಿ ಆದಂತಿಲ್ಲ ಬಿಜೆಪಿ ಪಾರ್ಟಿಯಲ್ಲೂ ... ಆಕಾಂಕ್ಷಿಗಳು ಯಡ್ಡಿಯ ಸ್ವಯಂಘೋಷಿತ ...ಸಪುತ್ರರಂಗೆ ಯಡ್ಡಿ ತಪ್ಪಿದರೆ ಶೋಭಾ ಕರಂದ್ಲಾಜೆ ... ಅಲೆದಾಡುತ್ತಿದ್ದಾರೆಂಬುದೇ ತಮಾಷೆಯ ಸಮಾಚಾರ.

...2013ರ ಚುನಾವಣೆವರೆಗೂ ಶಿವಮೂರ್ತಿನಾಯ್ಕ ...ಲ್ಲಿ ಬಚ್ಚಿಟ್ಟುಕೊಂಡಿದ್ದನೋ, ಅದ್ಯಾವ ಪಾರ್ಟಿಯಲ್ಲಿ ...ತಿಸಿಕೊಂಡಿದ್ದನೋ ಗೊತ್ತಿಲ್ಲ. ಆದರೆ ಚುನಾವಣೆ ...ವಾದಾಗ ಆತ ಮಾಯಕೊಂಡದ ಕಡೆ ಮುಖಮಾಡಿದ್ದ ...ವಣೆ ಗದ್ದಲ ಶುರುವಾದಾಗ ಬಂದ ಇವನಿಗೆ ...ಗೋ ದೆಹಲಿ ಲಿಂಕಿನಿಂದ ಕೈ ಪಾರ್ಟಿಯ ಟಿಕೆಟು ... ಅಷ್ಟೊತ್ತಿಗಾಗಲೇ ಬಿಜೆಪಿ ಶಾಸಕ ಬಸವರಾಜನ ...ತಾವಳಿಯಿಂದ ಮತದಾರ ಬೇಸತ್ತು ಸಾಕಪ್ಪಾ ಈ ...ನ ಸಹವಾಸ ಎನ್ನುತ್ತಿದ್ದರು.

...ಮತದಾರ ಸದ್ಯ ದುರಹಂಕಾರಿ ಡಾ.ರಾಮಪ್ಪನಿಗಿಂತ ... ವಾಸಿ ಅಂತಾ ಕೈಪಾರ್ಟಿಯಿಂದ ಟಿಕೆಟು ತಂದ ...ಮೂರ್ತಿನಾಯ್ಕನ ಕೈಹಿಡಿದುಬಿಟ್ಟ. ಅದೇನೋಡಿ ...ರದ್ದು. ಶಿವಮೂರ್ತಿ ಮಾಯಕೊಂಡದ ಶಾಸಕನಾದ ... ಕ್ಷೇತ್ರದಲ್ಲಿ ಪ್ರಗತಿ ಎನ್ನುವುದೇ ಮರೀಚಿಕೆಯಾಗಿ ... ಶಿವಮೂರ್ತಿ ಕುಟುಂಬದ ಉದ್ಧಾರದ ದಂಧೆಯೇ ...ದಾಯಿತು. ಇವನ ಹೆಂಡತಿ ಮಗನ ದರಬಾರು ...ವಾಗಿ ಕ್ಷೇತ್ರದಲ್ಲಿ ಸರ್ಕಾರಿ ಅಧಿಕಾರಿಗಳಿಂದ ...ಳಿಯ ಆಟ ಭರ್ಜರಿಯಾಗಿಹೋಯಿತು. ಹೋಗಲಿ ... ಬಂದು ನಾಲ್ಕು ವರ್ಷ ಸಮಾಧಿಯಾದವು, ತಾನು ...ಕೊಂಡದ್ದು ಸಾಕು ಉಳಿದ ಒಂದು ವರ್ಷವಾದರೂ ... ಮತದಾರರಿಗೆ, ಗ್ರಾಮಗಳಿಗೆ ಏನಾದರೂ ಮಾಡಿದ ...ತು ಅಂತಾದರೂ ಮನಸು ಮಾಡಿದನಾಂತ ...ಸಿದರೆ ಅದೂ ಇಲ್ಲ, ಅದನ್ನು ಕಂಡು ಮತದಾರ ...ಮೂರ್ತಿಗೆ ಕ್ಷೇತ್ರದಿಂದಲೇ ಹಚ್ಯಾ ಎನ್ನಲು ...ರಾಗಿಬಿಟ್ಟಿದ್ದಾರೆ.

...ವಮೂರ್ತಿಗೆ ತಾನು ಮಾಯಕೊಂಡದ ಶಾಸಕ, ... ಜನ್ಮ ತಾಳಿದ್ದು ಇದೇ ಕ್ಷೇತ್ರದ ಕುಗ್ರಾಮದಲ್ಲಿ ...ದ ನೆನಪೂ ಇಲ್ಲ, ಹಾಗಂತ ಇಲ್ಲೊಂದಿರಲಿ ಅಂತಾ ...ಮಾಡಿದನಾ, ಅದೂ ಇಲ್ಲ, ಇವನು ಕೂತು ಮತದಾರರ ... ನೋಡಲಾದರೂ ಒಂದು ಇವನದೂ ಅಂತಾ ...ಕಟ್ಟೆ ಏನಾದರೂ ಇದೆಯಾಂತ ನೋಡಿದರೆ ಅದಕ್ಕೂ ...ಲ್ಲ, ಹಾಗಾಗಿಯೇ ಮತದಾರ ಸೋಲಿಸುವುದೇನು ... 2018ರ ಚುನಾವಣೆಯಲ್ಲಿ ತಾನು ಸೋಲುವುದು ... ಅಂತಾ ಅರ್ಥಮಾಡಿಕೊಂಡವನಂತೆ ಹೇಲವ ... ಹೊತ್ತು ಕ್ಷೇತ್ರದಲ್ಲಿ ಆಗಾಗ ಮುಖ ಇಣುಕಿ ...ತ್ತಾನೆ.

...ದೇನೇ ಇರಲಿ, 2018ರ ಚುನಾವಣೆಗೆ ಮಾಯ...ದಿಂದ ಕೈ ಪಾರ್ಟಿಯಿಂದ ಹಾಲಿ ಶಾಸಕ ...ರ್ತಿಗೂ ಮತ್ತು ಬಿಜೆಪಿಯ ಮಾಜಿ ಶಾಸಕ ಬಸವರಾಜನಾಯ್ಕನಿಗೂ ಟಿಕೇಟು ಸಿಗುವುದು ಡೌಟು.

ಬಸವರಾಜನಾಯ್ಕ

ಅಂತೂಇಂತೂ ಬಸವರಾಜನಾಯ್ಕ ಬಿಜೆಪಿ ಪಾರ್ಟಿಯಲ್ಲೇ ಅಂಡೂರಿದ್ದಾನೆನ್ನುವುದೇ ಅವನ ಹೆಚ್ಚುಗಾರಿಕೆ. ಯಾಕೆಂದರೆ ಈಗಾಗಲೇ ಇವನಿಗೆ ಯಡ್ಡಿಯ ಬಿಜೆಪಿಯೊಳಗೆ ಕೂರಲು ಕುರ್ಚಿಯಿರಲಿ ಒಂದಡಿ ನೆಲವೂ ಸಿಗದಂತಾಗಿದೆ. ಇವನಿಗೆ ಮಾತ್ರವಲ್ಲ, ಇವನ ರಾಜಕೀಯ ಪರಮಗುರು ಮಾಜಿ ತರಕಾರಿ ಮಂತ್ರಿ ರವೀಂದ್ರನಾಥನಿಗೂ ಬಿಜೆಪಿಯಲ್ಲಿ ನೆಲದ ಕೊರತೆ ಶುರುವಾಗಿದೆ.

ಮೊನ್ನೆಮೊನ್ನೆಯವರೆಗೂ ಯಡ್ಡಿ ಕೆಜೆಪಿ ಅಂತಾ ಹಾರಾಡಿ ಅಲ್ಲಾಡಿ ಏನೂ ಕಿಸಿಯಲಾಗದೆ ಮುಖದ ಮೇಲೆ ಅವಮಾನದ ತೆರೆಬಿಟ್ಟುಕೊಂಡು ನೀನೇ ಕಣೋ ದಾಸಯ್ಯಾ ಅಂತ ಬಿಜೆಪಿಗೆ ಮರಳಿದ್ದಲ್ಲದೇ, ಶಿವಮೊಗ್ಗದಿಂದ ಪಾರ್ಲಿಮೆಂಟ್ ಮೆಂಬರಾಗಿ ದಿಲ್ಲಿ ಸುತ್ತಿ ಮೋದಿಗೆ ಅದೇನು ಬೂದಿ ಊದಿದನೋ ಯಡ್ಡಿ ಮತ್ತೆ ಕರ್ನಾಟಕ ಬಿಜೆಪಿ ರಾಜ್ಯಾಧ್ಯಕ್ಷರಾದರು. ಆದದ್ದೇತಡ ರಾಜ್ಯದಾದ್ಯಂತ ತನ್ನ ಕೆಜೆಪಿ ಬಾಲಬಡುಕರಿಗೆಲ್ಲ ಜಿಲ್ಲಾ ಬಿಜೆಪಿ ಪಾರ್ಟಿಯೊಳಗೆ ಆಯಕಟ್ಟಿನ ಗದ್ದುಗೆ ನೀಡುತ್ತಾ ಬಂದರು. ದಾವಣಗೆರೆಯಲ್ಲೂ ಸಂಸದ ಸಿದ್ದೇಶ್ವರನ ಮಾತು ಕೇಳಿ ಅದನ್ನೇ ಮಾಡಿದರು. ಅಧ್ಯಕ್ಷರಂತ ಜಾಗಕ್ಕೆ ಅರ್ಹನೇ ಅಲ್ಲದ ಯಶವಂತ ಅದ್ಯಾವಾಗ ಅಧ್ಯಕ್ಷ ಅಂತಾದನೋ ಆವಾಗಲೇ ಮಾಜಿಮಂತ್ರಿ ರವೀಂದ್ರನಾಥ ಕೆಜೆಪಿ-ಬಿಜೆಪಿ, ವಲಸಿಗರು-ಮೂಲದವರು ಅಂತ ಖ್ಯಾತೆ ಶುರುಮಾಡಿದ. ಬಸವರಾಜನಾಯ್ಕ-ಶಿವಯೋಗಿಸ್ವಾಮಿ ಕೂಡ ರವೀಂದ್ರರ ದನಿಗೆ ದನಿಗೂಡಿಸಿದ್ದೇ ತಡ, ಯಡ್ಡಿ ಮತ್ತವರ ಗ್ಯಾಂಗು ರವೀಂದ್ರನಾಥರ ಗ್ಯಾಂಗಿನ ಮೇಲೆ ಮುರಕೊಂಡುಬಿತ್ತು, ಅಲ್ಲಿಂದಲೇ ರವೀಂದ್ರನಾಥನ ದನಿಗೆ ದನಿಯಾದವರ ರಾಜಕೀಯ ಭವಿಷ್ಯ ಮತ್ತು ಪಾರ್ಟಿಯೊಳಗೆ ಅವರಿಗಿದ್ದ ಸ್ಥಾನಮಾನಗಳಿಗೆಲ್ಲ ಗೆದ್ದಲು ಹತ್ತಲು ಶುರುಮಾಡಿತು. ಪಾರ್ಟಿಯೊಳಗೇ ಎರಡು ಬಣಗಳಾಗಿ ಅಸ್ಥಿಭಾರವಾದವು. ಅದರ ಫಲವೇ ಈಶ್ವರಪ್ಪ ಯಡ್ಡಿಯೆದುರು 'ಹಿಂದ' ಅನ್ನೋ ಬಣದ ಲೀಡರಾಗಿ ಬೆಳಕು ಕಂಡದ್ದು. ಹಾಗಾಗಿಯೇ ದಾವಣಗೆರೆ ರವೀಂದ್ರನಾಥ ಕೂಡ ಯಡ್ಡಿ ಸ್ವಜಾತಿ ಲಿಂಗಾಯತನಾದರೂ ಆತನ ಕೈಬಿಟ್ಟು ಈಶ್ವರಪ್ಪನ ಬೆನ್ನತ್ತಿ ಹೊರಟ. ಆತ ಹೋಗಿನಿಂತದ್ದು ಈಶ್ವರಪ್ಪ ಕೃಪಾಪೋಷಿತ 'ಹಿಂದ' ಎಂಬ ಹೊಸ ನಾಟಕ ಕಂಪನಿಯ ಸೈಡ್ ನಟನಾಗಿ. ಆಗಲೇ ಯಡ್ಡಿ, ರವೀಂದ್ರನಾಥ ಮತ್ತವನ ಬಾಲಬಡುಕ ಬಸವರಾಜನಾಯ್ಕನನ್ನು ಸದ್ದಿಲ್ಲದೆ ಪಾರ್ಟಿಯ ಪ್ಲಾಟ್‌ಫಾರ್ಮ್‌ನಿಂದಾನೇ ಸೈಡಿಗಿಟ್ಟುಬಿಟ್ಟರು.

ಹಾಗಾಗಿಯೇ 2018ರ ಚುನಾವಣೆಯಲ್ಲಿ ಬಿಜೆಪಿ ಪಾರ್ಟಿಯಿಂದ ಮಾಜಿ ಶಾಸಕ ಬಸವರಾಜನಾಯ್ಕನಿಗೆ ಮಾಯಕೊಂಡ ವಿಧಾನಸಭಾ ಕ್ಷೇತ್ರಕ್ಕೆ ಟಿಕೆಟು ಸಿಗುವುದು ಪಕ್ಕಾ ಅನುಮಾನವಾಗಿದೆ. ಇದರ ವಾಸನೆ ಹಿಡಿದ ಕ್ಷೇತ್ರದ ಟಿಕೆಟು ಆಕಾಂಕ್ಷಿಗಳ ಪಟ್ಟಿ ಆಂಜನೇಯನ ಬಾಲದಂಗೆ ಬೆಳೆದುನಿಂತಿದೆ.

ಈಗಾಗಲೇ ಲಿಂಗಣ್ಣ, ಕೆ.ಶಿವರಾಂ, ಆನಂದ ಮೊದಲಾದ ಹೆಸರುಗಳ ಭರ್ಜರಿ ಹವಾ ಎದ್ದಿದೆ. ಇಲ್ಲಿ ಯಡ್ಡಿಯ ಪೊಲಿಟಿಕಲ್ ಗೇಮೂ ಇದೆ. ಲಿಂಗಪ್ಪ ಮೊದಮೊದಲು ರಾಜಕೀಯದ ಪಾಠ ಶುರುಮಾಡಿದ್ದೇ ರವೀಂದ್ರನಾಥನ ಪಡಸಾಲೆಯಲ್ಲಿ, 2013ರ ಚುನಾವಣೆವರೆಗೂ ರವೀಂದ್ರನಾಥರ ಮಾನಸ ಪುತ್ರನಂಗೇ ಪೋಜು ಕೊಡುತ್ತಾಬಂದ ಲಿಂಗಪ್ಪ 2013ರ ವಿಧಾನಸಭಾ ಚುನಾವಣೆ ಹೊತ್ತಿಗೆ ಸಮಯಸಾಧಕನಾಗಿ ಪರಿವರ್ತನೆಗೊಂಡುಬಿಟ್ಟ. ಅಷ್ಟೊತ್ತಿಗೆ ಯಡ್ಡಿ ಬಿಜೆಪಿ ತೊರೆದು ಸ್ವಂತ ಕೆಜೆಪಿ ಎಂಬ ತೆಂಗಿನಕಾಯಿ ವ್ಯಾಪಾರಕ್ಕೆ ಕೈಹಾಕಿದ್ದೇ ತಡ ರವೀಂದ್ರನ ಶಿಷ್ಯರತ್ನ ಲಿಂಗಪ್ಪ ಕೆಜೆಪಿ ಎದುರು ಹಲ್ಲು ಕಿಸಿಯುತ್ತಾ ನಿಂತ. ಆಗ ಮಾಯಕೊಂಡ ಕ್ಷೇತ್ರಕ್ಕೆ ಕೆಜೆಪಿಯಿಂದ ಟಿಕೆಟು ಕೈಗಿತ್ತ ಯಡ್ಡಿ ಹೋಗಿ ಗುರುವಿನೆದುರು ಕುಸ್ತಿ ಮಾಡು ಎಂದು ಕಳಿಸಿದರು. ಅಷ್ಟೊತ್ತಿಗಾಗಲೇ ಐದು ವರ್ಷ ಶಾಸಕನಾಗಿದ್ದ ಬಸವರಾಜನಾಯ್ಕ ಕ್ಷೇತ್ರದಲ್ಲಿ ಕೈಕೆಡಿಸಿಕೊಂಡಿದ್ದ, ಮತದಾರ ಬಸವರಾಜನಾಯ್ಕನಿಗೆ ಕೈಕೊಡುವುದು ಗ್ಯಾರಂಟಿಯಾಗಿತ್ತು, ಇತ್ತ ಲಿಂಗಪ್ಪ ತನ್ನನ್ನು ಬೆಳೆಸಿದ ಗುರುವಿಗೇ ಕೈಕೊಟ್ಟು ಯಡ್ಡಿಯ ಕೆಜೆಪಿ ಅಂತಾ ಹೊರಟದ್ದೇ ಮತದಾರನಿಗೆ ಅಸಹ್ಯವೆನಿಸಿತ್ತು. ಮತ್ತೊಂದು ಕಡೆ ಕೈಪಾರ್ಟಿಯಿಂದ ಉದ್ಭವಮೂರ್ತಿಯಂತೆ ಟಿಕೆಟು ತಂದು ತನ್ನ ಸೋಗಲಾಡಿ ಆಟ ಶುರುವಿಟ್ಟು ಮತದಾರರನ್ನು ಮರುಳುಮಾಡಿದ ಶಿವಮೂರ್ತಿ ಶಾಸಕನಾಗಿಬಿಟ್ಟ. ಅಲ್ಲಿಗೆ ರವೀಂದ್ರನ ಶಿಷ್ಯ ಗುರುವಿಗೆ ಮಾಡಿದ ಮೋಸಕ್ಕೆ ಕೆಜೆಪಿಯಿಂದ ಸೋತ. ಇನ್ನು ಶಾಸಕನಾಗಿದ್ದ ಬಸವರಾಜನಾಯ್ಕ ಮತದಾರರಿಗೆ ಮೋಸ ಮಾಡಿದ್ದಕ್ಕಾಗಿ 2013ರಲ್ಲಿ ಮಣ್ಣುತಿಂದ. ಹಾಗಂತಾ ಗೆದ್ದ ಶಿವಮೂರ್ತಿ ಪಾಠ ಕಲಿತನಾ? ಇಲ್ಲ, ಇವನೂ ಮತದಾರರನ್ನು ಕುರುಗಣ್ಣಿನಿಂದಲೂ ನೋಡದಂತೆ ನಾಟಕ ಶುರುಹಚ್ಚಿದ. ಹಾಗಾಗಿಯೇ ಶಿವಮೂರ್ತಿಗೆ 2018 ರ ಚುನಾವಣೆಯಲ್ಲಿ ಟಿಕೆಟು ಸಿಗುವುದು ಗ್ಯಾರಂಟಿಯಿಲ್ಲ.

ಡಿಮ್ಯಾಂಡಿದೆ

ಈಗ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಟಿಕೆಟ್‌ಗೆ ಡಿಮ್ಯಾಂಡಿದೆ. ಎರಡೂ ಪಾರ್ಟಿಗಳಲ್ಲಿ ಸಾಲಾಗಿ ನಿಂತವರಿದ್ದಾರೆ. ಬಿಜೆಪಿ ಸಾಲಿನಲ್ಲಿ ಮಾಜಿ ಐ.ಎ.ಎಸ್. ಅಧಿಕಾರಿ ಕೆ.ಶಿವರಾಂ ಇದ್ದಾರೆ. ಈತ ಹಿಂದೆ ಇದೇ ದಾವಣಗೆರೆ ಜಿಲ್ಲಾಧಿಕಾರಿಯಾಗಿದ್ದವರು. ಅಧಿಕಾರಿಯಾಗಿ ಅಷ್ಟೋಇಷ್ಟೋ ಸದ್ದು ಮಾಡಿದವರು. ಸಿನಿಮಾ ಹುಚ್ಚು ಮತ್ತು ಬಾಲಿಷ ನಟನೆಯಿಂದ ಹೆಸರಾದವರು. ಶಿವರಾಂ ತಾನು ಈ ಜಿಲ್ಲೆಯ ಜಿಲ್ಲಾಧಿಕಾರಿಯಾಗಿ ಭರ್ಜರಿ ಕಿಸಿದು ಕಟ್ಟೆ ಹಾಕಿದ್ದಾನೆ, ಹಾಗಾಗಿ ಮತದಾರ ಮಣೆ ಹಾಕುತ್ತಾನೆನ್ನುವ ಹುಂಬುತನದಿಂದ ಬರುವ 2018ರ ಚುನಾವಣೆಗೆ ಸಿದ್ಧತೆ ನಡೆಸಿದ್ದಾರೆ. ಅದಕ್ಕೆ ಸರಿಯಾಗಿ ಯಡ್ಡಿ ಸಮ್ಮುಖದಲ್ಲಿ ಬಿಜೆಪಿ ಸೇರಿದ ಶಿವರಾಮನ ಮೂಗಿಗೆ ತುಪ್ಪ ಸವರಿರುವ ಯಡ್ಡಿ ಮಾಯಕೊಂಡದ ಟಿಕೆಟು ನೀಡುವ ಭರವಸೆ ನೀಡಿದ್ದಾರಂತೆ.

ಗುರುವಿಗೆ ತಿರುಮಂತ್ರಹಾಕಿ ಕೆಜೆಪಿಗೆ ತನ್ನನ್ನು ಹಿಂಬಾಲಿಸಿದ್ದ ಲಿಂಗಣ್ಣನತ್ತಲೂ ಯಡ್ಡಿಗೆ ಸಿಂಪಥಿ ಇದೆ. ಇನ್ನು ಆನಂದ ಎನ್ನುವ ಗಿರಾಕಿ ಬಿಜೆಪಿಗೆ ನಾನೇ ಹಳಬಾ ಎನ್ನುವ ಸವಕಲು ನಾಣ್ಯದ ನಂಬಿಕೆ ಹೊತ್ತು ಮಾಯಕೊಂಡದಲ್ಲಿ ಅಲೆದಾಡಲು ಶುರುಮಾಡಿದ್ದಾನೆ.

ಹೇಗಾದರೂ ಮಾಡಿ ಮಾಜಿ ಮಂತ್ರಿ ರವೀಂದ್ರನಾಥನನ್ನು ಜಿಲ್ಲೆಯಲ್ಲಿ ರಾಜಕೀಯವಾಗಿ ಹಣಿದುಬಿಡುವ ನಿರ್ಧಾರಕ್ಕೆ ಯಡ್ಡಿ ಬಂದಂತಿದೆ. ಒಂದುಕಡೆ ಜಿಲ್ಲಾದ್ಯಂತ ಯಡ್ಡಿ ಪರವಿರುವ ಬಿಜೆಪಿ ಲೀಡರುಗಳೇ ಮೆರವಣಿಗೆ ಹೊರಟಿದ್ದಾರೆ. ಸಂಸದ ಸಿದ್ದೇಶ್ವರ, ಜಿಲ್ಲಾ ಬಿಜೆಪಿ ಅಧ್ಯಕ್ಷ ಯಶವಂತ, ಲಿಂಗಪ್ಪ ಮಾಜಿ ಶಾಸಕ ಹರೀಶ, ಹೊನ್ನಾಳಿಯ ರೇಣುಕಾಚಾರ್ಯ ಹೀಗೆ ಯಡ್ಡಿಗೆ ಬೆಂಬಲಿಗರಾಗಿ ನಿಂತರೆ, ರವೀಂದ್ರನಾಥರೊಂದಿಗೆ ಮಾಜಿ ಸಚೇತಕ ಶಿವಯೋಗಿಸ್ವಾಮಿ, ಮಾಜಿ ಶಾಸಕ ಬಸವರಾಜನಾಯ್ಕ ಬಿಟ್ಟರೆ ಬೇರ್‍ಯಾರೂ ಗುರುತಿಸಿಕೊಳ್ಳಲು ತಯಾರಿಲ್ಲದಂತಾಗಿದೆ. ಹಾಗಾಗಿಯೇ 2018ರ ಚುನಾವಣೆಯಲ್ಲಿ ಬಸವರಾಜನಾಯ್ಕನಿಗೆ ಮಾಯಕೊಂಡದಿಂದ ಟಿಕೆಟು ಸಿಗುವುದು ಡೌಟು. ಲಿಂಗಪ್ಪ ಗ್ಯಾರಂಟಿ ಅನ್ನುವಂತಾಗಿದೆ.

ಧಣಿಯ ಆಟ

ಶಾಮನೂರು ಶಿವಶಂಕರಪ್ಪನವರಿಗೆ ವಯಸ್ಸಾದಂತೆಲ್ಲಾ ರಾಜಕಾರಣ ದೂರ ಸರಿಯತೊಡಗಿದೆ. ವಯಸ್ಸಾಯಿತು ಅಂತಾನೇ ಮಂತ್ರಿಗಿರಿಯಿಂದ ಮನೆಗೆ ಹೋಗಿ ಮಗ ಮಲ್ಲಿಕಾರ್ಜುನರಿಗೆ ಮಂತ್ರಿಪಟ್ಟ ಕಟ್ಟಿದ್ದು. ಇದರಿಂದ ತಂದೆಯ ರಾಜಕೀಯ ಪಟ್ಟದರಸನ ಗಾದಿಯಲ್ಲಿ ಮಂತ್ರಿ ಮಲ್ಲಿಕಾರ್ಜುನ ಕೂರುವುದು ಗ್ಯಾರಂಟಿ ಆಗಿದೆ. ಹಾಗಾಗಿ ಶಿವಮೂರ್ತಿ ಇವರೆದುರು ಬಂದು ನಿಲ್ಲವುದಿರಲಿ ಇವನ ನೆರಳು ಕೂಡ ಇವರ ಸಮೀಪ ಸುಳಿದಾಡುವುದಿಲ್ಲ.


ಶಿವಮೂರ್ತಿಗೆ ಮತ್ತೊಮ್ಮೆ ಟಿಕೆಟು ಸಿಗುವುದು ಕಷ್ಟವಾದ್ದರಿಂದ ಮಾಯಕೊಂಡ ವಿಧಾನಸಭಾ ಎಸ್ಸಿ ಮೀಸಲು ಕ್ಷೇತ್ರಕ್ಕೆ ಕೈ ಪಾರ್ಟಿಯಿಂದ ಟಿಕೆಟು ಪಡೆಯಲು ಆಕಾಂಕ್ಷಿಗಳು ಸಾಲು ನಿಂತಿದ್ದಾರೆ. ಅಂತವರಲ್ಲಿ ಪ್ರಮುಖರೆನಿಸುವವರೆಂದರೆ ಓದೋ ಗಂಗಪ್ಪ ಮತ್ತು ಬಸವಂತ.

ದಾವಣಗೆರೆ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ನೀರಾವರಿ ಇಲಾಖೆಯಲ್ಲಿ ಅಧಿಕಾರಿಯಾಗಿ ಕೆಲಸ ಮಾಡಿದ ಓದೋ ಗಂಗಪ್ಪ ಎಸ್ಸಿ ಮೀಸಲು ಕ್ಷೇತ್ರಗಳಾದ ಮಾಯಕೊಂಡ ಮತ್ತು ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ಕ್ಷೇತ್ರಗಳ ಮೇಲೆ ಕಣ್ಣಿಟ್ಟವರು. ಓದೋ ಗಂಗಪ್ಪ ಮೂಲತಃ ದಾವಣಗೆರೆ ಸಮೀಪದ ಹಳ್ಳಿಯಿಂದ ಬಂದವರು. ಈತ ಎರಡೂ ಕ್ಷೇತ್ರಗಳಲ್ಲಿ ಜನಪರವಾಗಿರುವವರು. ನೀರಾವರಿಯಂತಹ ಸಮೃದ್ಧ ಇಲಾಖೆಯಲ್ಲಿದ್ದರೂ ಕೈಕೆಡಿಸಿಕೊಂಡವರಲ್ಲ, ಕಳೆದ ಜಿ.ಪಂ. ಚುನಾವಣೆ ಸಂದರ್ಭದಲ್ಲಿ ಇವರ ಹೆಂಡತಿ ಶಾರದಮ್ಮ ಅವರಿಗೆ ಅಣಜಿ ಜಿ.ಪಂ. ಕ್ಷೇತ್ರದಿಂದ ಟಿಕೆಟು ಸಿಗುವ ಹಂತದಲ್ಲಿತ್ತು, ಮಂತ್ರಿ ಮಲ್ಲಿಕಾರ್ಜುನರೇ ಬೇಡವೆಂದು ತಡೆದಿದ್ದರು. ಹಾಗೆ ತಡೆದದ್ದರ ಹಿಂದೆ ಉದ್ದೇಶವೊಂದಿತ್ತು, ಗಂಗಪ್ಪ ಸರ್ಕಾರಿ ಹುದ್ದೆಯಿಂದ ನಿವೃತ್ತರಾಗುವುದಿತ್ತು, ಹಾಗಾಗಿ 2018ರಲ್ಲಿ ಎದುರಾಗುವ ವಿಧಾನಸಭಾ ಚುನಾವಣೆಗೆ ಮಾಯಕೊಂಡದಿಂದ ಟಿಕೆಟು ನೀಡುವ ಭರವಸೆ ನೀಡಿ ಹೆಂಡತಿಗೆ ಜಿ.ಪಂ. ಟಿಕೆಟು ಬೇಡ ಎಂದಿದ್ದರು.

ಇನ್ನು ಬಸವಂತನ ಹವಾ ಕೂಡ ಮಾಯಕೊಂಡದಲ್ಲಿದೆ. ಕಳೆದ 2013ರ ಚುನಾವಣೆಯಲ್ಲೇ ಇನ್ನೇನು ಕೈಪಾರ್ಟಿಯಿಂದ ಟಿಕೆಟು ತಂದೇಬಿಟ್ಟಾ ಎನ್ನುವಷ್ಟರಲ್ಲೇ ಶಿವಮೂರ್ತಿ ದೆಹಲಿಯಿಂದ ಕೈ ಟಿಕೆಟು ಪಡೆದು ವಿಮಾನದಿಂದ ಇಳಿದಿದ್ದ.

ಸದ್ಯ ಬಸವಂತ ಅನಗೋಡು ಜಿ.ಪಂ. ಸದಸ್ಯ, ಮಂತ್ರಿ ಆಂಜನೇಯನ ಅಳಿಯ, ಯಾರ ಹಂಗಿಲ್ಲದೆ ತನ್ನ ಪಾಡಿಗೆ ತಾನು ಮತದಾರರ ಹೆಗಲಮೇಲೆ ಕೈಹಾಕಿ ಮಾತಾಡುವ, ಮುಖಾಮುಖಿಯಾಗಿ ನಿಲ್ಲುವ, ಕೈಗೆ ಸಿಗುವಂತಿರುವ ಉತ್ಸಾಹಿ ಹುಡುಗ. ಈತನೂ 2018ರ ಚುನಾವಣೆಗೆ ಮಾಯಕೊಂಡ ಕ್ಷೇತ್ರದಿಂದ ಕೈಪಾರ್ಟಿಯಿಂದ ಕಣಕ್ಕಿಳಿಯಲು ಸಿದ್ಧತೆ ನಡೆಸಿದ್ದಾನೆ. ಒಟ್ಟಾರೆ ಮಾಯಕೊಂಡ ವಿಧಾನಸಭಾ ಕ್ಷೇತ್ರ ಚುನಾವಣೆ ಒಂದು ವರ್ಷ ಮುಂದಿದ್ದಂತೆಯೇ ಟಿಕೆಟ್ ಗದ್ದಲ ಶುರುವಾಗಿದೆ. ಕಾಂಗ್ರೆಸ್‌ನ ಶಿವಮೂರ್ತಿ, ಬಿಜೆಪಿಯ ಬಸವರಾಜನಾಯ್ಕ ರಾಜಕೀಯವಾಗಿ ಮಾಯಕೊಂಡದಿಂದ ಮಾಯವಾಗುವುದು ಗ್ಯಾರಂಟಿಯಾಗಿ ಹೊಸ ಮುಖಗಳು ಶಾಸಕರಾಗಲು ತವಕಿಸುತ್ತಿವೆ.

■ ಟಿ.ಎನ್.ಎಸ್.





ಕಳಪೆ ಕಾಮಗಾರಿಯ ಫೋಟೋಗಳು

ರಾಯಚೂರು

ಹಣ ನುಂಗಿದ ಶಾಸಕರು ಸೇಫ್ ಅಧಿಕಾರಿಗಳು ಸಸ್ಪೆಂಡ್

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆಯುತ್ತಿದೆ. ಅಕ್ರಮಗಳು ಒಂದೊಂದಾಗಿ ಬಯಲಿಗೆ ಬರುತ್ತಿದ್ದರೂ ಭ್ರಷ್ಟಾಚಾರ ತಗ್ಗುತ್ತಿಲ್ಲ. ಸಂಸದ, ಶಾಸಕರೇ ನೇರವಾಗಿ ಲಂಚ ಪಡೆಯುವ ಈ ಪ್ರಕರಣಗಳಲ್ಲಿ ಅಧಿಕಾರಿಗಳ ಕರಾಮತ್ತು ಪ್ರಮುಖವಾದುದು. ರಾಯಚೂರು ವಿಭಾಗವೊಂದರಲ್ಲೆ 48.81 ಕೋಟಿ ರೂ.ಗಳ ಭಾರೀ ಭ್ರಷ್ಟಾಚಾರ ಬಯಲಾಗಿದೆ. ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ಸಂಸ್ಥೆ (ಕೆಆರ್‌ಐಡಿಎಲ್) ರಾಯಚೂರು ವಿಭಾಗವೇ ಹಣ ದುರ್ಬಳಕೆ ಮಾಡಿಕೊಂಡಿರೋದು. ಆದರೆ ಯಥಾಪ್ರಕಾರ, ಭಾರೀ ತಿಮಿಂಗಿಲಗಳ ರಕ್ಷಣೆಗೆ ಸಣ್ಣಪುಟ್ಟ ಮೀನುಗಳನ್ನು ಬಲಿಕೊಟ್ಟಂತೆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ದುಷ್ಟ ಜನಪ್ರತಿನಿಧಿಗಳು ಬಚಾವಾಗಿದ್ದಾರೆ.


2012-13 ರಿಂದ 2015-16ರ ಅವಧಿಯಲ್ಲಿ ನಡೆದಿರುವ 48.81 ಕೋಟಿ ರೂ. ಹಗರಣದಲ್ಲಿ ನಾನಾ ಹಂತದ 24 ಅಧಿಕಾರಿಗಳು ಶಾಮೀಲಾಗಿದ್ದಾರೆ ಎಂದು ಪಟ್ಟಿ ಮಾಡಲಾಗಿದೆ. ಹಣ ದುರ್ಬಳಕೆ, ಕಳಪೆ ಕಾಮಗಾರಿ, ಹೆಚ್ಚುವರಿ ಲೆಕ್ಕಪತ್ರ ನೀಡಿರುವುದು ಸೇರಿದಂತೆ ಎಸಗಿರುವ ಲೋಪಗಳಲ್ಲಿ ಇದುವರೆಗೂ 11 ಅಧಿಕಾರಿಗಳನ್ನು ಮಾತ್ರ ಅಮಾನತು ಮಾಡಲಾಗಿದೆ. ಮುಖ್ಯವಾಗಿ ಭೂಸೇನಾ ನಿಗಮ ಎಂದು ಕರೆಯಲ್ಪಡುವ ಸಂಸ್ಥೆಗೆ ಸರ್ಕಾರದ ಹಲವು ಕಾಮಗಾರಿಗಳ ಟೆಂಡರ್ ಲಭಿಸುತ್ತದೆ. ಭೂಸೇನಾ ನಿಗಮವೆಂದರೇನೆ ಎಂಪಿ, ಎಮ್ಮೆಲ್ಲೆಗಳಿಗೆ ಸಾಕಷ್ಟು ಲಂಚ ನೀಡುವ ಸಂಸ್ಥೆಯೆಂದು ಈಗ ಬಹಳ ಕಡೆ ಜನಜನಿತವಾಗಿಬಿಟ್ಟಿದೆ. ಭೂಸೇನಾ ನಿಗಮ ಬೇರೆ ಸಂಸ್ಥೆಗಳಂತೆ ಅಲ್ಲ, ಇದಕ್ಕೆ ಕಾಮಗಾರಿ ಶುರು ಮಾಡುವ ಮುನ್ನವೇ ಪೂರ್ಣ ಹಣ ಬಂದಿರುತ್ತದೆ. ಇದರಲ್ಲಿ 40% ಹಣ ಎಂಎಲ್‌ಎ ಮತ್ತು ಅಧಿಕಾರಿಗಳ ಪಾಲಾಗುತ್ತದೆ.

ಗ್ರಾಮಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿ ಅನುದಾನದಲ್ಲಿ ನಡೆದ ಕಾಮಗಾರಿಗಳನ್ನು ತಾವೇ ಮಾಡಿದ ಕಾಮಗಾರಿಗಳು ಎಂಬ ಲೆಕ್ಕ ತೋರಿಸಿ ದುಡ್ಡು ಹೊಡೆದುಕೊಂಡಿರುವುದು, ಪೂರ್ಣ ಹಣ ಪಡೆದು ಕಾಮಗಾರಿ ಅರ್ಧಕ್ಕೇ ನಿಲ್ಲಿಸಿರುವುದು, ಕಳಪೆ ಕಾಮಗಾರಿ ಸೇರಿದಂತೆ ಹತ್ತಾರು ಆರೋಪಗಳು ಕೆಆರ್‌ಐಡಿಎಲ್ ಮೇಲೆ ಇವೆ. ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲಿ ಜೂನ್ 2014ರಲ್ಲೇ ಗಿರಿಜನ ಉಪಯೋಜನೆ ಅಡಿಯಲ್ಲಿ ವಸತಿನಿಲಯ ನಿರ್ಮಿಸುವ ಹೊಣೆ ಭೂಸೇನಾ ನಿಗಮ ಹೊತ್ತುಕೊಂಡಿತ್ತು, ಶಾಸಕ ಮಾನಪ್ಪ ವಜ್ಜಲ್ ಶಂಕುಸ್ಥಾಪನೆ ನೆರವೇರಿಸಿದ್ದರು. ಪೂರ್ಣ ಹಣವೂ ಬಿಡುಗಡೆಯಾಗಿದೆ. ಆದರೆ ಎರಡೂವರೆ ವರ್ಷ ಕಳೆದರೂ ವಸತಿನಿಲಯ ಮಾತ್ರ ಪೂರ್ಣಗೊಂಡಿಲ್ಲ, ಅಷ್ಟೇಅಲ್ಲ, ಪೂರ್ಣಗೊಳ್ಳುವ ಯಾವ ಲಕ್ಷಣಗಳೂ ಕಾಣುತ್ತಿಲ್ಲ. ವಸತಿನಿಲಯ ಕಟ್ಟಡ ನಿರ್ಮಿಸಲು ಬಳಸಿರುವ ಸಿಮೆಂಟ್, ಕಬ್ಬಿಣ ಸೇರಿದಂತೆ ಯಾವ ವಸ್ತುಗಳು ಸಹ ಗುಣಮಟ್ಟವನ್ನು ಹೊಂದಿಲ್ಲ, ಹಾಗಾಗಿ ಪೂರ್ಣಗೊಳ್ಳುವ ಮೊದಲೇ ಕಟ್ಟಡ ಬಿರುಕು ಬಿಟ್ಟಿದೆ. ಈ ಭೂಸೇನಾ ನಿಗಮದ ಧನದಾಹಕ್ಕೆ, ಕರ್ತವ್ಯಲೋಪಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕೆ?


ತಾಲ್ಲೂಕಿನಲ್ಲಿ ಹೈಟೆಕ್ ಪಾರ್ಕ್ ನಿರ್ಮಾಣ ಮಾಡಲೆಂದು 50 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿತ್ತು, ಭೂಸೇನಾ ನಿಗಮವು ಕಾಟಾಚಾರಕ್ಕೆ ಪಾರ್ಕ್ ನಿರ್ಮಿಸಿ ಕೈತೊಳೆದುಕೊಂಡಿದೆ. ಈಗಾಗಲೇ ವಾಕಿಂಗ್ ಟ್ರ್ಯಾಕ್‌ಗಳು ಕಿತ್ತುಹೋಗುತ್ತಿವೆ. ಈಗ ಆ ಪಾರ್ಕ್, ಅಲ್ಲೇ ಇರುವ ಕೆರೆಗೆ ಆಹುತಿಯಾಗುವ ಸಂಭವವಿದೆ. ಇನ್ನು ಸುವರ್ಣ ಗ್ರಾಮ ಯೋಜನೆಯಡಿಯಲ್ಲಿ ಸುಮಾರು 80 ಗ್ರಾಮಗಳ ಅಭಿವೃದ್ಧಿಗೆ ಭೂಸೇನಾ ನಿಗಮ ಕೈಹಾಕಿದೆ. ಪ್ರತಿ ಗ್ರಾಮವೊಂದಕ್ಕೆ 20 ಲಕ್ಷದಿಂದ 1 ಕೋಟಿ ರೂ.ಗಳವರೆಗೆ ಅನುದಾನ ಘೋಷಿಸಲಾಗಿದೆ. ಆದರೆ ನಿಗದಿತ ಸಮಯಕ್ಕೆ ಯಾವ ಗ್ರಾಮಗಳಲ್ಲೂ ಕಾಮಗಾರಿ ಮುಗಿದಿಲ್ಲ, ಅರೆಬರೆ, ಬೇಕಾಬಿಟ್ಟಿ ಖರ್ಚು ಮಾಡಿದ್ದು ಬಿಟ್ಟರೆ ಯಾವ ಗ್ರಾಮವೂ ಸಹ ಸುವರ್ಣಗ್ರಾಮವಾಗಿಲ್ಲ.

ಸುವರ್ಣ ಗ್ರಾಮ ಯೋಜನೆಯಡಿ 4ನೇ ಹಂತದಲ್ಲಿ ಸುಮಾರು 543 ಲಕ್ಷ ರೂ.ಗಳು ಬಿಡುಗಡೆಯಾಗಿದೆ. ಆದರೆ ಅಂಕಿಅಂಶಗಳ ಪ್ರಕಾರ 473 ಲಕ್ಷ ರೂ.ಗಳು ಮಾತ್ರ ವಿನಿಯೋಗವಾಗಿದ್ದು ಉಳಿದ 70 ಲಕ್ಷದಷ್ಟು ಹಣ ಗುಳುಂ ಆಗಿರುವ ಸಾಧ್ಯತೆಯಿದೆ. ಅದೇರೀತಿ 5ನೇ ಹಂತದಲ್ಲಿ 22 ಗ್ರಾಮಗಳ ಸಲುವಾಗಿ 595 ಲಕ್ಷ ರೂ.ಗಳು ಬಿಡುಗಡೆಯಾಗಿದ್ದು ಸುಮಾರು 424 ಲಕ್ಷ ರೂ.ಗಳನ್ನು ಬಳಸಲಾಗಿದೆ. ಉಳಿದ 170 ಲಕ್ಷ ರೂ. ಏನು ಮಾಡಿದ್ದಾರೆಂದು ಅಧಿಕಾರಿಗಳು ಮಾಹಿತಿ ಕೂಡ ಕೊಡುತ್ತಿಲ್ಲ. ಇನ್ನು ತಾಲ್ಲೂಕು ಪಂಚಾಯ್ತಿ ಸಭಾಂಗಣ ನಿರ್ಮಾಣ ಸೇರಿದಂತೆ ಹತ್ತು ಹಲವು ಕಡೆಗಳಲ್ಲಿ ಅಧಿಕಾರಿಗಳು ಜನಪ್ರತಿನಿಧಿಗಳ ಕೃಪಾಕಟಾಕ್ಷದೊಂದಿಗೆ ಸಾರ್ವಜನಿಕ ಹಣವನ್ನು ಲೂಟಿ ಮಾಡುವಲ್ಲಿ ನಿರತರಾಗಿದ್ದಾರೆ.


ಜಿಲ್ಲೆಯ ಕವಿತಾಳದ ಕೆರೆ ಡೆವಲಪ್‌ಮೆಂಟ್ ಹೆಸರಿನಲ್ಲಿ ಇದೇ ಅಧಿಕಾರಿಗಳು 9 ಕೋಟಿ ರೂ. ನುಂಗಿದ್ದಾರೆ. ಈ ಎಲ್ಲಾ ಹಗರಣಗಳು ಹೊರಗೆ ಬರುವುದರಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಮುಕ್ಕಣ್ಣ ಕರಿಗಾರ ಪಾತ್ರ ಮಹತ್ವದ್ದು. ಎಷ್ಟೇ ವಿರೋಧ ವ್ಯಕ್ತವಾದರೂ ಲೆಕ್ಕಿಸದೇ ಈ ಭ್ರಷ್ಟಾಚಾರಗಳನ್ನು ಬಯಲಿಗೆಳೆದಿದ್ದಾರೆ.



ಎಚ್.ಕೆ ಪಾಟೀಲ್



ಹಂಪನಗೌಡ ಬಾದರ್ಲಿ



ಬೋಸರಾಜು

ಈ ಹಗರಣಗಳಿಗೆಲ್ಲಾ ಮಾಸ್ಟರ್ ಮೈಂಡ್ ಅಧಿಕಾರಿಗಳೆಂದರೆ ಚಿಂತಾಮಣಿಯ ಅಬ್ದುಲ್ ರಶೀದ್ ಮತ್ತು ಷರೀಫ್, ನಾಗಮಂಗಲದ ಅಪ್ಪಾಜಿಗೌಡ ಮತ್ತು ಬಸವರಾಜ್. ಅಪ್ಪಾಜಿಗೌಡನಿಗೆ ಸಚಿವ ಎಚ್.ಸಿ. ಮಹದೇವಪ್ಪನ ಬೆಂಬಲವಿದ್ದರೆ, ಬಸವರಾಜ್‌ಗೆ ಮಲ್ಲಿಕಾರ್ಜುನ ಖರ್ಗೆರವರ ಆಶೀರ್ವಾದವಿದೆ. ಇವರುಗಳೆಲ್ಲಾ ಕಾಮಗಾರಿಗೆ ಮೊದಲೇ ಹಣ ಬಿಡುಗಡೆಯಾದ ತಕ್ಷಣವೇ ತಮ್ಮ ಕಮಿಷನ್ ಪಡೆಯುತ್ತಾರೆ. ಅದರಲ್ಲಿ ಕೊಡಬೇಕಾದವರಿಗೆ ಕೊಟ್ಟು, ಕೆಲ ಸಂಘಸಂಸ್ಥೆಗಳಿಗೂ ಹಣನೀಡಿ ಅವರ ಬಾಯಿ ಮುಚ್ಚಿಸುವಲ್ಲಿ ಯಶಸ್ವಿಯಾಗುತ್ತಾರೆ. ಜೊತೆಗೆ ಊರಿನವರ ವಿರೋಧ ಬರಬಾರದೆಂದು ಕೆಲ ದೇವಸ್ಥಾನಗಳಿಗೂ ಯಥೇಚ್ಛ ಹಣ ನೀಡಿರುವ ಪ್ರಕರಣಗಳುಂಟು. ಈ ಅಧಿಕಾರಿಗಳಿಗೆ ಬೆನ್ನೆಲುಬಾಗಿ ನಿಂತಿರುವವರು ಎಂಎಲ್‌ಸಿ ಬೋಸರಾಜು ಮತ್ತು ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ ಎಂಬ ಮಾತಿದೆ. ಸಚಿವಗಿರಿ ಸಿಕ್ಕಿಲ್ಲವೆಂದು ಗಲಾಟೆ ಶುರು ಮಾಡಿದ ಇವರು ತಮ್ಮ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಬೇಕೆಂದು ಪಟ್ಟು ಹಿಡಿದು ಯಥೇಚ್ಛ ಗ್ರಾಂಟ್ ತಂದಿದ್ದಾರೆ. ಅದೇ ಹಣ ಈಗ ಭ್ರಷ್ಟಾಚಾರದ ಮೂಲವಾಗಿರುವುದು. ಜಿಲ್ಲೆಯ 7 ಶಾಸಕರು ಸಹ ಈ ಬ್ರಹ್ಮಾಂಡ ಭ್ರಷ್ಟಾಚಾರದ ಫಲಾನುಭವಿಗಳಾಗಿದ್ದು ಸಂಸದರಿಗೂ ಪಾಲು ಸಂದಿದೆ

ಈ ಹಗರಣಗಳಿಗೆಲ್ಲಾ ಮಾಸ್ಟರ್ ಮೈಂಡ್ ಅಧಿಕಾರಿಗಳೆಂದರೆ ಚಿಂತಾಮಣಿಯ ಅಬ್ದುಲ್ ರಶೀದ್ ಮತ್ತು ಷರೀಫ್, ನಾಗಮಂಗಲದ ಅಪ್ಪಾಜಿಗೌಡ ಮತ್ತು ಬಸವರಾಜ್. ಅಪ್ಪಾಜಿಗೌಡನಿಗೆ ಸಚಿವ ಎಚ್.ಸಿ. ಮಹದೇವಪ್ಪನ ಬೆಂಬಲವಿದ್ದರೆ, ಬಸವರಾಜ್‌ಗೆ ಮಲ್ಲಿಕಾರ್ಜುನ ಖರ್ಗೆರವರ ಆಶೀರ್ವಾದವಿದೆ. ಇವರುಗಳೆಲ್ಲಾ ಕಾಮಗಾರಿಗೆ ಮೊದಲೇ ಹಣ ಬಿಡುಗಡೆಯಾದ ತಕ್ಷಣವೇ ತಮ್ಮ ಕಮಿಷನ್ ಪಡೆಯುತ್ತಾರೆ. ಅದರಲ್ಲಿ ಕೊಡಬೇಕಾದವರಿಗೆ ಕೊಟ್ಟು, ಕೆಲ ಸಂಘಸಂಸ್ಥೆಗಳಿಗೂ ಹಣನೀಡಿ ಅವರ ಬಾಯಿ ಮುಚ್ಚಿಸುವಲ್ಲಿ ಯಶಸ್ವಿಯಾಗುತ್ತಾರೆ. ಜೊತೆಗೆ ಊರಿನವರ ವಿರೋಧ ಬರಬಾರದೆಂದು ಕೆಲ ದೇವಸ್ಥಾನಗಳಿಗೂ ಯಥೇಚ್ಛ ಹಣ ನೀಡಿರುವ ಪ್ರಕರಣಗಳುಂಟು. ಈ ಅಧಿಕಾರಿಗಳಿಗೆ ಬೆನ್ನೆಲುಬಾಗಿ ನಿಂತಿರುವವರು ಎಂಎಲ್‌ಸಿ ಬೋಸರಾಜು ಮತ್ತು ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ ಎಂಬ ಮಾತಿದೆ. ಸಚಿವಗಿರಿ ಸಿಕ್ಕಿಲ್ಲವೆಂದು ಗಲಾಟೆ ಶು[illegible] ಮಾಡಿದ ಇವರು ತಮ್ಮ ಕ್ಷೇತ್ರಕ್ಕೆ ಹೆಚ್ಚಿನ ಅನುದಾ[illegible] ಬೇಕೆಂದು ಪಟ್ಟು ಹಿಡಿದು ಯಥೇಚ್ಛ ಗ್ರಾಂಟ್ ತಂದಿದ್ದಾ[illegible] ಅದೇ ಹಣ ಈಗ ಭ್ರಷ್ಟಾಚಾರದ ಮೂಲವಾಗಿರುವುದು[illegible] ಜಿಲ್ಲೆಯ 7 ಶಾಸಕರು ಸಹ ಈ ಬ್ರಹ್ಮಾಂಡ ಭ್ರಷ್ಟಾಚಾ[illegible] ಫಲಾನುಭವಿಗಳಾಗಿದ್ದು ಸಂಸದರಿಗೂ ಪಾಲು ಸಂದಿ[illegible] ಎಂದು ಜನ ಬೀದಿಯಲ್ಲಿ ಮಾತಾಡುವ ಪರಿ[illegible] ಬಂದೊದಗಿದೆ.

ತಮ್ಮ ಇಲಾಖೆಯಲ್ಲಿ ಇಷ್ಟೆಲ್ಲಾ ಅಕ್ರ[illegible] ನಡೆಯುತ್ತಿದ್ದರೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯ[illegible] ರಾಜ್ ಸಚಿವ ಎಚ್.ಕೆ ಪಾಟೀಲ್ ಗಂಭೀರ ಕ್ರಮಗ[illegible] ಮುಂದಾಗಿಲ್ಲ. ಬರ ಅಧ್ಯಯನಕ್ಕೆಂದು ರಾಯಚೂ[illegible] ಬಂದ ಸಂದರ್ಭದಲ್ಲಿ ತಪ್ಪಿತಸ್ಥರೆಲ್ಲರನ್ನು ಈಗಾಗ[illegible] ಅಮಾನತು ಮಾಡಲಾಗಿದ್ದು ಅವರ ಮೇಲೆ ಕ್ರಿಮಿನ[illegible] ಕೇಸ್ ದಾಖಲಿಸಲಾಗುವುದು ಎಂದಷ್ಟೇ ಹೇಳಿದ್ದಾರೆ. ಆ[illegible] ಇದುವರೆಗೂ ಒಬ್ಬ ಅಧಿಕಾರಿಯ ಮೇಲೂ ಕೇ[illegible] ದಾಖಲಾಗಿಲ್ಲ ಎಂದರೆ ಅನುಮಾನ ಕಾಡದಿರ[illegible] ಸಚಿವರೇನೋ ಲೆಕ್ಕ ಕೊಡದೇ ಹಣ ಪಡೆದವರು, ನಿ[illegible] ಹೊಂದಿದ್ದವರನ್ನು ಸಹ ವಿಚಾರಣೆಗೊಳಪಡಿಸಿ ತಪ್ಪಿ[illegible] ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎ[illegible] ಘೋಷಿಸಿದ್ದಾರೆ. ಆದರೆ ಇದು ಎಷ್ಟರಮಟ್ಟ[illegible] ಕಾರ್ಯರೂಪಕ್ಕೆ ಬರುತ್ತದೆ ಎಂಬ ಬಗ್ಗೆ ಸಾಕ[illegible] ಅನುಮಾನವಿದೆ. ಅಧಿಕಾರಿಗಳನ್ನು ಮಾತ್ರ ಟಾರ್ಗೆಟ್ ಮಾ[illegible] ಮುಖ್ಯ ಆರೋಪಿಗಳಾದ ಜನಪ್ರತಿನಿಧಿಗಳ[illegible] ಕೈಬಿಟ್ಟಿರುವುದು ದೊಡ್ಡ ಷಡ್ಯಂತ್ರವಾಗಿದೆ.

ಇನ್ನು ಸಚಿವರೆ ಹೇಳುವ ರೀತಿಯಲ್ಲಿ ಸರ್ಕಾ[illegible] ಹಣದಿಂದ ನಿರ್ಮಾಣಗೊಂಡ ಶುದ್ಧ ಕುಡಿಯುವ ನೀ[illegible] ಘಟಕಗಳು ಹೆಸರಿಗಷ್ಟೇ ಇದ್ದು ಬಹುತೇಕವು [illegible] ನಿರ್ವಹಿಸುತ್ತಿಲ್ಲ. ಇದಕ್ಕಾಗಿ ನಿವೃತ್ತ ನ್ಯಾಯಾಧಿ[illegible] ನದಾಫ್‌ರವರ ನೇತೃತ್ವದಲ್ಲಿ ರಚಿಸಿದ ಸಮಿತಿ[illegible] ಆಘಾತಕಾರಿ ಅಂಶಗಳನ್ನು ಹೊರಹಾಕಿದೆ. ಜಿಲ್ಲೆಯಲ್ಲಿ [illegible] ಘಟಕಗಳು ಸ್ಥಾಪನೆಯಾಗಿದ್ದು ಇವುಗಳಲ್ಲಿ ಕೇವಲ [illegible] ಘಟಕಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. ಉ[illegible] ಘಟಕಗಳಲ್ಲಿ ಕೇವಲ ಹಣ ಪಡೆದಿದ್ದು ಕ[illegible] ನಿರ್ವಹಣೆಯಿಂದ ನೆನೆಗುದಿಗೆ ಬಿದ್ದಿವೆ. ಆದರೆ ಇಲ್ಲಿ[illegible] ಸಹ ಸಚಿವರು ಕೇವಲ ವಿಚಾರಣೆ ನಡೆಸಿ ಕ[illegible] ಕೈಗೊಳ್ಳುತೇವೆ ಎಂಬ ಮಾತುಗಳನ್ನಷ್ಟೇ ಆಡುತ್ತಿದ್ದಾ[illegible]

ಒಟ್ಟಾರೆ ಸಿದ್ದರಾಮಯ್ಯ ನಮ್ಮದು ಪಾರದರ್ಶಕ [illegible] ಎಂದು ಎಷ್ಟೇ ಹೇಳಿದರೂ ಸಹ ರಾಯಚೂರಿ[illegible] ನಡೆಯುತ್ತಿರುವುದು ಮಾತ್ರ ಖುಲ್ಲಂಖುಲ್ಲಾ ವ್ಯ[illegible] ಇಲ್ಲಿ ಪಕ್ಷಭೇದವಿಲ್ಲದೇ ಭ್ರಷ್ಟಾಚಾರ ನಡೆಯುತ್ತಿ[illegible] ಜನಸಾಮಾನ್ಯರು ಪ್ರತಿಭಟಿಸಿ ಸೋತು ಕೂತಿದ್ದಾರೆ. ಇದ[illegible] ಕೇವಲ ರಾಯಚೂರು ಜಿಲ್ಲೆಯ ಪರಿಸ್ಥಿತಿಯಲ್ಲ, ಬದಲ[illegible] ರಾಜ್ಯದ, ದೇಶದ ಪರಿಸ್ಥಿತಿಯೂ ಸಹ ಇದಕ್ಕಿಂತ ಭಿನ್ನವಿ[illegible]

■ ಮುತ್ತುರಾ[illegible]


ದಿಡ್ಡಳ್ಳಿ ಕೊಡಗಿನ ಪ್ರದೇಶದಲ್ಲಿ ಇದೆ ಎಂಬುದು ಟಕ ರಾಜ್ಯ ಮಾತ್ರವಲ್ಲ, ದೇಶದಾದ್ಯಂತ ತಿಳಿಯಲು ನಾಯಿತು. ದಿಡ್ಡಳ್ಳಿ ಹೋರಾಟ ಇತಿಹಾಸದ ಪುಟ ಸೇರುವಂತಾಯಿತು. ಇದರಿಂದಾಗಿ ಕೊಡಗಿನಲ್ಲಿ ವಲ್ಲ, ರಾಜ್ಯದ ಇತರ ಭಾಗಗಳಲ್ಲಿಯೂ ಭೂಹೀನರಿಗೆ ವಸತಿಹೀನರಿಗೆ ಸಣ್ಣದೊಂದು ಆಶಾಕಿರಣ ಕಿದಂತೆ ಆಗಿದೆ. ನಾಗರಿಕ ಸಮಾಜ ತಮ್ಮೊಂದಿಗೆ ದೆ ಎನ್ನುವುದರ ಜೊತೆಗೆ, ಅನ್ಯಾಯವನ್ನು ಪ್ರತಿಭಟಿ ಶಕ್ತಿಯೂ ಸಮಾಜದಲ್ಲಿ ಇನ್ನೂ ಉಳಿದುಕೊಂಡಿದೆ ಸಂದೇಶವನ್ನು ಈ ಹೋರಾಟ ರವಾನೆ ಮಾಡಿದೆ.


ಆದರೀಗ ದಿಡ್ಡಳ್ಳಿಯ ಹೋರಾಟಕ್ಕೆ ಈಗ ಪ್ರತಿ ರಾಟವೂ ಆ ಭಾಗದಲ್ಲಿಯೇ ನಡೆಯುತ್ತಿದೆ. ಈ ರಾಟದ ಹಿಂದೆ ಭೂಮಾಲಿಕರು, ಪರಿಸರವ್ಯಾಧಿಗಳು, ತೊತ್ವದ ಮೂಲಭೂತವಾದಿಗಳು ಇದ್ದಾರೆ ವುದರಲ್ಲಿ ಯಾವುದೇ ಸಂಶಯವಿಲ್ಲ. ಈ ರಾಟಗಾರರು ಗುಡಿಸಲನ್ನು ತೆರವುಗೊಳಿಸಬೇಕು ಆಗ್ರಹಿಸುತ್ತಿದ್ದಾರೆ. ಇದಕ್ಕೆ ಅವರು ನೀಡಿರುವ ಬಹಳ ವಿಚಿತ್ರವಾಗಿದೆ. "ಅಲ್ಲಿ ಮೂಲ ಆದಿವಾಸಿ ದ್ದಾರೆ. ಅವರಿಗೆ ಯಾವುದೇ ಸೌಲಭ್ಯವನ್ನು ನೀಡಿಲ್ಲ, ಲು ಅವರಿಗೇ ಸೌಲಭ್ಯ ನೀಡಿ" ಎನ್ನುವುದರ ಜೊತೆಗೆ ತಿಂಗಳ ಹಿಂದೆ ಹೊರಗಿನಿಂದ ಬಂದ ಜನರಿಗೆ ವನ್ನು ಒತ್ತುವರಿ ಮಾಡಿಕೊಳ್ಳಲು ಮತ್ತು ಸೌಕರ್ಯವನ್ನು ಸರ್ಕಾರ ನೀಡಬಾರದು" ಎಂದು ಮಿಸುತ್ತಿದ್ದಾರೆ.

ಮಾಷೆ ಎಂದರೆ ಈ ಪ್ರತಿ ಹೋರಾಟದಲ್ಲಿ ಕೊಂಡವರು ಜಿಲ್ಲಾ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಕರುಂಬಯ್ಯನವರು. ಇವರು ಯಾವುದೇ ರ್ವದಲ್ಲಿಯೂ ಬಡವರ್ಗದವರ ಪರವಾಗಿಯಾಗಲಿ, ಾಸಿಗಳ ಪರವಾಗಿಯಾಗಲಿ ಇದ್ದವರಲ್ಲ. 1985ರ ಟ್ಟದಲ್ಲಿ ಇವರು ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿದ್ದ ುಲ್ಲಿ, ಸಾಮಾಜಿಕ ಅರಣ್ಯದ ಪರಿಕಲ್ಪನೆ ಬಂದು, ರದಿಂದ ಲಕ್ಷಾಂತರ ರೂಪಾಯಿ ಬರಲು ರವಾಗಿತ್ತು, ಅದರ ಸದ್ಬಳಕೆ ಆಗಲೇ ಇಲ್ಲ ಎಂಬುದು ಗೆ ತಿಳಿದಿದೆ. ಅವರು ಜಿಲ್ಲಾ ಪರಿಷತ್ ಅಧ್ಯಕ್ಷರಾಗಿದ್ದ ುಲ್ಲಿ ಪರಿಶಿಷ್ಟ ವರ್ಗದವರಿಗೆ ಯಾವ ಪ್ರಮಾಣದಲ್ಲಿ ರವನ್ನು ನೀಡಿದ್ದಾರೆ ಎಂಬುದು ಕೊಡಗಿನ ಾಸಿಗಳಿಗೆ ತಿಳಿದಿದೆ. ಈಗ ಅದೇ ಕರುಂಬಯ್ಯ ಲೆನಿಂತಿರುವ ಆದಿವಾಸಿಗಳನ್ನು ತೆರವುಗೊಳಿಸಬೇಕು ಬೇಡಿಕೆಯನ್ನು ಇಟ್ಟಿದ್ದಾರೆ. ಇವರು ಕಾಂಗ್ರೆಸಿನ ಎಂಬುದು ಮತ್ತು ಈಗಲೂ ಜಿಲ್ಲಾ ಕಾಂಗ್ರೆಸ್ ಸ್ಥಾನ ತನಗೆ ಸಿಗಬೇಕು ಎಂದು ಹೇಳುತ್ತಿರುವ ಾಗಿದ್ದಾರೆ.

ದಿವಾಸಿಗಳಲ್ಲಿ ಮೂಲ ಆದಿವಾಸಿಗಳು ಮತ್ತು ಿನ ಆದಿವಾಸಿಗಳು ಎಂಬುದು ಇಲ್ಲ. ಈ ರೀತಿ ತರುತ್ತಿರುವುದು ಹೋರಾಟವನ್ನು ಹಾದಿ ತಪ್ಪಿಸುವ ಶದಿಂದ ಎನ್ನುವುದರಲ್ಲಿ ಸಂಶಯವಿಲ್ಲ. ವಾಸ್ತವದಲ್ಲಿ ಿಂದಲೂ ಈ ಪ್ರದೇಶದಲ್ಲಿ ಇದ್ದ ಆದಿವಾಸಿಗಳಿಗೆ ಗಳು ದೊರಕಿಲ್ಲ ಎಂದಾದರೆ ಅವರು ಈಗ ುತ್ತಿರುವ ಭೂಮಿ ಮತ್ತು ನಿವೇಶನದ ಹೋರಾಟದ ಯಲ್ಲಿ ಗುರುತಿಸಿಕೊಳ್ಳಬೇಕಾಗಿತ್ತು. ಭೂ ಮಾಲಿಕರ ಪರಿಸರವಾದಿಗಳ ಕೈಗೊಂಬೆಯಾಗಬಾರದಿತ್ತು.

ರುಂಬಯ್ಯ ಮತ್ತು ಅವರ ಮಿತ್ರರಿಗೆ ಈ ನುಗಳು ಎಲ್ಲಿ ಬಡವರ ಪಾಲು ಆಗುತ್ತದೋ ಆತಂಕವೇ ವಿನಹ, ಬೇರೇನೂ ಅಲ್ಲ. ಈ ಾಟದಿಂದ ಬಡವರಿಗೆ ಸೌಲಭ್ಯ ದೊರೆತರೆ ತಮ್ಮ ಮನೆಗಳಲ್ಲಿ ಇರಲು ಕೂಲಿಗಳು ಇರುವುದಿಲ್ಲ ಎಂಬ ಆತಂಕ ಅವರನ್ನು ಕಾಡುತ್ತಿದೆ.





ಬಲಾಢ್ಯರ ಪ್ರತಿ ಹೋರಾಟ


ಆಡಳಿತ ನಡೆಸುತ್ತಿರುವವರು ಯಾರು?

ಕರ್ನಾಟಕದಲ್ಲಿ ಆಡಳಿತ ನಡೆಸುತ್ತಿರುವವರು ಯಾರು ಎಂಬ ಸಂಶಯ ಪದೇ ಪದೇ ಕಾಡುತ್ತಿದೆ. ಏಕೆಂದರೆ ಸರಕಾರ ನಡೆಸುವವರು ತಾಳುವ ಧೋರಣೆಗೂ, ಅನುಷ್ಠಾನ ಮಾಡುತ್ತಿರುವವರ ಧೋರಣೆಗೂ ಸಾಮ್ಯವೇ ಇಲ್ಲ. ಜಿಲ್ಲೆಗೆ ಬಂದಿದ್ದ ಕಂದಾಯ ಸಚಿವ ಕಾಗೋಡು ತಿಮ್ಮಪ್ಪ, ದಿಡ್ಡಳ್ಳಿ ನಿವಾಸಿಗರಿಗೆ ಅಲ್ಲಿಯೇ ಆಶ್ರಯ ಕಲ್ಪಿಸಲಾಗುವುದು ಎಂದು ಹೇಳಿದ ನಂತರ ಕೇವಲ 2 ಗಂಟೆಯಲ್ಲಿ ಜಿಲ್ಲಾಧಿಕಾರಿಗಳು ಪತ್ರಿಕಾಗೋಷ್ಠಿ ನಡೆಸಿ, ಯಾವುದೇ ಕಾರಣಕ್ಕೂ ಅಲ್ಲಿ ಜಮೀನು ನೀಡಲು ಸಾಧ್ಯವಿಲ್ಲ ಎಂದು ಹೇಳಿದರು.

ಬಹುತೇಕ ರಾಜ್ಯ ಸರಕಾರವೇ ದಿಡ್ಡಳ್ಳಿ ವಿಚಾರದಲ್ಲಿ ಜಿಲ್ಲೆಗೆ ಭೇಟಿ ನೀಡಿದೆ ಎಂದಾಗ, ಸರಕಾರದ ಗಮನ ಸೆಳೆಯುವಲ್ಲಿ ಈ ಹೋರಾಟ ಯಶಸ್ವಿಯಾಗಿದೆ ಎಂಬ ಅರ್ಥ ಬರುತ್ತದೆ. ಅಂತಹ ಸಂದರ್ಭದಲ್ಲಿ ಕೆಲವೇ ಕೆಲವು ಅಧಿಕಾರಿಗಳು ಬೇಜವಾಬ್ದಾರಿಯಿಂದ ನಡೆದುಕೊಂಡರೆ ಅದು ಸರಕಾರಕ್ಕೆ ಕೆಟ್ಟ ಹೆಸರನ್ನು ತರುತ್ತದೆ. ಆದರೆ ದುರಾದೃಷ್ಟವೆಂದರೆ, ಕೊಡಗಿನ ಮಟ್ಟಿಗೆ ಆಡಳಿತ ನಡೆಸುವ ಕಾಂಗ್ರೆಸ್ ಪಕ್ಷದ ನಾಯಕತ್ವ ಭೂಮಾಲಿಕರ ಕೈಯಲ್ಲಿ ಇರುವುದು. ಅವರು ಯಾವಾಗಲೂ ಇಂತಹ ಹೋರಾಟದ ವಿರುದ್ಧವೇ ಇರುತ್ತಾರೆ.

ಜಾರಿಯಾಗಬೇಕಾದ ನಿಯಮಾವಳಿಗಳು

ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಅಡಿಯಲ್ಲಿ 1969ರಲ್ಲಿ ಭೂ ಮಂಜೂರಾತಿಯ ನಿಯಮವನ್ನು ಜಾರಿಗೆ ತರಲಾಯಿತು. ಈ ನಿಯಮದ ಪ್ರಕಾರ ಪ್ರತಿ ವರ್ಷ, ಪ್ರತಿ ಜಿಲ್ಲೆಯಲ್ಲಿಯೂ ಸರಕಾರಕ್ಕೆ ಅಗತ್ಯವಿರುವ ಜಮೀನನ್ನು ಮೀಸಲಿಟ್ಟು, ಉಳಿದ ಸರಕಾರಿ ಜಮೀನು ಎಷ್ಟು ಇದೆ ಎಂಬುದನ್ನು ಪ್ರಕಟಿಸಬೇಕು. ವಿತರಿಸಲು ಲಭ್ಯವಿರುವ ಕಂದಾಯ ಜಮೀನಿನಲ್ಲಿ ಶೇ. 50ರಷ್ಟನ್ನು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ವಿತರಿಸಬೇಕು. ಶೇ. 5 ಹಿಂದುಳಿದ ಗಿರಿಜನರಿಗೆ, ಶೇ. 10 ರಾಜಕೀಯ ಸಂತ್ರಸ್ತರಿಗೆ, ಶೇ. 10 ಸೈನ್ಯದಲ್ಲಿ ಸೇವೆ ಸಲ್ಲಿಸಿದವರಿಗೆ ಮತ್ತು ಉಳಿಕೆ ಶೇ. 25ನ್ನು ಇತರರಿಗೆ ವಿತರಿಸಬೇಕು ಎಂಬ ನಿಯಮ ಇದೆ. ಆದರೆ ಇದು ಜಾರಿಯಾಗಲೇ ಇಲ್ಲ ಎಂಬುದು 1979ರಲ್ಲಿ ರಾಜ್ಯ ಸರಕಾರದ ಗಮನಕ್ಕೆ ಬಂದು, ಇದನ್ನು ಸರಿಪಡಿಸಬೇಕು ಎಂದು ಮತ್ತೆ ತಿದ್ದುಪಡಿಯನ್ನು ತಂದಿತ್ತು. ಈ ತಿದ್ದುಪಡಿಯ ಪ್ರಕಾರ ಮುಂದಿನ ದಿನಗಳಲ್ಲಿ ಭೂ ಮಂಜೂರಾತಿ



ಮಾಡುವುದಿದ್ದರೆ, ಈಗಾಗಲೇ ಆಗಿರುವ ನ್ಯೂನತೆಗಳನ್ನು ಸರಿಪಡಿಸಬೇಕು ಎಂದು ಹೇಳಿತು. ಆದರೆ ಇಂದಿಗೂ ಇದು ಅನುಷ್ಠಾನ ಆಗುತ್ತಿಲ್ಲ.

ಅಕ್ರಮ-ಸಕ್ರಮದ ಅಡಿಯಲ್ಲಿ ಅರ್ಜಿ 50 ಮತ್ತು 53 ಸಲ್ಲಿಕೆಯಾಗಿದ್ದು ಅದು ಮಂಜೂರಾತಿಗೆ ಬಾಕಿ ಇದೆ. ಇಂತಹ ಒತ್ತುವರಿ ಏಕೆ ಆಯಿತು ಎಂದರೆ, 1969ರ ನಿಯಮ ಜಾರಿಯಾಗದೆ, ಭೂ ಅತಿಕ್ರಮಣವಾಗಿ, ಅಕ್ರಮ-ಸಕ್ರಮದ ಅಡಿಯಲ್ಲಿ ಮಂಜೂರಾತಿಗೆ ಅರ್ಜಿ ಸಲ್ಲಿಕೆ ಆಯಿತು. ಇದು ಬಡವರ್ಗದವರಿಗೆ ಆದ ಅನ್ಯಾಯ ಎಂದೇ ಹೇಳಬೇಕಾಗುತ್ತದೆ.

ಮತ್ತೊಂದು ಕಡೆ ಅರಣ್ಯ ಮತ್ತು ಕಂದಾಯ ಇಲಾಖೆಯ ಜಮೀನು ಯಾವ ಪ್ರಮಾಣದಲ್ಲಿ ಇದೆ ಎಂಬುದು ಇಲ್ಲಿಯವರೆಗೂ ಗುರುತಿಸಲ್ಪಟ್ಟಿಲ್ಲ. ಎಲ್ಲಾ ಜಮೀನು ತನ್ನದೆಂದೇ ಅರಣ್ಯ ಇಲಾಖೆ ಹೇಳುತ್ತಿದೆ. ಅದನ್ನು ವಿರೋಧಿಸುವವರೇ ಇಲ್ಲ. ಆಳುವವರು ಈ ಬಗ್ಗೆ ಮಾತನಾಡುವುದಿಲ್ಲ, ಇದಕ್ಕೆ ಕಾರಣ ಆಳುವವರು ಬಲಾಢ್ಯರಾಗಿದ್ದು, ಅವರು ಬಲಹೀನರಿಗೆ ಜಮೀನು ಮಂಜೂರಾಗದಂತೆ ಬೇಕಾದಷ್ಟು ತಂತ್ರಗಾರಿಕೆಯನ್ನು ಮಾಡುತ್ತಾರೆ.

ಕೊಡಗಿನಲ್ಲಿ ಕಂದಾಯ ಇಲಾಖೆಯ ವಶದಲ್ಲಿ ಇದ್ದ ಸಾಕಷ್ಟು ಜಮೀನು ಕಂದಾಯ ಇಲಾಖೆಯ ಬೇಜವಾಬ್ದಾರಿ, ನಿರ್ಲಕ್ಷ್ಯತನ ಮತ್ತು ದುರಾಡಳಿತದಿಂದಾಗಿ ಕಾಗದದಲ್ಲಿ ಅರಣ್ಯ ಇಲಾಖೆಯ ಪಾಲಾಗಿದೆ. ಬಹಳಷ್ಟು ಮಂದಿಗೆ 1904ರ ಕಾಲಘಟ್ಟದಲ್ಲಿ ಅಂದಿನ ಸರಕಾರ ಸನದ್ ಮೂಲಕ ಜಮೀನು ನೀಡಿದೆ. ಮೂಲನಕ್ಷೆಯಲ್ಲಿ ಕಂದಾಯ ಇಲಾಖೆ ಅದನ್ನು ಬೇರ್ಪಡಿಸಬೇಕಾಗಿತ್ತು, ಹಾಗೆ ಮಾಡದೆ, ಅಂತಹ ಪ್ರದೇಶಗಳೆಲ್ಲವೂ ಸರಕಾರದ ಕಂದಾಯ ಜಮೀನು ಮತ್ತು ಅವು ಸಿಡಿ ಜಮೀನು ಎಂದು ಹೇಳಿಕೊಂಡು ಅರಣ್ಯ ಇಲಾಖೆಗೆ ಹಸ್ತಾಂತರಿಸಿತು. ಅರಣ್ಯ ಇಲಾಖೆ ಅದನ್ನು ಭೌತಿಕವಾಗಿ ತೆಗೆದುಕೊಳ್ಳಲಿಲ್ಲ. ಆದರೆ ಎಲ್ಲಿ ಜನರು ಕೃಷಿ ಮಾಡುತ್ತಿದ್ದರೋ ಅಲ್ಲಿಗೆ ತೆರಳಿ, ಜಮೀನು ಅರಣ್ಯ ಇಲಾಖೆಯದ್ದು ಎಂದು ಬೆದರಿಸಿ ವಶಕ್ಕೆ ಪಡೆದುಕೊಳ್ಳಲು ಪ್ರಯತ್ನಿಸುತ್ತಿದೆ. ಸಾಕಷ್ಟು ಕಡೆ ಅತಿಕ್ರಮಣವಾಗಿರುವ ಜಮೀನು ಕೂಡ ಸಿಡಿ ವ್ಯಾಪ್ತಿಗೆ ಬರುತ್ತದೆ. ಅರಣ್ಯ ಇಲಾಖೆ ಈ ಜಮೀನನ್ನು ಮಂಜೂರಾತಿ ಮಾಡಲು ಅಡ್ಡಿಪಡಿಸುತ್ತಿದೆ. ಇದರಿಂದಾಗಿ ಕೃಷಿಕ ವರ್ಗ ಸಂಕಷ್ಟವನ್ನು ಎದುರಿಸುವಂತೆ ಆಗಿದೆ.

ಅರಣ್ಯ ಇಲಾಖೆ ತನ್ನ ವಶದಲ್ಲಿರುವ ಅರಣ್ಯ ಪ್ರದೇಶದಲ್ಲಿ ತನ್ನದೇ ನಿಯಮಗಳನ್ನು ಪಾಲಿಸುತ್ತಿಲ್ಲ. ಅವರಿಗೆ ಖಾಸಗಿ ಜಮೀನಿನ ಮೇಲೆ ಮತ್ತು ಕಂದಾಯ ಜಮೀನಿನ ಮೇಲೆ ಮಾತ್ರ ಕಣ್ಣು. ಕೊಡಗಿನ ಮಟ್ಟಿಗೆ ಈಗ ಆಗಬೇಕಾಗಿರುವುದು ಅರಣ್ಯ ಮತ್ತು ಕಂದಾಯ ಇಲಾಖೆಯ ಜಮೀನು ಎಷ್ಟು ಎಂಬುದನ್ನು ನಿಖರವಾಗಿ ಪತ್ತೆಹಚ್ಚಲು ಸರ್ವೆ ಕಾರ್ಯ. ಈ ಸರ್ವೆ ಆದರೆ ಖಂಡಿತವಾಗಿಯೂ ಅರಣ್ಯ ಪ್ರದೇಶ ಯಾವುದು ಎಂಬುದು ಖಚಿತವಾಗುತ್ತದೆ. ಉಳಿದ ಜಮೀನು ಕಂದಾಯ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಹಾಗೆ ಆದಾಗ ಭೂ ಮಂಜೂರಾತಿ ಸುಲಭ ಸಾಧ್ಯವಾಗುತ್ತದೆ.

ಹಾಗಾಗಿ ದಿಡ್ಡಳ್ಳಿ ಹೋರಾಟ, ದಿಡ್ಡಳ್ಳಿಯ ನಿರಾಶ್ರಿತರಿಗೆ ಮಾತ್ರವಲ್ಲ, ಭೂಹೀನರಿಗೆ ಒಂದು ಆಶಾದಾಯಕ ವಿಚಾರವಾಗಿದೆ. ಈ ಹೋರಾಟ ಈ ಹಂತ ತಲುಪಲು ಪ್ರಮುಖ ಕಾರಣಕರ್ತರು ನಿರ್ವಾಣಪ್ಪ ಸಿರಿಮನೆ ನಾಗರಾಜ್, ನೂರ್ ಶ್ರೀಧರ್, ಅಪ್ಪಾಜಿ ಹಾಗೂ ಮುತ್ತಮ್ಮ. ಇವರಿಗೆ ಬೆನ್ನೆಲುಬಾಗಿ ಸರಕಾರದೊಂದಿಗೆ ನಿರಂತರವಾಗಿ ಚರ್ಚೆಯನ್ನು ನಡೆಸಿ, ಸರಕಾರವೇ ಜಿಲ್ಲೆಗೆ ಬರುವಂತೆ ಮಾಡಿದವರು ಹಿರಿಯರಾದ ಎ.ಕೆ. ಸುಬ್ಬಯ್ಯ. ಈ ಹೋರಾಟದಲ್ಲಿ ನಟ ಚೇತನ್ ತರಹದ ಯುವಕರೂ ಇದ್ದಾರೆ.

ಈಗ ನಡೆಯುತ್ತಿರುವ ಪ್ರತಿ ಹೋರಾಟ ದಿಡ್ಡಳ್ಳಿ ಹೋರಾಟಕ್ಕೆ ಕಪ್ಪು ಚುಕ್ಕೆಯನ್ನು ತರಲು ಹೊರಟಿದೆ. ತಮ್ಮ ಆಸ್ತಿಗೆ ಸಂಚಕಾರ ಬರುವುದಿದ್ದರೆ ಅವರು ಹೋರಾಟಗಳನ್ನು ನಡೆಸಿದರೆ ಅದಕ್ಕೆ ಗೌರವವಿರುತ್ತಿತ್ತು. ಆದರೆ ಅವರುಗಳು ಹಾಗೆ ಮಾಡದೆ, ಸ್ವಾರ್ಥಕ್ಕಾಗಿ ಪ್ರತಿ ಹೋರಾಟ ಮಾಡುತ್ತಾ, ಆದಿವಾಸಿಗಳಲ್ಲಿ ಎರಡು ಗುಂಪು ಮಾಡಲು ಪ್ರಯತ್ನಿಸುತ್ತಿದ್ದಾರೆ. ರಾಜ್ಯ ಸರಕಾರ ಸಂಕಲ್ಪ ತೊಟ್ಟು ದಿಡ್ಡಳ್ಳಿ ಆದಿವಾಸಿಗಳಿಗೆ ನೆಲೆ ಕಲ್ಪಿಸಿದರೆ ಈ ಹೋರಾಟ ಯಶಸ್ಸು ಕಂಡಂತೆಯೇ ಸರಿ.

■ ಬಿ.ಎನ್. ಮನುಶೆಣೈ

⇦ ದಂಗಲ್....

ಿಸುತ್ತಾಳೆ.

ದಂಗಲ್' ಇಷ್ಟೇ ಆಗಿದ್ದರೆ ಅದು ಅದ್ಭುತ ೊಳ್ಳುತ್ತಿರಲಿಲ್ಲ, ಇದು ಅದ್ಭುತವಾಗಿರುವುದಕ್ಕೆ ಕಾರಣ ಚಿತ್ರಕತೆ, ನಿರ್ದೇಶನ, ಎಲ್ಲ ಪಾತ್ರವರ್ಗದ ುಟ್ಟುವ ನಟನೆ ಮತ್ತು ಸ್ವತಃ ಆಮಿರ್‌ಖಾನ್ ೀರನ ಪಾತ್ರವನ್ನು ಆವಾಹಿಸಿಕೊಂಡಿರುವ ರೀತಿ. ರ ಆಜುಬಾಜಿನ ಮಾಜಿ ಕುಸ್ತಿಪಟು ಪಾತ್ರವನ್ನು ುಸಲು ಆಮಿರ್ ತನ್ನ ದೇಹತೂಕವನ್ನು 22 ಕೇಜಿ ೊಂಡಿದ್ದ, ಇದು ಬೇಕಿತ್ತೆ? ಇದರ ಬದಲಾಗಿ ಸೂಟ್' ಹಾಕಿಕೊಳ್ಳಬಹುದಿತ್ತಲ್ಲವೇ ಎಂದು ೇ ಪ್ರಶ್ನಿಸಿದ್ದಕ್ಕೆ ಆಮಿರ್ "ಹಾಗೆ ಮಾಡಿದರೆ ಅದು ಾಗಿ ಕಾಣಿಸುವುದಿಲ್ಲ, ದೇಹತೂಕದಿಂದಾಗಿ ಆ ನಡೆಯುವ ಶೈಲಿಯೂ ಬದಲಾಗುತ್ತದೆ. ಆದ್ದರಿಂದ ದಪ್ಪಗಾಗಬೇಕಾಯಿತು" ಎಂದು ಉತ್ತರಿಸಿದ್ದಾನೆ. ದಕ್ಕೇ ಆಮಿರ್‌ನನ್ನು 'ಪರ್ಫೆಕ್ಷನಿಸ್ಟ್' ಎಂದು ಕರೆಯುವುದು.

ನ್ನ ಯುವಕನಾಗಿದ್ದಾಗ ಉತ್ಸಾಹಿ ಕುಸ್ತಿಪಟುವಾಗಿ, ಹೆಣ್ಣುಮಕ್ಕಳನ್ನು ದಂಡಿಸುತ್ತಿದ್ದೇನೆಂದು ನೋವು ುಸುವ ಅಪ್ಪನಾಗಿ, ತಂದೆಯಾಗಿದ್ದರೂ ಕರುಣೆ ತೋರದ ಗುರುವಾಗಬೇಕು ಎಂಬ ಕಠಿಣ ನಿಲುವು ತಾಳುವ ತರಬೇತುದಾರನಾಗಿ, ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣುಮಕ್ಕಳನ್ನು ಕುಸ್ತಿಪಟುಗಳಾಗಿ ರೂಪಿಸುವುದಕ್ಕೆ ಮುಂದಾಗಿದ್ದರಿಂದ ಅಪಹಾಸ್ಯಕ್ಕೆ ಈಡಾದರೂ ತನ್ನ ಛಲ ಬಿಡದ ವ್ಯಕ್ತಿಯಾಗಿ, ಅಸಹಾಯಕಳಾಗಿರುವ ಮಗಳ ನೆರವಿಗೆ ಧಾವಿಸುವ ಅಪ್ಪನಾಗಿ ಆಮಿರ್ ತನ್ನ ಪಾತ್ರವನ್ನು ನಿಭಾಯಿಸಿರುವುದು ಎಲ್ಲರ ಮೆಚ್ಚುಗೆಯನ್ನು ಗಳಿಸುವಂತಿದೆ.

ಅಷ್ಟೇ ಮುಖ್ಯವಾಗಿ ಈ ಚಿತ್ರದಲ್ಲಿ ಆಮಿರ್ 'ಯುವ ಹೀರೋ' ಆಗಿ ಕಾಣಿಸಿಕೊಳ್ಳುವುದು ಐದಾರು ನಿಮಿಷ ಮಾತ್ರ. ಉಳಿದಂತೆ ಇದರಲ್ಲಿ ಆತ ಮುದುಕ. ಇನ್ನು ಚಿತ್ರದ ಎರಡನೆ ಭಾಗದಲ್ಲಿ ಆತನ ಇರವು ಕಡಿಮೆಯೇ. ಅಲ್ಲಿ ಹೆಚ್ಚು ಪ್ರಾಮುಖ್ಯತೆ ಸಿಕ್ಕಿರುವುದು ಗೀತಾಳ ಪಾತ್ರಕ್ಕೆ. ಅಷ್ಟರಮಟ್ಟಿಗೆ ಆಮಿರ್ ಹಿಂದೆ ಸರಿದು ನಿಂತಿರುವುದು ಶ್ಲಾಘನೀಯ.

ಇನ್ನು ಬೆಳೆದ ಗೀತಾ ಮತ್ತು ಬಬಿತಾ ಪಾತ್ರಗಳನ್ನು ನಿರ್ವಹಿಸಿರುವ ಫಾತಿಮಾ ಮತ್ತು ಸಾನ್ಯ ಎಂಬ ಹೊಸ ನಟಿಯರ ಪ್ರತಿಭೆಯೂ ತೆರೆಯ ಮೇಲೆ ಮಿಂಚುತ್ತದೆ. ಅವರು ಚಿಕ್ಕವರಾಗಿದ್ದಾಗಿನ ದೃಶ್ಯಗಳಲ್ಲಿ ಕಾಣಿಸಿಕೊಂಡಿರುವ ಜೈರ ಮತ್ತು ಸುಹಾನಿ ಎಂಬ ಬಾಲಕಿಯರೂ ಗಮನ ಸೆಳೆಯುತ್ತಾರೆ. ಮಹಾವೀರನ ಪತ್ನಿಯ ಪಾತ್ರದಲ್ಲಿ ಕಾಣಿಸಿಕೊಂಡಿರುವ ಸಾಕ್ಷಿ ತನ್ವರ್ ತಮ್ಮ ಚಿಕ್ಕ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಈ ಚಿತ್ರವನ್ನು ನಿತೇಶ್ ತಿವಾರಿ ಅವರು ನಿರ್ದೇಶಿಸಿದ್ದಾರೆ. ಅವರಿಗೊಂದು ದೊಡ್ಡ ಸಲಾಂ.

ಇಷ್ಟೆಲ್ಲ ಅಂದಮಾತ್ರಕ್ಕೆ ಚಿತ್ರದಲ್ಲಿ ನ್ಯೂನತೆಗಳೇ ಇಲ್ಲ ಎಂದಲ್ಲ, ಅದರಲ್ಲಿ ಪ್ರಮುಖವಾದದ್ದು ತನ್ನ ಕನಸನ್ನು ಈಡೇರಿಸಿಕೊಳ್ಳಲು ತಂದೆಯೊಬ್ಬ ತನ್ನ ಪುತ್ರಿಯರನ್ನು ಬಲವಂತವಾಗಿ ಕುಸ್ತಿಯ ಅಖಾಡಕ್ಕೆ ಇಳಿಸುವುದು ಎಷ್ಟು ಸರಿ ಎಂಬುದು. ಹಾಗೆಯೇ ಮಹಾವೀರರಿಗೆ ಪುತ್ರನಿದ್ದಿದ್ದರೆ ಅವರು ತಮ್ಮ ಗಮನವನ್ನು ಪುತ್ರಿಯರತ್ತ ತಿರುಗಿಸುತ್ತಿದ್ದರೆ ಎಂಬುದು ಕೂಡ ಮುಖ್ಯವಾಗುತ್ತದೆ.

ಆದರೂ ಹೆಣ್ಣುಮಕ್ಕಳು ಕುಸ್ತಿಯ ಅಖಾಡವನ್ನು ಮಲಿನಗೊಳಿಸುತ್ತಾರೆ, ಅವರು ಏನಿದ್ದರೂ ಮನೆಗೆಲಸಕ್ಕೆ ಸೂಕ್ತ, ಹೆಣ್ಣುಮಕ್ಕಳು ಮೈಮುಚ್ಚುವ ಉಡುಗೆ ತೊಟ್ಟು ಪುರುಷರ ಅಡಿಯಾಳುಗಳಾಗಿರಬೇಕು ಎಂಬ ಮನಸ್ಥಿತಿ ಇವತ್ತಿಗೂ ಜೀವಂತವಾಗಿರುವಾಗ ಮಹಾವೀರ್ ತನ್ನ ಪುತ್ರಿಯರನ್ನು ಯಶಸ್ವೀ ಕುಸ್ತಿಪಟುಗಳಾಗಿ ರೂಪಿಸಿದ್ದು ಮುಖ್ಯವಾಗಬೇಕೇ ಹೊರತು ಇತರ ಸಂಗತಿಗಳಲ್ಲ ಎನಿಸುತ್ತದೆ.

ಕೊನೆಗೊಂದು ಮಾತು. ಈ ವರ್ಷ ರಿಯೋದಲ್ಲಿ ನಡೆದ ಒಲಂಪಿಂಕ್ಸ್‌ನಲ್ಲಿ ಭಾರತಕ್ಕೆ ಮೊದಲ ಪದಕ ಗೆದ್ದದ್ದು ಸಾಕ್ಷಿ ಮಲಿಕ್ ಎಂಬ ಹರ್ಯಾಣದ ಯುವತಿ. ಈಕೆ ಅಲ್ಲಿಯತನಕ ನಿಜಜೀವನದಲ್ಲಿ ಗೀತಾ ಫೋಗಟ್‌ಳ ನೆರಳಿನಲ್ಲಿ ಸಾಗುತ್ತಿದ್ದಾಕೆ. ಈಗ ಗೀತಾಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಒಲಂಪಿಕ್ಸ್‌ನಲ್ಲಿ ಪದಕ ಪಡೆದ ಭಾರತದ ಪ್ರಥಮ ಮಹಿಳಾ ಕುಸ್ತಿಪಟು ಎಂಬ ಹೆಗ್ಗಳಿಕೆಗೆ ಕಾರಣಳಾಗಿದ್ದಾಳೆ.

ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಗೀತಾ ಮತ್ತು ಬಬಿತಾ ಮಾತ್ರ ಪದಕಗಳನ್ನು ಗೆದ್ದಿಲ್ಲ, ಅವರ ಚಿಕ್ಕಪ್ಪನ ಮಗಳಾದ ವಿನೇಶ್ ಕೂಡ ಪದಕ ಗೆದ್ದಿದ್ದಾಳೆ. ಮಹಾವೀರ್ ತಯಾರು ಮಾಡಿದ ಇನ್ನೂ ಅದೆಷ್ಟೋ ಯುವತಿಯರೂ ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಹಾಗೆಯೇ ಸಾಕ್ಷಿ ಮಲಿಕ್‌ಳ ತಂದೆ ಸುಖಬೀರ್ ಕೂಡ ಮಹಾವೀರ್ ಅವರಂತೆ ಸಮಾಜದ ಟೀಕೆಗೆ, ಟಾಂಗುಗಳಿಗೆ ಕ್ಯಾರೆ ಅನ್ನದೆ ದೇಶ ಹೆಮ್ಮೆಪಡುವಂತಹ ಕ್ರೀಡಾಳನ್ನು ರೂಪಿಸಿದ್ದಾರೆ.

ಭಾರತದಂತಹ ನಾಡಿನಲ್ಲಿ ಮಹಾವೀರ್ ಮತ್ತು ಸುಖಬೀರ್ ತರಹದವರ ಸಾಧನೆ ಚಿಕ್ಕದಲ್ಲ. ನಿರ್ದೇಶಕ ನಿತೇಶ್ ತಿವಾರಿ ಮತ್ತು ನಿರ್ಮಾಪಕ-ನಟ ಆಮಿರ್ ಖಾನ್ 'ದಂಗಲ್' ಮುಖಾಂತರ ಅವರ ದಿಟ್ಟತನ ಮತ್ತು ಅವರ ಪುತ್ರಿಯರ ಯಶಸ್ಸನ್ನು ನಾಡಿನ ಜನರ ಮುಂದಿಟ್ಟಿದ್ದಾರೆ. ಅದಕ್ಕೆ ಅವರೆಲ್ಲರಿಗೂ ಒಂದು ದೊಡ್ಡ ಥ್ಯಾಂಕ್ಸ್. ಓದುಗರೆಲ್ಲರೂ ತಪ್ಪದೆ ಈ ಚಿತ್ರವನ್ನು ಕುಟುಂಬ ಸಮೇತರಾಗಿ ನೋಡಬೇಕೆಂದು ವಿನಂತಿ. ■

ಕೊಡಗು ಪ್ಲಾಂಟೇಶನ್ ರಿಪಬ್ಲಿಕ್



ದಿನಾಂಕ 07-12-2016. ಬೆಳಗಿನ ಜಾವ ಸುಮಾರು 4.00 ಗಂಟೆ. ಸ್ಥಳ - ಕೊಡಗು ಜಿಲ್ಲೆಯ ವಿರಾಜಪೇಟೆ ತಾಲೂಕಿನ ದಿಡ್ಡಳ್ಳಿಯೆಂಬ ಸಣ್ಣ ಹಳ್ಳಿ. ಕರ್ನಾಟಕ ಪೊಲೀಸರ ಸುಮಾರು 300 ಜನರ ಪಡೆ ಮತ್ತು ಅರಣ್ಯ ಇಲಾಖೆಯ ನೂರಕ್ಕೂ ಹೆಚ್ಚು ಸಿಬ್ಬಂದಿ ತಮ್ಮ ಲಾಠಿ, ಬೂಟುಗಳು ಮದ್ದುಗುಂಡುಗಳು ಎಲ್ಲವನ್ನೂ ಸಜ್ಜುಗೊಳಿಸಿಕೊಂಡು ಒಂದು ವಿಶೇಷ ಕಾರ್ಯಾಚರಣೆಗೆ ವೀರಾವೇಶದಿಂದ ಮುನ್ನುಗ್ಗಿದ್ದರು. ಈ ಆಯುಧಗಳ ಜೊತೆಗೆ ಮೂರು ಜೆಸಿಬಿ ಯಂತ್ರಗಳನ್ನೂ ಕೊಂಡೊಯ್ದಿದ್ದರು. ತಮ್ಮ ದಾಳಿಯ ಗುರಿಯಾಗಿದ್ದ 'ಶತ್ರುಪಡೆ' ಇನ್ನೂ ಕಣ್ಣುಬಿಡುವ ಮೊದಲೇ ಜೆಸಿಬಿ ಯಂತ್ರಗಳ ಸಹಾಯದಿಂದ ಆ 'ಶತ್ರುಪಡೆಯ' ನೆಲೆಯನ್ನೇ ನೆಲಸಮ ಮಾಡಿಬಿಟ್ಟಿದ್ದರು. ಒಂದೆಡೆ ಜೆಸಿಬಿ ಯಂತ್ರಗಳು ಆರ್ಭಟಿಸುತ್ತಿದ್ದರೆ, ಪ್ರತಿರೋಧ ಒಡ್ಡಲು ಮುಂದಾದ ಆ 'ಶತ್ರು'ಗಳ ಮೇಲೆ ಲಾಠಿ - ಬೂಟುಗಳ ಪ್ರಹಾರ ನಡೆಸಿ, ಅವರನ್ನೆಲ್ಲಾ ಮಟ್ಟಹಾಕಿ ಬೆಳಗಾಗುವುದರೊಳಗೆ ಆ ವಿಶೇಷ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದರು!

ಎಲ್ಲಾ ಸರಿ, ನಮ್ಮ ಪೊಲೀಸರು ಮತ್ತು ಅರಣ್ಯಾಧಿಕಾರಿಗಳು ವೀರಾವೇಶದಿಂದ ಹೋರಾಡಿದ ಆ ಶತ್ರುಪಡೆ ಯಾವುದು? ಇದು ಕುತೂಹಲದ ಪ್ರಶ್ನೆ. ನಮ್ಮ ಪೊಲೀಸರ ಶತ್ರುಗಳು ಬೇರಾರೂ ಆಗಿರಲಿಲ್ಲ; ತಲತಲಾಂತರಗಳಿಂದ ಕಾಡಿನ ಮಕ್ಕಳಂತೆ ಬದುಕಿ, ಈ ಕಾಡನ್ನು ರಕ್ಷಣೆ ಮಾಡುತ್ತಿರುವ ಅಮಾಯಕ ಆದಿವಾಸಿಗಳು!!

ಏನಿದು ಅಸಂಬದ್ಧ, ವಿಚಿತ್ರ ವಿವರಣೆ ಎಂದು ಕೇಳಬೇಡಿ. ಡಿಸೆಂಬರ್ 7ರ ನಸುಕಿನಲ್ಲಿ ಕೊಡಗಿನ ಕಾಡಿನಲ್ಲಿ ಇಡೀ ನಾಗರಿಕ ಸಮಾಜ ತಲೆತಗ್ಗಿಸುವಂತಹ ಘಟನೆ ನಡೆದದ್ದೇ ಹಾಗೆ. ಇದಕ್ಕೆ ಕಾರಣವೇನು? ಹಿನ್ನೆಲೆಯೇನು? ಈಗ ಆದಿವಾಸಿಗಳ ಗತಿಯೇನಾಗಿದೆ ಇತ್ಯಾದಿ ಪ್ರಶ್ನೆಗಳನ್ನು ಕೆದಕುತ್ತಾ ಹೋದರೆ ಇಡೀ ಕೊಡಗಿನ ಮತ್ತೊಂದು ಚಿತ್ರವೇ ಅನಾವರಣಗೊಳ್ಳುತ್ತದೆ.

ಕೊಡಗು ಎಂದರೆ ಕರ್ನಾಟಕದ ಕಾಶ್ಮೀರ ಎಂದೇ ಪ್ರತೀತಿ. ಕರ್ನಾಟಕ ಮಾತ್ರವಲ್ಲ, ಇಡೀ ದಕ್ಷಿಣ ಭಾರತೀಯರಿಗೇ ಕೊಡಗು ನೆಚ್ಚಿನ ಪ್ರವಾಸಿತಾಣ. ಕೊಡಗು ಮತ್ತೊಂದು ಕಾರಣಕ್ಕೂ ದೇಶದ ಗಮನ ಸೆಳೆದಿದೆ. ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪನವರನ್ನೂ ಒಳಗೊಂಡಂತೆ ಕೊಡಗಿನ ಮೂಲದಿಂದ ಸೇನೆ ಸೇರಿ ಉನ್ನತ ಹುದ್ದೆಗೇರಿದ ಅನೇಕರಿದ್ದಾರೆ. ಇಂದಿಗೂ ಸೇನೆಯಲ್ಲಿ ಸೇವೆ ಸಲ್ಲಿಸುವವರಲ್ಲಿ ಕೊಡಗಿನವರ ಸಂಖ್ಯೆ ಗಣನೀಯವಾಗಿಯೇ ಇದೆ.

ಆದರೆ ಇಂಥಾ ಕೊಡಗು ಜಿಲ್ಲೆಯಲ್ಲಿ ಅಮಾಯಕ ಆದಿವಾಸಿಗಳಿಗೆ ಇನ್ನೂ ಸ್ವಾತಂತ್ರ-ಪ್ರಜಾತಂತ್ರ ಎಂದರೆ ಏನೆಂದೇ ಗೊತ್ತಿಲ್ಲ ಎಂದರೆ ನೀವು ಹುಬ್ಬೇರಿಸುತ್ತೀರಿ. ಇಂದಿಗೂ ಅಲ್ಲಿನ ಲಕ್ಷಾಂತರ ಆದಿವಾಸಿಗಳು ದಿನನಿತ್ಯ ಪ್ಲಾಂಟರುಗಳ ಅಟ್ಟಹಾಸ, ಅಮಾನವೀಯ ದೌರ್ಜನ್ಯಗಳಿಗೆ ಗುರಿಯಾಗಿದ್ದಾರೆ. ಇತ್ತೀಚೆಗೆ ದಿಡ್ಡಳ್ಳಿ ಎಂಬ ಕುಗ್ರಾಮದಲ್ಲಿ ನಡೆದ ವಿದ್ಯಮಾನಗಳು ನಮ್ಮ ವ್ಯವಸ್ಥೆಯ ಈ ಹುಳುಕುಗಳನ್ನು ಎತ್ತಿ ತೋರಿಸಿವೆ.


ಕೊಡಗಿನ ಪ್ರಕೃತಿಯ ಭಾಗವಾಗಿ ಬದುಕುತ್ತಿದ್ದ ಜೇನುಕುರುಬ, ಬೆಟ್ಟಕುರುಬ, ಯರವ, ಪಾಣಿಯ ಮುಂತಾದ ಆದಿವಾಸಿಗಳಿಗೆ ಬ್ರಿಟಿಷರ ಆಗಮನದೊಂದಿಗೆ ದುರ್ದೆಸೆ ಆರಂಭವಾಯ್ತು. ಕಾಡನ್ನು ಕಡಿದು ವಿವಿಧ ಪ್ಲಾಂಟೇಷನ್‌ಗಳನ್ನು ಸ್ಥಾಪಿಸಿದರು. ಪ್ಲಾಂಟೇಷನ್‌ಗಳು ಹಾಗೂ ವಿವಿಧ ಯೋಜನೆಗಳಿಂದ ಬಹುತೇಕ ನಾಶವಾದ ಕಾಡನ್ನೇ ನಂಬಿ ಬದುಕುತ್ತಿದ್ದ ಆದಿವಾಸಿಗಳ ಬದುಕು ಮೂರಾಬಟ್ಟೆಯಾಯ್ತು. ಕೊನೆಗೆ ಈ ಅಮಾಯಕ ಆದಿವಾಸಿಗಳು ತುತ್ತು ಕೂಳಿಗಾಗಿ ಇದೇ ಪ್ಲಾಂಟೇಷನ್ ಮಾಲಿಕರ ಬಳಿ ಜೀತದಾಳುಗಳಾಗಿ ಸೇರ್ಪಡೆಯಾದರು. ಇದು ಇತಿಹಾಸ.

ಬ್ರಿಟಿಷ್ ಪ್ಲಾಂಟೇಷನ್ ಮಾಲಿಕರ ಬದಲಿಗೆ ದೇಸೀ ತಳಿಯ ಮಾಲಿಕರು ಬಂದದ್ದು ಬಿಟ್ಟರೆ ಆದಿವಾಸಿಗಳ ಪಾಲಿನ ವರ್ತಮಾನವೂ ಹೆಚ್ಚು ಭಿನ್ನವೇನಲ್ಲ. ತುತ್ತಿನ ಚೀಲ ತುಂಬಿಸಿಕೊಳ್ಳಲು ಬಹುತೇಕ ಕಾಫಿ ಎಸ್ಟೇಟುಗಳಲ್ಲಿ ಬಂಧಿಯಾಗಿರುವ ಈ ಆದಿವಾಸಿಗಳ ಪಾಲಿಗೆ ಕಾನೂನು, ಕೋರ್ಟು, ಕಾಯಿದೆ ಎಲ್ಲಾ ಅಲ್ಲಿನ ಮಾಲಿಕರೇ ಆಗಿದ್ದಾರೆ. ಬಹುತೇಕ ಕೊಡವ ಜಾತಿಗೆ ಸೇರಿದ ಎಸ್ಟೇಟ್ ಮಾಲಿಕರಲ್ಲಿ ಹೆಚ್ಚಿನವರು ಬಿಜೆಪಿ ಬೆಂಬಲಿಗರು. ಅಲ್ಲೊಬ್ಬರು ಇಲ್ಲೊಬ್ಬರು ಕಾಂಗ್ರೆಸ್ ಪಕ್ಷದವರು ಇದ್ದಾರಾದರೂ ಅವರು ಬಿಜೆಪಿಯ ಬಿ ಟೀಮ್‌ನಂತಾಗಿಬಿಟ್ಟಿದ್ದಾರೆ. ಅದು ಹಾಗಿರಲಿ.

ರೈಲ್ವೆ ಗೂಡ್ಸ್ ಗಾಡಿಯನ್ನು ಹೋಲುವ ಲೈನ್ ಮನೆಗಳಲ್ಲಿ ಈ ಕೂಲಿಗಳ ವಾಸ. ದಿನಕ್ಕೆ 200 ರೂಪಾಯಿ ಕೂಲಿ, ಅದರಲ್ಲಿ 100 ರೂಪಾಯಿ ಬಾಡಿಗೆ ಮುರಿದುಕೊಂಡರೆ ಉಳಿಯುವುದು 100 ರೂಪಾಯಿ. ಅದರಲ್ಲಿ ಎಂದೋ ಕೊಟ್ಟಿದ್ದ ಐದೋ ಆರೋ ಸಾವಿರ ಸಾಲಕ್ಕೆ ಬಡ್ಡಿ ಮುರಿದುಕೊಂಡರೆ ಉಳಿಯುವುದು ಗಂಜಿಗೂ ಸರಿಯಾಗಿ ಎಟುಕುವುದಿಲ್ಲ. ಇದು ಬಹುತೇಕ ಕೊಡಗಿನ ಆದಿವಾಸಿಗಳ ಚಿತ್ರಣ. ನೂರಕ್ಕೋ ಸಾವಿರಕ್ಕೋ ಅಲ್ಲೊಂದು ಇಲ್ಲೊಂದು ಅಪವಾದವಿರಬಹುದಷ್ಟೆ. ಮಾನವೀಯವಾಗಿ ನಡೆದುಕೊಳ್ಳುವ ಕೆಲವು ಪ್ಲಾಂಟರ್‌ಗಳು ಮರಳುಗಾಡಿನ ಓಯಸಿಸ್‌ನಂತೆ ಅಷ್ಟೆ.

ಜೀತದಿಂದ ಮುಕ್ತಿ ಬಯಸಿ....

ಹೀಗಿರುವಾಗ ದಿಡ್ಡಳ್ಳಿ ಫಾಸಲೆಯ ಕೆಲವು ಆದಿವಾಸಿಗಳು ತಮ್ಮ ಜೀತದಿಂದ ಮುಕ್ತಿ ಪಡೆಯಲು ತೀರ್ಮಾನಿಸಿದರು. ಈ ಲೈನ್ ಮನೆ ಎಂಬ ಜೀತದ ಕೂಪದಿಂದ ಹೊರಬಂದು ಸ್ವತಂತ್ರ ಕೂಲಿಗಳಾಗಲು ನಿರ್ಧರಿಸಿದರು. ಇದೇ ದಿಡ್ಡಳ್ಳಿಯಲ್ಲಿ ಸರ್ಕಾರ ಆದಿವಾಸಿಗಳ ಮಕ್ಕಳಿಗೆಂದೇ ನಡೆಸುವ ಆಶ್ರಮಶಾಲೆಯೊಂದಿದೆ. ಅದರ ಸುತ್ತಮುತ್ತಲ ಜಾಗ ಸರ್ಕಾರದ ಪೈಸಾರೆ ಜಾಗ ಎಂಬ ಮಾಹಿತಿ ಅದು ಹೇಗೋ ಕೆಲ ಆದಿವಾಸಿ ಮುಖಂಡರ ಕಿವಿಗೆ ಬಿದ್ದುಬಿಟ್ಟಿತ್ತು. ಆ ಸ್ಥಳದಲ್ಲಿ ಹೀಗೆ ಜೀತವಿಮುಕ್ತಿ ಬಯಸಿ ಸ್ವತಂತ್ರ ಕೂಲಿಗಳಾಗಲು ಬಯಸಿದ 8 - 10 ಕುಟುಂಬಗಳು ಇದೇ ಜೂನ್ ತಿಂಗಳಿನಲ್ಲಿ ಸಣ್ಣ ಗುಡಿಸಲುಗಳನ್ನು ಕಟ್ಟಿಕೊಂಡರು. ಹೇಗೂ ಸುತ್ತಮುತ್ತಲ ಕಾಫಿ ತೋಟಗಳಲ್ಲಿ ಕೂಲಿಯಾಳುಗಳಿಗೆ ಬೇಡಿಕೆ ಇರುವುದರಿಂದ ತಮ್ಮ ಜೀವನ ಹಸನಾಗಬಹುದೆಂದು ಕನಸು ಕಂಡರು. ನೋಡನೋಡುತ್ತಿದ್ದಂತೆ ಸ್ವತಂತ್ರ ಕೂಲಿಗಳಾಗ ಬಯಸಿ, ಲೈನ್ ಮನೆ ತೊರೆದು ಬರುವವರ ಸಂಖ್ಯೆ ಏರುತ್ತಾ ಹೋಯಿತು. ಹಾಗೆಯೇ ಒಂದೇ ತಿಂಗಳಲ್ಲಿ ದಿಡ್ಡಳ್ಳಿಯ ಈ ಆಶ್ರಮ ಶಾಲೆಯ ಸುತ್ತ 577 ಗುಡಿಸಲುಗಳು ರೂಪ ತಳೆದವು.



ಮೊದಮೊದಲಿಗೆ ಈ ಜಾಗಕ್ಕೆ ಅರಣ್ಯ ಇಲಾಖೆಯ ಸಿಬ್ಬಂದಿ ಬಂದು ಕಿರುಕುಳ ಕೊಡಲು ಆರಂಭಿಸಿದರು. ನಂತರದ ದಿನಗಳಲ್ಲಿ ಆದಿವಾಸಿಗಳಿಗೂ ಅರಣ್ಯಾಧಿಕಾರಿಗಳಿಗೂ ನಡುವೆ ಒಂದು ಒಪ್ಪಂದ ಕುದುರಿತು. ಎಂಥಾ ಒಪ್ಪಂದ ಅಂತೀರಿ? ಸುಮಾರು 20x30 ಅಳತೆಯಲ್ಲಿದ್ದ ಆ ಒಂದು ಗುಡಿಸಲಿಗೆ ವಾರಕ್ಕೆ 100 ರೂಪಾಯಿಯಂತೆ ರೇಂಜ್ ಫಾರೆಸ್ಟ್ ಆಫೀಸರ್ ಗೋಪಾಲ್ ಎಂಬುವವರಿಗೆ ಹಫ್ತಾ ಸಲ್ಲಿಸಿದರೆ ಅವರ ತಂಟೆಗೆ ಅರಣ್ಯಾಧಿಕಾರಿಗಳು ಬರುವುದಿಲ್ಲ ಎಂಬುದು. ಹೀಗೆ ಹಣ ಸಂಗ್ರಹ ಮಾಡಿ ಅಧಿಕಾರಿಗಳಿಗೆ ಒಪ್ಪಿಸುವ ಕೆಲಸವನ್ನು ಆದಿವಾಸಿಗಳ ಮುಖಂಡರಾದ ಮುತ್ತಮ್ಮ ಮತ್ತು ಇದೇ ಮಾಲ್ದಾರೆ ಗ್ರಾಮ ಪಂಚಾಯ್ತಿಯ ಸದಸ್ಯ ಅಪ್ಪಾಜಿ ಎಂಬ ಯುವಕ ವಹಿಸಿಕೊಂಡರು. ಈ ಯುವಕ ಎಸ್‌ಟಿ ಕೋಟಾದಲ್ಲಿ ಆಯ್ಕೆಯಾಗಿರುವ ಇದೇ ಆದಿವಾಸಿ ಸಮುದಾಯಗಳಿಗೆ ಸೇರಿದವನು.

ಕೆಲವು ತಿಂಗಳುಗಳ ಕಾಲ ಹೀಗೆ ನಡೆಯಿತು. ಮಳೆಯ ಕೊರತೆ ಇತ್ಯಾದಿ ಕಾರಣಗಳಿಂದ ಕಳೆದ ಒಂದೆರಡು ತಿಂಗಳಿನಿಂದ ಸರಿಯಾದ ಕೂಲಿ ಕೆಲಸ ಸಿಗದೆ ಆರ್‌ಎಫ್‌ಓ ಹಫ್ತಾ ಕ್ರಮಬದ್ಧವಾಗಿ ಕೊಡಲು ಆದಿವಾಸಿಗಳಿಗೆ ಸಾಧ್ಯವಾಗಲಿಲ್ಲ. ಹೀಗಾಗಿ ಅರಣ್ಯ 'ರಕ್ಷಕ'ರ ಕಣ್ಣು ಕೆಂಪಾಗಿತ್ತು. ಅದೇ ಸಂದರ್ಭದಲ್ಲಿ ತಮ್ಮ ಜೀತದ ಲೈನ್ ಮನೆಯನ್ನು ತೊರೆದು ಸ್ವತಂತ್ರವಾಗಿ ಬದುಕುತ್ತಿರುವ ಈ ಆದಿವಾಸಿಗಳ 'ದಾರ್ಷ್ಟ್ಯ' ಕೂಡ ಹಲವು ಪ್ಲಾಂಟರುಗಳ ನಿದ್ದೆಗೆಡಿಸಿತ್ತು. ಈ ಆದಿವಾಸಿಗಳನ್ನು ತಮ್ಮ ನಿಯಂತ್ರಣದಲ್ಲಿಡಲು ಅವರಿಗಿದ್ದ ಮಾರ್ಗವೊಂದೇ. ಅದು ಈ ಸ್ವತಂತ್ರ ಕೂಲಿಗಳು ನಿಲ್ಲಲು ನೆಲೆಯಿಲ್ಲದಂತೆ ಮಾಡುವುದು. ಹಾಗಾದರೆ ಈ ಬಡಪಾಯಿಗಳು ಬೇರೆ ಗತಿಯಿಲ್ಲದೆ ತಮ್ಮ ಲೈನುಗಳಿಗೇ ವಾಪಸ್ ಬಂದೇ ಬರುತ್ತಾರೆ. ಹೀಗಾಗಿ ಸ್ಥಳೀಯ ಶಾಸಕ - ಸಂಸದರ ಕುಮ್ಮಕ್ಕಿನೊಂದಿಗೆ ಸ್ಥಳೀಯ ಅಧಿಕಾರಿಗಳ ಜೊತೆ ಸೇರಿ ಯುದ್ಧೋಪಾದಿಯ ಕಾರ್ಯಾಚರಣೆಯ ತಂತ್ರವನ್ನು ಹೆಣೆದುಬಿಟ್ಟಿದ್ದರು.

ಆಪರೇಷನ್ ಬ್ಯಾಕ್ ಟು ಲೈನ್ಸ್!

ಇದರ ಪರಿಣಾಮವೇ ಡಿಸೆಂಬರ್ 7ರ ಮುಂಜಾವಿನಲ್ಲಿ ನಡೆದ ಆಪರೇಷನ್. ಈ ಕಾರ್ಯಾಚರಣೆಯ ಉದ್ದೇಶ ಇದ್ದಿದ್ದೆಲ್ಲಾ ಇಷ್ಟೆ. ಲೈನ್ ಮನೆಗಳನ್ನು ತೊರೆದ ಆದಿವಾಸಿಗಳನ್ನು ಮರಳಿ ಅದೇ ಜೀತದ ಕೂಪಕ್ಕೆ ವಾಪಸ್ ತಳ್ಳುವುದು. ಅಂದರೆ ಬ್ಯಾಕ್ ಟು ಲೈನ್ಸ್. ಅಂದಿನಿಂದ ಇಂದಿನವರೆಗೆ ಸ್ಥಳಕ್ಕೆ ಭೇಟಿಕೊಟ್ಟ ಹಲವು ಅಧಿಕಾರಿಗಳು ಪದೇಪದೇ ಒತ್ತಿಹೇಳುತ್ತಿರುವುದು ಇದನ್ನೇ. ಅದರಲ್ಲೂ ಈ ಕಾರ್ಯಾಚರಣೆಯ ಕಿಂಗ್‌ಪಿನ್‌ನಂತೆ ವ್ಯವಹರಿಸುತ್ತಿರುವ ಅಧಿಕಾರಿಣಿ ಮಾಯಾದೇವಿ ಗಲಗಲಿಯಂತೂ ಈ ಮಾತುಗಳನ್ನು ಕಂಠಪಾಠ ಮಾಡಿಕೊಂಡುಬಿಟ್ಟಿದ್ದಾಳೆ: "ನಿಮ್ಮ ಲೈನ್ ಮನೆಗಳಿಗೆ ನೀವು ವಾಪಸ್ ಹೋಗಿ, ನಾವು ಸರ್ಕಾರಕ್ಕೆ ಬರೆದು, ಜಾಗ ಪತ್ತೆ ಮಾಡಿ ನಂತರ ಮನೆ ಕೊಡಿಸುತ್ತೇವೆ." ಅಂದರೆ ಸರ್ಕಾರ ಮನೆ ಕೊಡಿಸುವಂತಿಲ್ಲ, ಅವರ ಜೀತ ವಿಮುಕ್ತಿಯಾಗುವಂತಿಲ್ಲ, ಇದು ಅಸಲೀಯತ್ತು.

ರಾತ್ರಿಯ ಕತ್ತಲಿನಲ್ಲಿ ಭೂತಪ್ರೇತಗಳಂತೆ ನುಗ್ಗಿದ ಪೊಲೀಸರು, ಮಕ್ಕಳು ಮರಿಗಳೆನ್ನದೆ, ಮಹಿಳೆಯರೆನ್ನದೆ ಲಾಠಿ ಪ್ರಹಾರ ನಡೆಸಿದರು. ಗುಡಿಸಲುಗಳನ್ನು ಬಟ್ಟೆ ಬರೆ ಪಾತ್ರೆ ಸಾಮಾನು ಸಮೇತ ನೆಲಸಮ ಮಾಡಿದರು. ಅಕ್ಕಿ ಬೇಳೆ ಮುಂತಾದ ದಿನಸಿ ಪದಾರ್ಥಗಳನ್ನು ಉದ್ದೇಶಪೂರ್ವಕವಾಗಿ ಜೆಸಿಬಿ ಯಂತ್ರಗಳ ಮೂಲಕ ಮಣ್ಣಿನಲ್ಲಿ ಮಗುಚಿದರು. ಇಂಥಾ ಪೈಶಾಚಿಕ ದೌರ್ಜನ್ಯವನ್ನು


ಮಾಯಾವಿಯೊಬ್ಬಳ ಮಾಯಾಜಾಲ

ನಮ್ಮ ಪ್ರಜಾತಂತ್ರದಲ್ಲಿ ಸರ್ಕಾರದ ಆಶಯ ಜನಪರವಾಗಿದ್ದು, ಅದು ಉತ್ತಮ ಯೋಜನೆ ಜಾರಿಗೆ ತರಬೇಕೆಂದುಕೊಂಡರಷ್ಟೇ ಸಾಕಾಗುವುದಿಲ್ಲ, ಅದನ್ನು ಜಾರಿ ಮಾಡುವ ಅಧಿಕಾರಿಗಳಿಗೆ ವಿಶೇಷ ಇಚ್ಛಾಶಕ್ತಿ ಹಾಳಾಗಲಿ, ತಾವು ಪಡೆದುಕೊಂಡ ಸಂಬಳಕ್ಕಾದರೂ ನ್ಯಾಯ ಸಲ್ಲಿಸಬೇಕೆಂಬ ಕನಿಷ್ಠ ಕರ್ತವ್ಯ ಪ್ರಜ್ಞೆ ಇರಬೇಕು. ಹಾಗಿಲ್ಲದೇ ಹೋದರೆ ಸರ್ಕಾರ ಎಷ್ಟೇ ಬಯಸಿದರೂ ಕೂಡ ಯೋಜನೆಗಳು ಹಳ್ಳ ಹಿಡಿಯುತ್ತವೆ ಎಂಬುದು ನಮಗೆಲ್ಲಾ ಗೊತ್ತಿದೆ. ಆದರೆ ಕೊಡಗಿನಲ್ಲೊಂದು ಇನ್ನೂ ವಿಶಿಷ್ಟ ಉದಾಹರಣೆಯಿದೆ. ಸರ್ಕಾರಿ ಕಾರ್ಯಕ್ರಮಗಳ ಜನಪರ ಆಶಯವನ್ನು, ತನ್ನ ನೀಚ ತಂತ್ರ-ಕುತಂತ್ರಗಳ ಮೂಲಕ ಜನರ ವಿರುದ್ಧವೇ ತಿರುಗಿಸಿ ಅಟ್ಟಹಾಸ ಮೆರೆಯುತ್ತಿರುವ ವಿಶೇಷ ಪ್ರತಿಭಾವಂತ ಅಧಿಕಾರಿಣಿ ಕೊಡಗಿಗೆ ವಕ್ಕರಿಸಿದ್ದಾಳೆ.

ಆಕೆಯ ಹೆಸರು ಶ್ರೀಮತಿ ಮಾಯಾದೇವಿ ಗಲಗಲಿ. ಈಕೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ. ಜೊತೆಗೆ ಐಟಿಡಿಪಿ(ಆದಿವಾಸಿಗಳ ಸಮಗ್ರ ಅಭಿವೃದ್ಧಿ ಯೋಜನೆ)ಗೂ ಈಕೆಯದೇ ಪಾರುಪತ್ಯ. ಜಿಲ್ಲಾಧಿಕಾರಿ, ಇಲಾಖೆಯ ಮೇಲಧಿಕಾರಿಗಳು, ಮಂತ್ರಿಗಳು ಅಷ್ಟೇ ಏಕೆ ಮಾಧ್ಯಮದವರನ್ನು ದಿಕ್ಕುತಪ್ಪಿಸುತ್ತಿರುವ ಈಕೆಯ ನಿಷ್ಠೆ ಏನಿದ್ದರೂ ಸಂಸದ ಪ್ರತಾಪಸಿಂಹನಿಗೆ ಮಾತ್ರವಂತೆ. "ನಾನು ಆರೆಸ್ಸೆಸ್‌ನಲ್ಲಿ ಬೆಳೆದವಳು, ಪ್ರತಾಪಸಿಂಹ ಅವರ ಅಭಿಮಾನಿ" ಎಂದು ಬಹಿರಂಗವಾಗಿ ಹೇಳಿಕೊಳ್ಳುತ್ತಾಳೆಂದು ಅಲ್ಲಿನ ಆದಿವಾಸಿಗಳು ನೇರವಾಗಿ ದೂರುತ್ತಾರೆ.

ಡಿಸೆಂಬರ್ 7ರ ಬೆಳಗಿನ ಜಾವದ ಚಳಿಯಿಂದ ಆರಂಭವಾಗಿ ಇದುವರೆಗೂ ತಲೆಯ ಮೇಲೆ ಒಂದು ಸೂರೂ ಇಲ್ಲದೆ ಮಳೆ, ಚಳಿಗೆ ಬಿದ್ದಿದ್ದ ಆದಿವಾಸಿಗಳಿಗಾಗಿ ಈಕೆಯ ಹೃದಯ ಮಿಡಿಯಲೇ ಇಲ್ಲ; ಈಕೆಯ ಕಲ್ಲು ಹೃದಯ ಹಾಳಾಗಲಿ, ಕನಿಷ್ಠ ಕರ್ತವ್ಯ ಪ್ರಜ್ಞೆಯಿಂದ ಮೇಲಧಿಕಾರಿಗಳ ಆದೇಶವನ್ನಾದರೂ ಪಾಲಿಸಿದ್ದರೆ ಅಷ್ಟೋ ಇಷ್ಟೋ ಕೆಲಸ ಆಗುತ್ತಿತ್ತು, ಬದಲಿಗೆ ಆದಿವಾಸಿಗಳನ್ನು ಎತ್ತಂಗಡಿ ಮಾಡಲು ನಿರಂತರ ಷಡ್ಯಂತ್ರಗಳನ್ನು ಹೆಣೆಯುವಲ್ಲಿ ನಿರತಳಾಗಿದ್ದಾಳೆ. ಅಲ್ಲಿಗೆ ನಮ್ಮ ಬೊಕ್ಕಸದಿಂದ ಈಕೆಗೆ ಬಟವಾಡೆಯಾದ ಸಂಬಳ ಸಾರ್ಥಕವಾಯ್ತು. ಆದಿವಾಸಿಗಳು ಹಾಗೂ ಸಾಮಾಜಿಕ ಕಾರ್ಯಕರ್ತರ ಪ್ರಕಾರ ಕೊಡಗಿನ ಪ್ಲಾಂಟರುಗಳನ್ನೇ ಬೇಸ್ ಮಾಡಿಕೊಂಡಿರುವ ಸ್ಥಳೀಯ ಬಿಜೆಪಿ ರಾಜಕಾರಣಕ್ಕೆ ಮಾಯಾದೇವಿಯಂಥ ಅಧಿಕಾರಿಗಳು ಕಾಲಾಳುಗಳಂತೆ ಕೆಲಸ ಮಾಡುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಮಂತ್ರಿಗಳು, ಸಮಾಜ ಕಲ್ಯಾಣ ಸಚಿವರು, ಕಂದಾಯ ಸಚಿವರು - ಹೀಗೆ ಎಲ್ಲರೂ ಬೀದಿಪಾಲಾದ ಆದಿವಾಸಿಗಳಿಗೆ ತಕ್ಷಣ ತಾತ್ಕಾಲಿಕ ವಸತಿ ಮಾಡಲು ಹೇಳಿದರೆ ಈ ಮಾಯಾರೂಪಿಣಿ 577 ಕುಟುಂಬಗಳಿಗೆ ಕೇವಲ 200 ತಾಡಪಾಲುಗಳನ್ನು ತಂದುಕೊಟ್ಟು ಜನರ ನಡುವೆಯೇ ಕಚ್ಚಾಟ ಹಚ್ಚಲು ಹವಣಿಸಿದ್ದಾಳೆ. ಅಷ್ಟು ಮಾತ್ರವಲ್ಲದೆ, ತಾನು ಸೌಕರ್ಯ ಒದಗಿಸಿದರೆ ಆದಿವಾಸಿಗಳು ನಿರಾಕರಿಸುತ್ತಿದ್ದಾರೆಂದು ಮಾಧ್ಯಮಗಳಿಗೂ, ಮೇಲಧಿಕಾರಿಗಳೂ ದುರುದ್ದೇಶಪೂರ್ವಕ ತಪ್ಪು ಮಾಹಿತಿ ಕೊಡುತ್ತಾಳೆ. ಘಟನೆ ನಡೆದ ದಿನದಿಂದಲೂ ಸಂತ್ರಸ್ತರೆಲ್ಲರಿಗೂ ಊಟ, ನೀರು ಎಲ್ಲಾ ವ್ಯವಸ್ಥೆ ಮಾಡಿದ್ದೇವೆಂದು ಮೇಲಧಿಕಾರಿಗಳಿಗೆ ವರದಿ ಕೊಟ್ಟ ಈಕೆ ಆದಿವಾಸಿಗಳ ಬಳಿಬಂದು ಸದ್ಯಕ್ಕೆ ನಿಮ್ಮ ನಿಮ್ಮ ಕೂಲಿ ಲೈನ್ ಮನೆಗಳಿಗೆ ಹಿಂದಿರುಗಿ ಎಂದು ಫತ್ವಾ ಹೊರಡಿಸುತ್ತಾಳೆ. ಜನರು ಯಾವ ಕಾರಣಕ್ಕೂ ಮತ್ತೆ ಲೈನ್ ಮನೆಯ ನರಕಕ್ಕೆ ಹೋಗುವುದಿಲ್ಲವೆಂದು ಪಟ್ಟು ಹಿಡಿದರೆ, ನಿಮಗೆ ಹೇಗೆ ಪಾಠ ಕಲಿಸಬೇಕು ಅಂತ ಗೊತ್ತು ಅಂತಾ ಹೇಳಿ ಇನ್ನೊಂದಿಷ್ಟು ಆದಿವಾಸಿಗಳನ್ನು ಸಂತ್ರಸ್ತರ ವಿರುದ್ಧ ಎತ್ತಿಕಟ್ಟುವ ನೀಚ ಕೆಲಸಕ್ಕೆ ಕೈಹಾಕುತ್ತಾಳೆ. 23ನೇ ತಾರೀಕಿನಂದು ಸಮಾಜ ಕಲ್ಯಾಣ ಸಚಿವರಾದ ಆಂಜನೇಯ ಮತ್ತು ಹಲವಾರು ಶಾಸಕರುಗಳ ತಂಡ ದಿಡ್ಡಳ್ಳಿಗೆ ಭೇಟಿ ನೀಡಿದ ಸಂದರ್ಭದಲ್ಲೂ ಬಿಜೆಪಿ ಪ್ರೇರಿತ ಕೆಲವು ವ್ಯಕ್ತಿಗಳನ್ನು ಗುಡ್ಡೆಹಾಕಿ ಸಂತ್ರಸ್ತ ಆದಿವಾಸಿಗಳ ಡಿಮ್ಯಾಂಡು ಮೂಲೆಗುಂಪಾಗಿಸಲು ವಿಫಲ ಪ್ರಯತ್ನ ನಡೆಸಿದ್ದಾಳೆ.

ಈ ಮಾಯಾದೇವಿಯ ಕಿರುಕುಳದಿಂದ ಬೇಸತ್ತ ಆದಿವಾಸಿಗಳು ಸಚಿವ ಆಂಜನೇಯ ಮತ್ತು ತಂಡದವರ ಬಳಿ ನೇರವಾಗಿ ತಮ್ಮ ಗೋಳು ತೋಡಿಕೊಂಡು ಈ ಮಾಯಾರೂಪಿಣಿಯ ಕಿರುಕುಳದಿಂದ ತಮ್ಮನ್ನು ಪಾರು ಮಾಡುವಂತೆ ಬಹಿರಂಗವಾಗಿ ಮನವಿ ಮಾಡಿಕೊಂಡಿದ್ದಾರೆ. ರಾಜ್ಯ ಸರ್ಕಾರ ಈ ಪ್ಲಾಂಟರ್ ಏಜೆಂಟ್ ಪರವಾಗಿ ನಿಲ್ಲುತ್ತದೋ ಅಥವಾ ಆದಿವಾಸಿಗಳ ಹಿತಕಾಯುತ್ತದೋ ಕಾಲವೇ ಹೇಳಬೇಕು.



ಅಧಿಕಾರಿಗಳಿಗೆ ಎಷ್ಟು ನಾಲಗೆ?!

ಈ ಇಡೀ ಪ್ರಕರಣದಲ್ಲಿ ಎದ್ದು ಕಾಣುವ ಒಂದು ಅಂಶವೆಂದರೆ ಅಧಿಕಾರಿಗಳು ಗಳಿಗೆಗೊಮ್ಮೆ ಬಣ್ಣ ಬದಲಾಯಿಸುತ್ತಿರುವುದು!!

ದಿಡ್ಡಳ್ಳಿ ಸರ್ವೆ ನಂಬರ್ 106/7ಎ ನಲ್ಲಿರುವ ಜಮೀನು ರೆವಿನ್ಯೂ ದಾಖಲೆ - ಆರ್‌ಟಿಸಿ ಪ್ರಕಾರ 'ಅರಣ್ಯ ಪೈಸಾರಿ' ಎಂದಿದೆ. ಹಿರಿಯ ವಕೀಲರಾದ ಎ.ಕೆ.ಸುಬ್ಬಯ್ಯನವರು ವಿವರಿಸುವಂತೆ ಈ ಪೈಸಾರಿ ಭೂಮಿಯನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಅಥವ ಭೂಹೀನರಿಗೆ ಹಂಚಿಕೆ ಮಾಡುವ ಉದ್ದೇಶಕ್ಕಾಗಿ ಬಳಕೆ ಮಾಡಬಹುದು. ವಾಸ್ತವ ಹೀಗಿದ್ದರೂ ಇದು ಮೀಸಲು ಅರಣ್ಯ ಇದನ್ನು ಹಂಚಿಕೆ ಮಾಡಲು ಸಾಧ್ಯವಿಲ್ಲವೆಂದು ಹೊಸವರಸೆ ಶುರು ಮಾಡಿಕೊಂಡಿದ್ದಾರೆ ಅಧಿಕಾರಿಗಳು.

ಆದಿವಾಸಿಗಳ ಪ್ರಶ್ನೆ ಇಷ್ಟೆ: "ಹಾಗಿದ್ದರೆ ಇದೇ ಸರ್ವೆ ನಂಬರ್‌ನಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಿಸಲಾಗಿದೆ. ಅದು ಹೇಗೆ ಸಾಧ್ಯವಾಯ್ತು? ಅಲ್ಲೇ ಆಜುಬಾಜಿನಲ್ಲಿ ಪ್ಲಾಂಟರುಗಳು ನೂರಾರು ಎಕರೆ ಒತ್ತುವರಿ ಮಾಡಿ ಶುಂಠಿ, ಕಾಫಿ ಹಾಕಿದ್ದಾರೆ. ಹೇಗೆ ಸಾಧ್ಯವಾಯ್ತು?"

ಅದೆಲ್ಲಾ ಹೋಗಲಿ; ಕೆಲವು ತಿಂಗಳುಗಳ ಹಿಂದೆ ಇದೇ ಜಿಲ್ಲಾಧಿಕಾರಿ ದಿಡ್ಡಳ್ಳಿಯಲ್ಲಿ ಕಾನೂನು ಅರಿವು ಶಿಬಿರವೊಂದನ್ನು ಏರ್ಪಡಿಸಿದ್ದರು. ಆಗ "ನಿಮಗೆ ಮನೆ, ನೀರು, ಶೌಚಾಲಯ ಮುಂತಾದ ನಾಗರಿಕ ಸೌಲಭ್ಯಗಳನ್ನು ಒದಗಿಸುತ್ತೇವೆ. ಹಕ್ಕುಪತ್ರ ಕೊಡಿಸುತ್ತೇವೆ. ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿ, ಜೀವನದಲ್ಲಿ ಮುಂದೆ ಬನ್ನಿ" ಎಂದು ಉಪದೇಶದ ಭಾಷಣ ಮಾಡಿದ್ದರು. ಇದು ಪತ್ರಿಕೆಗಳಲ್ಲಿ ವರದಿಯೂ ಆಗಿತ್ತು. ತಮಾಷೆಯೆಂದರೆ ಇದೇ ಜಿಲ್ಲಾಧಿಕಾರಿಯವರು ಭೇಟಿಯಾದ ಹೋರಾಟಗಾರರ ತಂಡದೊಂದಿಗೆ ಮಾತಾಡುತ್ತಾ "ನಾನು ದಿಡ್ಡಳ್ಳಿಗೆ ಬಂದೇ ಇಲ್ಲ, ಅಂತಹ ಭರವಸೆ ಕೊಟ್ಟೇ ಇಲ್ಲ" ಅಂದುಬಿಡಬೇಕೆ? ಅಲ್ಲೇ ಇದ್ದ ಆದಿವಾಸಿ ಯುವಕನೊಬ್ಬ ಅಂದು ಪ್ರಕಟವಾಗಿದ್ದ ಪತ್ರಿಕೆಯ ವರದಿಯನ್ನು ಮುಖಕ್ಕೆ ಹಿಡಿದಾಗ ಡಿಸಿ ಬಾಯಿ ಮುಚ್ಚಿಕೊಂಡು ಬೆಪ್ಪನಾಗಿ ಕುಳಿತರಂತೆ.

ದೊರೆಸ್ವಾಮಿಯವರ ನೇತೃತ್ವದಲ್ಲಿ ಹೋರಾಟಗಾರರ ನಿಯೋಗವೊಂದು ದಿನಾಂಕ 22ರಂದು ಸಚಿವ ಎಂ.ಆರ್.ಸೀತಾರಾಂ ಮತ್ತು ಇಲಾಖಾ ಕಾರ್ಯದರ್ಶಿ ಮಣಿವಣ್ಣನ್ ಅವರನ್ನು ಭೇಟಿಯಾದಾಗ ಅಲ್ಲಿ ಸಿಕ್ಕಿದ ಮಾಹಿತಿಯೇನೆಂದರೆ ಶ್ರೀಮತಿ ಮಾಯಾ ಗಲಗಲಿ ಆದಿವಾಸಿಗಳಿಗೆ ತಾತ್ಕಾಲಿಕ ವಸತಿ, ನೀರು, ಊಟ ಮುಂತಾದ ವ್ಯವಸ್ಥೆಗಳನ್ನು ಮಾಡಿದ್ದಾರೆ ಎಂಬುದು. ಅಂತಹ ಮಾಹಿತಿಯನ್ನು ಆ ಎರಡು ನಾಲಗೆಯವರು ಬೆಂಗಳೂರಿಗೆ ರವಾನಿಸಿದ್ದರು. ಆದರೆ ಇದೇ ಅಧಿಕಾರಿಣಿ ಮಡಿಕೇರಿಯಲ್ಲಿ ಭೇಟಿಯಾದ ಹೋರಾಟಗಾರರು ಮತ್ತು ಆದಿವಾಸಿಗಳಿಗೆ ಹೇಳುತ್ತಿದ್ದದ್ದೇ ಬೇರೆ. "ನಮ್ಮಲ್ಲಿ ಹಣ ಇಲ್ಲ, ನಿಮಗೆ ಇಲ್ಲಿ ವ್ಯವಸ್ಥೆ ಮಾಡಲು ಕಾನೂನು ಮಾನ್ಯತೆ ಇಲ್ಲ, ಮೊದಲು ಜಾಗ ಖಾಲಿ ಮಾಡಿ ಲೈನ್‌ಗಳಿಗೆ ಹಿಂತಿರುಗಿ" ಎಂದು.

ಪ್ರತಿ ಗುಡಿಸಲಿನಿಂದ ವಾರಕ್ಕೆ ನೂರು ರೂಪಾಯಿ ಹಫ್ತಾ ವಸೂಲಿ ಮಾಡುತ್ತಿದ್ದ ಅರಣ್ಯಾಧಿಕಾರಿ ಗೋಪಾಲ್ ಆದಿವಾಸಿಗಳಿಗೆ ಆರು ತಿಂಗಳ ಕಾಲ ಅಭಯ ಹಸ್ತ ನೀಡಿದ್ದರು. ಕೂಲಿಯ ಕೊರತೆಯಿಂದ ಹಫ್ತಾ ಯಾವಾಗ ನಿಂತು ಹೋಯ್ತೋ ಆಗ ಪ್ಲಾಂಟರ್ ಷಡ್ಯಂತ್ರದೊಂದಿಗೆ ಸೇರಿ 'ಆಪರೇಷನ್ ಬ್ಯಾಕ್ ಟು ಲೈನ್ಸ್'ಗೆ ಇಳಿದು ಪ್ಲಾಂಟರ್‌ಗಳ ಕೃಪೆಗೆ ಪಾತ್ರರಾಗಿ ಕೃತಾರ್ಥರಾದರು.

ಆಕ್ರೋಶ ಮತ್ತು ಅಸಹಾಯಕತೆಯಿಂದ ಗೊಂಡ ಆದಿವಾಸಿ ಮುತ್ತಮ್ಮ ಮತ್ತು ಸ್ವಾಮಿ ವವರು ಬೆತ್ತಲಾಗಿ ಪ್ರತಿಭಟಿಸಿದರು. ಮರುದಿನದ ಲ್ಲಿ 'ಅರಣ್ಯ ಒತ್ತುವರಿ ತೆರವು - ಆದಿವಾಸಿಗಳಿಂದ ಪ್ರತಿಭಟನೆ' ಎಂಬ ಸುದ್ದಿಗಳೂ ಪ್ರಕಟವಾದವು. ಷ್ಟೆಲ್ಲಾ ಯಾಕಾಗಿ? ಗುಡಿಸಲು ಕೀಳಲು ಜೆಸಿಬಿ ಗಳ ಅವಶ್ಯಕತೆ ಏನಿತ್ತು? ರಾತ್ರೋರಾತ್ರಿ ದಾಳಿಯ ತೆ ಏನಿತ್ತು? ಉದ್ದೇಶ ಸ್ಪಷ್ಟ. ಇದು 'ಆಪರೇಷನ್ ಟು ಲೈನ್ಸ್' ಆಗಿತ್ತು.


ಾಲ್ಲೋ ದೇವ್ರುಗಿಂತ ಕಾಯೋ ದೇವ್ರು ನಂತೆ! ಈ ದೌರ್ಜನ್ಯದ ಸುದ್ದಿ ಹೇಗೋ ಕೊಡಗಿನ ರ ಚಿಂತಕರೂ ಹೋರಾಟಗಾರರೂ ಆದ ಬ್ಬಯ್ಯನವರ ಕಿವಿಗೆ ಬಿತ್ತು. ಸಹಜ ಮಾನವೀಯ ದ ಆ ಹೃದಯ ಸುದ್ದಿ ತಿಳಿದ ಕೂಡಲೇ ದಿಡ್ಡಳ್ಳಿಗೆ ತು. ಅಂದು 10ನೇ ತಾರೀಕು ರಾತ್ರಿ. ಅಲ್ಲಿಗೆ ಈ ೋರ ದೌರ್ಜನ್ಯ ನಡೆದು 3 ದಿನಗಳು ಹೋಗಿದ್ದವು. ಆಗ ವಾರ್ದಾ ಚಂಡಮಾರುತ ವಾಗಿದ್ದರಿಂದ ಮಳೆ ಸುರಿಯುತ್ತಿತ್ತು. ಆದರೂ ಯು ಸಂತ್ರಸ್ತ ಆದಿವಾಸಿಗಳು ಚಳಿಯೆನ್ನದೇ, ನ್ನದೇ ಧರಣಿ ಕೂತುಬಿಟ್ಟಿದ್ದರು. ಪೊಲೀಸರು ಅರಣ್ಯ ಇಲಾಖೆಯವರು ಬಂಧಿಸಿರುವ ತಮ್ಮ ಡರಾದ ಮುತ್ತಮ್ಮ ಮತ್ತು ಅಪ್ಪಾಜಿಯವರನ್ನು ಡೆಗೊಳಿಸುವವರೆಗೂ ನಾವು ಯಾವುದೇ ಿಯ ಮಾತು ಕೇಳುವುದಿಲ್ಲ. ನಾವು ಮತ್ತೆ ಲೈನ್ ಜೀತಕ್ಕೆ ವಾಪಸ್ ಹೋಗುವುದಿಲ್ಲ, ಸಾಯಲಿ ಇಲ್ಲೇ ಇರುತ್ತೇವೆ ಎಂಬುದು ಅವರ ಒಕ್ಕೊರಲಿನ ಈ ಸ್ಥಿತಿಯನ್ನು ಕಣ್ಣಾರೆ ಕಂಡು, ಇದರ ಹಿನ್ನೆಲೆಯನ್ನು ಾಗಿ ತಿಳಿದುಕೊಂಡ ನಂತರ ಸುಬ್ಬಯ್ಯನವರು ಮತ್ತು ವಸತಿ ಹಕ್ಕು ಹೋರಾಟ ಸಮಿತಿ'ಯ ನೆ ನಾಗರಾಜ್ ಮತ್ತು ನೂರ್ ಶ್ರೀಧರ್ ದವರನ್ನು ಸಂಪರ್ಕಿಸಿ, ಈ ಘೋರ ಅನ್ಯಾಯವನ್ನು ಕೊಡಗಿನ ಆದಿವಾಸಿಗಳ ರಕ್ಷಣೆಗೆ ಬರಬೇಕೆಂದು ಮಾಡಿದರು.

ರುದಿನ ಬೆಂಗಳೂರಿನಲ್ಲಿ ಸೇರಿದ ಸಮಿತಿ ಸಭೆಯಲ್ಲಿ ರು ಮಂದಿ ಆದಿವಾಸಿಗಳ ತಂಡ ಖುದ್ದಾಗಿ ಿಸಿ, ಹೋರಾಟ ಸಮಿತಿಯ ಮುಖಂಡರಿಗೆ ತಮ್ಮ ನ್ನು ವಿವರಿಸಿದರು. ಸ್ವಾತಂತ್ರ ಹೋರಾಟಗಾರರಾದ ದೊರೆಸ್ವಾಮಿಯವರ ನೇತೃತ್ವದ ಸಭೆ ಆದಿವಾಸಿಗಳಿಗಾಗಿರುವ ಅನ್ಯಾಯದ ವಿರುದ್ಧ ಹೋರಾಟವನ್ನು ಮುಂದುವರೆಸುವ ಒಕ್ಕೊರಲಿನ ತೀರ್ಮಾನ ಕೈಗೊಂಡಿತು.

ಕೊಡಗಿನ ಚರಿತ್ರೆಗೆ ಹೊಸಪುಟಗಳು

ಸಮಿತಿಯ ತೀರ್ಮಾನದಂತೆ ಕೊಡಗಿನವರೇ ಆದ ಕರ್ನಾಟಕ ರೈತ ಸಂಘಟನೆಯ ಮುಖಂಡ ನಿರ್ವಾಣಪ್ಪನವರು ಕೂಡಲೇ ದಿಡ್ಡಳ್ಳಿಗೆ ತೆರಳಿ ಆದಿವಾಸಿಗಳಿಗೆ ಧೈರ್ಯ ತುಂಬಿ ಆದಿವಾಸಿಗಳ ಹೋರಾಟದೊಂದಿಗೆ ಸೇರ್ಪಡೆಯಾದರು. ಮರುದಿನವೇ ಸಿರಿಮನೆ ನಾಗರಾಜ್‌ರನ್ನೂ ಒಳಗೊಂಡು ಒಟ್ಟು 6 ಜನರು ಬೆಂಗಳೂರು ಮುಂತಾದ ಊರುಗಳಿಂದ ಹೊರಟು ದಿಡ್ಡಳ್ಳಿ ಸೇರಿದರು. ಹಿರಿಯರಾದ ದೊರೆಸ್ವಾಮಿಯವರೂ ದಿಡ್ಡಳ್ಳಿಗೆ ಭೇಟಿ ಕೊಟ್ಟರು. ಸ್ಥಳೀಯ ಮಾನವ ಹಕ್ಕು ಹೋರಾಟಗಾರ ವಸಂತ್, ಜಿಲ್ಲಾ ಪಂಚಾಯತ್‌ನ ಮಾಜಿ ಉಪಾಧ್ಯಕ್ಷೆಯಾಗಿದ್ದ ಕಾವೇರಿ, ವಕೀಲರಾದ ವಿದ್ಯಾಧರ್, ಎಸ್‌ಡಿಪಿಐ ಸಂಘಟನೆಯ ಮುಖಂಡ ಹಾಗೂ ಯುವ ವಕೀಲ ಅಸಿಮ್ ಮೊಹಿಸಿನ್ ಮುಂತಾದವರು ಈ ಚಾರಿತ್ರಿಕ ಹೋರಾಟ ಧಾರೆಗೆ ಸೇರಿಕೊಂಡರು.

ಯುವನಟ ಚೇತನ್ ದಿಡ್ಡಳ್ಳಿಗೆ ತೆರಳಿ ಆದಿವಾಸಿಗಳ ಜೋಪಡಿಯಲ್ಲೇ ತಂಗಿದ್ದು ಹೋರಾಟಕ್ಕೆ ಹೊಸ ಚೈತನ್ಯ ತುಂಬಿದಂತಾಯ್ತು. ಬೆಂಗಳೂರು, ಮೈಸೂರು, ಮಂಡ್ಯ ಹಾಸನ, ಮಂಗಳೂರು ಮಂತಾದ ಹತ್ತಾರು ಊರುಗಳಿಂದ 50 ಕ್ಕೂ ಹೆಚ್ಚು ಸಂಘಟನೆಗಳ ಕಾರ್ಯಕರ್ತರು ದಿಡ್ಡಳ್ಳಿಯಲ್ಲೇ ನೆಲೆ ನಿಂತರು. 18 ನೇ ತಾರೀಕಿನಂದು ಅದೇ ಹಳ್ಳಿಯಲ್ಲಿ ಸಂಕಲ್ಪ ದಿನ ಆಚರಣೆ ಮಾಡಿದ ಹೋರಾಟಗಾರರು ಆದಿವಾಸಿಗಳಿಗೆ ನ್ಯಾಯ ದೊರಕುವವರೆಗೂ ದಿಡ್ಡಳ್ಳಿ ಬಿಟ್ಟು ಕದಲುವುದಿಲ್ಲವೆಂದು ಪ್ರತಿಜ್ಞೆ ಮಾಡಿದರು. ಜಿಲ್ಲಾಧಿಕಾರಿ ಕಚೇರಿ ಮುಂದೆ ನಡೆದ ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಬಡಗಲಪುರ ನಾಗೇಂದ್ರರ



ನೇತೃತ್ವದಲ್ಲಿ ರೈತ ಮುಖಂಡರು ಕೂಡ ಪಾಲ್ಗೊಂಡರು.

ಹೋರಾಟವನ್ನು ವಿಸ್ತರಿಸಿ ರಾಜ್ಯದ ಗಮನ ಸೆಳೆಯುವ ಉದ್ದೇಶದಿಂದ ದಿನಾಂಕ 23ರಂದು 'ಚಲೋ ಮಡಿಕೇರಿ' ಕಾರ್ಯಕ್ರಮ ಸಂಘಟಿಸುವುದಾಗಿ ಹೋರಾಟ ಸಮಿತಿ ಘೋಷಿಸಿತು.

ಅನಾದಿಯಿಂದ ನಡೆದುಬಂದಂತೆ ತಮ್ಮದೇ ಶಾಸಕ, ಸಂಸದರುಗಳ ಬೆಂಬಲದಿಂದ, ಭ್ರಷ್ಟ ಅಧಿಕಾರಿಗಳ ಶಾಮೀಲಿನೊಂದಿಗೆ ಯಥಾಪ್ರಕಾರ ರಾಜ್ಯಭಾರ ನಡೆಸಬಹುದೆಂದುಕೊಂಡಿದ್ದ ಇಲ್ಲಿನ ಕೆಲವು ಬಿಜೆಪಿ - ಪ್ಲಾಂಟರುಗಳ ದುಷ್ಟಕೂಟಕ್ಕೆ ಪರಿಸ್ಥಿತಿ ಇಂತಹ ತಿರುವು ಪಡೆದುಕೊಳ್ಳುತ್ತದೆ ಎಂಬ ಕನಿಷ್ಟ ನಿರೀಕ್ಷೆಯೂ ಇರಲಿಲ್ಲ. ತಮ್ಮ ಕಾಲಬುಡದ ನೆಲದ ಅದುರುತ್ತಿದೆಯೆಂಬುದನ್ನು ಗ್ರಹಿಸಿದ ಅವರು ಮತ್ತೆ ಅಧಿಕಾರಿಗಳನ್ನು ಮುಂದಿಟ್ಟುಕೊಂಡು ಬೇರೆಯದೇ ರೀತಿಯ ಷಡ್ಯಂತ್ರ ಹೆಣೆದುಬಿಟ್ಟರು.

ಮೊದಲ ಷಡ್ಯಂತ್ರ 'ಆಪರೇಷನ್ ಬ್ಯಾಕ್ ಟು ಲೈನ್ಸ್' ಆಗಿತ್ತು. ಎರಡನೇ ಷಡ್ಯಂತ್ರ ಆದಿವಾಸಿಗಳನ್ನು ಏಕಾಂಗಿಯಾಗಿಸುವುದು. ಅದಕ್ಕಾಗಿ ದಿಡ್ಡಳ್ಳಿಯನ್ನೂ ಒಳಗೊಂಡು ಚನ್ನನಾಯಕನಹಳ್ಳಿ ಮತ್ತು ಮಾಲ್ದಾರೆ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ 144ನೇ ಸೆಕ್ಷನ್ ಜಾರಿಗೊಳಿಸುವುದು; ದಿಡ್ಡಳ್ಳಿಯ ಆದಿವಾಸಿಗಳನ್ನು ಹೊರತುಪಡಿಸಿ ಇತರೆ ಊರುಗಳಿಂದ ಬಂದಿರುವವರನ್ನು ಅಂದರೆ ಅವರ ಪ್ರಕಾರ 'ಹೊರಗಿನವರನ್ನು' ಬರದಂತೆ ನಿಷೇಧಿಸುವುದು. ಈ ಷಡ್ಯಂತ್ರ ಎಲ್ಲಿ, ಹೇಗೆ ತಯಾರಾಯಿತೋ ಗೊತ್ತಿಲ್ಲ. ಆದರೆ ಅದನ್ನು ಜೀ ಹುಜೂರ್ ಅಂತ ಜಾರಿ ಮಾಡಿದವರಂತೂ ಕೊಡಗಿನ ಜಿಲ್ಲಾಧಿಕಾರಿ ಶ್ರೀ ಶ್ರೀ ವಿನ್ಸೆಂಟ್ ಡಿಸೋಜ ಮತ್ತು ಪ್ಲಾಂಟರ್‌ಗಳ ಕಾನೂನನ್ನು ಜಾರಿ ಮಾಡಲಿಕ್ಕೆಂದೇ ತನ್ನ ಕರ್ತವ್ಯ ಮೀಸಲು ಎಂಬಂತೆ ವರ್ತಿಸುತ್ತಿರುವ ಜಿಲ್ಲಾ ಉಸ್ತುವಾರಿ ಪೊಲೀಸ್ ಎಸ್.ಪಿ. ಶ್ರೀಮಾನ್ ಮುತ್ತುರಾಜ್. ಕಾನೂನಿನ ಹೆಸರಿನಲ್ಲಿ ಜನರ ಮೇಲೆ ಹೇರಲಾದ ತಮ್ಮ ಅಪ್ರಜಾತಾಂತ್ರಿಕ, ಕೀಳುಕೃತ್ಯವನ್ನು ಮರೆಮಾಚಿಕೊಳ್ಳಲು ಈ ದುಷ್ಟಕೂಟ ಮತ್ತಷ್ಟು ಕೀಳುಮಟ್ಟಕ್ಕೆ ಇಳಿಯಿತು. 'ಕೇರಳದಿಂದ ನಕ್ಸಲೀಯರ ತಂಡವೊಂದು ಇತ್ತಕಡೆಗೆ ಬರುತ್ತಿದೆ' ಎಂದು ಬೇಹುಗಾರಿಕೆಯ ಮಾಹಿತಿ ಬಂದಿದೆ ಎಂಬ ಹಸಿಹಸಿ ಸುಳ್ಳನ್ನು ಪ್ರಚಾರ ಮಾಡಿದರು.

ಆದರೆ ವಾಸ್ತವ ಹೇಗಿತ್ತು ನೋಡಿ. ದಿನಾಂಕ 23 ನೇ ತಾರೀಕು ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಮೈಸೂರು ವಲಯ ಐಜಿಪಿ ಶ್ರೀ ಬಿ.ಕೆ.ಸಿಂಗ್ ಅವರು 'ನಮಗಿರುವ ಮಾಹಿತಿ ಪ್ರಕಾರ ಇಲ್ಲಿ ಯಾವ ನಕ್ಸಲೀಯರೂ ಇಲ್ಲ' ಎಂದು ಖಡಾಖಂಡಿತವಾಗಿ ಹೇಳಿದ್ದು, ಆ ವಿಡಿಯೋ ತುಣುಕು ಸಾಮಾಜಿಕ ಜಾಲತಾಣದಲ್ಲಿ ಸಂಚಲನವನ್ನೇ ಮೂಡಿಸಿತ್ತು. ಹಾಗಿದ್ದಲ್ಲಿ ಐಜಿಪಿಯವರಿಗೆ ಸಿಗದಿದ್ದ ಮಹತ್ವದ ನಕ್ಸಲೀಯರ ಮಾಹಿತಿ ಈ ಎಸ್‌ಪಿ / ಡಿಸಿಗೆ ಒದಗಿಸಿದವರ್‍ಯಾರು?

ಹೀಗೆ ಆದಿವಾಸಿಗಳನ್ನು ಹೋರಾಟಗಾರರನ್ನು ಬೇರ್ಪಡಿಸಲು ಷಡ್ಯಂತ್ರ ಹೆಣೆದ ಜಿಲ್ಲಾಡಳಿತ ರಾಜ್ಯಾದ್ಯಂತ ಮಡಿಕೇರಿ ಚಲೋಗೆ ಉತ್ತಮ ಸ್ಪಂದನೆ ದೊರೆಯುತ್ತಿದ್ದುದನ್ನು ಕಂಡು ಹೇಗಾದರೂ ಮಾಡಿ ಅದನ್ನು ಹಾಳುಗೆಡವಲು 22ನೇ ತಾರೀಕು ಮತ್ತೊಂದು ಹೊಸಪಟ್ಟು ಹಾಕಿತು. ಸಿರಿಮನೆ ನಾಗರಾಜ್, ನಿರ್ವಾಣಪ್ಪ ಮುಂತಾದ ಮುಖಂಡರನ್ನು ಕರೆಸಿಕೊಂಡ ಡಿಸಿ ಡಿಸೋಜ ಮತ್ತು ಎಸ್‌ಪಿ ಮುತ್ತುರಾಜ್ 'ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಆಗ್ತಿದೆ, ನಿಮಗೆ ರಕ್ಷಣೆ ಕೊಡಲು ಸಾಧ್ಯವಿಲ್ಲ, ನಮ್ಮಲ್ಲಿ ಸ್ಟಾಫ್ ಕೊರತೆಯಿದೆ, ಕಾರ್ಯಕ್ರಮ ಪೋಸ್ಟ್‌ಪೋನ್ ಮಾಡಿಕೊಳ್ಳಿ' ಎಂದು ಒತ್ತಡ ಹಾಕಿದರು. ಇವರ ದುಷ್ಟ ತಂತ್ರಕ್ಕೆ ಹೋರಾಟಗಾರರು ಬಗ್ಗದೇ ಕಾರ್ಯಕ್ರಮ ನಡೆಸೇ ತೀರುತ್ತೇವೆಂದು ಪಟ್ಟು ಹಿಡಿದಾಗ, ಅವರೇ ಕರೆದ ಸಭೆಯನ್ನು ಬಹಿಷ್ಕರಿಸಿ ಎದ್ದು ಹೊರಟುಹೋದರು.

ಮರುದಿನ 23ನೇ ತಾರೀಕು ನಡೆದದ್ದು ಕೊಡಗಿನ ಇತಿಹಾಸದಲ್ಲಿ ಹೊಸದೊಂದು ಅಧ್ಯಾಯ. ರಾಜ್ಯದ ದಶದಿಕ್ಕುಗಳಿಂದಲೂ ಬಂದ ಮಾನವೀಯ ಅಂತಃಕರಣವುಳ್ಳ ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಅಂದು ಮಡಿಕೇರಿ ನಗರದಲ್ಲಿ ಬೃಹತ್ ರ್‍ಯಾಲಿ ನಡೆಸಿದರು. ಈ ದೇಶದಲ್ಲಿ / ಕರುನಾಡಿನಲ್ಲಿ ಮಾನವೀಯತೆ ಇನ್ನೂ ಜೀವಂತವಿದೆ ಎಂಬುದನ್ನು ಕೊಡಗಿನಲ್ಲಿ ತಮ್ಮದೇ ರಿಪಬ್ಲಿಕ್ ಸ್ಥಾಪಿಸಿಕೊಂಡಿರುವ ದುಷ್ಟಶಕ್ತಿಗಳಿಗೆ ತೋರಿಸಿಕೊಟ್ಟರು. ಅಂದು ನಡೆದ ಬಹಿರಂಗ ಸಭೆಯಲ್ಲಿ ನೂರ್ ಶ್ರೀಧರ್, ಚಿತ್ರನಟ ಚೇತನ್, ಎ.ಕೆ.ಸುಬ್ಬಯ್ಯ ಮುಂತಾದವರು ಆದಿವಾಸಿಗಳ ಪರವಾಗಿ ಗಟ್ಟಿದನಿಯಲ್ಲಿ ಮಾತಾಡಿದರು. ವಿವಿಧ ಹಿನ್ನೆಲೆಯ ದಮನಿತ ಜನಸಮುದಾಯಗಳನ್ನು ಒಂದೆಡೆ ಸೇರಿಸಿದ ಈ ಹೋರಾಟ ಕೊಡಗಿನ ಚರಿತ್ರೆಯಲ್ಲಿ ವಿಶಿಷ್ಟವಾಗಿ ನಿಲ್ಲಲಿದೆ.

ಇಲ್ಲಿ ನಾವು ಗಮನಿಸಲೇಬೇಕಾದ ಒಂದು ಮಹತ್ವದ ಅಂಶವೊಂದಿದೆ. ಇಷ್ಟೆಲ್ಲಾ ದಮನಕಾರಿ ನೀತಿಗಳನ್ನು ಅಳವಡಿಸಿಕೊಂಡಿರುವ ಜಿಲ್ಲಾ ಆಡಳಿತ ರಾಜ್ಯ ಸರ್ಕಾರವನ್ನು ದಿಕ್ಕುತಪ್ಪಿಸುವ ಪ್ರಯತ್ನವನ್ನು ಅತ್ಯಂತ ಯಶಸ್ವಿಯಾಗಿ ಮಾಡಿಕೊಂಡುಬಂದಿದೆ. ವಿಧಾನಸೌಧದಿಂದ ಹೊರಟ ಆಜ್ಞೆಗಳನ್ನಾಗಲಿ, ತಮ್ಮ ಮೇಲಧಿಕಾರಿಗಳು ಕೊಟ್ಟ ಸೂಚನೆಗಳನ್ನಾಗಲಿ ಪಾಲಿಸದೆ ಕೊಡಗು ರಿಪಬ್ಲಿಕ್ ದುಷ್ಟಕೂಟದ ಕೈಗೊಂಬೆಗಳಂತೆ ವರ್ತಿಸುತ್ತಿದ್ದಾರೆ. ಸಚಿವ ಆಂಜನೇಯ ಅವರ ನಿರ್ದೇಶನವನ್ನಾಗಲಿ, ಪ್ರಿನ್ಸಿಪಾಲ್ ಸೆಕ್ರೆಟರಿ ಮಣಿವಣ್ಣನ್ ಅವರ ಆದೇಶವಾಗಲಿ ಇವರ ಪಾಲಿಗೆ ಕಾಲಕಸವೇ ಸರಿ. ಮೇಲ್‌ಸ್ತರಗಳಿಗೆ ಉತ್ತರಿಸಬೇಕಾಗಿ ಬಂದಾಗ ಏನೇನೋ ಸಬೂಬು ಹೇಳುವುದು, ಕಟ್ಟುಕತೆಗಳನ್ನು ಹೇಳಿ ದಿಕ್ಕು ತಪ್ಪಿಸುವುದೇ ಇವರ ಕಾಯಕವಾಗಿ ಬಿಟ್ಟಿದೆ. ಕನಿಷ್ಠ ಜಿಲ್ಲಾ ಉಸ್ತುವಾರಿ ಸಚಿವರಿಗಾದರೂ ಸೂಕ್ತ ಮಾಹಿತಿ ಕೊಡದೆ ತಮ್ಮ ರಿಪಬ್ಲಿಕ್ ಹಿತಾಸಕ್ತಿಗೆ ತಕ್ಕಂತೆ ಅಧಿಕಾರದ ದುರುಪಯೋಗ ನಡೆಯುತ್ತಿದೆ.

ಪ್ಲಾಂಟರುಗಳು ಹಾಗು ಬಿಜೆಪಿಯ ಸಂಸದ/ಶಾಸಕರುಗಳು ಹಾಕುವ ತಾಳಕ್ಕೆ ಕುಣಿಯುತ್ತಿರುವ ಇಂಥಾ ಅಧಿಕಾರಿಗಳಿಂದ ಪ್ರಜೆಗಳ ಸಂವಿಧಾನಬದ್ಧ ಹಕ್ಕುಗಳ ರಕ್ಷಣೆ ಸಾಧ್ಯವೆ? ಸ್ವತಂತ್ರ ಕೂಲಿಗಳಾಗಲು ಬಯಸುತ್ತಿರುವ ಅಮಾಯಕ ಆದಿವಾಸಿಗಳಿಗೆ ಲೈನ್ ಮನೆ ಜೀತದಿಂದ ಮುಕ್ತಿ ಸಿಗುತ್ತದೆಯೆ?

ರಾಜ್ಯದ ಮುಖ್ಯಮಂತ್ರಿ ಗಂಭೀರವಾಗಿ ಯೋಚಿಸಿ ಕಾರ್ಯಪ್ರವೃತ್ತರಾಗಬೇಕಿದೆ. ಈ ಕೊಡಗು ರಿಪಬ್ಲಿಕ್‌ನ್ನು ತಹಬಂದಿಗೆ ತಂದು ಕಾನೂನು ಆಡಳಿತವನ್ನು ಜಾರಿಗೆ ತರಬೇಕಾದರೆ ಎಲ್ಲಕ್ಕಿಂತ ಮೊದಲು ದುಷ್ಟಕೂಟದ ಭಾಗವಾಗಿರುವ ಅಧಿಕಾರಿಗಳ ತಪ್ಪು ಮಾಹಿತಿಗೆ ಕಿವಿಗೊಡುವುದನ್ನು ನಿಲ್ಲಿಸಿ, ಸ್ವತಂತ್ರವಾಗಿ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ ರಾಜಕೀಯ ಇಚ್ಛಾಶಕ್ತಿ ತೋರಬೇಕು. ತಪ್ಪಿತಸ್ಥ ಅಧಿಕಾರಿಗಳನ್ನು ಮೊದಲು ಎತ್ತಂಗಡಿ ಮಾಡಿ, ತನಿಖೆಗೆ ಒಳಪಡಿಸಬೇಕು. ಆದಿವಾಸಿಗಳಿಗೆ ಕೂಡಲೇ ಅನ್ನ, ನೀರು, ನೆಲ ಒದಗಿಸಲು ಕ್ರಮ ತೆಗೆದುಕೊಳ್ಳಬೇಕೆಂಬುದು ನಾಡಿನ ಎಲ್ಲ ಹೋರಾಟಗಾರರ ಒಕ್ಕೊರಲಿನ ಹಕ್ಕೊತ್ತಾಯವಾಗಿದೆ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ದೇಶಭಕ್ತರ ಪಂಚರಂಗಿ ಆಟ

ಿವಾಸಿಗಳ ಮೇಲೆ ಪೊಲೀಸ್-ಅರಣ್ಯಾಧಿಕಾರಿಗಳು ನಡೆಸಿದ ದಿನ ಶಾಸಕ ಕೆ.ಜಿ.ಬೋಪಯ್ಯ ದಿಡ್ಡಳ್ಳಿ ದಲ್ಲೇ ತಮ್ಮ ಫಾಲೋವರ್ ಒಬ್ಬರ ಗೃಹಪ್ರವೇಶಕ್ಕೆ ದ್ದರು. ತಮ್ಮ ಹಿಂಬಾಲಕರ ಅದ್ದೂರಿ ಆತಿಥ್ಯ ತೃಪ್ತನಾದ ನಂತರ ಹೇಗೂ ಮಾರ್ಗ ಮಧ್ಯದಲ್ಲೇ ದಿಡ್ಡಳ್ಳಿ, ಆದಿವಾಸಿಗಳ ಬಳಿಹೋಗಿ ನಾಲ್ಕು ಹೊಡೆದು ಬರೋಣ ಎಂದುಕೊಂಡು ಅತ್ತಕಡೆ ರು. ಆದರೆ ಮೂರೊಪ್ಪತ್ತೂ ಪ್ಲಾಂಟರ್‌ಗಳೊಡನೆ ಆಡುವ ಈ ಆಸಾಮಿಯ ಬಣ್ಣ ಗೊತ್ತಿದ್ದರಿಂದ ಆತನಿಗೆ ಛೀಮಾರಿ ಹಾಕಿ ಕಳಿಸಿದರು.

ತರ, ಸಂಸದ ಪ್ರತಾಪಸಿಂಹ ಅಖಾಡಕ್ಕಿಳಿದ. ರುಗಳಿಗೆ ಹೇಳಿಕೆ ನೀಡಿ "ದಿಡ್ಡಳ್ಳಿಯಲ್ಲಿ ಗುಡಿಸಲು ಂದಿರುವವರು ಕೊಡಗಿನವರು ಅಲ್ಲವೇ ಅಲ್ಲ; ಾ, ಅಸ್ಸಾಂ, ಬಂಗಾಳದಿಂದ ಬಂದಿರುವವರು, ದ ಅವರಿಗೆ ಯಾವುದೇ ಕಾರಣಕ್ಕೂ ನಿವೇಶನ, ಕೊಡಬಾರದು" ಎಂದು ತನ್ನ ನಿಜಬಣ್ಣ ತೋರಿಸಿ ಇದು ಆದಿವಾಸಿಗಳನ್ನು ಮತ್ತಷ್ಟು ಕೆರಳಿಸಿತ್ತು.

ಮಧ್ಯೆ ಸಚಿವರಾದ ಸೀತಾರಾಮ್ ದಿಡ್ಡಳ್ಳಿಗೆ ಭೇಟಿ ಸಮಸ್ಯೆಯನ್ನು ಬಗೆಹರಿಸುವ ಆಶ್ವಾಸನೆ ಕೊಟ್ಟು, ಗಳಿಗೆ ತಾತ್ಕಾಲಿಕ ವ್ಯವಸ್ಥೆ ಮಾಡಲು ನಿರ್ದೇಶನ ಹೋದರು.

ಗೆ ಆದಿವಾಸಿಗಳು, ದಲಿತರು, ಹಿಂದುಳಿದ ಹಾಗೂ ಅಲ್ಪ ಸಂಖ್ಯಾತರು - ಎಲ್ಲರ ಓಟುಗಳು ವಿರುದ್ಧ ತಿರುಗುತ್ತಿರುವುದರ ವಾಸನೆ ಹಿಡಿದ 20ನೇ ತಾರೀಕು ತಮ್ಮ ನಾಯಕ ಯಡ್ಡಿಯನ್ನು ಮುಂದಿಟ್ಟುಕೊಂಡು ಮೊಸಳೆ ಕಣ್ಣೀರು ನಾಟಕಕ್ಕೆ ದಿಡ್ಡಳ್ಳಿಗೆ ಹೋದರು. ಆದರೆ ಅಲ್ಲಿ ಅವರಿಗೆ ಮತ್ತೊಂದು ಮುಖಭಂಗ ಕಾದಿತ್ತು. ಯಡ್ಡಿಯ ಭಾಷಣ ಶುರುವಾಗುತ್ತಿದ್ದಂತೆ ಆದಿವಾಸಿಗಳು ಕೆಂಡಾಮಂಡಲವಾದರು. "ನಾವು ಅಸ್ಸಾಂನಿಂದ ಬಂದವರಾ? ಈ ನಾಟಕ ನಿಲ್ಲಿಸಿ" ಎಂದು ತರಾಟೆಗೆ ತೆಗೆದುಕೊಂಡರು. ಬಿಜೆಪಿ ಪಕ್ಷಕ್ಕೆ ಧಿಕ್ಕಾರ ಕೂಗಿದರು. ಇದರಿಂದ ವಿಚಲಿತರಾದ ಯಡ್ಡಿ "ನಿಮಗಾಗಿ ನಾನು ಬೆಂಗಳೂರಿನಲ್ಲಿ ಧರಣಿ ಸತ್ಯಾಗ್ರಹ ನಡೆಸುತ್ತೇನೆ. ಕೇಂದ್ರದ ಮೋದಿಯವರ ಬಳಿ ನಿಮ್ಮ ಸಮಸ್ಯೆಯ ಬಗ್ಗೆ ಚರ್ಚಿಸುತ್ತೇನೆ" ಎಂದು ಬಾಯಿಗೆ ಬಂದಿದ್ದು ಒದರಿ ಅಲ್ಲಿಂದ ಕಾಲ್ಕಿತ್ತರು.

ಕೊಡಗಿನ ರಾಜಕೀಯ ವಾತಾವರಣ ಸ್ಪಷ್ಟವಾಗಿ ಅವರ ವಿರುದ್ಧ ತಿರುಗುತ್ತಿರುವುದರ ಮುನ್ಸೂಚನೆ ಅರಿತ ಕೇಸರಿ ಪಡೆ ಅಂದು ರಾತ್ರಿ ನಿದ್ರೆಯೇ ಮಾಡಲಿಲ್ಲವಂತೆ. ಹೇಗಾದರೂ ಮಾಡಿ "ಹೊರಗಿನ" ಹೋರಾಟಗಾರರನ್ನು ಆದಿವಾಸಿಗಳಿಂದ ಪ್ರತ್ಯೇಕಗೊಳಿಸದ ಹೊರತು ತಮಗೆ ಉಳಿಗಾಲವಿಲ್ಲ ಎಂದು ತರ್ಕಿಸಿ, 144 ಸೆಕ್ಷನ್, ಹೊರಗಿನವರು ಬರಬಾರದು, ನಕ್ಸಲೀಯರ ಶಂಕೆ ಇತ್ಯಾದಿ ಭಾರೀ ಷಡ್ಯಂತ್ರವನ್ನೇ ಹೆಣೆದುಬಿಟ್ಟರು ಎಂಬುದು ಆದಿವಾಸಿ ಕಾರ್ಯಕರ್ತರ ಒಕ್ಕೊರಲ ಅಭಿಪ್ರಾಯ.

ವಿಪರ್‍ಯಾಸ ಏನು ಗೊತ್ತೆ? ರಾಜ್ಯದ ಕಾಂಗ್ರೆಸ್ ಸರ್ಕಾರ ಕೂಡ ಬಿಜೆಪಿಯ ದಾಳಕ್ಕೆ ಬಲಿಪಶುವಾಗಿರುವುದು. ಕಾಂಗ್ರೆಸ್ ಪಕ್ಷಕ್ಕೆ ಕುಪ್ಪಮಟ್ಟದ ರಾಜಕೀಯವೂ ಅರ್ಥವಾಗುತ್ತಿಲ್ಲವೆಂದರೆ ಅವರನ್ನು ಕಾಪಾಡಲು ಪರಬ್ರಹ್ಮರಿಂದಲೂ ಸಾಧ್ಯವಿಲ್ಲ.

ನೋಟು ರದ್ದತಿ: ಸಂಕಷ್ಟಗಳ ಒಂದಷ್ಟು ಚಿತ್ರಗಳು

ಉತ್ತರ ಪ್ರದೇಶದ ಭತ್ತ

ಭತ್ತ ಬೆಳೆದ ನೂರಾರು ರೈತರು ಅರ್ಧ ಭತ್ತ ಈ ನೋಟು ರದ್ಧತಿ ಮೊದಲೇ ಮಾರಿದ್ದರು. ಬೆಲೆಯೂ ಉತ್ತಮ ಇದ್ದ ಕಾರಣ ಆಶಾಭಾವನೆಯಲ್ಲೇ ಇದ್ದರು. ಆದರೆ ನೋಟು ರದ್ದಾಗಿದ್ದೇ ತಡ ಉಳಿಕೆ ಭತ್ತ ಮಾರುವುದೇ ದುಸ್ತರವಾಗಿದೆ. ಹಿಂಗಾರಿಗೆ ಗೋಧಿ ನಾಟಿ ಮಾಡಲು ಬೇಕಾದ ಗೊಬ್ಬರ, ಬೀಜ, ಟ್ರಾಕ್ಟರ್ ಬಾಡಿಗೆಗೆ ಕಾಸು ಹೊಂದಿಸುವುದು ಕಷ್ಟಕರವಾಗಿ ಪರಿಣಮಿಸಿದೆ. ಶಕ್ತಿಸಿಂಗ್ ನಂತಹ ರೈತನ ಬವಣೆ ಪ್ರಾತಿನಿಧಿಕವೆನ್ನಬಹುದು. ಈತ ಭತ್ತದ ಆದಾಯ ನಂಬಿಕೊಂಡು ಮನೆ ರಿಪೇರಿಗೆ ಕೈಹಾಕಿದ್ದ ಅದೂ ಈಗ ಅರ್ಧಕ್ಕೆ ನಿಂತಿದೆ. ಜೊತೆಗೇ ಮಕ್ಕಳಿಗೆ ಅನಾರೋಗ್ಯವೂ ಮೆಟ್ಟಿಕೊಂಡಿದೆ. ಬ್ಯಾಂಕಲ್ಲಿ ಅಷ್ಟಿಷ್ಟು ಕಾಸಿದ್ದರೂ ಅದನ್ನು ತೆಗೆಯಲು ಇನ್ನಿಲ್ಲದ ಕಷ್ಟ. ಕ್ಯೂನಲ್ಲಿ ನಿಲ್ಲಲು ತನ್ನ ಅಕ್ಕನನ್ನು ಎರಡೆರಡು ಬಾರಿ ಕಳಿಸಿದರೂ ಆಕೆಯ ಪಾಳಿ ಬರುವಾಗ ಕಾಸು ಮುಗಿದಿದೆ ಎಂದು ಬ್ಯಾಂಕ್ ಶಟರ್ ಎಳೆದು ಕೂತಿದ್ದರಿಂದ ದಿಗ್ಭ್ರಮೆಯ ಸ್ಥಿತಿಯಲ್ಲಿ ಇದ್ದಾನೆ ಈ ರೈತ. ತರಕಾರಿ ಬೆಳೆದ ರೈತರ ಪಾಡು ಇನ್ನೂ ಅಧ್ವಾನ. ಮೊದಲಾದರೆ ವ್ಯಾಪಾರಿಗಳು ಅಲ್ಲಲ್ಲೇ ನಗದು ನೀಡಿ ಲೆಕ್ಕ ಚುಕ್ತ ಮಾಡುತ್ತಿದ್ದರು. ಈಗ ಅವರಲ್ಲೂ ಹೊಸ ನೋಟುಗಳಿಲ್ಲ, ದಿಕ್ಕೆಟ್ಟ ರೈತರು ಸಿಕ್ಕಿದ ಬೆಲೆಗೆ ತರಕಾರಿ ಮಾರುತ್ತಿದ್ದಾರೆ.

ಬಾಬೂಲಾಲ್ ಸೈನಿ ಎಂಬ ರೈತ ಆರ್ಥಿಕ ಬಿಕ್ಕಟ್ಟಿನಿಂದಾಗಿ ಹೊಲದ ಅಂಚಲ್ಲಿ ಬೆಳೆದ 2 ಲಕ್ಷ ರೂಪಾಯಿ ಬೆಲೆಯ ಮರಗಳನ್ನು ಕೇವಲ 25 ಸಾವಿರಕ್ಕೆ ಮಾರಿದ್ದಾನೆ.


ಇತ್ತ ಕಾರ್ಮಿಕರ ಕಥೇ ಇದಕ್ಕಿಂತಲೂ ಘೋರ. ಇದೇ ಊರಿನ 50 ಕಾರ್ಮಿಕರು ಹತ್ತಿರದ ನಗರ ಫ್ಯಾಕ್ಟರಿಗಳಿಗೆ ಕೂಲಿಗೆ ಹೋಗುತ್ತಿದ್ದರು. ನೋಟು ರದ್ಧತಿ ಬಳಿಕ ಅಲ್ಲೂ ಕೆಲಸವಿಲ್ಲದೇ ಹಳ್ಳಿಯಲ್ಲೇ ಕೂರುವಂತಾಗಿದೆ. ಹಳ್ಳಿಯಲ್ಲೂ ಕೆಲಸವಿಲ್ಲ!!

ಸಹಾರನ್‌ಪುರದ ಇರ್ಶಾದ್ ಅಹ್ಮದ್ ತನ್ನ ಪುಟ್ಟ ಗಾರ್ಮೆಂಟ್ ಯೂನಿಟ್ಟಿನಲ್ಲಿ ಹತ್ತು ಮಂದಿಗೆ ಕೆಲಸ ಕೊಟ್ಟಿದ್ದ. ಈಗ ಅವರನ್ನೆಲ್ಲಾ ಮನೆಗೆ ಕಳಿಸಿದ್ದಾನೆ. ತಾನೇ ಇನ್ನೊಂದು ವಾರ ದುಡಿಯುವಷ್ಟು ಕೆಲಸ ಇದೆ ಅಷ್ಟೇ ಎನ್ನುತ್ತಾನೆ.

ಸಹಾರನ್‌ಪುರ ಮರದ ಕೆತ್ತನೆ ಕೆಲಸಕ್ಕೆ ಹೆಸರುವಾಸಿ. ಅಲ್ಲಿನ ಹತ್ತಾರು ಗುಡಿ ಕೈಗಾರಿಕೆಗಳು ನೋಟು ರದ್ದತಿ ಬಳಿಕ ಬಾಗಿಲೆಳೆದಿವೆ. ಖುರ್ಷಿದ್ ಅಹ್ಮದ್ ನಂತಹ ಮರದ ಕೆತ್ತನೆ ಕೈಗಾರಿಕೆ ಇಟ್ಟುಕೊಂಡವರು ನೋಟು ರದ್ಧತಿ ಮೊದಲು ಬಿರುಸಾದ ವಹಿವಾಟು ನಡೆಸಿದವರು. ಈಗ ಕೇವಲ ಶೇ. 10ರಷ್ಟು ಮಾತ್ರ ಕೆಲಸ ಇರುವುದು ಕಂಡು ಹೌಹಾರಿದ್ದಾರೆ. ಈ ಕೆತ್ತನೆ ಕೆಲಸಕ್ಕೆ ಬೇಕಾದ ಹತ್ತು ಹಲವು ಬಿಡಿಭಾಗಗಳು ಎಲ್ಲೆಲ್ಲಿಂದಲೋ ಬರಬೇಕು. ಈ ಸಪ್ಲೈ ಚೈನ್ ಪೂರಾ ಕುಸಿದು ಬಿದ್ದಿದೆ. ಇದರೊಂದಿಗೆ ಪುಡಿಗಾಸು ಪಡೆಯಲು ಗಂಟೆಗಟ್ಟಲೆ ಬ್ಯಾಂಕಲ್ಲಿ ನಿಲ್ಲುವುದರಲ್ಲೇ ದಿನಹೋಗುತ್ತಿದೆ.

ವಾರಣಾಸಿಯ ರೇಶ್ಮೆ

ಗಂಗೆ, ಸ್ನಾನಘಟ್ಟ, ಸಂಗೀತಗಳ ಸಮಾಗಮ ಈ ವಾರಣಾಸಿ. ಇದರೊಂದಿಗೇ ಬೆಸೆದುಕೊಂಡಿರುವ ಇನ್ನೊಂದು ಹೆಸರು ಇಲ್ಲಿನ ಬೆನಾರಾಸ್ ರೇಶ್ಮೆ. ವಾರಣಾಸಿಗೆ ಹೊಂದಿಕೊಂಡ ಚಿಕ್ಕಪುಟ್ಟ ಹಳ್ಳಿಗಳಲ್ಲೆಲ್ಲಾ ಈ ರೇಶ್ಮೆ ಉದ್ಯಮದ ಮಗ್ಗಗಳ ಕಲರವ. ವಾರಣಾಸಿಯ ಜಗದೀಶ್ ಶಾ ಗುಜರಾತಿನಿಂದ ಬಂದು ಬಲು ದೊಡ್ಡ ರೇಶ್ಮೆ



ವಹಿವಾಟು ಕಟ್ಟಿಕೊಂಡವರು. 'ಬನಾರಾಸ್ ವಸ್ತ್ರ ಉದ್ಯೋಗ ಸಂಘ್' ಎಂಬ ಉತ್ಪಾದಕರ ಸಂಘದ ಅಧ್ಯಕ್ಷ ಕೂಡಾ. ಕಳೆದ ಚುನಾವಣೆಯಲ್ಲಿ ಮೋದಿ ಪರವಾಗಿ ಕೈಬಿಚ್ಚಿ ಖರ್ಚು ಮಾಡಿದ ಮೊದಿ ಅಭಿಮಾನಿ. ತನ್ನ ಫೋನಿನ ಪರದೆಯ ಮೇಲೂ ಮೋದಿ ಜೊತೆಗೆ ನಿಂತಿರುವ ಫೋಟೋ ಅಂಟಿಸಿಕೊಂಡಿರುವಾತ.

ಈಗ ಶಾ ಅವರ ವ್ಯಾಪಾರ ಶೇ. 70ರಷ್ಟು ನೆಲ ಕಚ್ಚಿದೆ. ನೂರಾರು ಕಾರ್ಮಿಕರು ಉದ್ಯೋಗ ಕಳೆದುಕೊಂಡಿದ್ದಾರೆ. ಈ ಮಧ್ಯೆ ಸ್ವತಃ ಶಾ ತಮ್ಮ 70 ನೇಕಾರರಿಗೆ ಬ್ಯಾಂಕ್ ಖಾತೆ ಮಾಡಿಸಿಕೊಟ್ಟಿದ್ದಾರೆ. ಆದರೂ ಈ ನೇಕಾರರು "ನಮಗೆ ಈ ಬ್ಯಾಂಕು ವ್ಯವಹಾರ ಅರ್ಥವಾಗೋದಿಲ್ಲ" ಎಂದು ಅಲವತ್ತುಕೊಂಡು "ನಗದೇ ನೀಡಿ" ಅನ್ನುತ್ತಿದ್ದಾರಂತೆ. "ಅಧಿಕಾರಿಗಳು ಮೋದಿಯ ಹಾದಿ ತಪ್ಪಿಸಿದ್ದಾರೆ" ಎಂದು ಶಾ ಕೆಂಡ ಕಾರುತ್ತಾರೆ. ಮೋದಿ ಉದ್ದಿಶ್ಯಪೂರ್ವಕವಾಗಿ ತಪ್ಪು ಮಾಡಿರಲಾರರು ಎಂದು ಶಾ ನಿಡುಸುಯ್ಯುತ್ತಾರೆ.

ಒಬ್ಬ ನೇಕಾರ ಹೇಳಿದ್ದು ಸಾಂಕೇತಿಕ: "ಯಾರೋ ಒಬ್ಬ ಢೋಂಗೀ ವೈದ್ಯ ಅರಿವಳಿಕೆ ಇಲ್ಲದೇ ಆಪರೇಶನ್ ಮಾಡಿ, ಈಗ ಇಡೀ ದೇಶವೇ ಡಯಾಲಿಸಿಸ್‌ನಲ್ಲಿದೆ."

ಬನಾರಸ್ ರೇಶ್ಮೆಯ ದಾರ ದೂರದ ಬೆಂಗಳೂರು, ಕಲ್ಕತ್ತಾದಿಂದ ಬರಬೇಕು. ಅದಕ್ಕೆ ಬಣ್ಣ ಹಾಕಿ, ವಿನ್ಯಾಸಕ್ಕೆ ತಕ್ಕ ಹಾಗೆ ಹಾಸು ಹೊಕ್ಕು ಕೂರಿಸಿ.. ಇದೊಂದು ದೊಡ್ಡ ಒಂದಕ್ಕೊಂದು ಕೊಂಡಿಯ ಚಕ್ರ...

ವಾರಣಾಸಿಯ ಬಣ್ಣ ಹಾಕುವವರು ವಾರಕ್ಕೆ ಮೂರು ಸಾವಿರ ದುಡಿಯುತ್ತಿದ್ದರು. ಆದರೆ ಈ ನೋಟು ರದ್ದತಿ ಬಳಿಕ ಅವರು ನಗದು ಸಂಬಳ ಕಂಡಿಲ್ಲ. ಈಗ ಹೆಚ್ಚಿನ ಮಗ್ಗಗಳು ಸ್ತಬ್ಧವಾಗಿವೆ.

ದೆಹಲಿಯ ಕಾರ್ಮಿಕರು

ದೆಹಲಿಗೆ 30 ಕಿ.ಮೀ. ದೂರದ ನೋಯ್ಡಾ 2ನೇ ಹಂತದ ಮುಖ್ಯ ಬಸ್ ನಿಲ್ದಾಣದಲ್ಲಿ ಪ್ರತಿದಿನ ನೂರಾರು ಕಾರ್ಮಿಕರು ಜಮೆಯಾಗುತ್ತಾರೆ. ಊಟದ ಬಾಕ್ಸ್ ಬಿಟ್ಟರೆ ಬೇರೇನೂ ಇರಲ್ಲ ಅವರಲ್ಲಿ. ನೋಯ್ಡಾದ ಎಲ್ಲಾ ಕಾರ್ಖಾನೆಗಳಲ್ಲೂ 'ಕಾರ್ಮಿಕರು ಬೇಕಾಗಿದ್ದಾರೆ' ಎಂಬ ಬೋರ್ಡ್ ಸದಾ ನೇತು ಹಾಕಿರುತ್ತೆ ಟೈಲರ್‌ಗಳು, ಫಿನಿಶರ್ಸ್, ಇಸ್ತ್ರಿ ಹಾಕೋರು, ಪ್ಯಾಕರ್ಸ್ ಹೀಗೆ ಪಟ್ಟಿ ಇರುತ್ತೆ ಯಾಕೆಂದರೆ ಇವರ್‍ಯಾರೂ ಕಾಯಂ ನೌಕರರನ್ನು ಇಟ್ಟುಕೊಳ್ಳೋದಿಲ್ಲ, ಹೆಚ್ಚಿನವೆಲ್ಲಾ ಗಾರ್ಮೆಂಟ್ ಫ್ಯಾಕ್ಟರಿಗಳು. ಇಂಥಾ ಸುಮಾರು 200 ಫ್ಯಾಕ್ಟರಿಗಳು ನೋಯ್ಡಾ ಒಂದರಲ್ಲೇ ಇವೆ. ಇಲ್ಲಿ ಕೆಲಸ ಮಾಡೋರು ಏನಿಲ್ಲವೆಂದರೂ ದಿನಕ್ಕೆ ಐನೂರರಿಂದ ಸಾವಿರದವರೆಗೆ ದುಡಿಯುತ್ತಾರೆ. ನೋಟು ರದ್ದತಿ ಬಳಿಕ ಈ ಬೋರ್ಡ್‌ಗಳು ನಾಪತ್ತೆಯಾಗಿವೆ.

ಭಾರತದ ಶೇ. 92 ಕಾರ್ಮಿಕರು ಇಂತಹ ಅಸಂಘಟಿತ ವಲಯದಲ್ಲೇ ದುಡಿಯುತ್ತಿದ್ದಾರೆ. ಸುಮಾರು 70 ಲಕ್ಷ ಕಾರ್ಮಿಕರು ಗಾರ್ಮೆಂಟ್ ಉದ್ಯಮದಲ್ಲಿದ್ದಾರೆ. ಕೃಷಿ ಬಿಟ್ಟರೆ ಪ್ರಾಯಶಃ ಅತೀಹೆಚ್ಚು ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿರುವ ಕ್ಷೇತ್ರ ಇದು. ಇವರೆಲ್ಲಾ ಟೆಂಪರರಿ ಕೆಲಸಗಾರರೆಂದೇ ದಾಖಲೆಗಳಲ್ಲಿರೋದು. ಇವರ ಕೂಲಿ ಬಟವಾಡೆಯಾಗುವುದೂ ನಗದು ರೂಪದಲ್ಲೇ.

ಸಾಮಾನ್ಯವಾಗಿ ಗಾರ್ಮೆಂಟ್ ಫ್ಯಾಕ್ಟರಿಗಳಿಗೆ ನವೆಂಬರ್‌ನಿಂದ ಜನವರಿ ವರೆಗೆ ಪೀಕ್ ಸೀಸನ್. ಬೇಸಿಗೆಗೆ ಬೇಕಾದ ದಿರಿಸಿಗೆ ಬೇಡಿಕೆ ಇರುತ್ತದೆ. ಹೆಚ್ಚಿನವರಿಗೆ ಹದಿನೈದು ದಿನಗಳಿಗೊಮ್ಮೆ ಸಂಬಳ ನೀಡಲಾಗುತ್ತದೆ. ಈ ಬಾರಿ ಅದಕ್ಕೂ ಕತ್ತರಿ ಬಿದ್ದಿದೆ. "ನವೆಂಬರ್ ಹತ್ತರಿಂದ ನಮಗೆ ಕೆಲಸ ಸಿಕ್ಕಿಲ್ಲ, ಹಳೆ ಸಂಬಳ ಹಳೇ ನೋಟಲ್ಲಿ ಕೊಟ್ಟಿದ್ದಾರೆ. ಅದನ್ನು ಬದಲಾಯಿಸಲು ಕೆಲಸ ಬಿಟ್ಟು ಬ್ಯಾಂಕುಗಳಲ್ಲಿ ಇಡೀ ದಿನ ಕ್ಯೂ ನಿಲ್ಲಬೇಕು" ಎಂದು ಸಿಡಿಮಿಡಿಗೊಂಡ ಕಾರ್ಮಿಕರು ಹೇಳುತ್ತಿದ್ದಾರೆ. ಹೆಸರು ಹೇಳಲಿಚ್ಛಿಸದ ಉದ್ಯಮಿ ಪ್ರಕಾರ, ನವೆಂಬರ್-ಜನವರಿ



ಸಮಯದಲ್ಲಿ ಆತ 1500 ಕಾರ್ಮಿಕರನ್ನು ಬಳಸಿದ್ದು ಇದೆಯಂತೆ. ಇವರೆಲ್ಲಾ ಟೆಂಪರರೀನೇ. ಆದರೆ ಈ ಬಾರಿ ನೋಟು ರದ್ದತಿ ಬಳಿಕ ಕಾರ್ಮಿಕರ ಸಂಖ್ಯೆ 500ಕ್ಕಿಳಿದಿದೆ.

"ಕಾದು ನೋಡಬೇಕು, ಮೇಲಾಗಿ ನಗದು ಸಮಸ್ಯೆ ಮುಂದುವರಿದರೆ ಇನ್ನಷ್ಟು ಕೆಲಸ ಕಡಿತಗೊಳಿಸಬೇಕಷ್ಟೇ. ಇದೆಲ್ಲಾ ಒಂದಕ್ಕೊಂದು ಲಿಂಕ್ ಇರೊ ಉತ್ಪಾದನಾ ವ್ಯವಸ್ಥೆ ಒಂದು ಬಿದ್ದರೆ ಉಳಿದೆಲ್ಲವೂ ಬೀಳುತ್ತೆ" ಎನ್ನುತ್ತಾರೆ ಇನ್ನೊಬ್ಬ ಫ್ಯಾಕ್ಟರಿ ಮಾಲೀಕ.

ಹೆಚ್ಚಿನ ಈ ಕೆಲಸಗಾರರು ವಲಸೆ ಕಾರ್ಮಿಕರು; ಅರೆ ಕುಶಲಿಗಳು. ಉತ್ತರಪ್ರದೇಶ, ಬಿಹಾರಗಳ ದಾರಿದ್ರ್ಯ ತುಂಬಿರುವ ಗ್ರಾಮಾಂತರಗಳಿಂದ ಹೆಂಡಿರು ಮಕ್ಕಳನ್ನು ಅಲ್ಲೇ ಬಿಟ್ಟು ನಗರಕ್ಕೆ ಬಂದವರು. ನಗರಗಳ ಅಂಚಿನಲ್ಲಿರುವ ಹಳ್ಳಿಗಳಲ್ಲಿ ಪುಟ್ಟ ರೂಮು ಹಿಡಿದು ಅಲ್ಲಿಂದಲೇ ಫ್ಯಾಕ್ಟರಿ ಕೆಲಸಕ್ಕೆ ಒದ್ದಾಡುವವರು. ಹೆಚ್ಚಿನವರು ತಂತಮ್ಮ ಹಳ್ಳಿಗಳಿಗೆ ತೆರಳಿಯಾಗಿದೆ. ಉಳಿದವರೂ ಅಷ್ಟೇ. ಹೊರಡುವ ಸನ್ನಾಹದಲ್ಲಿದ್ದಾರೆ.

ಮಹಾರಾಷ್ಟ್ರದ ಈರುಳ್ಳಿ

ಮಹಾರಾಷ್ಟ್ರದ ನಾಶಿಕ್ ಜಿಲ್ಲೆಯ ಲಾಸತ್ ಗಾಂವ್ ಮತ್ತು ಪಿಂಪಲ್ ಗಾಂವ್‌ನ ಈರುಳ್ಳಿ ಮಂಡಿಗಳು ಮಹಾರಾಷ್ಟ್ರದ ಒಟ್ಟು ಆಂತರಿಕ ಉತ್ಪನ್ನದ ಶೇ.10ರ ಪಾಲು ಪಡೆದಿವೆ. ಲಾಸತ್ ಗಾಂವ್ ಅಂತೂ ಏಷ್ಯಾದ ಅತೀ ದೊಡ್ಡ ಈರುಳ್ಳಿ ಮಂಡಿಯೆಂದೇ ಪ್ರಖ್ಯಾತಿ ಪಡೆದಿದೆ. ನೋಟು ರದ್ಧತಿ ಬಳಿಕ ಈರುಳ್ಳಿ ಬೆಲೆ ಅರ್ಧಕ್ಕರ್ಧ ಇಳಿದಿದೆ. ರೂ. 1000-1200/ಕ್ವಿಂಟಾಲ್‌ಗೆ ಮಾರಾಟವಾಗುತ್ತಿದ್ದ ಈರುಳ್ಳಿ 600ಕ್ಕೆ ಇಳಿದಿದೆ. ಅದಕ್ಕಿಂತಲೂ ಘೋರವಾಗಿ ನೋಟು ರದ್ದತಿ ಬಳಿಕದ ಹತ್ತು ದಿನ ಇಲ್ಲಿ ಯಾವ ವಹಿವಾಟೂ ಇರಲಿಲ್ಲ, ಯಾಕೆಂದರೆ ಹೊಸ ನೋಟಿನ ಸರಬರಾಜೇ ಇರಲಿಲ್ಲ, ಹೋಗಲಿ, ಚೆಕ್ ಪಡೆದರೆ?

ಮಾದವ ರಾವ್ ಥೋರಟ್ ಎಂಬ ರೈತನಿಗೆ ಹತ್ತಿರದ ಬ್ಯಾಂಕು ಹತ್ತು ಕಿ.ಮೀ. ಎಟಿಎಂ ಬೇಕು ಅಂದರೆ 15 ಕಿ.ಮೀ. ಹೋಗಬೇಕು. ಕೂಲಿಕಾರರಿಗೆ ಸಂಬಳ ಕೊಡುವುದು ಈ ರೈತರಿಗೆ ಇನ್ನೂ ಸಾಧ್ಯವಾಗಿಲ್ಲ.

ಮಧ್ಯಪ್ರದೇಶದ ಹೂ

ಮಧ್ಯಪ್ರದೇಶದ ಇಂದೋರ್‌ನ ಸುತ್ತಮುತ್ತ ಹೂ ಬೆಳೆವ ರೈತರು ದಿಕ್ಕೆಟ್ಟಿದ್ದಾರೆ. ಸೇವಂತಿಗೆ, ಚೆಂಡು ಹೂವಿನ ಪೀಕು ನವೆಂಬರ್‌ದಿಂದ ಜನವರಿ ವರೆಗೆ. ಸಾಮಾನ್ಯವಾಗಿ ಇದು ಮದುವೆ ಸೀಸನ್ ಆಗಿರುವ ಕಾರಣ ನೂರಾರು ರೈತರು ಸೇವಂತಿಗೆ ಬೆಳೆಯುತ್ತಾರೆ. ಎಕರೆಗೆ 50 ಸಾವಿರ ವೆಚ್ಚ ಮಾಡಿದರೆ 10-12 ಕ್ವಿಂಟಾಲ್ ಇಳುವರಿ ಬರುತ್ತೆ, ಕ್ವಿಂಟಾಲ್‌ಗೆ 10-12 ಸಾವಿರ ಸಿಗುತ್ತೆ, ವಾರಕ್ಕೆ 2500 ಆದಾಯ ಗಳಿಸುತ್ತಿದ್ದ ರೈತರಿಗೆ ಈ ಬಾರಿ ನೋಟು ರದ್ದತಿ ಬಳಿಕ 500 ದೊರಕುವುದೇ ಕಷ್ಟವಾಗಿದೆ. ಹೆಚ್ಚಿನ ರೈತರು ಕಳೆದ ಒಂದು ತಿಂಗಳಲ್ಲಿ ಶೇ. 50-80ರ ವರೆಗೆ ನಷ್ಟ ಅನುಭವಿಸಿದ್ದಾರೆ. ಕೆಜಿಗೆ 35ರವರೆಗೂ ಮಾರಾಟವಾಗುತ್ತಿದ್ದ ಹೂವಿನ ಬೆಲೆ 7 ರೂಪಾಯಿಗೆ ಇಳಿದಿದೆ.

ಇನ್ನೂ ಹೂ ಬಿಡುವ ಕಾಲಾವಧಿ ಜನವರಿವರೆಗೆ ಇದ್ದರೂ ಹಲವಾರು ರೈತರು ರೋಸಿಹೋಗಿ ದಷ್ಟಪುಷ್ಟ ಗಿಡಗಳನ್ನು ಕಿತ್ತು ಹಾಕುತ್ತಿದ್ದಾರೆ.

ಪಂಜಾಬಿನ ಗಾರ್ಮೆಂಟ್ ಫ್ಯಾಕ್ಟರಿಗಳು

ಪಂಜಾಬಿನ ಗಾರ್ಮೆಂಟ್ ಫ್ಯಾಕ್ಟರಿಗಳು ಚಳಿಗಾಲದ ಮಾರುಕಟ್ಟೆ ಮೇಲೆಯೇ ನಿಂತಿರುವಂಥವು. ಈ ಫ್ಯಾಕ್ಟರಿಗಳು ಅವಲಂಬಿತವಾಗಿರುವುದು ಬಣ್ಣ ಹಾಕುವ ಪ್ರಾಸೆಸಿಂಗ್ ಇಂಡಸ್ಟ್ರಿಗಳ ಮೇಲೆ. ನೋಟು ರದ್ದತಿ ಬಳಿಕ ಅಮೃತಸರದ ಸುಮಾರು ಮೂವತ್ತು ಅಂಥಾ ಕೈಗಾರಿಕೆಗಳು ಬಾಗಿಲು ಹಾಕಿವೆ. ಇದರಿಂದಾಗಿ ಇವುಗಳ ಮೇಲೆ ಅವಲಂಬಿತವಾಗಿದ್ದ ಸುಮಾರು 700 ಸಣ್ಣಪುಟ್ಟ ಫ್ಯಾಕ್ಟರಿಗಳೂ ಬಿಕ್ಕಟ್ಟಿನಲ್ಲಿವೆ.

"ಮೂವತ್ತು ಈಗಾಗಲೇ ಮುಚ್ಚಿದ್ದು ಉಳಿದವು ಅರ್ಧ ಸಾಮರ್ಥ್ಯದಲ್ಲಷ್ಟೇ ಕೆಲಸ ಮಾಡುತ್ತಿವೆ" ಎನ್ನುತ್ತಾರೆ ಅಮೃತಸರ ಟೆಕ್ಸ್‌ಟೈಲ್ ಪ್ರಾಸೆಸಿಂಗ್ ಅಸೋಸಿಯೇಷನ್ ಅಧ್ಯಕ್ಷ ಕೃಷ್ಣ ಕುಮಾರಶರ್ಮಾ. "ಡಿಸೆಂಬರ್ ಒಳಗೆ ಪರಿಸ್ಥಿತಿ ಸುಧಾರಿಸದಿದ್ದರೆ ನಾವು ಪ್ರಧಾನಿಯವರನ್ನು ಭೇಟಿ ಮಾಡಿ ನೀವೇ ಫ್ಯಾಕ್ಟರಿ ನಡೆಸಿಕೊಂಡು ಹೋಗಿ ಎಂದು ಹೇಳಿ ಫ್ಯಾಕ್ಟರಿ ಕೀಲಿಕೈ ಕೊಡಬೇಕೆಂದಿದ್ದೇವೆ" ಎನ್ನುತ್ತಾರೆ.

"ಉದ್ದಿಶ್ಯವೇನೋ ಒಳ್ಳೆಯದು; ಆದರೆ ಕೆಟ್ಟ ಅನುಷ್ಠಾನ ಮತ್ತು ಸರಿಯಾದ ಯೋಜನೆ ಇಲ್ಲದೇ ನಾವು ಏಟು ತಿಂತಿದೀವಿ. ನಗದು ಇಲ್ಲದೇ ನಮ್ಮ ಕೆಲಸ ಆಗೋದಿಲ್ಲ, ಈಗ ನಡೆಸ್ತಾ ಇರೋ ವರ್ಕ್ ಕೂಡಾ ವಾರಕ್ಕೆ ನಾಲ್ಕು ದಿನ" ಎಂದೂ ಹೇಳುತ್ತಾರೆ ಶರ್ಮಾ.


ನೇಕಾರಿಕೆಯಲ್ಲಂತೂ ಅರ್ಧಕ್ಕರ್ಧ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ಬಿಹಾರ ಉತ್ತರಪ್ರದೇಶದ ದಿನಗೂಲಿ ಕಾರ್ಮಿಕರೂ ದಿಕ್ಕು ತೋಚದೇ ತಮ್ಮ ಹಳ್ಳಿಗಳಿಗೆ ಮರಳಿದ್ದಾರೆ. ಸಗಟು ಮತ್ತು ಚಿಲ್ಲರೆ ವ್ಯಾಪಾರಿಗಳ ಬೇಡಿಕೆಯೂ ಕುಸಿದಿದೆ. ಇದು ಸಾರ್ವಕಾಲಿಕ ದಾಖಲೆ. ಹಿಂದೆಂದೂ ಈ ಪರಿಯ ಬೇಡಿಕೆ ಕುಸಿತ ಆಗಿರಲಿಲ್ಲ. ಉಣ್ಣೆ ಬಟ್ಟೆಗೆ ಬೇಡಿಕೆ ಇರೋ ಕಾಲ ಇದು. ಈ ನಗದು ಬಿಕ್ಕಟ್ಟಿನಿಂದಾಗಿ ವ್ಯಾಪಾರ ಘಾಸಿಗೊಂಡಿದೆ. ಪ್ರಾಸೆಸಿಂಗ್‌ಗೆ ಬೇಕಾದ ಕಚ್ಚಾ ಸಾಮಗ್ರಿ ಸರಬರಾಜು ಮಾಡುವವರದ್ದೂ ಇದೇ ಕಥೆ. ಒಂದಕ್ಕೊಂದು ಲಿಂಕ್ ಇರೋ ಉತ್ಪಾದನಾ ವ್ಯವಸ್ಥೆ ಇದು. ಒಂದು ಬಿಕ್ಕಟ್ಟಿಗೆ ಬಿದ್ದರೆ ಎಲ್ಲರೂ ಕಷ್ಟಕ್ಕೆ ಬೀಳುತ್ತಾರೆ" ಎಂದು ಶರ್ಮಾ ಈ ಕ್ಷೇತ್ರದ ಬಿಕ್ಕಟ್ಟನ್ನು ವಿವರಿಸುತ್ತಾ ಹೋಗುತ್ತಾರೆ.

ಕೃಷಿಯೊಂದಿಗೇ ಈ ವಿಶಿಷ್ಟ ಕೈಗಾರಿಕೆ ಹೊಂದಿರುವ ಪಂಜಾಬಿನ ಕಥೆ ಹೀಗಾದರೆ ಉಳಿದ ಬಡ ರಾಜ್ಯಗಳದ್ದು?

■ ಕೆ.ಪಿ.ಸುರೇಶ್

(ಮಾಹಿತಿ: ವಿವಿಧ ಮೂಲಗಳಿಂದ)

ಮದುವೆ ನ್ಯಾಯ



ಮದುವೆ ಮಾತುಕತೆಯೆಲ್ಲಾ ಮುಗಿಯಿತು. ಧಾರಣ ಕುಟುಂಬದ ಹೆಣ್ಣುಮಗಳನ್ನು ಜಿಲ್ಲಾ ಮಟ್ಟದ ಜಕಾರಣದ ಪ್ರತಿಷ್ಠಿತ ಕುಟುಂಬಕ್ಕೆ ತಂದುಕೊಳ್ಳುವ ಮಾತುಕತೆಗಳೆಲ್ಲಾ ಅಂತ್ಯ ಕಂಡವು. ವರನಿಗೆ ಕೊಡಬೇಕಾದ ವರದಕ್ಷಿಣೆ. ವಧುವಿಗೆ ತೊಡಿಸಬೇಕಾದ ತೊಡಿಗೆ ಕುರಿತ ಕಲವು ತಕರಾರಿನ ನಂತರ ಮಾತುಗಳು ಬಗೆಹರಿದವು. ಲ್ಯಾಣಮಂಟಪವನ್ನೂ ಬುಕ್ ಮಾಡಲಾಯ್ತು.

ವರನ ಕಡೆಯವರು ಸಂಭ್ರಮದಲ್ಲಿ ಮದುವೆ ದಿನಕ್ಕೆ ಯುತೊಡಗಿದರು. ಆದರೆ ವಧುವಿನ ಮನೆಯವರು ಷ್ಟು ನಿರಾಳವಾಗಿ ಇರುವಂತಿಲ್ಲ. ಸಕಲ ವಸ್ತುಗಳನ್ನು ಂಗ್ರಹಿಸಿ ವರನ ಕಡೆಯವರು ಯಾವ ತಕರಾರನ್ನೂ ಗೆಯದಂತೆ ಮದುವೆ ಮಾಡಿಕೊಡಬೇಕಿತ್ತು. ಆದ್ದರಿಂದ ಮದುವೆ ಮಾತುಕತೆ ನಂತರ ನಿರಂತರ ಓಡಾಟ ವಧುವಿನ ಣ್ಣನ ಮೇಲೆ ಬಿತ್ತು. ಏಕೆಂದರೆ ವಧುವಿನ ತಂದೆತಾಯಿಗಳು ಮುಗ್ಧ ರೈತರು. ಅವರು ಈ ಆಧುನಿಕ ಜಗತ್ತಿನಲ್ಲಿ ಭವಿಸುತ್ತಿರುವ ಮದುವೆಗಳ ವಿಧಾನವೇ ಗೊತ್ತಿಲ್ಲದವರು. ಂದೋ ಹಿರಿಯರು ತೋರಿದವರನ್ನು ಲಗ್ನವಾಗಿ, ಷ್ಠೆಯಿಂದ ಮಕ್ಕಳುಟ್ಟಿಸುತ್ತ ಅಷ್ಟೇ ನಿಷ್ಠೆಯಿಂದ ಭೂಮಿ ೀದವರು. ಆದ್ದರಿಂದ ಮಗಳ ಮದುವೆ ಜವಾಬ್ದಾರಿಯನ್ನು ುಗನಿಗೆ ವಹಿಸಿ ನಿಶ್ಚಿಂತೆಯಿಂದಿದ್ದರು.

ಇತ್ತ ವಧುವಿನ ಅಣ್ಣ ಒಳ್ಳೆ ಶಿಕ್ಷಣ ಪಡೆದು ುದ್ಯೋಗದಲ್ಲೂ ಇದ್ದು ವೈಚಾರಿಕ ನೆಲೆಗಟ್ಟಿನಲ್ಲಿ ೋಚಿಸುವವನು. ಆದರೇನು, ತನ್ನ ಸಮುದಾಯದ ಮೂಢ ಚರಣೆಗಳ ಎದುರು ಅಸಹಾಯಕನಾದವನು. ಆದ್ದರಿಂದ ನಾದಿಕಾಲದ ಆಚರಣೆಗಳನ್ನ ಚಾಚೂತಪ್ಪದೆ ಪಾಲಿಸಿ ುದುವೆ ಮಾಡಿಕೊಡಲು ತಯಾರಿ ನಡೆಸಿದ್ದ. ಆತನ ುತ್ಸಾಹದಲ್ಲಿ ತನ್ನ ತಂಗಿ ಒಳ್ಳೆ ಮನೆ ಸೇರುತ್ತಾಳೆಂಬ ುಮ್ಮದಿಯ ಜೊತೆಗೆ ತಾನೇ ಮುಂದೆ ನಿಂತು ಎಲ್ಲ ವಾಬ್ದಾರಿ ಹೊತ್ತು ಮದುವೆ ಮಾಡಿಕೊಡುತ್ತಿರುವ ರ್ಥಕಭಾವ ಎದ್ದು ಕಾಣುತ್ತಿತ್ತು.

ಇತ್ತ ಹುಡುಗ ಹುಡುಗಿಯನ್ನು ನೋಡಿದ ಕೂಡಲೇ ಪ್ಪಿಕೊಳ್ಳುವಂತಿದ್ದ. ಮಾತುಕತೆ ದಿನ ಹುಡುಗಿಯನ್ನು ೋಡಿ ಆಸೆಗಣ್ಣಿನಿಂದ ನಕ್ಕ. ಹುಡುಗಿಗೆ ಅದು ಇಷ್ಟವಾಯ್ತು. ವಳೂ ಅದಕ್ಕೆ ಸ್ಪಂದಿಸಿ ಒಪ್ಪಿಗೆ ಸೂಚಿಸಿದ್ದಳು. ಹೋಗುವ ುನ್ನ ಹುಡುಗ ಸಂಬಂಧಿಗಳ ಕೈಲಿ ತನ್ನ ಮೊಬೈಲ್ ಂಬರ್ ತಲುಪಿಸಿ ಹೋಗಿದ್ದ. ಆದ್ದರಿಂದ ಮದುವೆ ಯಾರಿಗಳು ನಡೆಯುತ್ತಿರುವಾಗಲೇ ಒಂದು ದಿನ ಹುಡುಗನ ೊಬೈಲ್‌ಗೆ ಮೆಸೇಜುಗಳು ಬರತೊಡಗಿದವು. ಅವು ನ್ನಡದ ಸಣ್ಣಪುಟ್ಟ ಕವಿಗಳ ಪ್ರೇಮ ಕವನಗಳ ಾಲುಗಳಾಗಿದ್ದವು. ಹುಡುಗನಿಂದ ಪ್ರತಿಕ್ರಿಯೆ ಬರಲಿಲ್ಲ. ಹುಡುಗಿಗೆ ತಾನು ಮೇಲೆ ಬಿದ್ದು ಪ್ರೇಮ ೋಡಿಕೊಂಡನೇನೊ ಎಂಬ ಅಳುಕು ಶುರುವಾಯ್ತು. ಾಸ್ತವವಾಗಿ ಹುಡುಗನಿಂದ ಬರಬೇಕಿದ್ದ ಮೆಸೇಜುಗಳವು. ದರೆ ತಾನೇ ಎಂತಹ ತಪ್ಪು ಕೆಲಸ ಮಾಡಿಬಿಟ್ಟೆ ಎಂದು ುನೆ ಸುತ್ತ ಇರುವ ಕೈತೋಟದಲ್ಲಿ ಅಡ್ಡಾಡುತ್ತ ಪಹಪಿಸಿದಳು. ಆದರೆ ಒಂದು ದಿನ ಹುಡುಗನ ಫೋನು ಂತು.

"ನಾನು ಕಣೆ, ಗೊತ್ತಾಗಲಿಲ್ವ?"

"ಯಾರ್‍ದೇಳಿ?"

"ಮದುವಿ ಮಾಡಿಕಳೊ ಗಂಡ ಫೋನು ಮಾಡಿದ್ರೆ ಯಾರು ಅಂತ ಕೇಳ್ತಿಯಲ್ಲ ನೀನು?"

"ನನ್ನ ಮೆಸೇಜ್ ತಲುಪ್ತ?"

"ಯಾರ್ ಕುಟ್ಟಾಗೆ ಕಳಿಸಿದ್ದಿ?"

"ಮೊಬೈಲಲ್ಲಿ ಬಂದ ಮೆಸೇಜ್‌ಗಳ ನೋಡಲಿಲ್ವ?"

"ಅಂಗ್ಯಲ್ಲ ಕಳುಸಬ್ಯಾಡ. ನೋಡಕ್ಕೆ ಬರೋದುಲ್ಲ. ನಾರ ಐತಿ ಅಂದ್ರೆ ಫೋನ್ ಮಾಡು."

"ಮೆಸೇಜ್ ನೋಡದ ಕಲ್ತಿಲ್ಲವಾ?"

"ಅದೆಮಾಡಕ್ಕಲಿಬೇಕು. ಇನ್ನೇನು ಬತ್ತಿಯಲ್ಲ ನೀನು."

"ನಾನು ಬರೋದಾಯ್ತು, ನನ್ನ ಮೆಸೇಜಿಗೆ ಉತ್ತರ ೊಡು."

"ಅದ್ಯಾಕು ಕೊಡ್ತರೆ ಹೋಗೆ ಮಾರಗಿತ್ತಿ, ಹಿಂಗೆ ಾತಾಡದೆ ಚಂದ."

"ಮೆಸೇಜಿಗಿಂತ ಮಾತೆ ಚಂದವಾ?"

"ಊ ಮತ್ತೆ ಮದಿವಿ ಆತಪ ಅಂದ್ರೆ ನಮ್ಮನಿಯಾಗೆ ಂಗಿರಬೇಕು ಅಂತ ಹೇಳ್ಳ?"

"ಹೇಳು."

"ಮನೆಗೆ ನಮ್ಮಪ್ಪ ಹೇಳಿದಂಗೆ ಕೇಳಬುಕು. ಅವ್ರುರೇಳಿದ ಾರಿ ಮುಗಿತು. ನಮ್ಮಮ್ಮ, ಅತ್ತಿಗೆ, ನಮ್ಮಣ್ಣ ನನ್ನ ಾಗಿ ಅವ್ರುರೇಳಿದಂಗೆ ನೀನು ಕೇಳಬೇಕು."

"ಆತು ಕೇಳಸ."

"ನಾನೂ ಅಷ್ಟೆ, ನಮ್ಮಪ್ಪ ನಮ್ಮಣ್ಣ ಅವುರೇಳಿದಂಗೆ ಕೇಳಿಂದಿರದು. ಶಿವಮೊಗ್ಗಿಗೋಗಬೇಕು ಅಂದ್ರೆ ಅವುರ ಕೇಳದೆ ಹೋಗದು ನಾನು. ನಮ್ಮ ಕೆಲಸಾತು, ನಾವಾತು ಅನ್ನಂಗಿದ್ದುಬುಟ್ರೆ ಚೆನ್ನಾಗಿರಬವುದು. ನೀನು ಬಂದ ಮ್ಯಾಲೆ ಇನ್ನ ಯಂಗಿರಬೇಕು ಅಂತ ಹೇಳಿಕೊಡ್ತನಿ."

"ತುಂಬ ಕಷ್ಟ ಆಗತ್ತಾ?"

"ಕಷ್ಟ ಏನು ಇಲ್ಲ, ನಾನ್ಯಂಗದೀನಿ ಅಂಗೆ ನೀನು ಇದ್ದು ಬುಡು. ನಮ್ಮನಿಯೋರೆದ್ರಿಗೆ ಮಾತಾಡದಂಗೆ ನಮ್ಮ ಕೆಲಸ ನಾವು ಮಾಡಿಕಂಡೋದರಾತು."

"ಕೆಲಸಗಳೇನು?"

"ಮನಿವಳಗೆ ಮನಿ ಕ್ಯಲಸ ಮಾಡದು, ವರಗೆ ಬ್ಯಾಸಾಯದಕ್ಯಲ್ಸ ಮಾಡದು."

"ನನಿಗೆ ಬ್ಯಾಸಾಯದ ಕ್ಯಲಸ ಬರಲ್ಲ."

"ನಾನದಿನಲ್ಲ ಕಲ್ಸಿ ಕೊಡ್ತನಿ. ನೀನೇನು ಹೆದ್ರಬ್ಯಾಡ."

"ಆಯ್ತು."

"ನಮ್ಮಪ್ಪಾ ಯರುಡು ಸಾವುರುಪಾಯಿ ಕೊಟ್ಟತಿ. ಇತ್ತಿತ್ಲಾಗಿ ವಸನೋಟು ಬಂದದೆ ನೋಡು ಅದು. ಶಿಮಗ್ಗಿಗೋಗಿ ಸಿನುಮ ನೋಡಿಕೊಂಡು ಬರನ. ಬತ್ತೀಯಾ? ನೀ ಊಂ ಅಂದ್ರೆ ನಾನೀಗ್ಲೆ ಬರ್ತಿನಿ."

"ಯಾವ ಸಿನುಮ ನೋಡನ?"

"ಅಲ್ಯಾವಾರ ಇರ್ತವೆ. ನೋಡ್ಕ್ಯಂದು ಅಂಗೆ ಮಸಾಲ್‌ದ್ವಾಸೆ ಕೊಡಸ್ತಿನಿ. ತಿನ್ನಿಕ್ಯಂಡು ಬರನ."

"ನಾನು ಮದುವಿಗಿಂತ ಮೊದ್ಲು ಎಲ್ಲೂ ಬರಲ್ಲ."

"ಅದು ವಳ್ಳೇದೆ ಬುಡು. ಮದುವೆ ಮಾಡಿಕ್ಯಂದೇ ಸಿನಿಮ ನೋಡನ. ನಮ್ಮಪ್ಪ ಯರಡು ಸಾವುರುಪಾಯಿ ಕೊಟ್ಟತಿ. ಅದರಾಗ ನಿನಿಗೇನಾರ ತಂದುಕೊಡ್ಲ?"

"ಬ್ಯಾಡ. ನೀನೆ ಮಡಿಕೊ."

"ಆತುಬುಡು. ಫೋನ್ ಮಾಡು ಏನಾರ ಇದ್ರೆ. ಮೆಸ್ಸೇಜು ಕಳಸಕ್ಯೋಗಬ್ಯಾಡ. ಆದ ನಾನು ಬ್ಯಾರೆಯೋರಿಗೆ ತೋರ್‍ಸದು, ಅವುರು ಆಡಿಕ್ಯಂದು ನಗಾಡದು, ಅವ್ಯಲ್ಲ ಚನ್ನಾಗಿರಲ್ಲ, ಆತ?"

"ಆತು ಬುಡು."

ಈ ಸಂಭಾಷಣೆ ನಂತರ ಹುಡುಗಿಗೆ ಯಾವುದೊ ಸತ್ಯದರ್ಶನವಾದಂತೆ ದಿಗ್ಭ್ರಾಂತಳಾಗಿಬಿಟ್ಟಳು. ಸಾಲ ಮಾಡಿ ಚಿನ್ನದ ಒಡವೆ ತಂದು ಅಣ್ಣ ತೋರಿಸಲು ಹೋದಾಗ, "ಅಣ್ಣ ನನಿಗೆ ಆ ಹುಡುಗ ಬೇಡ. ಮದಿವಾಗಲ್ಲ" ಎಂದುಬಿಟ್ಟಳು.

ಅಣ್ಣ ಗರಬಡಿದಂತಾದ. ಏಕೆಂದರೆ ಮಾತುಕತೆ ಮುಗಿದನಂತರ ವರನ ಕಡೆಯವರು ದಾಳಿ ಮಾಡಿ ವಧುವನ್ನು ಹೊತ್ತಿಕೊಂಡು ಹೋಗಿ ಮದುವೆ ಮಾಡಿಕೊಳ್ಳುವಂತವರು. ಆದ್ದರಿಂದ ಅಣ್ಣ ಕಾರಣ ಕೇಳಿದ.

ಅದಕ್ಕೆ ವಧು "ಹುಡುಗನನ್ನು ಫೋನಿನಲ್ಲಿ ಮಾತನಾಡಿಸಿದೆ. ಮುಗ್ಧತೆ ಜೊತೆಗೆ ದಡ್ಡತನವೂ ಇದೆ. ಸೂಕ್ಷ್ಮವಾಗಿ ನೋಡಿದರೆ ಅವರ ಮನೆಗೆ ಒಂದು ಹೆಣ್ಣಾಳು ಬೇಕಿದೆ" ಎಂಬರ್ಥದ ವಿವರ ಕೊಟ್ಟು "ನನಗೆ ಅವನನ್ನು ಮದುವೆಯಾಗಬೇಕು ಅನ್ನೋ ಭಾವನೆ ಹೊರಟೊಯ್ತು" ಎಂದು ಖಡಾಖಂಡಿತವಾಗಿ ಹೇಳಿದಳು. ತಂಗಿಯ ಭಾವನೆಗೆ ಬೆಲೆ ಕೊಟ್ಟ ಅಣ್ಣ "ನಾವು ಹೆಣ್ಣು ಕೊಡಲ್ಲ, ಈ ಮದುವೆ ನಿಲ್ಲಿಸಿದ್ದೀವಿ" ಎಂಬ ಸುದ್ದಿ ತಲುಪಿಸಿದ.

ವರನ ತಂದೆಗೆ ಇದು ಸಹಿಸಲಸಾಧ್ಯವಾದ ವಾರ್ತೆಯಾಗಿತ್ತು, ಸ್ವತಃ ಆತನ ಹಿಂಬಾಲಕರಿಗೆ ಇದು ವಧುವಿನ ಕಡೆಯವರ ಸರ್ವನಾಶದ ತೀರ್ಮಾನವಾಗಿತ್ತು. ಇಂತಹ ತಿರಸ್ಕಾರದ ಮಾತನ್ನು ಕಳುಹಿಸಬೇಕಾದರೆ ಅವರಂತಹ ಮೂರ್ಖರೇ ಇರಲಾರರು. ಈಗೇನು ಮಾಡಬೇಕೆಂದರೆ ಮಾತುಕತೆ ಮುಗಿದಿರುವ ಹೆಣ್ಣು ತಂದು ಮದುವೆ ಮಾಡಿಕೊಳ್ಳುವುದು. ಇಲ್ಲ ದಂಡ ಹಾಕಿ ಇಡೀ ಜನಾಂಗದಲ್ಲಿ ಯಾರೂ ಆ ಹುಡುಗಿ ಮದುವೆಯಾಗದಂತೆ ಅಪಪ್ರಚಾರ ಮಾಡುವುದು. ಹೀಗೆ ಸೇಡು ತೀರಿಸಿಕೊಳ್ಳುವ ತೀರ್ಮಾನದಿಂದ ರೆಡಿಯಾಗಿ, ವಾಗ್ವಾದದ ಯುದ್ಧಕ್ಕೆ ನಿಗದಿಯಾದ ಸ್ಥಳಕ್ಕೆ ಹುಡುಗಿಯ ಕಡೆಯವರನ್ನು ಬರಹೇಳಿ, ತಾವೂ ಬಂದರು. ಅದರಂತೆ ನಮ್ಮ ಕಟ್ಟೆ ಪುರಾಣದ ಪಾತ್ರಧಾರಿಗಳಾದ ಐವರು ಪಂಚಪಾಂಡವರಂತೆ ಸ್ಥಳಕ್ಕೆ ಹೋದರೆ, ಆ ಕಡೆಯಿಂದ ಅಕ್ಷೋಹಿಣಿ ಸೈನ್ಯ ಬಂದಿತ್ತು. ಎಣಿಸಿದರೆ ಎಂಬತ್ತು ಮಂದಿ ಇದ್ದರು. ಬಂದವರು ನೇರ ವಿಷಯಕ್ಕೆ ಬರದೆ,

"ನೋಡ್ರಪ್ಪ ನಾವು ಯಾರೊ ಮನಸಸ್ಥರು ಬಂದದಾರೆ, ಹಿರಿಯರು ಬಂದದಾರೆ ಅಂತ ತಿಳಕ್ಯಂದು ಬಂದ್ರೆ ನೀವು ಆಡೋ ಉಡುಗ್ರು ತರದೊರು ಬಂದದಿರಿ. ಏನು ಹುಡುಗಾಟ ಮಾಡಿಕ್ಯಂದದಿರೇನು? ಇವುರ್‍ಯಾರು? ಹುಡುಗನ ತಂದೆ. ಇವುರೆದ್ರಿಗೆ ನಮ್ಮೂರಾಗೆ ಯಾರು ಮಾತಾಡದಿಲ್ಲ, ಅವುರಳಿಯನೂ ಸುತ ಅತ್ತಮುಂದಾಗಿ ತಿರಿಕ್ಯಂದು ಮಾತಾಡ್ತನೆ ವರತೂ ಮಕಕ್ಕೆ ಮಕಕೊಟ್ಟು ಮಾತಾಡದಿಲ್ಲ, ಇನ್ನ ಅವುರ ಮಕ್ಕಳು, ಸೊಸೆರೂ ಅಷ್ಟೆ. ಅವುರದೋಗ್ಲಿ ಇನ್ನ ನಾವು ಗೌಡ್ರೆದ್ರಿಗೆ ಮಾತಾಡಬೇಕಪ್ಪ ಅಂದ್ರೆ ಯೇಚ್ನೆ ಮಾಡಿ ಮಾತಾಡಬೇಕು. ಅಂತ ದೊಡ್ಡ ಮನುಸುರ ಮನಿಗೆ ಹೆಣ್ಣು ಕೊಡ್ತುವಿ ಅಂತ ಹೇಳಿ, ಈಗ ಕೊಡದುಲ್ಲ ಅಂತಿರಲ್ಲಾ. ಇದೇನು ಮಕ್ಕಳಾಟನಾ? ಸಟಗಾರ ಯೇಚ್ನೆ ಮಾಡಿರೇನು" ಎಂದು ಗೌಡರ ಸಹಾಯಕನೊಬ್ಬ ವಿಷಯಕ್ಕೆ ಘನ ಗಂಭೀರವಾದ ಪೀಠಿಕೆ ಹಾಕಿದ. ಆ ನಂತರ ಅವರವರ ಅಂತಸ್ಥಿಗನುಗುಣವಾಗಿ ಎಲ್ಲರೂ ಗೌಡರ ಗುಣಗಾನ ಮಾಡುತ್ತ ನಮಗೊದಗಿ ಬರಲಿರುವ ಭೀಕರ ಸ್ಥಿತಿಯನ್ನು ಮನವರಿಕೆ ಮಾಡಿಕೊಡುತ್ತ "ಮದುವಿ ಮಾತುಕತೆಯಾದ ಮೇಲೆ ನಮಗೇಟು ಖರ್ಚು ಬಂದೈತಿ ಅಂತ ಗೊತ್ತೈತೇನು ನಿಮಿಗೆ?" ಎಂದರು.

"ನಮಿಗೂ ಬಂದೈತೆ ಕಂಡ್ರೀ. ಈಗಾಗ್ಲೆ ಸಾಲ ಮಾಡಿ ಒಡವೆ ಮಾಡಿಸಿದ್ದಿವಿ. ಕಲ್ಯಾಣಮಂಟಪಕ್ಕೆ ಅಡ್ವಾನ್ಸ್ ಕೊಟ್ಟದಿವಿ. ನಾನೇ ಸೂರಿಟಗೆ ಸೈಯಿನು ಮಾಡಿ ಬ್ಯಾಂಕ್ ಸಾಲ ಕೊಡಿಸಿದ್ದಿನಿ" ಎಂದು ಸೀರನ ಪಾತ್ರಧಾರಿ ಗಂಭೀರವಾಗಿ ಹೇಳಿದ.

"ಮತ್ತೆ ಲಗ್ನ ನಿಂತಿದ್ಯಾಕಪ? ಈ ಲಗ್ನ ನಿಂತಿದ್ರೇ ಆದ್ರೆ ಗೌಡ್ರ ವರ್ಚಸ್ಸೇನಾಗಬೇಕು? ರಾಜಕೀಯದಲ್ಲಿ ಅವುರು ತಿರಗ ಜನಕ್ಕೆ ಮಕತೋರಕ್ಯಾದತ? ಆದ್ರಿಂದ ನೀವು ಒಪ್ಪಿಗಂಡೋದಂಗೆ ನ್ಯಡಕಳಿ" ಎಂದು ಒಬ್ಬ ಪಂಚಾಯ್ತಿ ಮೆಂಬರು ಇಡೀ ನ್ಯಾಯದ ಜವಾಬ್ದಾರಿ ಕೈಗೆ ತೆಗೆದುಕೊಂಡವನಂತೆ ವಾದಿಸಿದ.

"ನೋಡ್ರಿ, ಯಲ್ಲಾ ಸುಸೂತ್ರವಾಗಿ ನ್ಯಡದಿರೋದು ನಿಜ. ಆದ್ರೀಗ ಹುಡುಗಿ ಹುಡುಗನ್ನ ಬೇಡ ಅಂದ್ಳು. ಏನು ಮಾಡದು?" ಎಂದ ವಾಟಿಸ್ಸೆ ಪಾತ್ರಧಾರಿ.

"ಹುಡುಗಿ ಬೇಡ ಅಂದಕೂಡ್ಲೆ, ನೀವು ಒಪ್ಪಿಗಂಡ್ರ? ಅವುಳಿಗೆ ಎದ್ದು ಬಾಯಿಮುಚ್ಚಿಸಿ ಮದುವೆ ಮಾಡಿಕೊಡಿ."

"ಕಾಲ ಬದ್ಲಾಗಿದೆ. ಹುಡುಗಿ ಇಷ್ಟನೂ ಮುಖ್ಯ ಅಂತ ಪರಿಗಣಿಸಬೇಕಾಗಿದೆ. ಆದ್ರಿಂದ ನಮ್ಮುಡುಗಿ ಭಾವನೆಗೆ ಬೆಲೆ ಕೊಟ್ಟು ಮದುವೆ ಕ್ಯಾನ್ಸಲ್ ಮಾಡಿದ್ದಿವಿ."

"ಹುಡುಗಿಗೆ ಯಾಕೆ ಇಷ್ಟವಿಲ್ಲವಂತೆ? ಏನಾಗ್ಯದಾನೆ ನಮ್ಮುಡುಗ? ಅವುನೇನು ಕುಂಟನಾ, ಕುರುಡನಾ ಇಲ್ಲ ಅಪಾಪೋಲಿನಾ? ಹೇಳಿ."

"ಒಳ್ಳೆ ಹುಡುಗ್ನೆ. ಆದ್ರೆ ಅವುನನ್ನ ಮದುವೆ ಆಗಬೇಕು ಅನ್ನೊ ಭಾವನೆ ನಮ್ಮುಡಗಿಗೆ ಬಂದಿಲ್ಲವಂತೆ" ಎಂದ ವಾಟಿಸ್ಸೆ ಪಾತ್ರಧಾರಿ.

ಆತನ ಮಾತು ಅಲ್ಲಿದ್ದ ಜನಸ್ತೋಮಕ್ಕೆ ಅಚ್ಚರಿಯುಂಟುಮಾಡಿತು. ಭಾವನಾ ವಿರೋಧಿಯೊಬ್ಬ ಧಿಗ್ಗನೆದ್ದು ಬಂದು "ಬಾವುನೆ ಅಂದ್ರೇನಪಾ? ಒಂದುಡುಗ ಹುಡುಗಿ ನೋಡಿದ ಕೂಡ್ಲೆ ಒಂದಾಗಬೇಕು. ಅಂಗೆ ಹುಡುಗಿನೂ ಸೋಲಬೇಕು. ಇದು ಪ್ರಕೃತಿ ನಿಯಮ. ಬಾವುನೆ ಅಂತ ಅದಕ್ಕೆ ಬೆಲೆ ಕೊಡದಾದ್ರೆ ಮನ್ಸ ಉದ್ಧಾರಾದನೆ?" ಎಂದು ಯಾರೂ ಕಂಡರಿಯದ ಸತ್ಯ ಹೇಳಿದಂತೆ ಎಲ್ಲರ ಮುಖ ನೋಡಿದ.

ಆತನ ಮಾತು ಜನಸ್ತೋಮಕ್ಕೆ ಒಪ್ಪಿಗೆಯಾಯ್ತು. ಆದ್ದರಿಂದ ಯಾವುದೋ ಪ್ರಬಲ ಕಾರಣ ಬಚ್ಚಿಟ್ಟುಕೊಂಡು ಹುಡುಗಿ ಭಾವನೆಯನ್ನು ಮುಂದಿಟ್ಟುಕೊಂಡು ಮದುವೆ ನಿಲ್ಲಿಸಿರುವ ಇವರಿಗೆ ಸರಿಯಾದ ದಂಡ ಬಗಿದು ಕಳಿಸಬೇಕೆಂಬ ಚರ್ಚೆ ಒಳಗೊಳಗೇ ನಡೆದು ಕಡೆಗೆ ಸ್ಫೋಟಗೊಂಡಿತು. ಇದರಿಂದ ಕೆರಳಿದ ವಾಟಿಸ್ಸೆ ಪಾತ್ರಧಾರಿ,

"ನೋಡ್ರಿ, ದಂಡಗಿಂಡ ಅಂತ ಮಾತಾಡಬ್ಯಾಡಿ. ಅದರ ಪರಿಣಾಮ ಕೋರ್ಟಿನವರೆಗೂ ಹೋಗತ್ತೆ. ವರನ ತಂದೆ ಕೋರ್ಟಿಗೆ ಬರ್ತರ ಕೇಳಿ. ನಾವು ಯಾವ್ರೊ ಅಪಾಪೋಲಿ ಹುಡುಗ್ರು ಅಂತ ತಿಳಕೊಬೇಡಿ. ನಾನು ಡಬಲ್ ಡಿಗ್ರಿ ಮಾಡಿದ್ದಿನಿ. ಈ ಎಲ್ಲಾ ಹುಡುಗ್ರೂ ಡಿಗ್ರಿ ಮಾಡಿರೋವೆ. ಸ್ವತಃ ಹುಡುಗಿನೂ ಒಳ್ಳೆ ವಿದ್ಯಾವಂತೆ. ನಮ್ಮ ಒತ್ತಾಯಕ್ಕೆ ಕಟ್ಟುಬಿದ್ದು ಬಲವಂತದ ಮದುವೆಯಾಗಿ ಹುಡುಗನಿಗೆ ಮತ್ತೆ ಹುಡುಗನ ಮನೆಯವರಿಗೆ ಸಮಸ್ಯೆಯಾಗದ್ರು ಬದ್ಲು ಈಗ್ಲೆ ಒಂದು ಗಟ್ಟಿ ನಿರ್ಧಾರ ತಗಂಡವ್ರುಳೆ. ನಾವೆಲ್ಲಾ ಆ ನಿರ್ಧಾರಕ್ಕೆ ಬದ್ದರು. ಗೌಡ್ರು ವಳ್ಳೆಯೋರು. ಅವುರ ಮಗನೂ ಒಳ್ಳೆ ಹುಡುಗ. ನಮ್ಮ ಹುಡುಗಿಗಿಂತ್ಲೂ ಒಳ್ಳೆ ಹುಡುಗಿ ಸಿಕ್ತಳೆ. ಹೋಗಿ ಮದುವೆ ಮಾಡಿ. ಈಗ ಜಾಗ ಖಾಲಿ ಮಾಡಿ" ಎಂದ. ಈ ಗಂಭೀರ ಮಾತಿನಿಂದ ಅಧೈರ್ಯಗೊಂಡ ಪಂಚಾಯ್ತಿ ಮುಖ್ಯಸ್ಥನೊಬ್ಬ ಮುಂದೆ ಬಂದು ಸಮಸ್ಯೆಯೊಂದನ್ನು ಕೈಗೆತ್ತಿಕೊಂಡಂತೆ ಎಲ್ಲರ ಜೊತೆ ಪಿಸುಗುಟ್ಟಿ ತೀರ್ಪು ಕೊಡಲು ತಯಾರಾದ ಆತನ ಮೇಲೆ ನಂಬಿಕೆ ಇಟ್ಟವರು ಬರಲಿರುವ ತೀರ್ಪಿಗೆ ಕಾದರು. ಆತ ಹುಡುಗಿ ಅಣ್ಣನನ್ನು ಮುಂದೆ ಕರೆದ. "ನೋಡಪ್ಪ ನೀನೀಗ ಗೌಡ್ರು ಮತ್ತೆ ಪಂಚಾತಿ ಮೆಂಬ್ರು ಕಾಲಿಗೆ ನಮಸ್ಕಾರ ಮಾಡು" ಎಂದ. ನಮ್ಮ ಹುಡುಗ ಹಾಗೇ ಮಾಡಿದ. ನಂತರ ಮಾನಮರ್ಯಾದೆ ಹಾಗು ವರನ ಕಡೆಯವರ ಖರ್ಚುವೆಚ್ಚದ ಒಂದು ಮೊತ್ತದ ದಂಡ ಬೀಳಬಹುದೆಂದು ಎಲ್ಲ ಕಾದರು.

ಆ ಪುಣ್ಯಾತ್ಮ "ಸರಿ ನೀವಿನ್ನು ಹೊರಡಿ ಎಂದ". ಈ ತೀರ್ಪಿನಿಂದ ನಮಗೆ ಖುಷಿಯ ಜೊತೆಗೆ ಅಚ್ಚರಿಯಾಯ್ತು. ಭಾರತದಲ್ಲಿ ಇತ್ತೀಚೆಗೆ ಬಂದ ಅತ್ಯುತ್ತಮವಾದ ತೀರ್ಪಿದು ಎಂದುಕೊಂಡು ಲಗುಬಗೆಯಿಂದ ನಾವು ಕಾಲ್ಕಿತ್ತೊ. ದಂಡದ ಹಣದಲ್ಲಿ ಕಂಠಪೂರ್ತಿಯಾಗಲು ಬಂದವರ ಕಡೆಯಿಂದ ಗಲಭೆ ಭುಗಿಲೆದ್ದಿತು. ಆ ಗಲಭೆ ನಮ್ಮ ಮೇಲಲ್ಲ, ಬದಲಿಗೆ ಈ ಮದುವೆ ನಿಶ್ಚಯಕ್ಕೆ ಓಡಾಡಿದವರು, ತನ್ನೂರಿನ ಹುಡುಗಿ ತಂದುಕೊಳ್ಳಲು ಓಡಾಡಿದ ಆ ಊರಿನ ಅಳಿಯ ಮತ್ತು 'ಭಾವನೆ' ಎಂಬ ಪದವಿರೋಧಿಗಳೆಲ್ಲಾ ತಮ್ಮ ತಮ್ಮ ಮೇಲೆಯೇ ಬಿದ್ದು ವಾಕ್‌ಯುದ್ಧ ಮಾಡುವಾಗ ನಮ್ಮ ಬೈಕುಗಳು ಸ್ಟಾರ್ಟ್ ಆದವು.

ಆ ಸ್ಥಳದಲ್ಲಿ ಮದುವೆ ವಿಷಯ ವಧುವರರ ಕುಟುಂಬದಿಂದ ಹೊರಬಿದ್ದು ಪಂಚಾಯ್ತಿಗೆ ಸೇರಿದವರ ವೈಯಕ್ತಿಕ ಜಗಳದಲ್ಲಿ ಪರ್ಯವಸಾನಗೊಳ್ಳತೊಡಗಿತ್ತು.

ಎರಡೆರಡು ಜೋಡಿಗಳಾಗಿ ಪರಿವರ್ತನೆಗೊಂಡವರು "ಸಿಕ್ಕು ನೀನು ಮಾಡ್ತಿನಿ. ಲೇ ಮನಿಯಾಳ, ಬರೆ ಇಂತ ಕ್ಯಲಸನೆ ಮಾಡು", "ಲೇ ಮುಕಳಡಾ ಹೋಗೊ ನಿಮ್ಮವ್ವನ್. ಓಸಿ ನನ್ನ ಮಗನೆ" ಎಂಬ ಬೈಗುಳದಲ್ಲಿ ಆ ದೈತ್ಯ ಸೈನ್ಯ ಬರಖಾಸ್ತಾಗುತ್ತಿತ್ತು.

ಎಲ್ಲವೂ ದೂರದಲ್ಲಿದ್ದ ನಮಗೂ ಕೇಳುತ್ತಿತ್ತು. ನಾವು ಲೋಕಸಭೆಯಿಂದ ಹೊರಗಿದ್ದು ಎಲ್ಲವನ್ನು ಕೇಳಿಸಿಕೊಳ್ಳುವ ಕಿದಿಗೇಡಿ ಮೋದಿಯಂತೆ ಕೇಳಿಸಿಕೊಂಡು ನಗುತ್ತಾ ವಾಪಸು ಬಂದೆವು.

■ ಬಿ.ಚಂದ್ರೇಗೌಡ

02⇦

ದಿಡ್ಡಳ್ಳಿ: ಆದಿವಾಸಿಗಳ ಅಸ್ತಿತ್ವದ ಪ್ರಶ್ನೆ

ಸೇರಬೇಕೆ? ಅಕಸ್ಮಾತ್ ಅವರು 'ಮುಖ್ಯಪ್ರವಾಹ'ಕ್ಕೆ ಬಂದುಬಿಟ್ಟರೆ ಅವರ ಸಂಸ್ಕೃತಿಯ ಗತಿ ಏನು? ಎಂಬ ಈ ಎಲ್ಲ ಪ್ರಶ್ನೆಗಳ ಸಂಕೀರ್ಣ ವರ್ತುಲದಲ್ಲಿ ಆದಿವಾಸಿಗಳ ಅಭಿಪ್ರಾಯಗಳೇ ಗೈರುಹಾಜರಾಗಿಬಿಟ್ಟಿವೆ. ಆದಿವಾಸಿಗಳು ತಮ್ಮ ಅಸ್ತಿತ್ವದ ಕುರಿತು ಏನನ್ನು ಯೋಚಿಸುತ್ತಿದ್ದಾರೆ ಎಂಬ ಪ್ರಶ್ನೆಯನ್ನು ಯಾರೂ ಅಷ್ಟಾಗಿ ಕೇಳಿಕೊಂಡಿಲ್ಲವೆಂದೇ ಕಾಣುತ್ತದೆ. ಸರ್ಕಾರದ ಯೋಜನೆಗಳು ಮತ್ತು ಆಯೋಗಗಳು ಅವರನ್ನು 'ಉದ್ಧಾರ' ಮಾಡಲೆಂದೇ ರೂಪಗೊಳ್ಳುತ್ತವೆ. ಆದರೆ ತಮ್ಮ ಉದ್ಧಾರದ ಕುರಿತು 'ಅವರ' (ಆದಿವಾಸಿಗಳ) ನಿಲುವುಗಳೇನು? ಎಂಬುದೂ ಬಹುಮುಖ್ಯ ಪ್ರಶ್ನೆಯಾಗಬೇಕು. ಆದರೆ 'ಅಭಿವೃದ್ಧಿ' ಮತ್ತು 'ರಾಷ್ಟ್ರದ ಹಿತಾಸಕ್ತಿ' ಎನ್ನುವ ಸ್ಲೋಗನ್ನುಗಳು ಮಾತ್ರ ಕಣ್ಣಿಗೆ ಬಟ್ಟೆಕಟ್ಟಿಕೊಂಡು ದಾಪುಗಾಲಿಡುತ್ತಿವೆ. ಇದಕ್ಕೆ ಒಂದು ಲೇಟೆಸ್ಟ್ ಉದಾಹರಣೆ ಸರ್ದಾರ್ ಸರೋವರ ಅಣೆಕಟ್ಟು.

ಸ್ವಾತಂತ್ರ್ಯಾನಂತರ, ಅರಣ್ಯ ಮತ್ತು ಆದಿವಾಸಿಗಳನ್ನು ಜೊತೆಯಲ್ಲೇ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಯೋಜನೆಗಳನ್ನು ರೂಪಿಸಲು ಅನೇಕ ಆಯೋಗಗಳನ್ನು ಭಾರತ ಸರ್ಕಾರ ನೇಮಿಸಿದೆ. ಸ್ವತಃ ನೆಹರು ಆದಿವಾಸಿಗಳನ್ನು ಅಪಾರವಾಗಿ ಪ್ರೀತಿಸುತ್ತಿದ್ದರು. ಆದಿವಾಸಿಗಳ ಅಭಿವೃದ್ಧಿಗಾಗಿ ಪಂಚಶೀಲ ತತ್ವಗಳನ್ನು ನೆಹರು ರೂಪಿಸಿದರು. ಅಲ್ಲದೆ ಆದಿವಾಸಿಗಳ ಕಾಡಿನ ಮುಗ್ಧ ಪರಿಸರವನ್ನು ಹೊರಗಿನ ಜನ ಯಾವ ಕಾರಣಕ್ಕೂ ಕದಡಬಾರದೆಂದು ನೆಹರು ಪದೇ ಪದೇ ತಮ್ಮ ಭಾಷಣಗಳ ಮೂಲಕ ಕರೆ ನೀಡುತ್ತಿದ್ದರು. ಆದಿವಾಸಿಗಳು ಕಾಡಲ್ಲಿಯೇ ಇದ್ದು ಅವರಷ್ಟಕ್ಕೆ ಅವರು ಅಭಿವೃದ್ಧಿಯ ಕಡೆಗೆ ನಡೆದು ಹೋಗಬೇಕೆಂದು ನೆಹರು ಬಯಸುತ್ತಿದ್ದರು. ಅವರ ಕಾಲದಲ್ಲಿಯೇ ಮೊದಲಬಾರಿಗೆ ಅರಣ್ಯ ಮತ್ತು ಆದಿವಾಸಿಗಳ ಪಾರಂಪರಿಕ ಸಂಬಂಧದ ಕುರಿತು ವೈಜ್ಞಾನಿಕ ವರದಿಯನ್ನು ಸಿದ್ಧಪಡಿಸಲು ಧೇಬರ್ ಆಯೋಗವನ್ನು ನೇಮಿಸಲಾಯಿತು. ಆನಂತರ ಅನೇಕ ಆಯೋಗಗಳು ಸ್ವಾತಂತ್ರ್ಯಾನಂತರ ನೇಮಿಸಲ್ಪಟ್ಟಿವೆ. ಆ ಆಯೋಗಗಳು ಈ ಕೆಳಗಿನಂತಿವೆ.


1. ಧೇಬರ್ ಆಯೋಗ 1961
2. ಹರಿಸಿಂಗ್ ಸಮಿತಿ 1967
3. ರಾಷ್ಟ್ರೀಯ ಕೃಷಿ ಆಯೋಗ 1976
4. ಅರಣ್ಯ ಮತ್ತು ಆದಿವಾಸಿ ಅಭಿವೃದ್ಧಿ ಖಾತೆಯ ರಾಜ್ಯ ಮಂತ್ರಿಗಳ ಸಮ್ಮೇಳನ 1978
5. ರಾಯ್ ಬರ್ಮನ್ ಆಯೋಗ 1982
6. ಭೂರಿಯಾ ಆಯೋಗ 1996

ಆದಿವಾಸಿಗಳು ಅರಣ್ಯದ ಜೊತೆ ಹೊಂದಬಹುದಾದ ಸಂಬಂಧ ಮತ್ತು ಈ ಸಂಬಂಧದ ಕುರಿತು ಸರ್ಕಾರ ಈಗಾಗಲೇ ಅಂಗೀಕರಿಸಿರುವ ಅರಣ್ಯ ನೀತಿಯಲ್ಲಿ ಇರಬಹುದಾದ ಅಡೆತಡೆಗಳನ್ನು ಸರಿಪಡಿಸುವ ಕುರಿತು ಅನೇಕ ಸಲಹೆಸೂಚನೆಗಳನ್ನು ಮೇಲಿನ ಆರೂ ಆಯೋಗಗಳು ನೀಡಿವೆ. ಅರಣ್ಯ ಮತ್ತು ಆದಿವಾಸಿಗಳ ನಿತ್ಯದ ಸಂಬಂಧಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಈ ಮೇಲಿನ ಆಯೋಗಗಳು ಮಾಡಿದ ಶಿಫಾರಸ್ಸುಗಳು ನಿಜಕ್ಕೂ ಮಹತ್ವದವುಗಳಾಗಿವೆ. ಆದರೆ ಈ ಆಯೋಗಗಳ ಶಿಫಾರಸುಗಳನ್ನು ಯಾವ ಸರ್ಕಾರಗಳೂ ಜಾರಿಗೆ ತರುವ ಕಾಳಜಿ ತೋರಿಸಲಿಲ್ಲ, (ಭೂರಿಯಾ ಕಮಿಟಿ ವರದಿಯ ಶಿಫಾರಸುಗಳನ್ನು ಷೆಡೂಲ್ಡ್ ಏರಿಯಾದಲ್ಲಿ ಮಾತ್ರ ಜಾರಿಗೆ ತರಲಾಗಿದೆ.)

ಅರಣ್ಯ ಮತ್ತು ಆದಿವಾಸಿಗಳ ನಡುವಿನ ಪಾರಂಪರಿಕ ಸಂಬಂಧಗಳನ್ನು ಕಾಪಾಡುವುದು, ಅರಣ್ಯದ ಉಪ ಉತ್ಪನ್ನಗಳ ಮೇಲೆ ಆದಿವಾಸಿಗಳಿಗೆ ಸಂಪೂರ್ಣ ಅಧಿಕಾರ ಹೊಂದಲು ಅವಕಾಶ ಮಾಡಿಕೊಡುವುದು, ಸಂಗ್ರಹಿಸಲ್ಪಟ್ಟ ಅರಣ್ಯದ ಉಪಉತ್ಪನ್ನಗಳಿಂದ ಬಂದ ಆದಾಯವನ್ನು ಆದಿವಾಸಿಗಳ ಮತ್ತು ಅರಣ್ಯಗಳ ಅಭಿವೃದ್ಧಿಗೆ ಉಪಯೋಗಿಸುವುದು ಮತ್ತು ಆದಿವಾಸಿಗಳನ್ನು ಅರಣ್ಯದ ಉಳುವಿನ ಮತ್ತು ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಪ್ರಧಾನ ಪಾತ್ರ ವಹಿಸುವಂತೆ ಪ್ರೋತ್ಸಾಹಿಸುವುದೇ ಈ ಎಲ್ಲ ಆಯೋಗಗಳ ಶಿಫಾರಸ್ಸುಗಳ ಮುಖ್ಯ ಆಶಯಗಳಾಗಿವೆ. ಅಲ್ಲದೆ ಸರ್ಕಾರ ಯಾವ ಅರಣ್ಯನೀತಿಯನ್ನು ಯಥಾವತ್ತು ಅನುಷ್ಠಾನಕ್ಕೆ ತರಲು ಯತ್ನಿಸುತ್ತಿದೆಯೋ, ಆ ಉಪಯೋಗವಾದಿ, ಅಮಾನವೀಯ ನೀತಿಗೆ ಮಾನವೀಯ ಸ್ಪರ್ಶ ನೀಡುವ ಮೂಲ ಆಶಯಗಳನ್ನಿಟ್ಟುಕೊಂಡೇ ಈ ಆಯೋಗಗಳು ತಮ್ಮ ವರದಿಗಳನ್ನು ಸಿದ್ಧಪಡಿಸಿವೆ.

ಆದಿವಾಸಿಗಳ ಅಸ್ತಿತ್ವದ ಪ್ರಶ್ನೆ

ಇಂಡಿಯಾದ ಅಂತಃಸತ್ವವಾದ ಬಹುತ್ವವನ್ನು ಗೌರವಿಸುವ ಮತ್ತು ಇಲ್ಲಿನ ವಿಷಮ ಸಾಮಾಜಿಕ ವ್ಯವಸ್ಥೆಯನ್ನು ನಿವಾರಿಸುವ ನಿಟ್ಟಿನಲ್ಲಿ ನಮ್ಮ ಆಡಳಿತ ವ್ಯವಸ್ಥೆ ಡೆಮಾಕ್ರಾಟಿಕ್ ಆಗಿ ಯೋಚಿಸುತ್ತಿಲ್ಲ, ಅದು ದಲಿತರ ಹಕ್ಕುಗಳ ಕುರಿತಾಗಿ, ಆದಿವಾಸಿಗಳ ಅಸ್ತಿತ್ವದ ಕುರಿತು ಯೋಚಿಸುವಾಗೆಲ್ಲ ಊಳಿಗಮಾನ್ಯ ಮನಸ್ಥಿತಿಯಲ್ಲಿಯೇ ನಿರ್ಣಯಗಳನ್ನು ತೆಗೆದುಕೊಳ್ಳುತ್ತದೆ. ತಜ್ಞ ಸಮಿತಿಯ ವರದಿಗಳು, ನ್ಯಾಯಾಲಯಗಳ ತೀರ್ಪುಗಳು ಮತ್ತು ಮಾನವ ಹಕ್ಕುಗಳ ರಾಷ್ಟ್ರೀಯ ಆಯೋಗದ ಚಿಂತನೆಗಳೆಲ್ಲ ಆದಿವಾಸಿಗಳ ಹಕ್ಕುಗಳ ಕುರಿತು ನಮ್ಮ ಸರ್ಕಾರಗಳನ್ನು ಗಮನ ಸೆಳೆಯುತ್ತಲೇ ಇವೆ. ಭಾರತದ ಸರ್ವೋಚ್ಚ ನ್ಯಾಯಾಲಯವಂತೂ ಸಮತಾ ಪ್ರಕರಣದಲ್ಲಿ (1997ರಲ್ಲಿ) ಆದಿವಾಸಿಗಳ ಭೂಒಡೆತನದ ಕುರಿತು ಅತ್ಯಂತ ಚಾರಿತ್ರಿಕ ಮತ್ತು ಸುದೀರ್ಘ ತೀರ್ಪೊಂದನ್ನು ನೀಡಿದೆ. "ಭೂಮಿ ಆದಿವಾಸಿಗಳಿಗೆ ಸಹಜವಾಗಿ ದತ್ತವಾದ ಅತ್ಯಂತ ಬೆಲೆಬಾಳುವ ಆಸ್ತಿ, ಅದು ಆದಿವಾಸಿಗಳ ಸ್ಥಿರಾಸ್ತಿ. ಭೂಒಡೆತನದಿಂದ ಆದಿವಾಸಿಗಳು ಸಾಮಾಜಿಕ ಘನತೆ, ಸಮಾನತೆ ಮತ್ತು ಆರ್ಥಿಕ ಸಬಲತೆಯನ್ನು ಹೊಂದುತ್ತಿದ್ದಾರೆ. ಈ ಕಾರಣಕ್ಕಾಗಿ ಆದಿವಾಸಿಗಳ ಭೂಮಿಯನ್ನು ಸಂವಿಧಾನ ರಕ್ಷಿಸಬೇಕು" (Journal of the NHRC - B.D. Sharma - 112). ಆದಿವಾಸಿಗಳ ಭೂಒಡೆತನವೆನ್ನುವುದು ಅವರ ಅಸ್ತಿತ್ವದ ಪ್ರಶ್ನೆಯೇ ಆಗಿದೆ. ಭೂಮಿ ಮತ್ತು ಅರಣ್ಯ ಅವರ ಪಾರಂಪರಿಕ ಆಯ್ಕೆಗಳು, ಆದರೆ ವರ್ತಮಾನದಲ್ಲಿ ಸರ್ಕಾರಗಳು ಜನತಂತ್ರ ವ್ಯವಸ್ಥೆಯಲ್ಲಿ ಸಹಜವಾಗಿಯೇ ರಕ್ಷಿಸಬೇಕಿದ್ದ ದುರ್ಬಲ ವರ್ಗಗಳ ಹಕ್ಕುಗಳನ್ನು ಧ್ವಂಸ ಮಾಡುತ್ತಿವೆ. ಈ ಮಾನವ ಹಕ್ಕುಗಳ ಮೇಲೆ ದೌರ್ಜನ್ಯ ನಡೆದಾಗೆಲ್ಲ ಸರ್ಕಾರಗಳು 'ರಾಷ್ಟ್ರೀಯ ಹಿತಾಸಕ್ತಿ' ಎಂಬ ಗುರಾಣಿಯನ್ನು ಅಡ್ಡ ಹಿಡಿದುಕೊಳ್ಳುತ್ತವೆ. ಅದರಲ್ಲೂ ಭಾರತದಲ್ಲಿನ ವೈವಿಧ್ಯಮಯ ದಟ್ಟ ಅರಣ್ಯಗಳನ್ನು ಮತ್ತು ಅಲ್ಲಿ ವಾಸ ಮಾಡುವ ಆದಿವಾಸಿಗಳ ಬದುಕನ್ನು ಭಾರತದ ಬೃಹತ್ ಯೋಜನೆಗಳು ನುಂಗಿ ಹಾಕಿವೆ. "1951ರಿಂದ ಈಚೆಗೆ ಭಾರತ ಸರ್ಕಾರದ ಬೃಹತ್ ಯೋಜನೆಗಳಿಂದ ಗಂಭೀರ ತೊಂದರೆಗಳಿಗೀಡಾದ 21.3 ಮಿಲಿಯನ್ ಜನರಲ್ಲಿ 8.54 ಮಿಲಿಯನ್ ಜನ ಆದಿವಾಸಿಗಳು ಸೇರಿದ್ದಾರೆ." (B.D. Sharma - 101)



ಹಾಗೆಂದು ಅರಣ್ಯವನ್ನು ಆದಿವಾಸಿಗಳಿಗೆ ಬಿಟ್ಟುಕೊಡಬೇಕು; ಆದಿವಾಸಿಗಳು ಕಾಡಲ್ಲೇ ಇದ್ದು ಕಾಡು ಜನರಾಗಿರಬೇಕು ಎಂದು ಹೇಳುವುದು ಈ ಬರಹದ ಉದ್ದೇಶವಲ್ಲ. ಆದಿವಾಸಿಗಳು ಅರಣ್ಯವನ್ನು ಶತಮಾನಗಳಿಂದ ಅವಲಂಬಿಸಿಕೊಂಡು ಬಂದಿದ್ದಾರೆ. ಅವರ ಬದುಕನ್ನು ರೂಪಿಸುತ್ತಿರುವ ಅವರ ಉತ್ಪಾದನಾ ವ್ಯವಸ್ಥೆ ಸಂಪೂರ್ಣವಾಗಿ ಅರಣ್ಯವನ್ನು ಅವಲಂಬಿಸಿದೆ. ಆಧುನಿಕ ಜಗತ್ತಿನ ದುರಾಸೆಗಳಿಲ್ಲದೆ ಜೀವನೋಪಾಯಕ್ಕಾಗಿ ಅಲ್ಲಲ್ಲಿ ಕಾಡಿನ ಮಧ್ಯೆ ನೀರು ಸಿಗುವ ಕಡೆಯಲ್ಲೆಲ್ಲ ಅವರು ಕೃಷಿಗಾಗಿ ಸ್ವಲ್ಪ ಭೂಮಿಯನ್ನು ಸಾಗು ಮಾಡಿಕೊಂಡಿದ್ದಾರೆ. ತಲೆತಲಾಂತರದಿಂದ ಈ ಕೃಷಿಭೂಮಿಯನ್ನು ಅವಲಂಬಿಸಿಕೊಂಡು ಬಂದ ಆದಿವಾಸಿಗಳನ್ನು ಅರಣ್ಯ ಇಲಾಖೆ ಯಾವುದೋ ಕಾನೂನಿನ ಹೆಸರಲ್ಲಿ ಕಾಡಿನಿಂದ ಹೊರಹಾಕುತ್ತದೆ. ಅಮಾಯಕ ಆದಿವಾಸಿಗಳು ನಾಗರಿಕರ ಈ ನಡವಳಿಕೆಗಳಿಂದ, ಅರ್ಥವಾಗದ ಕಾನೂನುಗಳಿಂದ ದಿಕ್ಕೆಟ್ಟು ಹೋಗುತ್ತಾರೆ. ಯಾವ ರಾಜಕೀಯ ಸಂಘಟನೆಗಳ ಬೆಂಬಲವಿಲ್ಲದ ಇವರನ್ನು ಒಕ್ಕಲೆಬ್ಬಿಸುವುದು ಕಷ್ಟದ ಮಾತೇನೂ ಅಲ್ಲ, ಆದರೆ ಆದಿವಾಸಿಗಳು ಒಮ್ಮೆ ತಮ್ಮ ಮೂಲನೆಲೆಗಳಿಂದ ಒಕ್ಕಲೆದ್ದು ಹೋದರೆ ಹೊಸ ಪರಿಸರಕ್ಕೆ ಹೊಂದಿಕೊಳ್ಳಲಾರದಷ್ಟು ತಲ್ಲಣಗೊಂಡಿರುತ್ತಾರೆ. ತಮ್ಮ ಸುತ್ತಲ ಪರಿಸರದ ಜೊತೆ ಅವರದು ಕರುಳುಬಳ್ಳಿಯ ಸಂಬಂಧ. ಆದಿವಾಸಿಗಳು ಪರಿಸರದ ಜೊತೆ ಏರ್ಪಡಿಸಿಕೊಂಡಿರುವ ಈ ಅನುಸಂಧಾನವನ್ನು ಯಾವ 'ನಾಗರಿಕ' ಜಗತ್ತೂ ಗೌರವಿಸಬೇಕಿದೆ. ಇದು 'ನಾಗರಿಕ' ಜಗತ್ತಿನ ಕಾನೂನು ಕಟ್ಟಳೆಗಳನ್ನು ಮೀರಿದ ಮಾನವತೆಯ ಪ್ರಶ್ನೆಯಾಗಬೇಕಿದೆ. ಪ್ರಜಾಪ್ರಭುತ್ವದಲ್ಲಿ ಮನುಷ್ಯನ ಆರೋಗ್ಯಕರ ಭಾವನೆಗಳಿಗೆ ಬೆಲೆ ಕೊಡದ ಕಾನೂನುಗಳು ಏನನ್ನು ತಾನೇ ಸಾಧಿಸಿಯಾವು? ಆದಿವಾಸಿಗಳು ಅರಣ್ಯದಲ್ಲಿದ್ದುಕೊಂಡೇ ಆಧುನಿಕ ಬದುಕಿಗೆ ಮುಖಾಮುಖಿಯಾಗಲು ಬಯಸಿದರೆ ಯಾರೂ ಅಲ್ಲಿ ತಕರಾರು ಮಾಡಬೇಕಿಲ್ಲ, ಅವರ ಲೌಕಿಕದ ಇಷ್ಟಾನಿಷ್ಟಗಳನ್ನು ಗೌರವಿಸಿದರೆ ಮಾತ್ರ ನಾವು ಮಾನವ ಹಕ್ಕುಗಳನ್ನು ರಕ್ಷಿಸಿದಂತಾಗುತ್ತದೆ. ಸರಕಾರ ಸಹ ತನ್ನ ಅಭಿವೃದ್ಧಿ ನೀತಿಯನ್ನು ಏಕರೂಪಿಯಾಗಿಸದೆ, ಆದಿವಾಸಿಗಳ ವರ್ತಮಾನದ ಸ್ಥಿತಿಯನ್ನು ಅವರ ಸುತ್ತಲ ಪರಿಸರದ ಜೊತೆಯಲ್ಲೇ ಉತ್ತಮಪಡಿಸುವ ಮಾನವಮುಖಿ ಅಭಿವೃದ್ಧಿ ನೀತಿಯನ್ನು ಇನ್ನಾದರೂ ರೂಪಿಸಬೇಕಿದೆ. ಆಧುನಿಕ ಜಗತ್ತಿನ ವಿರೂಪಗಳಿಂದ ಆದಿವಾಸಿಗಳು ಘಾಸಿಗೊಳ್ಳುವುದು ಬೇಡ. ಅವರ ಪಾರಂಪರಿಕ ಹಕ್ಕುಗಳು ಗೌರವಿಸಲ್ಪಟ್ಟರೆ, ಆದಿವಾಸಿಗಳು ಹಂತ ಹಂತವಾಗಿ ಆಧುನಿಕ ಬದುಕಿಗೆ ಸಹಜವಾಗಿಯೇ ಮುಖಾಮುಖಿಯಾಗುತ್ತಾರೆ.

ಜಾಗತೀಕರಣದಿಂದಾಗಿ ಭಾರತದಂತಹ ದೇಶಗಳಲ್ಲಿ ನಡೆಯುತ್ತಿರುವ ರಾಜಕೀಯಾರ್ಥಿಕ ರೂಪಾಂತರಗಳು ಎಲ್ಲರ ಕಣ್ಣಮುಂದಿವೆ. ಮೂರನೇ ಜಗತ್ತಿನ ಆಡಳಿತ ವ್ಯವಸ್ಥೆಯನ್ನು ಸಾಮ್ರಾಜ್ಯಶಾಹಿಗಳು ನೇರವಾಗಿ ನಿಯಂತ್ರಿಸುತ್ತಿದ್ದಾರೆ. ಭಾರತದಂತಹ ವೈವಿಧ್ಯಮಯ ಸಮಾಜಗಳ ದೇಶದಲ್ಲಿ ಜಾಗತೀಕರಣ ಹಲವು ರಾಜಕೀಯ ವೈರುಧ್ಯಗಳನ್ನು ಹುಟ್ಟುಹಾಕಿದೆ. ಈ ವೈರುಧ್ಯಗಳನ್ನು ಸಮರ್ಥಿಸುವಾಗೆಲ್ಲ ಸರ್ಕಾರಗಳು ರಾಷ್ಟ್ರಪ್ರೇಮ, ರಾಷ್ಟ್ರೀಯ ಹಿತಾಸಕ್ತಿ ಎಂಬ ಹುಸಿ ಭ್ರಮೆಗಳನ್ನು ಮುಂದು ಮಾಡುತ್ತವೆ. ಈ ಹುಸಿ ಭ್ರಮೆಗಳ ಹಿಂದೆ, ಇಲ್ಲಿನ ಬಂಡವಾಳಶಾಹಿಗಳ ಮತ್ತು ಸಾಮ್ರಾಜ್ಯಶಾಹಿಗಳ ಹುನ್ನಾರಗಳಿವೆ. ಒಂದು ಮರ ಕಡಿಯುವುದನ್ನು ಕೊಲೆ ಮಾಡುವ ಅಪರಾಧಕ್ಕೆ ಹೋಲಿಸಿ, ಅರಣ್ಯಕ್ಕಾಗಿ ಮರುಗುವ ಆದಿವಾಸಿಗಳಿಗೆ ಯಾವ ಕಾಯ್ದೆ ಕಾನೂನುಗಳೂ ಅರಣ್ಯ ರಕ್ಷಿಸುವ ಪಾಠ ಹೇಳಿಕೊಡಬೇಕಿಲ್ಲ, ಯಾವ ಸರ್ಕಾರಗಳಿಗೂ ಹೊರೆಯಾಗದೆ, ದುಡಿದು ನಿತ್ಯ ತಮ್ಮ ಬವಣೆಗಳಿಗೆ ಮುಖಾಮುಖಿಯಾಗುವ ಆದಿವಾಸಿಗಳಂತಹ ಶ್ರಮಿಕ ವರ್ಗಕ್ಕೆ 'ರಾಷ್ಟ್ರದ ಹಿತಾಸಕ್ತಿ ಮತ್ತು ರಾಷ್ಟ್ರಪ್ರೇಮಗಳ' ಕುರಿತು ನಾಗರಿಕ ಪ್ರಪಂಚ ಏನನ್ನೂ ಹೇಳಿಕೊಡಬೇಕಿಲ್ಲ, ಆದರೆ ಸರ್ಕಾರ ರಾಷ್ಟ್ರದ ಹಿತಾಸಕ್ತಿಯ ಹೆಸರಲ್ಲಿ ಘೋಷಿಸುವ 'ರಕ್ಷಿತ ಅರಣ್ಯ ಅಭಯಾರಣ್ಯ, ರಾಷ್ಟ್ರೀಯ ಉದ್ಯಾನ'ಗಳಿಂದ ಆದಿವಾಸಿಗಳನ್ನು ಒಕ್ಕಲೆಬ್ಬಿಸಿ, ಅರಣ್ಯಗಳನ್ನು ಬಂಡವಾಳಶಾಹಿಗಳ ಮತ್ತು ಸಾಮ್ರಾಜ್ಯಶಾಹಿಗಳ ಖಾಸಗಿಯ ಆಸ್ತಿಯನ್ನಾಗಿ ರೂಪಾಂತರಿಸುವ ವಿರೋಧಾಭಾಸಗಳನ್ನು ಕೈಬಿಡಬೇಕಿದೆ.

ರಾಷ್ಟ್ರೀಯ ಉದ್ಯಾನದ ಹೆಸರಲ್ಲಿ ಅರಣ್ಯ ಕಾಪಾಡುವ ಸರ್ಕಾರ, ಕರ್ನಾಟಕದ ಪಶ್ಚಿಮ ಘಟ್ಟಗಳ ಉಪಯುಕ್ತ ಅರಣ್ಯವನ್ನು ಎಂ.ಪಿ.ಎಂ.ನಂತಹ, ಕೆ.ಐ.ಓ.ಸಿ.ಎಲ್‌ನಂತಹ ಕಂಪನಿಗಳಿಗೆ ಡೈನಮೇಟ್ ಸಿಡಿಸಿ ಗಣಿಗಾರಿಕೆ ಮಾಡಲು ಅವಕಾಶ ಕೊಡುತ್ತದೆ. ಕೇರಳ ಸರ್ಕಾರ ಗ್ರಾಸಿಮ್‌ನಂತಹ ಜವಳಿ ಉದ್ಯಮಕ್ಕೆ ಮುತಂಗಾ ಅರಣ್ಯ ಪ್ರದೇಶದಲ್ಲಿ ಸಾವಿರ ಎಕರೆ ಜಮೀನನ್ನು ಯಾವ ಕಾಯ್ದೆಯಡಿಯಲ್ಲಿ ನೀಡಿತು? ನಾಗರಹೊಳೆಯ ಅಭಯಾರಣ್ಯದಲ್ಲಿ ತಾಜ್ ಹೋಟೆಲ್ ಕಟ್ಟಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಕರ್ನಾಟಕ ಸರ್ಕಾರಕ್ಕೆ ಕಾನೂನೆಂಬುದು ಅಡ್ಡಬರಲೇ ಇಲ್ಲ, ಈ ಬಗೆಯ ಸರ್ಕಾರದ ವಿರೋಧಾಭಾಸದ ನಿಲುವಿನಿಂದಾಗಿ ತುಂಗಾ ನದಿಯಂತಹ ನದಿ ಇಂದು ಶಾಶ್ವತವಾಗಿ ಇಲ್ಲವಾಗುವ ಹಂತ ತಲುಪಿದೆ. ಪಶ್ಚಿಮಘಟ್ಟಗಳಲ್ಲಿ ಕಟ್ಟಿರುವ ಹಲವು ಡ್ಯಾಂಗಳು, ಕೈಗಾದಂತಹ ಅಣು ವಿದ್ಯುತ್ ಸ್ಥಾವರ ಅಲ್ಲಿನ ಜನತೆಯನ್ನು ಭಯದ ನೆರಳಲ್ಲೇ ಬದುಕುವಂತೆ ಮಾಡಿವೆ. ಒಟ್ಟಿನಲ್ಲಿ ಬಂಡವಾಳಶಾಹಿಗಳ ಮತ್ತು ಸಾಮ್ರಾಜ್ಯಶಾಹಿಗಳ ಹಿತಾಸಕ್ತಿಯೇ ಮುಖ್ಯವಾದಾಗ ಸರ್ಕಾರ, ತಾನೇ ರೂಪಿಸಿದ ಕಾನೂನುಗಳನ್ನು ಮೀರಿ ನಿಲ್ಲುತ್ತದೆ. ಅಲ್ಲದೆ ತಾನು ಈ ಪ್ರಜಾಪ್ರಭುತ್ವದಡಿ ಜನತೆಯಿಂದ, ಅವರ ಆಶಯಗಳ ಪೂರೈಕೆಗಾಗಿ ಚುನಾಯಿತರಾಗಿ ಆಡಳಿತ ನಡೆಸುತ್ತಿದ್ದೇವೆಂದು ಪ್ರಜ್ಞಾಪೂರ್ವಕವಾಗಿ ಎಲ್ಲಾ ಸರ್ಕಾರಗಳೂ ಮರೆಯುತ್ತವೆ.

ದಿಡ್ಡಳ್ಳಿಯ ಆದಿವಾಸಿಗಳಿಗೆ ನಾವು ಮಾಡಬೇಕಾದದ್ದೇನು?

ದಿಡ್ಡಳ್ಳಿಯ ಆದಿವಾಸಿಗಳು ಈ ನೆಲದ ಮಕ್ಕಳು. ನಮ್ಮ ದೇಶದ ಜನಾಂಗಿಕ ಪರಂಪರೆಯ ಮೂಲ ಬೇರುಗಳು. ಅವರಿಗೆ ಮನೆ ಕಟ್ಟಿಕೊಳ್ಳಲು, ದುಡಿಮೆಗಾಗಿ ತುಂಡು ಭೂಮಿಯನ್ನು ಹೊಂದಲು ಅವಕಾಶವಿಲ್ಲ ಎಂದರೆ ಹೇಗೆ? ಕೊಡಗಿನ ಆದಿವಾಸಿಗಳ ಸ್ಥಿತಿ ನಮ್ಮ ರಾಜ್ಯದ ಬೇರೆಡೆ ಇದ್ದಂತೆ ಇಲ್ಲ, ಕೊಡಗಿನ ಆದಿವಾಸಿಗಳು ಅಕ್ಷರಶಃ ಗುಲಾಮರಂತೆ ಬದುಕುತ್ತಿದ್ದಾರೆ. ಮಾನವ ಹಕ್ಕುಗಳ ಉಲ್ಲಂಘನೆ ಅಲ್ಲಿ ಸಹಜವೋ ಎಂಬಂತೆ ನಡೆದುಕೊಂಡು ಬರುತ್ತಿದೆ. ಕೊಡಗಿನ ಆದಿವಾಸಿಗಳಿಗೆ ಮತ್ತು ಅಲ್ಲಿನ ಕಾಫಿತೋಟಗಳಲ್ಲಿ ದುಡಿಯುತ್ತಿರುವ ಕೆಳಜಾತಿ ಕೂಲಿಕಾರ್ಮಿಕರಿಗೆ ಸ್ವಾವಲಂಬಿಯಾದ ಘನತೆಯ ಬದುಕನ್ನು ಕಟ್ಟಿಕೊಡಬೇಕಿದೆ. ಈಗ ದಿಡ್ಡಳ್ಳಿಯಲ್ಲಿನ ಅಥವಾ ಕೊಡಗಿನ ಬೇರೆ ಬೇರೆ ಕಡೆ ನಿರಾಶ್ರಿತರಾಗಿರುವ ಆದಿವಾಸಿಗಳಿಗೆ, ಕಾಡಿನ ಅಂಚಲ್ಲಿ ಬದುಕುತ್ತಿರುವ ಬೇರೆ ಶ್ರಮಿಕ ಸಮುದಾಯಗಳಿಗೆ 2006 ಅರಣ್ಯ ಹಕ್ಕು ಕಾಯ್ದೆಯ ಅಡಿ ಸೌಲಭ್ಯಗಳನ್ನು ಕಲ್ಪಿಸಲು ಎಲ್ಲಾ ಅವಕಾಶಗಳಿವೆ. ಈ ತಕ್ಷಣಕ್ಕೆ ನಾವು ಮಾಡಬೇಕಾದದ್ದು, ಕೊಡಗಿನ ಈ ಹತಭಾಗ್ಯ ಜನ ನಮ್ಮಂತೆ ಮನುಷ್ಯರು ಎಂದು ಮೊದಲು ಪರಿಭಾವಿಸುವುದು (ಹೀಗೆ ಭಾವಿಸಿಕೊಳ್ಳದಿದ್ದರೆ ನಾವೇ ಮನುಷ್ಯರಾಗಿರುವುದಿಲ್ಲ). ಜೊತೆಗೆ 2006 ಅರಣ್ಯ ಹಕ್ಕು ಕಾಯ್ದೆ (ಈ ಕಾಯ್ದೆಗೆ 2013ರಲ್ಲಿ ತಂದ ತಿದ್ದುಪಡಿಗಳನ್ನು)ಯನ್ನು ಸರಿಯಾಗಿ ಅರ್ಥೈಸಬೇಕಿದೆ. 2006 ಅರಣ್ಯ ಹಕ್ಕು ಕಾಯ್ದೆಯ ಪೀಠಿಕಾ ಭಾಗದಲ್ಲಿಯೇ ಹೀಗೆ ಹೇಳಲಾಗಿದೆ: "ತಲತಲಾಂತರಗಳಿಂದ ಅರಣ್ಯಗಳಲ್ಲಿ ವಾಸಿಸುತ್ತಿರುವ ಆದರೆ ಅವರ ಹಕ್ಕುಗಳನ್ನು ದಾಖಲಿಸಿರುವ ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ ಅರಣ್ಯ ಜಮೀನಿನಲ್ಲಿ ಅರಣ್ಯ ಹಕ್ಕುಗಳನ್ನು ಮತ್ತು ಅಧಿಬೋಗವನ್ನು ಮಾನ್ಯಮಾಡಲು ಮತ್ತು ಅರಣ್ಯ ಜಮೀನಿಗೆ ಸಂಬಂಧಿಸಿದ ಅಂಥ ಮಾನ್ಯತೆಗೆ ಹಾಗೂ ನಿಹಿತಗೊಳಿಸಲು ಹಾಗೂ ಹಾಗೆ ನಿಹಿತಗೊಳಿಸಲಾದ ಅರಣ್ಯ ಹಕ್ಕುಗಳನ್ನು ಮತ್ತು ಅರಣ್ಯ ಜಮೀನಿಗೆ ಸಂಬಂಧಿಸಿದ ಅಂಥ ಮಾನ್ಯತೆಗೆ ಹಾಗೂ ನಿಹಿತಗೊಳಿಸುವಿಕೆಗೆ ಅಗತ್ಯವಾದ ಸಾಕ್ಷ್ಯದ ಸ್ವರೂಪವನ್ನು ದಾಖಲಿಸುವುದಕ್ಕಾಗಿ ನಿರ್ದಿಷ್ಟ ರೂಪರೇಷೆಗೆ ಅವಕಾಶ ಕಲ್ಪಿಸುವ ಅಧಿನಿಯಮ."

"ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ ಸಂಬಂಧದಲ್ಲಿ ಮಾನ್ಯ ಮಾಡಲಾದ ಹಕ್ಕುಗಳು, ಸುಸ್ಥಿರ ಬಳಕೆಯ, ಜೈವಿಕ ವೈವಿಧ್ಯತೆಯ ಸಂರಕ್ಷಣೆ ಮತ್ತು ಪರಿಸರ ಸಮತೋಲನ ನಿರ್ವಹಣೆಯ ಹೊಣೆಗಾರಿಕೆಯನ್ನು ಮತ್ತು ಅಧಿಕಾರವನ್ನು ಆ ಮೂಲಕ ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪಾರಿಕ ಅರಣ್ಯವಾಸಿಗಳ ಜೀವನೋಪಾಯವನ್ನು ಮತ್ತು ಆಹಾರ ಭದ್ರತೆಯನ್ನು ಸುನಿಶ್ಚಿತಗೊಳಿಸುವಾಗ ಅರಣ್ಯಗಳ ಸಂರಕ್ಷಣ ಪದ್ಧತಿಯನ್ನು ಬಲಪಡಿಸುವುದು ಅಧಿನಿಯಮದ ಉದ್ದೇಶ" ಎಂದು ಹೇಳಲಾಗಿದೆ. ಇನ್ನು ಮುಂದುವರೆದು, ಈ ಕಾಯ್ದೆಯ ಅಧ್ಯಾಯ ಒಂದು 'ಎಫ್' ಉಪಬಂಧದಲ್ಲಿ ಅರಣ್ಯ ಗ್ರಾಮಗಳನ್ನು ಹೀಗೆ ವಿವರಿಸಲಾಗಿದೆ: "ಅರಣ್ಯ ಗ್ರಾಮಗಳು ಎಂದರೆ, ಅರಣ್ಯ ಕಾರ್ಯಾಚರಣೆಗಳಿಗಾಗಿ ಯಾವುದೇ ರಾಜ್ಯ ಸರ್ಕಾರದ ಅರಣ್ಯ ಇಲಾಖೆಯು ಅರಣ್ಯಗಳ ಒಳಗೆ ಸ್ಥಾಪಿಸಿರುವ ಅಥವಾ ಅರಣ್ಯ ಮೀಸಲು ಪ್ರಕ್ರಿಯೆಯ ಮೂಲಕ ಅರಣ್ಯ ಗ್ರಾಮಗಳಾಗಿ ಪರಿವರ್ತಿತವಾಗಿರುವ ನೆಲಸು ಪ್ರದೇಶಗಳನ್ನು ಮತ್ತು ಇದು ಅರಣ್ಯ ನೆಲಸು ಗ್ರಾಮಗಳನ್ನು ಯಾವುದೇ ಹೆಸರಿನಿಂದ ಕರೆಯಲಿ ಅಂಥ ಗ್ರಾಮಗಳನ್ನು ಒಳಗೊಳ್ಳುತ್ತದೆ ಮತ್ತು ಸಾಗುವಳಿಗಾಗಿ ಮತ್ತು ಬಳಕೆಗಾಗಿ ಸರ್ಕಾರವು ಅನುಮತಿ ನೀಡಿರುವ ಭೂಮಿಗಳನ್ನು ಒಳಗೊಳ್ಳುತ್ತದೆ."

ಇದೇ ಅಧ್ಯಾಯದ 'ಎಚ್' ಉಪಬಂಧದಲ್ಲಿ ಆದಿವಾಸಿಗಳ ವಾಸಸ್ಥಳಗಳನ್ನು ಹೀಗೆ ವಿವರಿಸಲಾಗಿದೆ: "ವಾಸಸ್ಥಳ ಎಂಬುದು ಮೀಸಲು ಅರಣ್ಯಗಳಲ್ಲಿ ಮತ್ತು ಸಂರಕ್ಷಿತ ಅರಣ್ಯಗಳಲ್ಲಿ ಆದಿ ಬುಡಕಟ್ಟು ಗುಂಪುಗಳ ಮತ್ತು ಕೃಷಿಪೂರ್ವ ಸಮುದಾಯಗಳ ಮತ್ತು ಇತರ ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳ ರೂಢಿಗತ ವಾಸಸ್ಥಳವನ್ನು ಮತ್ತು ಅಂಥ ಇತರ ವಾಸಸ್ಥಳವನ್ನು ಒಳಗೊಂಡಿರುವ ಪ್ರದೇಶವನ್ನು ಒಳಗೊಳ್ಳುತ್ತದೆ."

ಇದರ ಜೊತೆಗೆ ಆದಿವಾಸಿಗಳ ಪಾರಂಪರಿಕ ಹಕ್ಕುಗಳನ್ನು ಈ ಕಾಯ್ದೆಯು ರಕ್ಷಿಸುವ ಉದ್ದೇಶ ಹೊಂದಿದೆ. ಈ ಕಾಯ್ದೆಯ ಅಧ್ಯಾಯ 2ರಲ್ಲಿ "ಈ ಅಧಿನಿಯಮದ ಉದ್ದೇಶಗಳಿಗಾಗಿ, ವೈಯಕ್ತಿಕ ಹಿಡುವಳಿಯನ್ನು ಅಥವಾ ಸಮುದಾಯ ಹಿಡುವಳಿಯನ್ನು ಅಥವಾ ಅವೆರಡನ್ನೂ ದೊರಕಿಸಿಕೊಡುವ ಈ ಮುಂದಿನ ಹಕ್ಕುಗಳು, ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ

⇨15

ಫ್ಯಾಸಿಸ್ಟ್ ಆಡಳಿತ ಮತ್ತು ಸತ್ಯೋತ್ತರ ಪ್ರಜಾಪ್ರಭುತ್ವ

...ನಗೆ ಭವಿಷ್ಯದ ಚಿತ್ರಣ ಬೇಕೆಂದರೆ ಮುಖ ಮೇಲೆ ...ಗಾಲಿನ ಗುರುತನ್ನು ಊಹಿಸು. ಎಂದೆಂದಿಗೂ - ...ಲ್ (1984 ಕಾದಂಬರಿಯಲ್ಲಿ)

...ರ್ಥಿಕ ತಜ್ಞ ಪ್ರೊ. ಜೀನ್ ಡ್ರೇಜ್ ಅವರು "ಅನಾಣ್ಯೀ...ವ ದೇಶದ ಬಹುಪಾಲು ಜನಸಾಮಾನ್ಯರು ವಿನಾಶಕ್ಕೆ ...ದ್ದಾರೆ. ತಮ್ಮ ಬೆಳೆಗೆ ಸೂಕ್ತ ಬೆಲೆ ಸಿಗದೆ ರೈತರು ...ಬೆಳೆದಿದ್ದನ್ನು ರಸ್ತೆ ಬದಿಗೆ ಚೆಲ್ಲುತ್ತಿದ್ದಾರೆ, ವಲಸೆ ...ಕರು ಉದ್ಯೋಗವಿಲ್ಲದೆ ಮರಳಿ ತಮ್ಮ ಹಳ್ಳಿಗಳಿಗೆ ...ತ್ತಿದ್ದಾರೆ. ಕುಸಿದ ಬೇಡಿಕೆಯಿಂದ ಬೀದಿ ಬದಿಯ ...ಟಗಾರರು ತಲ್ಲಣಿಸಿದ್ದಾರೆ ಮತ್ತು ಬ್ಯಾಂಕುಗಳ ಮುಂದೆ ...ಲ್ಲಿ ನಿಂತ ನೂರಾರು ಜನ ಸ್ಥಳದಲ್ಲೇ ಮೃತ...ರೆ. ಹಣದ ಅಭಾವದಿಂದ ಅನೇಕರು ಆತ್ಮಹತ್ಯೆ ...ಕೊಂಡಿದ್ದಾರೆ. ಈ ಅನಾಣ್ಯೀಕರಣದಿಂದ ಉಂಟಾದ ...ತೆಗಳಿಗೆ ಇವಲ್ಲದೆ ಬೇರೆಯದೇ ಆಯಾಮಗಳಿವೆ. ...ಂಗ್ ವ್ಯವಸ್ಥೆ ಸಂಪೂರ್ಣವಾಗಿ ಅಸ್ತವ್ಯಸ್ತವಾಗಿದೆ. ...ೀ ಹಣವನ್ನು ಪಡೆದುಕೊಳ್ಳಲು ಸಾಧ್ಯವಾಗದಿರುವುದು ...ದಿನಕ್ಕೊಂದು ಬದಲಾಗುತ್ತಿರುವ ನಿಯಮಗಳು ...ಂಗ್ ವ್ಯವಸ್ಥೆಯ ವಿಶ್ವಾಸಾರ್ಹತೆಯನ್ನು ನಾಶ ಮಾಡಿವೆ. ...ಶಕ್ತಿಕೇಂದ್ರಗಳಿಗೆ ಈ ಅನಾಹುತಗಳು ಯಾವುದೇ ...ಲ್ಲಿ ಆತಂಕವನ್ನುಂಟುಮಾಡದೇ ಇರುವುದು ನಮ್ಮನ್ನು ...ೊಳಿಸುತ್ತಿದೆ. ನಿಮಗೆ ಉಂಟಾದ ಅನಾನುಕೂಲಕ್ಕೆ ...ಸುತ್ತೇವೆ ಎನ್ನುವ ಒಂದು ಕಾಟಾಚಾರದ ಹೇಳಿಕೆ ...ವ ಈ ಶಕ್ತಿ ಕೇಂದ್ರಗಳು ದೇಶಕ್ಕಾಗಿ ಮತ್ತು ...ಾಮಿ ಪರಿಣಾಮಕ್ಕಾಗಿ ಈ ಸಣ್ಣ ಸಣ್ಣ ತೊಂದರೆ ...ಸಹಿಸಿಕೊಳ್ಳಬೇಕೆಂದು ಆದೇಶಿಸುತ್ತಿವೆ. ನೋವನ್ನು ...ಮನಗೊಳಿಸುವ ಯಾವುದೇ ಪ್ರಯತ್ನವನ್ನು ಇವರು ...ತ್ತಿಲ್ಲ" ಎಂದು ಬರೆಯುತ್ತಾರೆ. ಆದರೆ ಜನ...ನ್ಯರಿಗೆ ಅಡ್ಡಿ ಆತಂಕಗಳನ್ನು ಉಂಟುಮಾಡಿದ ಈ ...ೀಕರಣ ಮತ್ತೊಂದು ಎಲೈಟ್ ವರ್ಗಕ್ಕೆ ವಿವಿಧ ...ಲಾಭವನ್ನು ತಂದುಕೊಡುತ್ತಿದೆ. ಇದನ್ನು ಡ್ರೇಜ್ "ಉದಾಹರಣೆಗೆ ಆಗಸ್ಟ್ ತಿಂಗಳಲ್ಲಿ 'ಬ್ಯುಸಿನೆಸ್ ...ಗೆ ನೀಡಿದ ಸಂದರ್ಶನವೊಂದರಲ್ಲಿ ನಂದನ್ ನಿಲಕೇಣಿ "ಸದ್ಯದಲ್ಲಿಯೇ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಅಡ್ಡಿ...ಗಳು ಸಂಭವಿಸಲಿದೆ. ಇದು ಒಂದು ಸಕಾರಾತ್ಮಕ ...ನೆಗೆ. ಹೊಸ ಬಗೆಯ ಹಣಕಾಸಿನ ತಂತ್ರಜ್ಞಾನಗಳಿಗೆ ಬಾಗಿಲು ತೆರೆಯಲಿದೆ" ಎಂದು ಹೇಳುತ್ತಾರೆ. ...ೀಕರಣದ ನಂತರ ನೀಲಕೇಣಿ ಅವರ ಮಾತುಗಳಿಗೆ ...ಅರ್ಥಗಳು ಮೂಡುತ್ತಿವೆ. ಜನಸಾಮಾನ್ಯರ ಈ ...ತಂಕಗಳು ತಂತ್ರಾಂಶ ಅಭಿವೃದ್ಧಿಪಡಿಸುವ ತಂತ್ರಜ್ಞರಿಗೆ ...ವರವಾಗಿದೆ. ಏಕೆಂದರೆ ನಗದುರಹಿತ ವಹಿವಾಟಿಗೆ ...ಸುವ ತಂತ್ರಜ್ಞಾನಕ್ಕೆ ಅತಿ ಹೆಚ್ಚಿನ ಗ್ರಾಹಕರು ...ಷ್ಟು ಲಾಭವಾಗಲಿದೆ. ಅಂದರೆ ಜನಸಾಮಾನ್ಯರಿಗೆ ...ರೆ, ಅಡ್ಡಿ ಆತಂಕಗಳು ಹೆಚ್ಚಿದಷ್ಟು ಈ ತಂತ್ರಜ್ಞಾನದ ...ಕ್ಕೆ ಲಾಭ ಹೆಚ್ಚುತ್ತಾ ಹೋಗುತ್ತದೆ. ಒಂದು ವರ್ಷದ ...ಒಂದು ಯುಟೋಪಿಯ ಚಿಂತನೆಯಾಗಿದ್ದ ಈ ...ರಹಿತ ವಹಿವಾಟು ಇಂದು ದಿನನಿತ್ಯ ಮೊರೆ...ರುವ ಶಬ್ದವಾಗಿದೆ" ಎಂದು ವಿವರಿಸುತ್ತಾರೆ.

...ಅನಾಣ್ಯೀಕರಣದ ಮೂಲಕ ದೇಶದ ಬಹು...ತ ಜನಸಾಮಾನ್ಯರಿಗೆ ತೊಂದರೆ, ವಿನಾಶವನ್ನು ತಂದಿಟ್ಟ...ು ಮತ್ತೊಂದೆಡೆ. ಇದೇ ಅನಾಣ್ಯೀಕರಣವನ್ನು ...ೊಂಡು ತಂತ್ರಾಂಶ ವಲಯದ ಬಂಡವಾಳಶಾಹಿ...ಗಳಿಗೆ ಲಾಭವನ್ನು ತಂದುಕೊಡುತ್ತಿದ್ದಾರೆ. ಇದು ...ೋಟಕ್ಕೆ ಸರಳವಾಗಿಯೂ ಆದರೆ ಆಳದಲ್ಲಿ ...ವಾಗಿಯೂ ಇದೆ. ಇಂದಿರಾ ಗಾಂಧಿ ಕಾಲದ ...ರಣದ ಸಂದರ್ಭದಲ್ಲಿ ಜನಪ್ರಿಯ ಯೋಜನೆಗಳನ್ನು





ಪ್ರಕಟಿಸುತ್ತಾ ವೋಟ್ ಬ್ಯಾಂಕ್ ರಾಜಕಾರಣಕ್ಕೆ ಲಗ್ಗೆ ಹಾಕುತ್ತಿದ್ದರು. ಅಂದರೆ ಇಂದಿರಾ ಗಾಂಧಿ ಅವರ ಕಲ್ಯಾಣ ಯೋಜನೆಗಳಲ್ಲಿ ಜನಸಾಮಾನ್ಯರು ಒಳಗೊಂಡಿರುತ್ತಿದ್ದರು ಮತ್ತು ಈ ಜನಸಾಮಾನ್ಯರು ನೇರವಾಗಿ ಭಾಗಿಯಾಗುತ್ತಿದ್ದರು. ಆದರೆ ಸರ್ವಾಧಿಕಾರಿ ವ್ಯಕ್ತಿತ್ವದ ಮೋದಿಯ ಫ್ಯಾಸಿಸ್ಟ್ ಆಡಳಿತದಲ್ಲಿ ಇಂದು ನಾವು "ಸತ್ಯೋತ್ತರ ಪ್ರಜಾಪ್ರಭುತ್ವ" **(post truth democracy)** ದೊಂದಿಗೆ ಮುಖಾಮುಖಿಯಾಗುತ್ತಿದ್ದೇವೆ. ಇದನ್ನು ವಿವರಿಸುವ ಚಿಂತಕ ಕ್ರಿಸ್ಟೋಫರ್ ಜೆಫರ್‌ಲಾಟ್ "ದೇಶದ ಜನತೆಗೆ ವಾಸ್ತವ ಮತ್ತು ಫ್ಯಾಂಟಸಿ ನಡುವಿನ ವ್ಯತ್ಯಾಸವನ್ನು ಗುರುತಿಸಲು ಕಷ್ಟವಾಗುತ್ತದೆ. ಇಂದಿನ ಜನಪ್ರಿಯ ಯೋಜನೆಗಳು ಸಮಾಜವಾದಿ ಆಶಯಗಳನ್ನು ಒಳಗೊಂಡಿರುವುದಿಲ್ಲ, ಅಷ್ಟೇಕೆ ಇವು ಯೋಜನೆಗಳನ್ನು ಸಹ ಪ್ರಕಟಿಸುವುದಿಲ್ಲ, ಸ್ಲೋಗನ್‌ಗಳನ್ನು ಬುಲೆಟ್ ಅಂಶಗಳ ರೂಪದಲ್ಲಿ ಪ್ರಕಟಿಸಲಾಗುತ್ತದೆ. ಈ ಹೊಸ ನಾಯಕರು ತಮ್ಮನ್ನು ಪಕ್ಷ ಮತ್ತು ಇನ್ಸ್ಟಿಟ್ಯೂಟ್‌ಗಳನ್ನು ಮೀರಿ ಸ್ಥಾಪಿಸಿಕೊಂಡು ಆ ಮೂಲಕ ಜನರೊಂದಿಗೆ ಸಂಭಾಷಿಸುತ್ತಾರೆ. ರಾಷ್ಟ್ರೀಯತೆಯನ್ನು, ಧಾರ್ಮಿಕತೆಯನ್ನು ಹೊದ್ದುಕೊಂಡ ಜನಾಂಗ ದ್ವೇಷದೊಂದಿಗೆ ಬೆರೆಸುತ್ತ ನೇರವಾಗಿ ಜನರೊಂದಿಗೆ ಮಾತುಕತೆ ನಡೆಸುತ್ತಾರೆ" ಎಂದು ಹೇಳುತ್ತಾರೆ. ನರೇಂದ್ರ ಮೋದಿ ಮಾಡುತ್ತಿರುವುದೂ ಇದನ್ನೇ. ನೋಟಿನ ಅನಾಣ್ಯೀಕರಣದ ಸಂದರ್ಭದಲ್ಲಿ ಭಯೋತ್ಪಾದನೆ ಮತ್ತು ರಾಷ್ಟ್ರೀಯತೆಯನ್ನು ಯಥೇಚ್ಛವಾಗಿ ಬಳಸಿದ ಮೋದಿ ದೇಶದ ಜನತೆಗೆ ಇದು ರಾಷ್ಟ್ರವನ್ನು ಭಯೋತ್ಪಾದನೆಯಿಂದ ರಕ್ಷಿಸುತ್ತದೆ ಎಂದು ನಂಬಿಸಿದರು. ಇದನ್ನೇ ಇಂದು 'ಸತ್ಯೋತ್ತರ ಪ್ರಜಾಪ್ರಭುತ್ವ' ಎಂದು ಕರೆಯಲಾಗುತ್ತದೆ. ಏಕೆಂದರೆ ನೋಟಿನ ಅನಾಣ್ಯೀಕರಣದಿಂದ ಜನಸಾಮಾನ್ಯರಿಗೆ ಉಂಟಾದ ಆತಂಕ ಮತ್ತು ಬಿಕ್ಕಟ್ಟುಗಳು ಸತ್ಯ ಸಂಗತಿಯಾಗಿದ್ದರೆ ಇದೇ ಸಂದರ್ಭದಲ್ಲಿ ಈ ಸತ್ಯವು ಗೌಣಗೊಂಡು ಮೋದಿ ತೇಲಿಬಿಟ್ಟ ಭಯೋತ್ಪಾದನೆ ಮತ್ತು ರಾಷ್ಟ್ರದ ಹಿತ ಎನ್ನುವ ಮಿಥ್ ಇದೇ ಜನ ಸಾಮಾನ್ಯರಿಗೆ ಮುಖ್ಯವಾಗಿಬಿಡುತ್ತದೆ. ಕಳೆದ ಐವತ್ತು ದಿನಗಳಲ್ಲಿ ಈ ಜನಸಾಮಾನ್ಯರು ಬಿಸಿಲಲ್ಲಿ, ಹಸಿವಿನಿಂದ ಸರತಿಯಲ್ಲಿ ತಮ್ಮ ಹಣಕ್ಕಾಗಿ ಕಾಯಬೇಕಾದಂತಹ ಪರಿಸ್ಥಿತಿಯಲ್ಲಿ ನರಳುತ್ತಿದ್ದರೂ ಅವರು ಆಕ್ರೋಶ ವ್ಯಕ್ತಪಡಿಸದೇ ಇರುವುದಕ್ಕೆ ಮೂಲಕಾರಣ ಮೋದಿ ಮಾದರಿಯ ನಾಯಕರು ತಮ್ಮ ಸುಳ್ಳು ಮಾತುಗಳಿಂದ ಜನರೊಂದಿಗೆ ನೇರವಾಗಿ ಬೆಸೆದುಕೊಂಡಿರುವುದು.

ಈ 'ಸತ್ಯೋತ್ತರ ಪ್ರಜಾಪ್ರಭುತ್ವ'ದಲ್ಲಿ ಮೋದಿ ತರಹದ ನಾಯಕರು ತಮ್ಮನ್ನು ಯಾವುದೇ ಎಗ್ಗಿಲ್ಲದೇ ಒಬ್ಬ ವ್ಯವಸ್ಥಾಪಕ **(manager)**ನಾಗಿ ಬಿಂಬಿಸಿಕೊಳ್ಳುತ್ತಾರೆ. ಅಂದರೆ ತಾನು ಉದ್ಯಮವನ್ನು ಮುನ್ನಡೆಸುತ್ತಿರುವ ಸಿಇಓ ಎಂದು ಪರಿಚಯಿಸಿಕೊಳ್ಳುತ್ತಾರೆ ಮತ್ತು ಅದೇ ಸ್ವರೂಪದಲ್ಲಿ ಜನಪ್ರಿಯತೆಯನ್ನೂ ಗಳಿಸಿಕೊಳ್ಳುತ್ತಾರೆ. ಸೂಪರ್ ಶ್ರೀಮಂತರೊಂದಿಗೆ, ಬಕಾಸುರ ಬಂಡವಾಳಶಾಹಿಗಳೊಂದಿಗೆ ಸದಾ ಫ್ಲರ್ಟ್ ಮಾಡುತ್ತಾ ಕಾಲಕಳೆಯುವ ಈ ಮೋದಿಯ ವ್ಯವಸ್ಥಾಪಕನ ಶೈಲಿಯು ಪ್ರಜಾಪ್ರಭುತ್ವದ ಆಡಳಿತಕ್ಕೆ ಕೊಟ್ಟ ಪೆಟ್ಟಿನಿಂದ ಚೇತರಿಸಿಕೊಳ್ಳಲು ಇಂಡಿಯಾ ದೇಶವನ್ನು ಮತ್ತೆ ಕೆಳಮಟ್ಟದಿಂದ ಕಟ್ಟಬೇಕಾಗುತ್ತದೆ (ಒಂದು ವೇಳೆ ಮೋದಿ ಸ್ಥಾನ ತೆರವು ಮಾಡಿದರೆ!). ಇದನ್ನು ವಿವರಿಸುವ ಜೆಫರಲಾಟ್ "ವ್ಯಾಪಾರಿಗಳು ಈ ವ್ಯವಸ್ಥಾಪಕ ಶೈಲಿಯ ನಾಯಕರ ಚುನಾವಣೆಯ ಅತ್ಯಂತ ದುಬಾರಿ ಖರ್ಚನ್ನು ಭರಿಸುತ್ತಾರೆ. ಒಮ್ಮೆ ಅಧಿಕಾರಕ್ಕೆ ಬಂದನಂತರ ಈ ಹೊಸ ವ್ಯವಸ್ಥಾಪಕ ನಾಯಕರು ತಮ್ಮದೇ ಆದ ಭಕ್ತಗಣವನ್ನು ಸೃಷ್ಟಿಸಿಕೊಂಡು ವಿಲಕ್ಷಣವಾದ ವ್ಯಕ್ತಿತ್ವವನ್ನು ಆರೋಪಿಸಿಕೊಂಡು ನೇರವಾಗಿ ಜನರೊಂದಿಗೆ ಸಂಭಾಷಿಸತೊಡಗುತ್ತಾರೆ. ಅವರ ಮುಖಚಹರೆ, ಅಂಗಿಕಾಭಿನಯ ಸಾರ್ವಜನಿಕ ಕ್ಷೇತ್ರವನ್ನು ಪ್ರವಾಹದಂತೆ ಕೊಚ್ಚಿಕೊಂಡು ಆವಾಹಿಸುತ್ತದೆ. ಈ ಮಾದರಿಯ ಕೇಂದ್ರೀಕರಣದ ಫಲವಾಗಿ ವಿರೋಧ ಪಕ್ಷಗಳ ಶಕ್ತಿ ಕುಗ್ಗುತ್ತಾ ಹೋಗುತ್ತದೆ ಮತ್ತು ಶಕ್ತಿಕೇಂದ್ರವು ಸಂಸತ್ತಿನಿಂದ ಪಲ್ಲಟಗೊಂಡು ಈ ವ್ಯವಸ್ಥಾಪಕ ನಾಯಕನ ಕುರ್ಚಿಯ ಬಳಿ ಸ್ಥಳಾಂತರಗೊಳ್ಳುತ್ತದೆ. ಈತನೊಂದಿಗೆ ಜಗಳವಾಡುವವರು, ಭಿನ್ನಮತ ವ್ಯಕ್ತಪಡಿಸುವವರನ್ನು ದೇಶದ್ರೋಹಿಗಳೆಂದು ಹಣೆಪಟ್ಟಿ ಹಚ್ಚಲಾಗುತ್ತದೆ" ಎಂದು ಹೇಳುತ್ತಾರೆ.

ಇದು ಮೋದಿಯ ವಿಷಯದಲ್ಲಿಯೂ ಸಂಪೂರ್ಣವಾಗಿ ಸತ್ಯ. ಆರ್ವೆಲ್‌ನ ಕಾದಂಬರಿ **'1984'**ರಲ್ಲಿ "ಪಕ್ಷವು ಕೇವಲ ತನಗಾಗಿ ಮಾತ್ರ ಅಧಿಕಾರವನ್ನು ಬಯಸುತ್ತದೆ. ಪಕ್ಷಕ್ಕೆ ಬೇರೆಯವರ ಹಿತಾಸಕ್ತಿಯ ಕುರಿತಾಗಿ ನಿಷ್ಠೆಯಿಲ್ಲ, ಅದು ಕೇವಲ ಅಧಿಕಾರದಲ್ಲಿ ಮಾತ್ರ ಆಸಕ್ತವಾಗಿರುತ್ತದೆ. ಈ ಅಧಿಕಾರವನ್ನು ಬಳಸಿಕೊಂಡು ಮನುಷ್ಯನ ಮನಸ್ಸುಗಳನ್ನು ಚಿಂದಿ ಚಿಂದಿ ಮಾಡುತ್ತದೆ. ನಂತರ ಈ ಚೂರುಗಳನ್ನು ನಮಗೆ ಬೇಕಾದ ಆಕೃತಿಗೆ ಮರು ಜೋಡಿಸಿಕೊಳ್ಳುತ್ತದೆ" ಎನ್ನುವ ಸಾಲುಗಳು ಬರುತ್ತವೆ. ಇಂದು ಮೋದಿ ಮಾಡುತ್ತಿರುವುದೂ ಸಹ ಇದನ್ನೇ. ಜನಸಾಮಾನ್ಯರ ತಿಳಿವಳಿಕೆಯನ್ನೇ ಚೂರು ಚೂರು ಮಾಡಿ ತನಗೆ ಬೇಕಾದ ರೂಪದಲ್ಲಿ ಮರು ಜೋಡಿಸಿಕೊಳ್ಳುತ್ತಿದ್ದಾರೆ. ಜಾಗತೀಕರಣ ಭಾರತದ ಸರ್ವಾಧಿಕಾರಿ ಮೋದಿಯವರಿಗೆ ಅಧಿಕಾರವು ಕೇವಲ ಒಂದು ಸಾಧನ ಮಾತ್ರವಲ್ಲ ಅದು ಅಂತ್ಯವೂ ಹೌದು. ಮತ್ತೆ ಆರ್ವೆಲ್‌ನ ಮಾತುಗಳಲ್ಲಿ ಹೇಳಬೇಕೆಂದರೆ ಮೋದಿಯ ಉದ್ದೇಶ ಹಿಂಸೆ ಎಂದರೆ ಅದು ಹಿಂಸೆ ಮಾತ್ರ. ಅಧಿಕಾರವೆಂದರೆ ಅದು ಅಧಿಕಾರ ಮಾತ್ರ. ಅಲ್ಲಿ ವಾಮ ಮಾರ್ಗಗಳೇ ಇಲ್ಲ.

ಇದೇ ಕಾರಣಕ್ಕಾಗಿ ವಿರೋಧ ಪಕ್ಷಗಳು ಅನಾಣ್ಯೀಕರಣವನ್ನು ಬಲು ದೊಡ್ಡ ಹಗರಣ ಎಂದು ಪ್ರತಿಭಟಿಸುತ್ತಿದ್ದರೂ ಅವರ ಪ್ರತಿರೋಧಕ್ಕೆ ಜನಬೆಂಬಲ ದೊರಕುತ್ತಿಲ್ಲ. ವಿರೋಧ ಪಕ್ಷಗಳು ಮೋದಿಯ ಅನಾಣ್ಯೀಕರಣದ ವಿರುದ್ಧ ಜನಾಂದೋಲನವನ್ನು ರೂಪಿಸಲು ವಿಫಲವಾಗುತ್ತಿವೆ. ಏಕೆಂದರೆ ಇವರಿಗೆ ನಿಜಕ್ಕೂ ಒಂದು ಸ್ಪೇಸ್ ಇಲ್ಲ. ಇದಕ್ಕೆ ಮೂಲಭೂತ ಕಾರಣವೆಂದರೆ ನಮ್ಮ ವಿರೋಧ ಪಕ್ಷಗಳು ಇಲ್ಲಿನ ಈ ಸಾಮಾನ್ಯ ಜನರನ್ನು ಕೇವಲ ಒಂದು ಸಂಕೇತವಾಗಿ ಪರಿಗಣಿಸಿರುವುದು. ಇಲ್ಲಿನ ಬಹುತ್ವವನ್ನು ಗುರುತಿಸದೆ, ವಿಪರ್ಯಾಸಗಳನ್ನು, ಸಂದಿಗ್ಧತೆಗಳನ್ನು, ಭಿನ್ನತೆಗಳನ್ನು ಗುರುತಿಸದೆ, ಮಾನ್ಯ ಮಾಡದೆ, ತಮ್ಮದೇ ಆದ ದರ್ಪದ ಶೈಲಿಯಲ್ಲಿ ಪ್ರಜಾಪ್ರಭುತ್ವದ ಮಾದರಿಗಳನ್ನು ಅನುಸರಿಸಲು ಹೋದ ವಿರೋಧ ಪಕ್ಷಗಳು ಇಂದು ಮುಗ್ಗರಿಸುತ್ತಿವೆ. ಒಂದು ಬಲಿಷ್ಠ ಕ್ರಿಯಾಶೀಲ ವಿರೋಧ ಪಕ್ಷವಾಗುವ ಎಲ್ಲಾ ಸಾಧ್ಯತೆಗಳನ್ನು ಮಣ್ಣು ಮಾಡಿ ಈ ಪ್ರಜಾಪ್ರಭುತ್ವವನ್ನೇ ಟೊಳ್ಳಾಗಿಸುತ್ತವೆ. ಈ ಟೊಳ್ಳುಗೊಂಡಂತಹ ಪ್ರಜಾಪ್ರಭುತ್ವದಲ್ಲಿ ಜನಸಾಮಾನ್ಯರ ಸರ್ಕಾರವೆಂದರೆ **authoritarian** ಸ್ವರೂಪ ಪಡೆದುಕೊಳ್ಳುವುದೇ ಇಲ್ಲಿನ ಬಲು ದೊಡ್ಡ ವ್ಯಂಗ್ಯ. ಈ **authoritarian** ಸರ್ವಾಧಿಕಾರದ ರೂಪದಲ್ಲಿ ಸಾಮಾನ್ಯ ಜನರ ಮೇಲೆ ದಬ್ಬಾಳಿಕೆಯನ್ನು ನಡೆಸುವ ಸಾಮರ್ಥ್ಯ ಪಡೆದುಕೊಂಡಿರುತ್ತದೆ. ಇಂದು ಮೋದಿಗೆ ಈ ಸಾಮರ್ಥ್ಯ ದೊರಕಿದೆ.

ಪತ್ರಕರ್ತ ನಿಸ್ಸಿಂ ಮನ್ನತುಕರನ್ ಒಂದು ಕಡೆ ಬರೆಯುತ್ತಾರೆ "ಮೆಕ್ಸಿಕೋದಲ್ಲಿ ಮೂಲ ಜನಾಂಗವಾದ ಝುಪತಿಸ್‌ಟಾಸ್ ಹಕ್ಕುಗಳಿಗಾಗಿ, ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ದಿಟ್ಟ ನಾಯಕ ಮಾರ್ಕೋಸ್‌ನನ್ನು ಅಲ್ಲಿನ ಪ್ರಭುತ್ವವು ಆತನನ್ನು ಗೇ ಎಂದು ಆರೋಪಿಸಿ ಕಳಂಕಗೊಳಿಸಲು ಯತ್ನಿಸಿತು. ಆಗ ಮಾರ್ಕೋಸ್ ಉತ್ತರಿಸಿದ್ದು ಹೀಗೆ: 'ಹೌದು, ಮಾರ್ಕೋಸ್ ಸಾನ್ ಫ್ರಾನ್ಸಿಸ್ಕೋದಲ್ಲಿ ಗೇ ಅನ್ನುವುದು ನಿಜ. ಹಾಗೆಯೇ ದಕ್ಷಿಣ ಅಮೆರಿಕದಲ್ಲಿ ಮಾರ್ಕೋಸ್ ಕಪ್ಪುವರ್ಣೀಯ, ಯುರೋಪಿನಲ್ಲಿ ಮಾರ್ಕೋಸ್ ಏಷ್ಯಾದವನು. ಸ್ಪೇನ್‌ನಲ್ಲಿ ಅರಾಜಕತಾವಾದಿ, ಇಸ್ರೇಲ್‌ನಲ್ಲಿ ಮಾರ್ಕೋಸ್ ಪ್ಯಾಲಸ್ಟೀನಿಯನ್. ಜರ್ಮನಿಯಲ್ಲಿ ಮಾರ್ಕೋಸ್ ಯಹೂದಿ. ಪೋಲೆಂಡ್‌ನಲ್ಲಿ ಜಿಪ್ಸಿ, ಬೋಸ್ನಿಯಾದಲ್ಲಿ ಪೆಸಿಫಿಸ್ಟ್. ಈ ಮಾರ್ಕೋಸ್ ಮೆಟ್ರೋ ನಗರಗಳಲ್ಲಿ ರಾತ್ರಿ 10 ಗಂಟೆಗೆ ಏಕಾಂಗಿಯಾಗಿ ಸಂಚರಿಸುವ ಮಹಿಳೆ, ಈ ಮಾರ್ಕೋಸ್ ಜಮೀನಿಲ್ಲದ ರೈತ, ಸ್ಲಂನ ಸದಸ್ಯ ನಿರುದ್ಯೋಗಿ, ಅತೃಪ್ತ ವಿದ್ಯಾರ್ಥಿ ಮತ್ತು ಬೆಟ್ಟಗುಡ್ಡಗಳಲ್ಲಿ ಝುಪತಿಸ್‌ಟಾಸ್."

ನಿಸ್ಸಿಂ ಹೇಳಿದ್ದನ್ನು ಸ್ವಲ್ಪ ಬದಲಿಸಿ ಹೇಳಬೇಕೆಂದರೆ "ಹಾಗಿದ್ದಲ್ಲಿ ನಮ್ಮ ವಿರೋಧ ಪಕ್ಷಗಳು ಮಾರ್ಕೋಸ್‌ನಂತೆ ಇನ್ನು ಸಾಕು ಮಾಡಿ ಎಂದು ಪ್ರತಿರೋಧಿಸುವ ಅಲ್ಪಸಂಖ್ಯಾತರಾಗಬಲ್ಲರೇ? ತಮ್ಮೆಲ್ಲ ಶಕ್ತಿಯನ್ನು ಬಳಸಿ ಮಾತನಾಡಬಲ್ಲ ಅಲ್ಪಸಂಖ್ಯಾತರು ಮತ್ತು ಶಾಂತವಾಗಿ, ಮೌನವಾಗಿ ಆಲಿಸುವ ಬಹುಸಂಖ್ಯಾತರಾಗಬಲ್ಲರೇ? ಖೈರ್ಲಾಂಜಿಯಲ್ಲಿ ದಲಿತರಾಗಬಲ್ಲರೇ? ಬಸ್ತರ್‌ನಲ್ಲಿ ಆದಿವಾಸಿಗಳಾಗಬಲ್ಲರೇ? ಮಣಿಪುರದಲ್ಲಿ ಮನೋರಮಾ?"

■ ಬಿ. ಶ್ರೀಪಾದ ಭಟ್

4 ⇦

...ವಾಸಿಗಳ ಅರಣ್ಯ ಹಕ್ಕುಗಳಾಗತಕ್ಕದ್ದು, ಎಂದರೆ: ...ವಾಸಿ ಅನುಸೂಚಿತ ಬುಡಕಟ್ಟಿನ ಸದಸ್ಯನು ಅಥವಾ ...ಗಳು ಅಥವಾ ಇತರ ಪಾರಂಪರಿಕ ಅರಣ್ಯವಾಸಿಗಳು ...ಮಾಡುವುದಕ್ಕಾಗಿ ಅಥವಾ ಜೀವನ ನಿರ್ವಹಣೆಗಾಗಿ ...ಗುವಳಿ ಮಾಡಲು ವೈಯಕ್ತಿಕ ಅಥವಾ ಸಮುದಾಯ ...ೋಗದ ಮೇರೆಗೆ ಅರಣ್ಯ ಜಮೀನನ್ನು ಹೊಂದುವ ...ಅಲ್ಲಿ ಜೀವಿಸುವ ಹಕ್ಕು" ಎಂದು ಈ ಕಾಯ್ದೆ ...ಡಿಸುತ್ತದೆ. ಮುಂದುವರೆದು ಈ ಕಾಯ್ದೆಯು, ...ದೇ ರಾಷ್ಟ್ರೀಯ ಉದ್ಯಾನ ಮತ್ತು ವನ್ಯಜೀವಿ ...ಳಲ್ಲಿ ಆದಿವಾಸಿಗಳ ಹಕ್ಕುಗಳನ್ನು ಸಂರಕ್ಷಿಸುತ್ತದೆ. ...ಕಾಯ್ದೆಯ ಅಧ್ಯಾಯ 3ರಲ್ಲಿ "ರಾಷ್ಟ್ರೀಯ ...ವನಗಳಲ್ಲಿ ಮತ್ತು ಅಭಯಾರಣ್ಯಗಳಲ್ಲಿ ಆಹಾಯ ...ವ ಪಶು, ಜೀವಿಗಳ ಆವಾಸಸ್ಥಳಗಳಲ್ಲಿ ಈ ...ಸುಮದ ಮೇರೆಗೆ ಮಾನ್ಯ ಮಾಡಿದ ಅರಣ್ಯ ...ನ್ನು ತರುವಾಯ ಮಾರ್ಪಾಟುಗೊಳಿಸಬಹುದು ...ಮರಳ್ . ಇತ್ಯರ್ಥಗೊಳಿಸಬಹುದು. ಪರಂತು, ...ಅರಣ್ಯ ಹಕ್ಕುದಾರರಿಗೆ ಮರಳ್ ವ್ಯವಸ್ಥೆ ಕಲ್ಪಿಸತಕ್ಕದ್ದಲ್ಲ ಅಥವಾ ಈ ಮುಂದಿನ ಷರತ್ತುಗಳು ಈಡೇರಿದ್ದ ಸಂದರ್ಭದಲ್ಲಿ ಹೊರತು, ವನ್ಯಜೀವಿ ಸಂರಕ್ಷಣೆಗಾಗಿ ಅತಿಕ್ರಮಣ ಮಾಡಲಾಗದ ಪ್ರದೇಶಗಳನ್ನು ಸೃಜಿಸುವ ಉದ್ದೇಶಗಳಿಗಾಗಿ ಯಾವುದೇ ರೀತಿಯಲ್ಲಿ ಅವರ ಹಕ್ಕುಗಳಿಗೆ ಬಾಧೆಯುಂಟು ಮಾಡತಕ್ಕದ್ದಲ್ಲ" ಎಂದು ಸ್ಪಷ್ಟವಾಗಿ ಈ ಕಾಯ್ದೆ ಹೇಳುತ್ತದೆ.

ಈ ಕಾಯ್ದೆಯ ಅಧ್ಯಾಯ 3 ಉಪಬಂಧ 5ರ ಅನ್ವಯ "ಯಾರೇ ಅರಣ್ಯವಾಸಿ ಅನುಸೂಚಿತ ಬುಡಕಟ್ಟಿನ ವ್ಯಕ್ತಿಯನ್ನು ಇತರ ಪಾರಂಪರಿಕ ಅರಣ್ಯವಾಸಿಯ ಮಾನ್ಯತೆ ಮತ್ತು ಪರಿಶೀಲನಾ ಪ್ರಕ್ರಿಯೆಯು ಪೂರ್ಣವಾಗುವವರೆಗೆ, ಅವನ ಅಧಿಭೋಗದಲ್ಲಿರುವ ಅರಣ್ಯ ಜಮೀನಿನಿಂದ ಅವನ್ನು ಒಕ್ಕಲೆಬ್ಬಿಸತಕ್ಕದ್ದಲ್ಲ ಅಥವಾ ಹೊರಹಾಕತಕ್ಕದ್ದಲ್ಲ" ಎಂದು ಸ್ಪಷ್ಟಪಡಿಸಲಾಗಿದೆ.

ಜೊತೆಗೆ ಈ ಕಾಯ್ದೆ "ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ ವಾಸಸ್ಥಳವನ್ನು ಅವರ ಸಾಂಸ್ಕೃತಿಕ ಮತ್ತು ಸಹಜ ಪರಂಪರೆಗೆ ಬಾಧಕವಾಗುವ ಯಾವುದೇ ವಿನಾಶಕಾರಿ ಪದ್ಧತಿಗಳ ಯಾವುದೇ ವಿಧಾನದಿಂದ ಸಂರಕ್ಷಿಸಲಾಗಿದೆಯೆಂದು ಖಚಿತಪಡಿಸಿಕೊಳ್ಳತಕ್ಕದ್ದು" ಎಂದು ಹೇಳುತ್ತದೆ. ಪ್ರಸ್ತುತ ಕಾಯ್ದೆಯಲ್ಲಿ ಇಷ್ಟೆಲ್ಲ ಬಿಗಿಯಾದ ನಿಲುವುಗಳಿದ್ದರೂ ಅವು ಕೆಟ್ಟ ಆಡಳಿತ ವ್ಯವಸ್ಥೆಯಿಂದಾಗಿ 'ಅನುಷ್ಠಾನಕ್ಕೆ ಬರುತ್ತಿಲ್ಲ. ಜನರಿಂದ ಆರಿಸಲ್ಪಟ್ಟವರು, ಜನರ ತೆರಿಗೆ ಹಣದಿಂದ ಸಂಬಳ ಪಡೆವ ನೌಕರರು ಜನರ ಪರವಾಗಿಲ್ಲ, ಜನಪರವಾಗಿದ್ದೇವೆ ಎಂದು ತೋರಿಸಿಕೊಳ್ಳುತ್ತಾ ಇವರು ಯಾರ ಹಿತಗಳನ್ನು ಕಾಪಾಡುತ್ತಿದ್ದಾರೆ ಎಂಬುದನ್ನು ವಿವರಿಸಬೇಕಿಲ್ಲ.

ರಾಜ್ಯದ ಆದಿವಾಸಿಗಳಿಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ತೆಗೆದಿರಿಸಲಾಗುತ್ತದೆ. ಆ ಹಣವನ್ನು ಭಿಕ್ಷಾರೂಪದ ಕೊಡುಗೆಗಳನ್ನು ನೀಡಲು ಬಳಸಲಾಗುತ್ತದೆ. ಸರಕಾರ ಆದಿವಾಸಿಗಳಿಗಾಗಲಿ, ದುಡಿವ ಜನರಿಗಾಗಲಿ ಯಾವ ಭಿಕ್ಷೆಗಳನ್ನೂ ನೀಡಬೇಕಿಲ್ಲ, ಅವರ ಸಹಜ ಹಕ್ಕುಗಳನ್ನು ಗೌರವಿಸಿ ಕಾಪಾಡಬೇಕಿದೆ. ಜೊತೆಗೆ ಆದಿವಾಸಿಗಳ ಹಿತರಕ್ಷಣೆಗೆ ವಿವಿಧ ಆಯೋಗಗಳು ಅನೇಕ ಸಂವಿಧಾನಾತ್ಮಕ ಶಿಫಾರಸ್ಸುಗಳನ್ನು ಮಾಡಿವೆ. ರಾಯ್ ಬರ್ಮನ್ ಆಯೋಗ, ಭೂರಿಯಾ ಸಮಿತಿ ಆಯೋಗಗಳ ಮತ್ತು 2006 ಅರಣ್ಯ ಹಕ್ಕು ಕಾಯ್ದೆಯ ಮಹತ್ವದ ಶಿಫಾರಸ್ಸುಗಳನ್ನ ಮಾನವೀಯ ಕಳಕಳಿಯ ಮೂಲಕ ಅನುಷ್ಠಾನಗೊಳಿಸಲು ರಾಜಕೀಯ ಇಚ್ಛಾಶಕ್ತಿಯನ್ನು ಸರ್ಕಾರಗಳು ತೋರಿಸಬೇಕಿದೆ. ಅರಣ್ಯ ಮತ್ತು ಭೂಮಿಯ ಜೊತೆಗಿನ ಆದಿವಾಸಿಗಳ ಪಾರಂಪರಿಕ ಸಂಬಂಧ ಯಾವ ಒತ್ತಡಗಳ ಮೂಲಕವೂ ಕಡಿದುಹೋಗಬಾರದು. ಜಾಗತೀಕರಣದ ಇಂದಿನ ವಿಕ್ಷಿಪ್ತ ರಾಜಕೀಯ ಸನ್ನಿವೇಶದಲ್ಲಿ ಆದಿವಾಸಿಗಳು ತಮ್ಮ ಅಸ್ತಿತ್ವದ ಪ್ರಶ್ನೆಯನ್ನೇ ಮುಖ್ಯವಾಗಿಟ್ಟುಕೊಂಡು ಹೋರಾಡಬೇಕಾದ ಅನಿವಾರ್ಯತೆ ರೂಪಗೊಂಡಿರುವುದಕ್ಕೆ ಯಾವುದೇ ಆಡಳಿತ ವ್ಯವಸ್ಥೆ ತಲೆತಗ್ಗಿಸಬೇಕಿದೆ.

ದಿಡ್ಡಳ್ಳಿಯ ಸುತ್ತ ಬದುಕುವ ಆದಿವಾಸಿಗಳ ನಿರ್ಗತಿಕ ಸ್ಥಿತಿ ನಮ್ಮ ಹೃದಯವನ್ನು ಕಲಕದಿದ್ದರೆ ಹೇಗೆ? ಕೊಡಗಿನ ಯಾವ ಜನರ ಪರವಾಗಿ ನಿಂತು ನಾವು ಆದಿವಾಸಿಗಳನ್ನು ನೋಡುತ್ತಿದ್ದೇವೆ? ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಿದೆ. ಆದಿವಾಸಿಗಳಂತಹ ಅಮಾಯಕ ಸಮಾಜಗಳ ಸಹಜ ಹಕ್ಕುಗಳನ್ನು ರಕ್ಷಿಸಲಾಗದ ಯಾವುದೇ ವ್ಯವಸ್ಥೆ ತನ್ನಷ್ಟಕ್ಕೆ ತಾನು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಏಕೆಂದರೆ ಅರಣ್ಯ ಮತ್ತು ಭೂಮಿಯ ಜೊತೆಗಿನ ಆದಿವಾಸಿಗಳ ಸಂಬಂಧ ಕೇವಲ ಭಾವುಕ ಅವಲಂಬನೆ [illegible] ಅದು ಅವರ ಅಸ್ತಿತ್ವದ ಪ್ರಶ್ನೆಯೂ [illegible]

■ ಎ.ಎಸ್. ಪ್ರಭಾಕರ


ನಗದುರಹಿತ ವಹಿವಾಟಿನಿಂದ ಭ್ರಷ್ಟಾಚಾರ ನಿಲ್ಲದು

ನೋಟು ರದ್ಧತಿ ಕಾರ್ಯಾಚರಣೆಯ ಮಧ್ಯದಲ್ಲಿ ತಟಾತ್ತಾಗಿ ಗುರಿಯನ್ನು ಬದಲಾಯಿಸಿರುವ ಮೋದಿ ಸರ್ಕಾರ ಈಗ ಭ್ರಷ್ಟಾಚಾರ ಮತ್ತು ಕಾಳಧನದ ಸಮಸ್ಯೆಗಳನ್ನು ನಗದುರಹಿತ ಅಥವಾ ಡಿಜಿಟಲ್ ವಹಿವಾಟಿನ ಮುಖಾಂತರ ಮೂಲೋತ್ಪಾಟನೆ ಮಾಡಬಹುದೆಂದು ಬಿಂಬಿಸತೊಡಗಿದೆ. ಗಮನಾರ್ಹವಾಗಿ ಮೋದಿ ತನ್ನ ನವಂಬರ್ 8ರ ಭಾಷಣದಲ್ಲಿ ನಗದುರಹಿತ ವಹಿವಾಟಿನ ವಿಷಯವನ್ನು ಪ್ರಸ್ತಾಪಿಸಿಯೇ ಇರಲಿಲ್ಲ. ರೂ. 500 ಮತ್ತು 1000ದ ನೋಟುಗಳನ್ನು ರದ್ದುಪಡಿಸುತ್ತಿರುವುದು ಕಪ್ಪುಹಣ, ಭ್ರಷ್ಟಾಚಾರ, ಖೋಟಾ ನೋಟು ಮತ್ತು ಭಯೋತ್ಪಾದನೆ ಗಳನ್ನು ತೊಲಗಿಸುವುದಕ್ಕಾಗಿ ಎಂದಷ್ಟೆ ಹೇಳಿದ್ದ. ಆದರೆ ಯಾವತ್ತು ಊಹಿಸಿದಷ್ಟು ಕಪ್ಪುಹಣ ಕೈವಶವಾಗುವುದಿಲ್ಲ ಎಂದು ಗೊತ್ತಾಯಿತೊ ಆವತ್ತಿನಿಂದ ಫೋಕಸ್ ಬದಲಾಗಿದೆ. ಹೆಚ್ಚುಕಮ್ಮಿ ಎಲ್ಲಾ ಕಾಳಧನಿಕರ ಕಪ್ಪುಹಣವನ್ನು ಹೊಸಾ ಗರಿಗರಿ ನೋಟುಗಳ ಬಿಳಿಹಣವಾಗಿ ಪರಿವರ್ತಿಸುವಲ್ಲಿ ಬ್ಯಾಂಕ್ ಅಧಿಕಾರಿಗಳೆ ಶಾಮೀಲಾಗಿರುವುದನ್ನು ಕಂಡ ಬಳಿಕ ಈವರೆಗೆ ನೋಟು ರದ್ಧತಿಯಿಂದ ಭ್ರಷ್ಟಾಚಾರ ಅಂತ್ಯವಾಗುತ್ತದೆ ಎನ್ನುತ್ತಿದ್ದ ಮೋದಿಭಕ್ತರ ಮಾತಿನ ವರಸೆಯೂ ಬದಲಾಗಿದೆ.

ಈಹೊತ್ತು ಮೋದಿಯಿಂದ ಹಿಡಿದು ಮಂತ್ರಿಗಳು, ಶಾಸಕರಾದಿಯಾಗಿ ಎಲ್ಲಾ ಸಂಘಿಗಳ ಬಾಯಲ್ಲಿ ಮೊಬೈಲ್ ವಾಲೆಟ್‌ನದೇ ಮಾತು. ಭಾರತವನ್ನು ಒಂದು ನಗದುರಹಿತ ವಹಿವಾಟಿನ ಸ್ವರ್ಗವಾಗಿಸುವ ಭ್ರಮೆಯೊಂದನ್ನು ಬಿತ್ತಲಾಗುತ್ತಿದೆ. ಆ ನಿಟ್ಟಿನಲ್ಲಿ ಜಾಹೀರಾತು, ಕಾರ್ಯಾಗಾರ, ಪ್ರಾತ್ಯಕ್ಷಿತೆ ಇತ್ಯಾದಿಗಳನ್ನೊಳಗೊಂಡ ಬಿರುಸಿನ ಕಾರ್ಯಾಚರಣೆ ಪ್ರಾರಂಭವಾಗಿದೆ. ಡಿಜಿಟಲ್ ಪಾವತಿಯನ್ನು ಉತ್ತೇಜಿಸುವುದಕ್ಕಾಗಿ ಮುಖ್ಯಮಂತ್ರಿಗಳು ಮತ್ತು ಕಾರ್ಯದರ್ಶಿಗಳ ಸಮಿತಿಯೊಂದನ್ನು ರಚಿಸಲಾಗಿದೆ. ಡಿಜಿಟಲ್ ಪಾವತಿದಾರರಿಗೆ ನಾನಾಬಗೆಯ ತೆರಿಗೆ ರಿಯಾಯಿತಿ ಮತ್ತು ಆಮಿಷಗಳನ್ನು ಒಡ್ಡಲಾಗುತ್ತಿದೆ. ಖುದ್ದು ಮೋದಿಯೂ ಒಂಥರಾ ಲಾಟರಿ ಸ್ಕೀಮಿನಂತಹ ಬಹುಮಾನ ಯೋಜನೆಯನ್ನು ಘೋಷಿಸಿದ್ದಾನೆ. ದೃಶ್ಯ ಹಾಗೂ ಮುದ್ರಣ ಮಾಧ್ಯಮಗಳಲ್ಲಿ ಪುಟಗಟ್ಟಲೆ ಸರ್ಕಾರಿ ಜಾಹೀರಾತುಗಳನ್ನು ಪುಂಖಾನುಪುಂಖವಾಗಿ ಪ್ರಕಟಿಸಲಾಗುತ್ತಿದೆ. ಬೀದಿಬೀದಿಗಳಲ್ಲಿ ಬೃಹತ್ತಾದ ಕಟೌಟ್‌ಗಳು ತಲೆ ಎತ್ತುತ್ತಿವೆ. ಮೋದಿ ಸರ್ಕಾರದ ಜಾಹೀರಾತುಗಳಿಗೂ ಪೇಟಿಎಂನಂತಹ ಕಂಪೆನಿ ಜಾಹೀರಾತುಗಳಿಗೂ ಹೆಚ್ಚು ವ್ಯತ್ಯಾಸವಿಲ್ಲ ಎಂದಾಗಿದೆ. ಅವೆರಡರ ಸಾಮ್ಯತೆ ಎಷ್ಟಿದೆಯೆಂದರೆ ಖಾಸಗಿ ಕಂಪೆನಿಗಳ ಜಾಹೀರಾತಿನ ವೆಚ್ಚಗಳು ಸರ್‍ರನೆ ಇಳಿದಿವೆಯಂತೆ!

ದೇಶಾದ್ಯಂತ ಹೀಗೊಂದು ಆತುರದ ವಾತಾವರಣವನ್ನು ನಿರ್ಮಿಸಲಾಗುತ್ತಿರುವ ಈ ಸಂದರ್ಭದಲ್ಲಿ ಡಿಜಿಟಲ್ ವಹಿವಾಟಿಗೆ ಸಂಬಂಧಪಟ್ಟಂತೆ ಇತರ ದೇಶಗಳ ಅನುಭವ ಹೇಗಿದೆ ಎಂದು ತಿಳಿದುಕೊಳ್ಳುವುದು ಒಳ್ಳೆಯದು ಮಾತ್ರವಲ್ಲ ಅವಶ್ಯವೂ ಆಗಿದೆ. ನಗದುರಹಿತ ವಹಿವಾಟಿನಿಂದ ಭ್ರಷ್ಟಾಚಾರ ಮತ್ತು ಕಪ್ಪುಹಣದ ಭೂತವನ್ನು ಬಡಿದೋಡಿಸಲು ಸಾಧ್ಯವೆಂದು ಯಾರಾದರೂ ನಂಬಿದ್ದರೆ ಅವರು ಕೊಂಚ ಕೆನ್ಯಾ, ಟಾಂಜಾನೀಯ, ಜಿಂಬಾಬ್ವೆ ಮುಂತಾದ ಕೆಲವು ಆಫ್ರಿಕನ್ ದೇಶಗಳ ಕಡೆ ದೃಷ್ಟಿ ಹಾಯಿಸುವುದು ವಾಸಿ. ಉದಾಹರಣೆಗೆ ಕೆನ್ಯಾವನ್ನು ತೆಗೆದುಕೊಂಡರೆ ಅಲ್ಲಿ ಎಲ್ಲೆಲ್ಲೂ ನಗದುರಹಿತ ವಹಿವಾಟು ನಡೆಯುತ್ತಿರುವುದನ್ನು ಕಾಣಬಹುದು. ಅಲ್ಲಿನ ಸುಮಾರು 75 ಪ್ರತಿಶತ ವಯಸ್ಕರ ಬಳಿ ಮೊಬೈಲ್ ವಾಲೆಟ್ ಅಥವಾ ಪರ್ಸ್‌ಗಳಿವೆ ಎಂದರೆ ನಗದುರಹಿತ ವಹಿವಾಟಿನ ಬಳಕೆ ಅದೆಷ್ಟು ವ್ಯಾಪಕವಾಗಿದೆ ಎಂದು ತಿಳಿಯಬಹುದು. ಅವರೆಲ್ಲ ತಾವು ಖರೀದಿಸುವ ವಸ್ತು, ಸೇವೆ ಇತ್ಯಾದಿಗಳಿಗೆ ಹಣವನ್ನು ಅದೇ ಯಕ್ಷಿಣಿಗಾರ ಮೋದಿ ಮೊನ್ನೆ ತನ್ನ ಕೈನಲ್ಲಿ ಮಾಡಿ ತೋರಿಸಿದ ಹಾಗೆ ಮೊಬೈಲ್ ಮೂಲಕ ಪಾವತಿಸುತ್ತಿದ್ದಾರೆ. ಹಣದ ವರ್ಗಾವಣೆಯೂ ಅಲ್ಲಿ ಮೊಬೈಲ್ ಮೂಲಕವೆ ನಡೆಯುತ್ತದೆ. ದೇಶದ ಉದ್ದಗಲಕ್ಕೂ ಇರುವ ರಿಟೇಲ್ ಅಂಗಡಿಗಳಲ್ಲೆಲ್ಲಾ ನಗದುರಹಿತ ಸೇವೆ ಲಭ್ಯವಿದೆ. ಅಂತಾರಾಷ್ಟ್ರೀಯ ಹಣಕಾಸು ನಿಧಿಯ ನಿಯತಕಾಲಿಕವೊಂದರಲ್ಲಿ ಪ್ರಕಟವಾದ ವರದಿಯ ಪ್ರಕಾರ ಇಂತಹ ನಗದುರಹಿತ ವಹಿವಾಟುಗಳು ಅಲ್ಲಿನ ವಾರ್ಷಿಕ ಜಿಡಿಪಿಯ ಶೇಕಡಾ 4.5ರಷ್ಟಿವೆಯಂತೆ. ಈ ರೀತಿ ನಗದುರಹಿತ ವಹಿವಾಟು ವಿಸ್ತೃತವಾಗಿರುವ ಕೆನ್ಯಾ ವಿಶ್ವದ ಅತ್ಯಂತ ಪಾರದರ್ಶಕ ರಾಷ್ಟ್ರವೆಂಬ ಹೆಗ್ಗಳಿಕೆಗೆ ಪಾತ್ರವಾಗಿರಬೇಕಾಗಿತ್ತು, ಅಲ್ಲವೆ? ಆದರೆ ವಾಸ್ತವ ಇದಕ್ಕೆ ತದ್ವಿರುದ್ಧವಿದೆ. ಜಗತ್ತಿನಾದ್ಯಂತ ಭ್ರಷ್ಟಾಚಾರದ ಮೇಲೆ ಕಣ್ಣಿರಿಸಿರುವ ಟ್ರಾನ್ಸ್‌ಪೆರೆನ್ಸಿ ಇಂಟರ್‌ನ್ಯಾಷನಲ್ ಸಂಸ್ಥೆಯು 2015ರ ಸಾಲಿನ ವರದಿಯಲ್ಲಿ ಕೆನ್ಯಾವನ್ನು ವಿಶ್ವದ ಅತ್ಯಂತ ಭ್ರಷ್ಟ ದೇಶಗಳಲ್ಲಿ ಒಂದು (168 ದೇಶಗಳ ಪೈಕಿ ಕೆನ್ಯಾ 139ನೆ ಸ್ಥಾನದಲ್ಲಿದೆ) ಎಂದು ಗುರುತಿಸಲಾಗಿದೆ! ಕೆನ್ಯಾದಲ್ಲಿ ಭ್ರಷ್ಟಾಚಾರದ ಮಟ್ಟ ಎಷ್ಟಿದೆ ಎಂಬುದನ್ನು ಅರಿಯಲು ಒಂದು ನಿದರ್ಶನ ಸಾಕು. ಅದು 2016ರ ರಿಯೊ ಒಲಂಪಿಕ್ಸ್‌ಗೆ ಸಂಬಂಧಿಸಿದ ಘಟನೆ. ರಿಯೊ ಒಲಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ಕೆನ್ಯಾ ತಂಡದ ಯುನಿಫಾರ್ಮ್ ಒಂದೇ ರೀತಿ ಇರಲಿಲ್ಲ! ಕಾರಣ? ನೈಕ್ ಸಂಸ್ಥೆ ಕ್ರೀಡಾಪಟುಗಳಿಗೆ ವಿತರಿಸಲೆಂದು ಕೆನ್ಯಾದ ರಾಷ್ಟ್ರೀಯ ಒಲಂಪಿಕ್ ಸಮಿತಿಗೆ ಒದಗಿಸಿದ್ದ ಯುನಿಫಾರ್ಮ್ ಕಿಟ್‌ಗಳ ಒಂದು ಭಾಗವನ್ನು ಅಧಿಕಾರಿಗಳೆ ನುಂಗಿ ಹಾಕಿದ್ದರಂತೆ! ಇನ್ನು ನಗದುರಹಿತ ವ್ಯವಹಾರಗಳು ಅಧಿಕವಿರುವ ಟಾಂಜಾನೀಯ, ಜಿಂಬಾಬ್ವೆ ಮುಂತಾದ ರಾಷ್ಟ್ರಗಳ ಪರಿಸ್ಥಿತಿ ಕೂಡಾ ಕೆನ್ಯಾಕ್ಕಿಂತ ಭಿನ್ನವಾಗಿಲ್ಲ ಎನ್ನುತ್ತದೆ ಟ್ರಾನ್ಸ್‌ಪೆರೆನ್ಸಿ ಇಂಟರ್‌ನ್ಯಾಷನಲ್‌ನ ವರದಿ.

ಹೀಗಿರುವಾಗ ಮೋದಿ ಸರ್ಕಾರ ಭಾರತದಲ್ಲಿ ನಗದುರಹಿತ ವ್ಯವಹಾರದ ಅಳವಡಿಕೆಗೆ ಈ ರೀತಿ ಎಲ್ಲಿಲ್ಲದ ಉತ್ತೇಜನ ನೀಡುತ್ತಿರುವುದಕ್ಕೆ ಕಾರಣವೇನು? ಇದೆಲ್ಲವೂ ಡಿಜಿಟಲ್ ವಹಿವಾಟು ನಿಯಂತ್ರಿಸುವ ಸಾಫ್ಟ್‌ವೇರ್ ಸಂಸ್ಥೆಗಳು ಮತ್ತಿತರ ಕಾರ್ಪೊರೇಟ್‌ಗಳ ಉದ್ಧಾರಕ್ಕಾಗಿ ಇರಬಹುದೆ? ಇಂತಹದೊಂದು ಬಲವಾದ ಅನುಮಾನ ಮೂಡುವುದೇಕೆಂದರೆ ಕೆಲವರು ಯೋಚಿಸುವಂತೆ ಡಿಜಿಟಲ್ ವ್ಯವಹಾರ ಪುಕ್ಕಟೆ ಅಲ್ಲ, ನಾವು ಪ್ರತಿಯೊಂದು ಬಾರಿ ಕಾರ್ಡ್ ಅಥವಾ ಮೊಬೈಲ್ ಮೂಲಕ ದುಡ್ಡು ಪಾವತಿಸಿದಾಗ ನಮ್ಮ ಬ್ಯಾಂಕ್ ಖಾತೆಯಿಂದ ಪೇಟಿಎಂನಂತಹ ಮಧ್ಯವರ್ತಿ ಸಂಸ್ಥೆಗೆ ಕಮಿಷನ್ ಪಾವತಿ ಆಗುತ್ತದೆ. ಉದಾಹರಣೆಗೆ ಪ್ರತಿ ರೂ. 100ಕ್ಕೆ ರೂ. 1.50 ಕಮಿಷನ್. ಇದೇ ರೂ. 100ನ್ನು ಅಂಗಡಿಯಾತ ತನ್ನ ಖರೀದಿಗೆ ಬಳಸುವಾಗ ಅಂಗಡಿಯಾತನ ಖಾತೆಯಿಂದ ಮತ್ತೆ ರೂ 1.50 ಕಮಿಷನ್ ಪಾವತಿ ಆಗುತ್ತದೆ. ಹೀಗೆ ಒಂದೆ ಮೊತ್ತಕ್ಕೆ ಹಲವು ಬಾರಿ ಕಮಿಷನ್ ಪಾವತಿಸಲ್ಪಡುತ್ತದೆ! ಒಟ್ಟಾರೆ ಬಳಕೆದಾರನಿಗೆ ನಷ್ಟ, ಕಾರ್ಪೊರೇಟ್‌ಗಳಿಗೆ ಲಾಭವೆ ಲಾಭ!



ಈ ಸಂದರ್ಭದಲ್ಲಿ ಡಿಜಿಟಲ್ ವಹಿವಾಟಿಗೆ ಬೆನ್ನೆಲುಬಾಗಬೇಕಿರುವ ಡಿಜಿಟಲ್ ಇಂಡಿಯ ಕಾರ್ಯಕ್ರಮ ಇಂದು ಎಲ್ಲಿದೆ ಎಂದು ನೋಡಹೊರಟರೆ ನಿರಾಶೆ ಕಾದಿದೆ. 2019ರ ಒಳಗಾಗಿ ಭಾರತವನ್ನು ಡಿಜಿಟಲ್ ಬ್ಯಾಂಕ್ ಕ್ಷೇತ್ರದಲ್ಲಿ ವಿಶ್ವನಾಯಕನ ಸ್ಥಾನಕ್ಕೇರಿಸಲಿದೆ ಎನ್ನಲಾದ 'ಡಿಜಿಟಲ್ ಇಂಡಿಯ' ಯೋಜನೆಯನ್ನು ಮೋದಿ ಸರ್ಕಾರ ಎರಡೂವರೆ ವರ್ಷಗಳ ಹಿಂದೆ ಭಾರಿ ಬಾಜಾಭಜಂತ್ರಿಯೊಂದಿಗೆ ಪ್ರಾರಂಭಿಸಿದುದನ್ನು ನೆನಪಿಸಿಕೊಳ್ಳಿ. ಡಿಜಿಟಲ್ ಇಂಡಿಯದ ಮೂಲಗುರಿ ಪ್ರಕಾರ ಮಾರ್ಚ್ 2017ರ ಒಳಗಾಗಿ 2.5 ಲಕ್ಷ ಗ್ರಾಮ ಪಂಚಾಯತುಗಳನ್ನು ಆಪ್ಟಿಕಲ್ ಫೈಬರ್ ತಂತಿ ಜಾಲದ ಮೂಲಕ ಒಂದಕ್ಕೊಂದು ಜೋಡಿಸಬೇಕಾಗಿದೆ. ಅದರಂತೆ ಮಾರ್ಚ್ 2016ರ ಒಳಗಾಗಿ 1 ಲಕ್ಷ ಗ್ರಾಮ ಪಂಚಾಯತುಗಳ ನಡುವೆ ಸಂಪರ್ಕ ಕಲ್ಪಿಸಬೇಕಾಗಿತ್ತು; ಆದರೆ ಅಕ್ಟೋಬರ್‌ತನಕ ಬರೀ 15,000 ಸಂಪರ್ಕಗಳಷ್ಟೆ ಮುಗಿದಿವೆ. ಇದು ಅನುಷ್ಠಾನದಲ್ಲಿನ ವಿಳಂಬದ ವಿಷಯವಾಯಿತು. ಆದರೆ ವಿಷಯ ಇದೊಂದೇ ಅಲ್ಲ, ಇನ್ನೂ ಹಲವಾರು ಇವೆ. ಶಿಕ್ಷಣ, ವೈದ್ಯಕೀಯ ಸೇವೆ, ಆಡಳಿತ ಇತ್ಯಾದಿಗಳ 'ಡಿಜಿಟಲೀಕರಣ' ಆಗಬೇಕಾಗಿದ್ದು ಆ ನಿಟ್ಟಿನಲ್ಲಿ ದತ್ತಾಂಶಗಳ ಕಂಪ್ಯೂಟರೀಕರಣ ಸೇರಿದಂತೆ ಮಾಡಬೇಕಾಗಿರುವ ಕೆಲಸ ಬೆಟ್ಟದಷ್ಟಿದೆ. ಕಾರ್ಯಕ್ರಮ ಯೋಜಿಸಿದಂತೆ ನಡೆದಿದ್ದರೆ ಈ ವರೆಗೆ 2 ಲಕ್ಷ ಗ್ರಾಮ ಪಂಚಾಯತುಗಳ ಜೋಡಣೆ ಕಾರ್ಯ ಮುಗಿಯಬೇಕಿತ್ತು, ಡಿಜಿಟಲ್ ಶಿಕ್ಷಣ, ಡಿಜಿಟಲ್ ಆಡಳಿತ, ಡಿಜಿಟಲ್ ಬ್ಯಾಂಕ್ ಇತ್ಯಾದಿಗಳು ಲಭ್ಯವಿರಬೇಕಿತ್ತು, ಪ್ರಸಕ್ತವಾಗಿ ಬ್ಯಾಂಕ್ ಶಾಖೆಗಳು 20-30 ಕಿಮೀ ದೂರದಲ್ಲಿ ಇರುವಂತಹ ಜಾಗಗಳಲ್ಲಿ ಡಿಜಿಟಲ್ ಬ್ಯಾಂಕ್ ಸೇವೆ ದೊರೆಯುತ್ತಿದ್ದರೆ ಜನರ ಬವಣೆಗಳನ್ನು ಒಂದಷ್ಟು ನೀಗಿಸಲು ಸಾಧ್ಯವಿತ್ತು, ಜನ ನಿಧಾನಕ್ಕೆ ನಗದುರಹಿತ ಪಾವತಿಯ ಬಗ್ಗೆ ತಿಳಿದುಕೊಂಡು ಅದಕ್ಕೆ ಹೊಂದಿಕೊಳ್ಳುತ್ತಿದರೊ ಏನೊ. ಡಿಜಿಟಲ್ ಇಂಡಿಯ ಕಾರ್ಯಕ್ರಮದ ಮತ್ತೊಂದು ಪ್ರಮುಖ ಉದ್ದೇಶವೆಂದರೆ 2019ರ ಒಳಗಾಗಿ 10 ಕೋಟಿ ಉದ್ಯೋಗಗಳ ಸೃಷ್ಟಿ. ಆದರೆ ವಾಸ್ತವದಲ್ಲಿ ಆಗಿರುವುದೇನು? ನೋಟು ರದ್ಧತಿಯಿಂದಾಗಿ ರೈತರು, ಅನೌಪಚಾರಿಕ ವಲಯದ ಲಕ್ಷಾಂತರ ಕಾರ್ಮಿಕರು ಮತ್ತು ಲಘು ಉದ್ದಿಮೆಗಳ ಪಾಲಿಗೆ 'ಕೆಟ್ಟ ದಿನಗಳು' ಬಂದಿವೆ.

ಅದೇ ವೇಳೆ ಈ ಹೊತ್ತು ಭ್ರಷ್ಟಾಚಾರ ಮತ್ತು ಕಪ್ಪುಹಣವನ್ನು ತಡೆಗಟ್ಟುತ್ತೇವೆ ಎಂದು ಬೊಂಬ್ಡಾ ಬಜಾಯಿಸುತ್ತಿರುವವರೆ ಅವ್ಯವಹಾರಗಳಲ್ಲಿ ತೊಡಗಿರುವುದನ್ನು ಕಾಣಬಹುದು. ಮೋದಿ ಸರ್ಕಾರದಲ್ಲಿ ಎಲ್ಲವೂ ನೆಟ್ಟಗಿಲ್ಲ ಎಂಬುದಕ್ಕೆ ಭಾರತದ ಮಹಾಲೆಕ್ಕಾಧಿಕಾರಿಯವರ ಇತ್ತೀಚಿನ ವರದಿಯೆ ಸಾಕ್ಷಿ. ಮೋದಿ ಸರ್ಕಾರದ ಅವ್ಯವಹಾರಗಳನ್ನು ಬಯಲಿಗೆಳೆಯುವ ಈ ವರದಿ ನಿರ್ದಿಷ್ಟವಾಗಿ ಪೀಯೂಷ್ ಗೋಯಲ್ ನೇತೃತ್ವದ ವಿದ್ಯುತ್ ಸಚಿವಾಲಯ ಮತ್ತು ಡಾ. ಹರ್ಷವರ್ಧನ್ ನೇತೃತ್ವದ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವಾಲಯಗಳ ಕಡೆ ಬೆಟ್ಟು ಮಾಡುತ್ತದೆ. ಕಳೆದ ಮೂರು ವರ್ಷಗಳಲ್ಲಿ ರೂ. 26,000 ಕೋಟಿಗೂ ಮಿಕ್ಕಿ (grant-in-aid) ಅನುದಾನ ಬಿಡುಗಡೆ ಮಾಡಿರುವ ಇವೆರಡು ಸಚಿವಾಲಯಗಳು ಅದಕ್ಕೆ ಸಂಬಂಧಿಸಿದಂತೆ ಯಾವ ದಾಖಲೆಗಳನ್ನೂ ಇರಿಸಿಲ್ಲವಂತೆ! ಇಲ್ಲಿ ಅನುದಾನ ಅಂದರೆ ಸರ್ಕಾರಕ್ಕೆ, ಸಂಸ್ಥೆಗಳಿಗೆ ಅಥವಾ ವ್ಯಕ್ತಿಗಳಿಗೆ ಅವರ ದೈನಂದಿನ ವೆಚ್ಚ, ಆಸ್ತಿ ಸೃಷ್ಟಿ ಮತ್ತು ಸೇವೆಗಳಿಗಾಗಿ ಸರ್ಕಾರದ ವತಿಯಿಂದ ಪಾವತಿಸುವ ಹಣ. ನಿಯಮಗಳಂತೆ ಇಂತಹ ಅನುದಾನದ ಮೊತ್ತ ವರ್ಷಕ್ಕೆ 5 ಕೋಟಿ ಮೀರಿದರೆ ದಾಖಲೆಪತ್ರಗಳನ್ನು ತಯಾರಿಸಬೇಕೆಂದಿದೆ.

ಸಹಾರಾ ಪೇಪರ್ಸ್ ಬಯಲುಗೊಳಿಸಿರುವಂತೆ ಸಹಾರಾ ಸಂಸ್ಥೆಯಿಂದ ಗುಜರಾತ್ ಸಿಎಂಗೆ 40 ಕೋಟಿ 7 ಲಕ್ಷ ರೂಪಾಯಿ ಪಾವತಿಯಾಗಿರುವ ಆರೋಪವನ್ನು ನರೇಂದ್ರ ಮೋದಿ ನಿರಾಕರಿಸಿಲ್ಲ ಎಂಬುದನ್ನು ಗಮನಿಸಬೇಕಾಗಿದೆ. ಚತುರ ಮೋದಿ ಆರೋಪಕ್ಕೆ ಉತ್ತರಿಸುವ ಬದಲು ಆರೋಪ ಮಾಡಿದವರನ್ನು ಗೇಲಿ ಮಾಡುವ ಮೂಲಕ ವಿಷಯವನ್ನು ತೇಲಿಸಿ ಜನರ ಗಮನವನ್ನು ತಿರುಗಿಸಿದ್ದಾನೆ!

ಖುದ್ದು ಬಿಜೆಪಿ ಪಕ್ಷಾಧ್ಯಕ್ಷ ಅಮಿತ್ ಶಾನೇ ಓರ್ವ ನಿರ್ದೇಶಕನಾಗಿರುವ ಅಹಮದಾಬಾದ್ ಜಿಲ್ಲಾ ಸಹಕಾರಿ ಬ್ಯಾಂಕಿನ ಮೇಲೆ ದಾಳಿ ಮಾಡಿದ್ದ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ನವಂಬರ್ 8ರಂದೇ ರೂ. 500 ಕೋಟಿ ಜಮೆಯಾಗಿರುವುದನ್ನು ಪತ್ತೆಹಚ್ಚಿದ್ದಾರೆ.

ಮೋದಿ ಸರ್ಕಾರಕ್ಕೆ ಕಪ್ಪು ಆರ್ಥಿಕತೆಯನ್ನು, ಕಾಳದಂಧೆಗಳನ್ನು ನಿಲ್ಲಿಸುವ ಉದ್ದೇಶವಾಗಲಿ ಪ್ರಾಮಾಣಿಕತೆಯಾಗಲಿ ಇಚ್ಛಾಶಕ್ತಿಯಾಗಲಿ ಇಲ್ಲ ಎನ್ನುವುದನ್ನು ಈ ಕೆಳಗಿನ ನಾಲ್ಕು ವಿಷಯಗಳು ಸ್ಪಷ್ಟವಾಗಿ ತೋರಿಸುತ್ತವೆ:

1) ಮೋದಿ ಸರ್ಕಾರ ರಾಜಕೀಯ ಪಕ್ಷಗಳು ಸ್ವೀಕರಿಸುವ ದೇಣಿಗೆಗಳ ವಿವರಗಳನ್ನು ಪಾರದರ್ಶಕವಾಗಿಸುವುದನ್ನು ವಿರೋಧಿಸುತ್ತಿದೆ. ರಾಜಕೀಯ ಪಕ್ಷಗಳಿಗೆ ದೇಣಿಗೆ ಎಂಬುದು ನಿಜಕ್ಕೂ ಭ್ರಷ್ಟಾಚಾರ, ಕಪ್ಪುಹಣದ ಗಂಗೋತ್ರಿಯಾಗಿದೆ. ಭಾರತದ ಪ್ರಜಾಪ್ರಭುತ್ವವನ್ನು ಕಾರ್ಪೊರೇಟ್ ಪ್ರಭುತ್ವವಾಗಿ ಮಾರ್ಪಡಿಸಿರುವ ಖಳನಾಯಕ ಇದೇ ಆಗಿದೆ. ಚುನಾವಣಾ ಆಯೋಗದ ಮಾಜಿ ಆಯುಕ್ತ ಟಿ.ಎಸ್.ಕೃಷ್ಣಮೂರ್ತಿ ಹೇಳುವಂತೆ ಅನೇಕ ರಾಜಕೀಯ ಪಕ್ಷಗಳು ಸ್ಥಾಪನೆಯಾಗುತ್ತಿರುವುದೆ ಕಪ್ಪುಹಣವನ್ನು ಬಿಳಿಯಾಗಿಸುವುದಕ್ಕೋಸ್ಕರ. ವಿಷಯ ಏನೆಂದರೆ ರಾಜಕೀಯ ಪಕ್ಷಗಳು ಸ್ವೀಕರಿಸುವ ದೇಣಿಗೆ ರೂ. 20,000 ಮೀರಿದರೆ ಮಾತ್ರ ದೇಣಿಗೆಯ ಮೂಲವನ್ನು ತೋರಿಸಬೇಕು ಮತ್ತು ತೆರಿಗೆ ಪಾವತಿಸಬೇಕು ಎಂದಿದೆ. ಹೀಗಾಗಿ ಒಬ್ಬನೇ ವ್ಯ... ಅಥವಾ ಸಂಸ್ಥೆ ನೂರಾರು, ಸಾವಿರಾರು ಅಜ್ಞಾತ ವ್ಯಕ್ತಿಗಳ ಹೆಸರಿನಲ್ಲಿ ದೇಣಿಗೆ ನೀಡುತ್ತವೆ ಮತ್ತು ಅವುಗಳ ಪ್ರತಿಯೊಂದೂ. ರೂ 20,000ಕ್ಕಿಂತ ಕಡಿಮೆ ಇರುತ್ತದೆ. ಇದರರ್ಥ ಇದೆಲ್ಲವೂ ಕಪ್ಪುಹಣ. ಸಹಾರಾ ಕಂಪೆನಿಯಿಂದ ಕನಿಷ್ಠ 18 ರಾಜಕೀಯ ಪಕ್ಷಗಳಿಗೆ ಕೋಟಿಗಟ್ಟಲೆ ಹಣ ಸಂದಾಯವಾಗಿರುವ ವಿಚಾರವನ್ನು ಸಹಾರಾ ಪೇಪರ್ಸ್ ಬಯಲುಗೊಳಿಸಿದೆ. ಇದು ಕೇವಲ ಒಂದು ಕಂಪೆನಿಯ ವಿಚಾರ. ಇಂತಹ ಇನ್ನೆಷ್ಟು ಕಂಪೆನಿಗಳು ಇರಬಹುದೆಂದು ನಾವೇ ಊಹಿಸಬಹುದು.


2) ಮೋದಿ ಸರ್ಕಾರ ವಿದೇಶೀ ದೇಣಿಗೆ ಕಾಯ್ದೆಗೆ ತುಂಬಾ ಅನುಕೂಲಕರವಾದ ತಿದ್ದುಪಡಿಯೊಂದ... ಮಾಡಿಕೊಂಡಿದೆ. ಡಿಸೆಂಬರ್ 19ರ ಕಾನ್ಪುರದ ಬಿಜೆಪಿ ರ್ಯಾಲಿಯಲ್ಲಿ ಮಾತನಾಡಿದ ಮೋದಿ ರಾಜಕೀಯ ಪಕ್ಷಗಳ... ವಿದೇಶೀ ದೇಣಿಗೆ ನಿಯಂತ್ರಣ ಕಾನೂನುಗಳಲ್ಲಿ (FCRA) ಒಂದೇ ಒಂದು ಪೂರ್ಣವಿರಾಮವನ್ನಾಗಲಿ ಅಲ್ಪವಿರಾಮವನ್ನಾಗಲಿ ಬದಲಾಯಿಸಿಲ್ಲ ಎಂದ. ಆದರೆ ಇದು ಶುದ್ಧ ಸುಳ್ಳು. ಖುದ್ದು ಆತನ ಮಂತ್ರಿ ಕಿರಣ್ ರಿಜಿಜು ಹೇಳಿರುವಂತೆ ಸರ್ಕಾರ ಇದೇ 2016ರ ಮೇನಲ್ಲಿ ಎಫ್‌ಸಿಆರ್‌ಎ ಕಾಯ್ದೆಗೆ ತಿದ್ದುಪಡಿ ತಂದು ವಿದೇಶೀ ಹಣದ ಮೂಲ ಯಾವುದು ಎಂಬುದರ ನಿರೂಪಣೆಯನ್ನು ಬದಲಾಯಿಸಿರುವುದಲ್ಲದೆ ಸದರಿ ತಿದ್ದುಪಡಿಗೆ ಸಂಸತ್ತಿನ ಅನುಮೋದನೆಯನ್ನೂ ಪಡೆದುಕೊಂಡಿದೆ. ಅಷ್ಟು ಮಾತ್ರವಲ್ಲ ಕಾನೂನಿನ ಕುಣಿಕೆಯಿಂದ ಪಾರಾಗುವುದಕ್ಕೋಸ್ಕರ ಕಾಯ್ದೆಯನ್ನು ಸೆಪ್ಟೆಂಬರ್ 2010ರಿಂದ ಅನ್ವಯವಾಗುವ ಹಾಗೆ ಮಾಡಲಾಗಿದೆ. ಹಾಗಾಗಿ ತಿದ್ದುಪಡಿ ಅನುಮೋದನೆ ಯಾದ ತಕ್ಷಣ ಈ ಸಂಬಂಧ ಸರ್ವೋಚ್ಚ ನ್ಯಾಯಾಲಯದಲ್ಲಿ ಹೂಡಿದ್ದ ಮೊಕದ್ದಮೆಯನ್ನು ಹಿಂಪಡೆಯಲಾಗಿದೆ!


3) ಮೋದಿ ಸರ್ಕಾರ ಭ್ರಷ್ಟಾಚಾರ ನಿರೋಧ ಕಾಯ್ದೆಗೆ ಮಾಡಿರುವ ತಿದ್ದುಪಡಿ ಭ್ರಷ್ಟಾಚಾರಕ್ಕೆ ಇನ್ನಷ್ಟು ಪ್ರೋತ್ಸಾಹ ನೀಡುವಂತಿದೆ. ಈ ಮಸೂದೆ ಎಲ್ಲಾದರೂ ಸಂಸತ್ತಿನಲ್ಲಿ ಅಂಗೀಕೃತವಾಗಿ ಜಾರಿಗೊಂಡಲ್ಲಿ ಭ್ರಷ್ಟ ರಾಜಕಾರಣಿ ಮತ್ತು ಅಧಿಕಾರಿಗಳ ಕೂಟಗಳಿಗೆ ಎಲ್ಲಾ ವಿಧದ ಗಂಭೀರ ತನಿಖೆಗಳಿಂದ ರಕ್ಷಣೆ ದೊರೆಯಲಿದೆ!

4) ಮೋದಿ ಸರ್ಕಾರ ಅಂತಾರಾಷ್ಟ್ರೀಯ ತೆರಿಗೆ ತಾಣಗಳಲ್ಲೊಂದಾದ ಸ್ವಿಜರ್‌ಲ್ಯಾಂಡ್ ಜತೆ ಒಪ್ಪಂದವೊಂದನ್ನು ಮಾಡಿಕೊಂಡು ಆ ಮೂಲಕ ದೊಡ್ಡ ದೊಡ್ಡ ಕಾಳಧನಿಕರು ಸ್ವಿಜರ್‌ಲ್ಯಾಂಡಿನ ಬ್ಯಾಂಕುಗಳಲ್ಲಿರುವ ತಮ್ಮ ಕಪ್ಪುಹಣವನ್ನು ಮತ್ತಷ್ಟು ಸುರಕ್ಷಿತ ತಾಣಗಳಿಗೆ ವರ್ಗಾಯಿಸಲು ಅನುವು ಮಾಡಿಕೊಟ್ಟಿದೆ!

ಭ್ರಷ್ಟಾಚಾರ ಮತ್ತು ಕಪ್ಪುಹಣದ ನಿಗ್ರಹಕ್ಕೆ ನಿಜಕ್ಕೂ ಮಾಡಬೇಕಿರುವುದೇನು? ಭ್ರಷ್ಟಾಚಾರವನ್ನು ಪೋಷಿಸಿ ಕಾಳಧನ ಉತ್ಪಾದಿಸುವ ಕಪ್ಪು ಆರ್ಥಿಕತೆಯನ್ನು ಕಾಳದಂಧೆಗಳನ್ನು ನಿಲ್ಲಿಸುವುದರೊಂದಿಗೆ ಮಲಿನಗೊಂಡಿರುವ ಇಡೀ ಆಡಳಿತ ವ್ಯವಸ್ಥೆಯನ್ನೂ 'ಸ್ವಚ್ಛ'ಪಡಿಸಬೇಕು ಅಲ್ಲವೆ? ಮೂಲತಃ ಇದನ್ನು ಮಾಡದೆ ಬರೀ ಡಿಜಿಟಲ್ ವಹಿವಾಟು ಎಂಬ ಮಂತ್ರದಂಡದಿಂದ ಭ್ರಷ್ಟಾಚಾರದ ಭೂತವನ್ನು ಉಚ್ಚಾಟಿಸಲು ಸಾಧ್ಯವೆ? ಇಲ್ಲ ಎನ್ನುತ್ತಿದೆ ಕೆನ್ಯಾ, ಟಾಂಜಾನೀಯ, ಜಿಂಬಾಬ್ವೆ ಮುಂತಾದ ದೇಶಗಳ ಅನುಭವ. ಕೊನೆಯದಾಗಿ, ಡಿಜಿಟಲ್ ಪಾವತಿಯನ್ನು ಬಳಕೆಗೆ ತರುವುದೆ ಸರ್ಕಾರದ ಉದ್ದೇಶವಾಗಿದ್ದರೆ ಇಷ್ಟೊಂದು ಸಾವುನೋವು ಕಷ್ಟನಷ್ಟಗಳಿಗೆ ಕಾರಣವಾಗಿರುವ ನೋಟು ರದ್ಧತಿಯ ಮಾರ್ಗವನ್ನು ಆಯ್ಕೆ ಮಾಡಿರುವುದು ಏಕೆ, ಎಂದು, ಹೇಗೆ, ಯಾರು? ಮೋದಿ ಸರ್ಕಾರವೂ ಬಾಯ್ಬಿಡುತ್ತಿಲ್ಲ, ರಿಸರ್ವ್ ಬ್ಯಾಂಕೂ ಮಾಹಿತಿ ನೀಡುತ್ತಿಲ್ಲ.

■ ಸುರೇಶ್ ಭಟ್ ಬಾಕ್ರಬೈಲ್





ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಆಧ್ಯಾತ್ಮ ಪರಂಪರೆ ವಿಕಾಸವಾದಕ್ಕೆ ಹೊರತೇ?

ಧರ್ಮ ದಾರಿಯೋ ಗುರಿಯೋ?

ಬೌದ್ಧರು ಬುದ್ಧರಾಗುವುದಿಲ್ಲ, ಜೈನರು ಜಿನರಾಗು ಲ್ಲ ಕ್ರೈಸ್ತರು ಕ್ರಿಸ್ತರಾಗುವುದಿಲ್ಲ, ಲಿಂಗಾಯತರು ಶರಣಾಗು ಲ್ಲ, ಮುಸ್ಲಿಮರು ಪೈಗಂಬರ್‌ಗಳಾವುದಿಲ್ಲ. ಬುದ್ಧನ, ಜ್ಞಾನಿಯಾದ ಜಿನನ, ಕ್ರಿಸ್ತನ, ಮಹಮದನ ಅಥವಾ ನ ಅಂತಿಮ ಉದ್ದೇಶವಾವುದೂ ಅಸಂಖ್ಯವಾಗಿ ತಮ್ಮ ಯಾಯಿಗಳನ್ನು ಸೃಷ್ಟಿಸಿ, ಅವರು ತಮ್ಮನ್ನು ಎಲ್ಲಾ ದಲ್ಲೂ ಭಜಿಸಿಕೊಂಡಿರಬೇಕೆಂಬ ಇರಾದೆ ವರೇನಾಗಿರಲಿಲ್ಲ. ಪ್ರಬುದ್ಧತೆಗೆ, ಉನ್ನತಕ್ಕೆ ತಾವು ಕೊಂಡ ದಾರಿಗೆ, ಅದರ ಬಗ್ಗೆ ಅರಿವಿರದ ಜನರನ್ನು ಕೊಂಡು ಮಹೋನ್ನತಿಯ ಗುರಿಗೆ ತಮ್ಮ ದಾರಿಯನ್ನು ಕೊಳ್ಳುವುದೇ ಆಗಿತ್ತು. ಆದರೆ ವ್ಯಕ್ತಿಪೂಜೆ ಎಂಬುದು ಆಧ್ಯಾತ್ಮವ್ಯಕ್ತಿಗಳ ಶಕ್ತಿಯನ್ನು ಮಂಕು ಮಾಡುವುದಷ್ಟೇ ೇ ಅವರ ಆಶಯದ ಅರಿವು ಸಂಪೂರ್ಣವಾಗಿ ಯಲ್ಲಿ ಸುತ್ತಿ ಅಡಗಿಸಲಾಗಿಬಿಡುತ್ತದೆ. ಇದು ಆಧ್ಯಾತ್ಮಿಕ ದಲ್ಲಾಗಿರುವ ಒಂದು ಐತಿಹಾಸಿಕ ದುರಂತ.


ುದ್ಧ ಪ್ರಶ್ನಿಸದೇ ತನ್ನನ್ನೇ ಒಪ್ಪಬೇಡಿರೆಂದು ಹೇಳುತ್ತಾನೆ. ಬುದ್ಧರಾಗುವ ಮಾರ್ಗದಲ್ಲಿ ಈ ಬುದ್ಧನು ಾದರೆ ಕೊಲ್ಲಿ ಎನ್ನುವ ರೂಪಕವನ್ನು ಎದುರಿಗಿಡುತ್ತಾನೆ. ಾಗುವುದು ಮಾರ್ಗವಷ್ಟೇ ಹೊರತು ಗುರಿಯಲ್ಲ ವುದನ್ನು ಪ್ರಬುದ್ಧನಾಗಿ ಮುಂದಿಡುತ್ತಾನೆ. ಬೌದ್ಧರಾಗಿ ರುವವರೆಗೂ ಅವನು ಬುದ್ಧನಾಗಲಾರ ಎಂಬ ು ಬುದ್ಧನಿಗಿತ್ತು. ಅದಕ್ಕೆಂದೇ ತನ್ನ ಹಿಂದೆ ೋಗಿರುವ ಅಸಂಖ್ಯಾತ ಅನಾಮಧೇಯ ಬುದ್ಧಂದಿರ ರೆಯನ್ನು ನೆನೆಯುತ್ತಾನೆ. ಆ ಬುದ್ಧಂದಿರ ಪರಂಪರೆಯ ಾಗಿರಲು ಹೆಮ್ಮೆ ಪಡುತ್ತಾನೆ. ಅದರಂತೆ ಮುಂದಿನ ರ ಪರಂಪರೆ ಮುಂದುವರಿಯಲೆಂದು ಅವನು ತ್ತಾನೆ. ಬೌದ್ಧ ಎನ್ನುವ ಸ್ಥಾಪಿತ ಧಾರ್ಮಿಕ ಚೌಕಟ್ಟನ್ನಲ್ಲ. ಸ್ತ ಎನ್ನುವುದು ಕೂಡ ಬುದ್ಧ ಅರಹಂತ, ತೀರ್ಥಂಕರ, ಎನ್ನುವಂತಿರುವುದು. ಅದು ಯೇಸುವಿನ ಎರಡನೆಯ ನಲ್ಲ. ಕ್ರಿಸ್ತನ ಪರಂಪರೆಯಲ್ಲಿ ಯೇಸುವು ಮೊದಲಿಗನೂ ಕೊನೆಯವನೂ ಅಲ್ಲ. ಈ ನಮ್ಮ ನಜರತ್ತಿನ ಯೇಸು ಕ್ರಿಸ್ತ ಶಿಲುಬೆಯ ಮೇಲೆ ಸತ್ತ. ಆದರೆ ಅವನ ಲ್ಲೂ, ಅವನ ಹಿಂದೂ, ಮುಂದೂ ಅನೇಕ ಕ್ರಿಸ್ತರು ೋಗಿದ್ದಾರೆ.

ದೇ ರೀತಿಯಲ್ಲಿ ಪಾರ್ಶ್ವನಾಥ, ಮಹಾವೀರ ಲಾದ ತೀರ್ಥಂಕರ, ಅಲ್ಲಮ, ಬಸವ, ಮಹಾದೇವಿ ಹ ಶರಣ, ಮಹಮದ್‌ನಂತಹ ಪೈಗಂಬರರು ಕೂಡ. ವೂ ಕೂಡ ಅಲ್ಲಿನ ಪರಿಭಾಷೆಯಲ್ಲಿ ಆಯಾ ಗಳನ್ನು ಕೊಟ್ಟುಕೊಂಡರು. ಹೆಸರುಗಳು ದೇಶದಿಂದ , ಭಾಷೆಯಿಂದ ಭಾಷೆಗೆ ಬದಲಾದವೇ ಹೊರತು, ಂದಲ್ಲಿ ಒಂದು ಆಧ್ಯಾತ್ಮಿಕ ಸೆಲೆಯನ್ನು ಹೊಂದಿರು ಆಗಿದ್ದಾರೆ. ಇನ್ನೂ ವಿಷದವಾಗಿ ಮತ್ತು ವಿವರವಾಗಿ ಬೇಕೆಂದರೆ, ಆ ಮೌಲಿಕ ಮೂಲವನ್ನೇ ಕೊಂಡು ಅವರು ಬದುಕಿದ್ದ ಸಮಾಜಕ್ಕೆ, ಸಂಸ್ಕೃತಿಗೆ ಆಗಿನ ಆಗುಹೋಗುಗಳಿಗೆ ಸ್ಪಂದಿಸಿದ್ದಾರೆ. ಹಾಗೆ ಾಜಿಕವಾಗಿ ಪಲ್ಲಟವಾಗುವ ವಿಷಯು ಗಳಲ್ಲಿ ಾದ್ದರಿಂದ ಅವರ ಹೆಸರುಗಳೂ ಗುರುತಾಗಿ ುಕೊಂಡಿವೆ. ಆದರೆ ಇವರ್‍ಯಾರೂ ತಮ್ಮ ಆಧ್ಯಾತ್ಮ ರೆಯ ಅರಿವನ್ನು ಮರೆತವರಲ್ಲ ಹಾಗೂ ತಮ್ಮದು ದೊಂದು ಮಾರ್ಗವೆಂದು ಭ್ರಮಿಸಿದವರೂ ಅಲ್ಲ.

ರ್ಮಿಕಾಚರಣೆಗಳು ಏಕೆ ಬೇಕು?

ನರ ಸಾಮಾಜಿಕ ಜೀವನ ಕ್ರಮದಲ್ಲಿ, ಸಾಂಸ್ಕೃತಿಕ ಕತೆಗಳಲ್ಲಿ, ತಂತ್ರಜ್ಞಾನಗಳಲ್ಲಿ ಅಭಿವೃದ್ಧಿ ಮತ್ತು ಗಳಾದಂತೆ ಆಧ್ಯಾತ್ಮಿಕತೆಯಲ್ಲೂ ಈ ವಿಕಾಸವಾದವಿದೆ. ಷ್ಯನ ಯಾವುದೇ ಜ್ಞಾನಗಳು, ನಡವಳಿಕೆಗಳು, ರಗಳು ಮತ್ತು ವ್ಯವಹಾರಗಳು ಪರಿಷ್ಕೃತಗೊಂಡಂತೆ ಕ ಕ್ಷೇತ್ರದಲ್ಲೂ ಪರಿಷ್ಕರಣೆಯಾಗುತ್ತಿರುತ್ತದೆ. ಈ ಣೆಗೆ ಕಾರಣ ಸಮಕಾಲವು ಒಡ್ಡುವ ಸವಾಲುಗಳು ಲ್ಲ, ಇತರ ಕ್ಷೇತ್ರಗಳಲ್ಲಿ ಆಗಿರುವ ಬದಲಾವಣೆಗಳಿಗೆ ುವುದೂ ಕೂಡ.


ಧ್ಯಾತ್ಮಿಕ ಕ್ಷೇತ್ರದಲ್ಲಿ ಪರಿಷ್ಕರಣೆ ಎಂದರೆ ಜಾಕಿ ಮೇಲೆ ಸಾಂಪ್ರದಾಯಿಕ ಸ್ಟಿಚ್ಡ್ ದೋತಿಯನ್ನು ಕೊಳ್ಳುವುದೋ, ದೀಪ ಬೆಳಗುವ ಜಾಗದಲ್ಲಿ ದೀಪಗಳಿಂದ ಅಲಂಕರಿಸುವುದೋ, ಓಂ, ನಮೋ ಾ, ಓಂ ಗಂ ಗಣಪತಯೇ ನಮಃ ಅಥವಾ ದೋ ಮಂತ್ರ ಅಥವಾ ಧ್ವನಿಯನ್ನು ಜೀವಂತ ಸ ಬಾಯಿಂದ ಕೇಳುವ ಬದಲು ರೆಕಾರ್ಡೆಡ್ ು 24 ಗಂಟೆಗಳೂ ಓದಿಸುವುದಲ್ಲ, ಇವು ಸಮೀಕೃತ ಕ ಆಚರಣೆಗಳಾಗುತ್ತವೆಯೇ ಹೊರತು ಖಂಡಿತ ಲ್ಲ, ಧಾರ್ಮಿಕತೆ ಅಧ್ಯಾತ್ಮದ ಕಡೆ ಹೊರಳುವುದಕ್ಕೆ



ಸಹಕಾರಿಯಾಗುವುದೇ ಹೊರತು ಅದೇ ಅಧ್ಯಾತ್ಮವಲ್ಲ. ಇದು ನಿಶ್ಚಯ. ಹಾಗಾಗಿಯೇ ಧರ್ಮವನ್ನು ದಾರಿ ಎಂದಷ್ಟೇ ಹೇಳುವುದು.

ನನ್ನ ಸ್ನೇಹಿತನ ಪುಟ್ಟ ಮಗುವಿನ ಶವಯಾತ್ರೆಯಲ್ಲಿ ಭಾಗವಹಿಸಿದ್ದೆ. ಅವರು ಕ್ರೈಸ್ತ ಸಂಪ್ರದಾಯದವರು. ಶವಯಾತ್ರೆಯ ದಾರಿಯಲ್ಲಿ ನಮೋ ಮರಿಯ ಹೇಳಿಕೊಂಡು ಹೋಗುತ್ತಿದ್ದರು. ಆಗ ಅದನ್ನು ಹೇಳದೇ ಮೊಬೈಲಿನಲ್ಲಿ ಏನೋ ಮಾಡಿಕೊಂಡು, ಹರಟೆ ಹೊಡೆದುಕೊಂಡು ಮತ್ತು ಅಲ್ಲಿ ಇಲ್ಲಿ ನೋಡಿಕೊಂಡು ಲಘುವಾಗಿ ಬರುತ್ತಿದ್ದ ಕ್ರೈಸ್ತ ಯುವಕರನ್ನು ಮತ್ತು ಇತರರನ್ನು ನನ್ನೊಡನೆಯೇ ನಡೆಯುತ್ತಿದ್ದ ಕ್ರೈಸ್ತ ಸಂಗಾತಿಯೊಬ್ಬರು ಗದರಿದರು. ನಮೋ ಮರಿಯಾ ಜಪವನ್ನು ಮಾಡುತ್ತಾ ಬರಲು ತಾಕೀತು ಮಾಡಿದರು.

ಅಲ್ಲಿ ಒಂದು ಮಗುವು ಮರಣಿಸಿದೆ. ನಿನ್ನೆಯವರೆಗೂ ನಮ್ಮಂತೆಯೇ ಈ ಭೂಮಿಯ ಮೇಲೆ ಬದುಕಿ ಬಾಳುತ್ತಿದ್ದ ಮಗುವು ಜ್ವರವೆಂಬ ಕಾರಣಕ್ಕೆ ನಮ್ಮನ್ನೆಲ್ಲಾ ತ್ಯಜಿಸಿ




ಹೊರಟುಹೋಗಿದೆ. ಇಂದು ಈ ಮಗು, ನಾಳೆ ನಾವು. ಇದು ತಪ್ಪಿಸಲಾಗದ ನೈಸರ್ಗಿಕ ನಿಯಮ. ಹಾಗಿರುವಾಗ ಪ್ರಸ್ತುತ ಬಾಳ್ವೆಯ ಆಂತರಿಕ ಸ್ವರೂಪವನ್ನು, ಉದ್ದೇಶವನ್ನು, ಘನತೆಯನ್ನು ನೆನಪಿಸಿಕೊಳ್ಳಲು ಅಥವಾ ಅದರ ಕಡೆಗೆ ಗಮನವೀಯಲು ಈ ಸಂದರ್ಭವನ್ನು ಉಪಯೋಗಿಸಿ ಕೊಳ್ಳಬೇಕಾಗಿರುವುದು ಒಂದು ಅಗತ್ಯ. ಹಾಗೆಯೇ ಅದರ ಸೆಲೆಯನ್ನು ಗಮನಿಸುವುದರಿಂದ ಮುಂದಿನ ನಮ್ಮ ನಡೆಗಳಲ್ಲಿ, ಅರಿವಲ್ಲಿ, ಕ್ರಿಯೆ ಮತ್ತು ಪ್ರತಿಕ್ರಿಯೆಗಳಲ್ಲಿ ಬದಲಾವಣೆಗಳನ್ನು ಕಾಣುತ್ತೇವೆ. ಒಬ್ಬನ ಸಾವಿನ ದರ್ಶನವಾದಾಗ, ಆತನು ನಮ್ಮಂತೆಯೇ ಇದ್ದು ಎಲ್ಲವನ್ನೂ ಬಿಟ್ಟು ತೆರಳಿದಾಗ, ಆತ ಕೋಪ, ತಾಪ, ದುರಾಶೆ, ನಿರಾಸೆ, ಸುಖ ಸಂತೋಷಗಳೆಲ್ಲಾ ಇದ್ದಕ್ಕಿದ್ದಂತೆ ವ್ಯರ್ಥ ಅಥವಾ ಅಸಂಗತ ಎನಿಸಿಬಿಟ್ಟಾಗ ಆತನಂತೆಯೇ ಇರುವ ತಮ್ಮದೇ ಆದ ಅವೇ ವಿಷಯಗಳ ವಿಚಾರವೇನು? ನನ್ನ ಹಟ, ಕೋಪ, ತಾಪಗಳ ಪ್ರಸ್ತುತಿ ಏನು ಎಂಬ ಅರಿವು ಆ ಹೊತ್ತಿಗಾದರೂ ಬರುವುದು. ಆಗ ದೂಷಿಸುವ ಜಾಗದಲ್ಲಿ ಮನ್ನಿಸಲು ಸಾಧ್ಯವಾಗುತ್ತದೆ. ಖಂಡಿಸುವ ಮನಸ್ಥಿತಿಯು ಕ್ಷಮಿಸುವಷ್ಟು ತಾತ್ಕಾಲಿಕ ಪಕ್ವತೆಯನ್ನಾದರೂ ಹೊಂದಿರುತ್ತದೆ. ಇಂತಹ ಅನೇಕ ತತ್ಕಾಲಗಳ ನಿರಂತರ ಅಭ್ಯಾಸ ಮುಂದೆ ಅನುಭಾವವಾಗುತ್ತದೆ. ಅದಕ್ಕೆಂದೇ ದೇವರ ನಾಮ, ಜಪ, ಧಾರ್ಮಿಕ ಗ್ರಂಥಗಳ ಪಠಣ ಇತ್ಯಾದಿಗಳ ನೆರವನ್ನು ಪಡೆಯುವುದು. ಅವೆಲ್ಲವೂ ಸಲಕರಣೆಗಳಾಗಿ ಕೆಲಸ ಮಾಡುತ್ತವೆ. ಯಾವುದೇ ಧಾರ್ಮಿಕವಿಧಿ ಮತ್ತು ಆಚಾರವಿಚಾರಗಳು, ಬಾಳ್ವೆಯ ಮತ್ತು ಸಂಗತಿಗಳ ಅಂತರಾಳಕ್ಕೆ ಮತ್ತು ಅಧ್ಯಾತ್ಮಕ್ಕೆ ಒಯ್ಯುವುದಾಗುತ್ತದೆಯೇ ಹೊರತು ಇನ್ನೇನೂ ಅಲ್ಲ. ಇನ್ನು ಸ್ವರ್ಗ, ನರಕ, ಮರಣಾನಂತರದ ಜೀವನ ಇತ್ಯಾದಿಗಳು ರೂಪಕಗಳೆಂದು ಪದೇಪದೇ ಹೇಳುವ ಅಗತ್ಯವಿಲ್ಲ.

ಮಹಮುದ್ ಪೈಗಂಬರ್ ನಿನ್ನ ನೆರೆಯವನು ಹಸಿದಿರುವಾಗ ನೀನು ಮೃಷ್ಟಾನ್ನ ಭೋಜನವನ್ನು ಮಾಡುವುದು ಸಲ್ಲದು, ನಿನ್ನ ಆಹಾರವನ್ನು ನೆರೆಯವರೊಂದಿಗೆ ಹಂಚಿಕೊಳ್ಳಲೇಬೇಕು ಎಂದು ಸಾತ್ವಿಕವಾದ ತಾಕೀತು ಮಾಡಿದಾಗ, ಒಬ್ಬಾತ ಕೇಳುತ್ತಾನೆ, "ನೆರೆಯವರೆಂದರೆ ಎಷ್ಟು ಮನೆಗಳು" ಎಂದು. ಅದಕ್ಕೆ ಮಹಮದ್ ಹೇಳುವುದು "ನಲವತ್ತು ಮನೆಗಳು" ಎಂದು. ಅವರು ನಲವತ್ತು ಎಂದು ಏಕೆ ಹೇಳಿದರೋ? ಆಗಿನ ಅವರ ಸಾಮಾಜಿಕ ಸನ್ನಿವೇಶವೇನಿದ್ದಿತೋ ತಿಳಿಯದು. ಆದರೆ ಒಂದೊಂದು ಮನೆಯವರೂ ತಮ್ಮ ಸುತ್ತಮುತ್ತಲ ನಲವತ್ತು ಮನೆಯವರ ಹಸಿವಿನ ಬಗ್ಗೆ ಕಾಳಜಿ ಹೊಂದುವವರಾದರೆ ಇಡೀ ವಿಶ್ವವೇ ಹಸಿವು ಮುಕ್ತವಾಗಿಬಿಡುವುದು. ಅನಾಥಮಗುವಿನ ಮುಂದೆ ನಿನ್ನ ಸ್ವಂತ ಮಗುವ ಮುದ್ದಾಡಬೇಡ ಎಂದು ಹೇಳುವ ಮಹಮದ್ ಅನಾಥಮಗುವಿನ ಅಂತರಾಳದಲ್ಲಿ ಉಂಟಾಗುವ ತಳಮಳಕ್ಕೇ ತಮ್ಮ ಕಾಳಜಿಯನ್ನು ತೋರುವುದು.

ವಿಕಾಸವೇ ಜೀವಂತಿಕೆಯ ಲಕ್ಷಣ

ಬಹುಪಾಲು ಲಿಂಗಾಯತರು ಸಾಮಾನ್ಯವಾಗಿ ತಮ್ಮದು ಲಿಂಗಾಯತ ಜಾತಿ ಅಥವಾ ಧರ್ಮ ಎಂದು ಗುರುತಿಸಿ ಕೊಳ್ಳುತ್ತಾರೆಯೇ ಹೊರತು ತಮ್ಮನ್ನು ಶರಣ ಅಥವಾ ಶರಣೆ ಎಂದು ಗುರುತಿಸಿಕೊಳ್ಳುವುದು ಅಥವಾ ಅಂತೆಯೇ ನಡೆದುಕೊಳ್ಳುವುದು ವಿರಳ. ಲಿಂಗಾಯತ ಧಾರ್ಮಿಕ ಆಚರಣೆಗಳಲ್ಲಿ ತೋರಿಸುವಷ್ಟು ಆಸಕ್ತಿ ತಮ್ಮನ್ನು ಶರಣನ್ನಾಗಿಸಿ ಕೊಳ್ಳುವುದರಲ್ಲಿ ಇಲ್ಲ. ಅಥವಾ ಆ ಶಕ್ತಿ ಇಲ್ಲ.

ಶತಶತಮಾನಗಳ ಹಿಂದಿನ ಶರಣತನವು ಇಂದಿನ ಕಾಲಘಟ್ಟಕ್ಕೆ ಮತ್ತಷ್ಟು ಮುಂದುವರೆದಿರುತ್ತದೆ. ಸಮಕಾಲೀನ ವಿದ್ಯಮಾನಗಳಿಗೆ ಮತ್ತಷ್ಟು ಎಚ್ಚರಿಕೆಯಿಂದ ಸ್ಪಂದಿಸುತ್ತದೆ ಅಥವಾ ಸ್ಪಂದಿಸುವಷ್ಟು ವಿಕಸಿತವಾಗಬೇಕು. ಆದೇ ಶರಣ ತತ್ವದ ಬೀಜವು ಪರಿಷ್ಕಾರಗೊಂಡು ಇಂದು ಮತ್ತಷ್ಟು ವಿಶಾಲ ವೃಕ್ಷವಾಗಿದ್ದು ಮತ್ತಷ್ಟು ಹೊಸ ಬೀಜಗಳನ್ನು ಕೊಡುವಂತಾಗುತ್ತಿರಬೇಕು. ಬಸವ ತತ್ವ ಎಂಬುದಿಲ್ಲ. ಅದು ಶರಣ ತತ್ವ. ಸಮುದಾಯ ಮತ್ತು ಸಾಮಾಜಿಕ ಪ್ರಜ್ಞೆಯೊಂದಿಗೆ ಆಧ್ಯಾತ್ಮಿಕ ದೃಷ್ಟಿಯನ್ನು ಹೊಂದುತ್ತಾ ಹೋದ ಬಸವನಿಗೆ ತನ್ನ ತತ್ವ ಎಂಬ ಯಾವುದೇ ವ್ಯಕ್ತಿಗತವಾದ ತತ್ವಗಳ ಭಾರಗಳನ್ನು ಹೊರಿಸುವ ಇರಾದೆಯಿರಲಿಲ್ಲ. ಶರಣ ಪರಂಪರೆಗೆ ತನ್ನ ವ್ಯಕ್ತಿಗತವಾದಂತಹ ಪ್ರಶ್ನೆಗಳನ್ನು, ಹುಡುಕಾಟ, ತಡಕಾಟಗಳನ್ನು, ಒಲವು, ನಿಲುವುಗಳನ್ನು ಒಡ್ಡುತ್ತಾ, ವ್ಯಕ್ತಿಗತವಾಗಿದ್ದ ಅವುಗಳನ್ನೆಲ್ಲಾ ಪರಿಷ್ಕರಿಸಿಕೊಂಡು ಶರಣತನದಲ್ಲಿ ಗುರುತಿಸಿಕೊಳ್ಳಲು ಸಾಧ್ಯ ಮಾಡಿಕೊಂಡ. ಬಸವನ ದಾರ್ಶನಿಕತೆಯ ನಿದರ್ಶನ ಅನುಭವ ಮಂಟಪ. ಕೂಡಲಸಂಗಮದೇವನ ಭಜನಾ ಮಂಡಳಿ ಅಲ್ಲ. ಬಿಂದು ಎಂಬ ಬಸವ ಸಿಂಧು ಎಂಬ ಶಿವಶರಣತನದಲ್ಲಿ ಒಂದಾದ ಬಗೆ ಅದು. ಅದೇ ರೀತಿಯಲ್ಲಿ ಗೌತಮನೆಂಬ ಬುದ್ಧನೂ, ಯೇಸುವೆಂಬ ಕ್ರಿಸ್ತನೂ, ಪಾರ್ಶ್ವ ನಾಥನೆಂಬ ತೀರ್ಥಂಕರನೂ, ಮಹಮದನೆಂಬ ಪೈಗಂಬರನೂ ಕೂಡ. ಅವರ್‍ಯಾರೂ ಮೊದಲಿಗರಲ್ಲ, ಕೊನೆಯವರೂ ಅಲ್ಲ. ಇಸ್ಲಾಮಿನ ನೇಮನೀತಿಗಳು ಇನ್ನಾರದ್ದೋ ಪ್ರಭಾವದಿಂದ ಛಿದ್ರವಾಗದಿರಲೆಂದು, ಅಡ್ಡದಾರಿ ಹಿಡಿದು



ಭಿನ್ನತೆ ಬೀಳದಿರಲೆಂದು ಮಹಮದರನ್ನೇ ಅಂತಿಮ ಪ್ರವಾದಿ ಎಂದು ಹೇಳಿದರೂ ಕೂಡಾ ಮಹಮದರು ಅಂತಿಮವೇನಾಗಿರಲಿಕ್ಕಿಲ್ಲ. ಅದೇ ಇಸ್ಲಾಂ ಧರ್ಮದ ಮಾರ್ಗದಲ್ಲಿ ಮುಂದೆ ಪೈಗಂಬರ್ ಎಂದು ಕರೆಸಿಕೊಳ್ಳದೆಯೇ ಅವನಂತೆಯೇ ಅನುಭೂತಿ ಪಡೆದುಹೋಗಿ ರುವವರ ಪರಂಪರೆಯನ್ನು ಅಲ್ಲಗಳೆಯಲಾಗದು. ಯೇಸುವಿನ ನಂತರ ಬಂದ ಅಸಂಖ್ಯಾತ ಕ್ರಿಸ್ತರ ಲೆಕ್ಕ, ಬುದ್ಧನ ನಂತರ ಬಂದ ಅಸಂಖ್ಯಾತ ಬುದ್ಧರ ಲೆಕ್ಕ ಯಾರಿಗಿದೆ? ನಮ್ಮೊಡನೆಯೇ ಇರುವ ಎಷ್ಟೋ ಶರಣರನ್ನು ನಾವೆಲ್ಲಿ ಗುರುತಿಸುತ್ತೇವೆ?

ಬುದ್ಧನಿಗಿಂತ ನಾನು ಪ್ರಬುದ್ಧನಾಗಿರುವ ಬುದ್ಧ ಎಂದರೆ, ಕ್ರಿಸ್ತನಿಗಿಂತ ಮುಂದುವರಿದ ಕ್ರಿಸ್ತ ನಾನು ಎಂದರೆ, ಬಸವನಿಗಿಂತ ವಿಕಸಿತ ಶರಣ ಎಂದು ಯಾರೊಬ್ಬನೇ ಹೇಳಿದರೂ, ಅವರುಗಳ ವ್ಯಕ್ತಿಪೂಜೆ ಮಾಡುವ ಅಭಿಮಾನಿಗಳು ಮುಗಿಬೀಳುತ್ತಾರೆ.

ಆಗ ದೇವರ ಮಗನೆಂದು ಕರೆದುಕೊಂಡ ಕ್ರಿಸ್ತನನ್ನು ಹೇಗೆ ಬಿಡದೇ ಹೋದರೋ, ಜೋನ್ ಆಫ್ ಆರ್ಕ್‌ಳನ್ನು ಹೇಗೆ ಅನುಮಾನಿಸಿದರೋ ಹಾಗೇ ಇಂದೂ ಆಗುತ್ತದೆ.

ಬುದ್ಧ, ಜಿನ, ಬಸವ, ಕ್ರಿಸ್ತ ಯಾರೇ ಆಗಲಿ ಅವರು ಪರಿಪೂರ್ಣ, ಅವರ ಮಾತುಗಳೇ ಅಂತಿಮ ಎನ್ನುವುದರ ಮೂಲಕ ಅವರ ಅನುಭಾವದ ಬೀಜಗಳನ್ನು ಬಿತ್ತದೇ ಬೆಳೆಯದೇ ಸುಂದರವಾದ ಪೆಟ್ಟಿಗೆಯಲ್ಲಿಟ್ಟು ಬಹು ಗೌರವದಿಂದ ಪೂಜಿಸಿದ್ದಷ್ಟೇ ಲಾಭ. ಅವರ ವಿಕಾಸ ಮತ್ತು ಬೆಳೆಯುವಿಕೆಯನ್ನು ಅಲ್ಲಿಗೇ ಸಮಾಪ್ತಿಗೊಳಿಸುವಿಕೆ. ಅವರ ಮುಂದುವರಿಕೆಯ ಭಾಗವಾಗಿ, ವಿಕಾಸದ ಹರವಾಗಿ ನಾನು ಅವರಿಗಿಂತ ಮುಂದುವರಿದವನು, ವಿಸ್ತೃತವಾದವನು ಎಂದು ಹೇಳುವವನು ಉದ್ಧಟನೆಂದೆನಿಸುತ್ತಾನೆ. ಏಕೆಂದರೆ, ಆಧ್ಯಾತ್ಮಿಕತೆಯನ್ನೂ ಪೌರಾಣಿಕತೆಯ ಚೌಕಟ್ಟಿಗಳಿಂದಲೇ ನೋಡುವ ನಮ್ಮ ಜನ ಆಧ್ಯಾತ್ಮಿಕ ವಿಕಾಸವನ್ನು ಗುರುತಿಸಲು ಸಿದ್ಧವಿರುವುದಿಲ್ಲ. ಬದಲಾಗಿ ಪವಾಡಸದೃಶ ಗುರುತುಗಳನ್ನು ಕೇಳುತ್ತಾರೆ. ಯೇಸು ಆಗಲೇ ಅಂತಹ ಗುರುತುಗಳನ್ನು ನಿರಾಕರಿಸಿದ್ದ. ಯಾವುದೇ ಅಂತಹ ಭೌತಿಕವಾದ ಪವಾಡಗಳನ್ನೂ ಮಾಡದ ಆ ಎಲ್ಲಾ ದಾರ್ಶನಿಕರು, ಅನುಭಾವಿಗಳು ಇಂದು ಪವಾಡಪುರುಷರನ್ನಾಗಿಸಿದ್ದಾರೆ. ಇನ್ನು ನಮ್ಮ ಪೀಳಿಗೆಯವರ್‍ಯಾರೇ ಆದರೂ ಅವರ ದಾರ್ಶನಿಕತೆಯ ಮುಂದುವರಿದ ಭಾಗವೆಂದು ಹೇಳುವ ಧೈರ್ಯವನ್ನು ಮಾಡಿದರೆ, ಆ ಉದ್ಧಟತನವನ್ನು ಧಾರ್ಮಿಕ ಸಮಾಜ ಮನ್ನಿಸೀತೇ?


ಬೆಳವಣಿಗೆ ಮತ್ತು ವಿಕಾಸ ಜೀವಂತಿಕೆಯ ಲಕ್ಷಣ. ಸತ್ತದ್ದು ಮಾತ್ರ ಬೆಳೆಯುವುದಿಲ್ಲ. ಆಧ್ಯಾತ್ಮಿಕತೆಯನ್ನು ಧಾರ್ಮಿಕತೆಯಲ್ಲಿ ಉಸಿಗಟ್ಟಿಸಿ ಕೊಂದಾಗ ಅದು ವಿಕಾಸವಾಗುವುದಿಲ್ಲ. ■

ಕವಿತೆ

ಹಾಡುತ್ತಲೇ ಇದೆ
ಪಂಜರದ ಹಕ್ಕಿ
ಕಿಟಕಿಯಲಿ ಕಣ್ಣಿಟ್ಟು
ಆಕಾಶ
ಸೂರ್ಯ ಚಂದ್ರ
ನಕ್ಷತ್ರಗಳ ಬಗ್ಗೆ
ಮತ್ತು
ರೆಕ್ಕೆ ಬಡಿತವ
ತಡೆದ
ಪಂಜರದ
ತಂತಿಗಳ ಬಗ್ಗೆ

ಹಾರುವುದ ತಡೆಯಬಹುದು
ಹಾಡುವುದ ತಡೆಯಬಹುದೇ?

ಯಾರಿಗೆ ಗೊತ್ತು
ಹೊಸವರುಷ
ಹಾಡುವುದ ತಡೆಯಬಹುದು




ಶಿಲುಬೆ

ಸೈತಾನನ
ಬಿಚ್ಚಿದ
ಮುಷ್ಟಿಯಲ್ಲಿ
ದೇಶದ ನಕಾಶೆಯೇ
ಶಿಲುಬೆ

ಏರುತ್ತಿದ್ದಾನೆ
ಶಿಲುಬೆಗೆ
ಪ್ರಜೆಯೆಂಬ
ಯೇಸು ಪ್ರಭು

ಹೊಸವರುಷ
ಸೈತಾನ ಮುಷ್ಟಿಯನು
ಮುಚ್ಚಬಹುದೇ?
ಇಲ್ಲ
ಸೈತಾನನೇ
ಶಿಲುಬೆಗೇರಬಹುದೇ?



ಕೊಡುಗೆ

ಹೊಸ ವರುಷಕ್ಕೆ
ಭಾರೀ
ಕೊಡುಗೆ

ಇನ್ನು ಮೇಲೆ
ವರುಷಕ್ಕೆ
ಸಾವಿರ ದಿನ
ಘೋಷಿಸಲಿದ್ದಾರೆ
ಪ್ರಭುಗಳು


ಮುಂದಿನ
ಚುನಾವಣೆ
ಬರುವವರೆಗೆ ಮಾತ್ರ.



■ ಎಂ.ಡಿ. ಒಕ್ಕುಂದ

ನೋಟು ರದ್ದತಿ ವಿರೋಧಿಗಳೆಲ್ಲ ಪಾಕಿಗಳೆ?

ಮೋದಿಯವರು ಇತ್ತೀಚೆಗೆ ತಮ್ಮ ಸ್ವ-ಕ್ಷೇತ್ರ ವಾರಣಾಸಿಯಲ್ಲಿ ಭಾಷಣ ಮಾಡುತ್ತಾ ನೋಟು ರದ್ದತಿ ವಿರೋಧಿಸುವವರೆಲ್ಲಾ ಪಾಕಿಸ್ತಾನಿಗಳು ಹಾಗೂ ಉಗ್ರವಾದಿಗಳ ಬೆಂಬಲಿಗರು ಎಂದು ವಾದಿಸಿದ್ದಾರೆ. ಆದರೆ ಮೋದಿಯವರೇ, ನಿಮ್ಮದೇ ಎನ್‌ಡಿಎ ಬಣದ ಆಂಧ್ರದ ಚಂದ್ರಬಾಬು ನಾಯ್ಡು ಒಡಿಶಾದ ನವೀನ ಪಟ್ನಾಯಕ್ ಹಾಗೂ ಶಿವಸೇನೆಯ ಉದ್ಧವ್ ಠಾಕರೆ ಕೂಡ ನಿಮ್ಮ ನೋಟು ರದ್ದತಿ ಯೋಜನೆ ಒಂದು ದೊಡ್ಡ ತಪ್ಪು ನಿರ್ಧಾರ ಎಂದು ಹೇಳಿರುವರಲ್ಲ? ಈ ಬಗ್ಗೆ ನೀವೇನು ಹೇಳುತ್ತೀರಿ? ನಿಮ್ಮ ಪ್ರಕಾರ ನಾಯ್ಡು, ಪಟ್ನಾಯಕ್, ಉದ್ಧವ್ ಇವರೆಲ್ಲಾ ಪಾಕಿಸ್ತಾನಿಗಳೇ? ಭಯೋತ್ಪಾದಕರ ಬೆಂಬಲಿಗರೇ? ಅಥವಾ ಕಾಳಧನಿಕರ ರಕ್ಷಕರೇ?



ನೋಟು ರದ್ದತಿಯ ಬಗ್ಗೆ ತಮ್ಮ ಅಸಮಾಧಾನ ಹೊರಹಾಕಿರುವ ನಿಮ್ಮದೇ ಗೃಹಮಂತ್ರಿ ರಾಜನಾಥ್ ಸಿಂಗ್ ಮತ್ತು ಹಿರಿಯ ಅಡ್ವಾಣಿಯವರೂ ಪಾಕಿಸ್ತಾನದ ಬೆಂಬಲಿಗರೇ? ಅಲ್ಜೈಮರ್ಸ್ ರೋಗದಿಂದ ಬಳಲುತ್ತಿರುವ 92 ವರ್ಷದ ವಾಜಪೇಯಿಯವರು ಈಗ ಆಲೋಚಿಸುವ ಮತ್ತು ಮಾತನಾಡುವ ಸ್ಥಿತಿಯಲ್ಲಿ ಇಲ್ಲ, ಇಲ್ಲದಿದ್ದರೆ ಅವರಂತೂ ಈ ನೋಟು ರದ್ಧತಿಯನ್ನು ಕಠೋರ ಶಬ್ದಗಳಿಂದ ವಿರೋಧಿಸುತ್ತಿದ್ದದ್ದು ಖಂಡಿತ.

ಕಳೆದ ಒಂದೂವರೆ ತಿಂಗಳಿನಿಂದ ಬ್ಯಾಂಕಿನ ಎದುರು ನಿಂತು ಬಸವಳಿದು ಮೋದಿ ಸರ್ಕಾರವನ್ನು ಹೀನಾಯವಾಗಿ ಶಪಿಸುತ್ತಿರುವ ಕೋಟ್ಯಂತರ ಮಹಿಳೆಯರು ಮತ್ತು ಮುದುಕರೆಲ್ಲಾ ಪಾಕಿಸ್ತಾನಿಗಳಲ್ಲ. ಅವರು ನಮ್ಮದೇ ದೇಶದ ಅಸಹಾಯಕ ಪ್ರಜೆಗಳು. ಬ್ಯಾಂಕ್ ಮುಂದೆ ಲೈನಿನಲ್ಲಿ ನಿಂತು ಮರಣ ಹೊಂದಿರುವ 108 ಜನ ಅಮಾಯಕರು ಪಾಕ್ ಉಗ್ರವಾದಿಗಳೂ ಆಗಿರಲಿಲ್ಲ. ಮೇಲಾಗಿ ಹೀಗೆ ಸತ್ತವರಲ್ಲಿ ಇಬ್ಬರು ಗಡಿಯಲ್ಲಿ ಹೋರಾಡಿದ ನಿವೃತ್ತ ಸೈನಿಕರೂ ಇದ್ದಾರೆ. ಅವರೆಲ್ಲಾ ನಮ್ಮದೇ ಭಾರತೀಯ ಬಂಧುಗಳಾಗಿದ್ದಾರೆ.

ಮೋದಿ ತನ್ನದೇ ದೇಶದ 130 ಕೋಟಿ ಜನರನ್ನು ಘೋರ ಕಷ್ಟಕ್ಕೆ ನೂಕಿ, ಲಕ್ಷಾಂತರ ಸಣ್ಣ ಉದ್ಯಮಗಳು ಬಂದ್ ಆಗಿ ಒಂದು ಕೋಟಿ ಕಾರ್ಮಿಕರು ತಮ್ಮ ನೌಕರಿ ಕಳೆದುಕೊಂಡು ಬೀದಿಗೆ ಬೀಳುವಂತೆ ಮಾಡಿದ್ದಾರೆ. ತಮ್ಮ ಚೇಲಾ ಉದ್ಯಮಿ ಅಂಬಾನಿಯ ಜಿಯೋ ಮನಿ ಅಥವಾ ಚೀನಾದ ಪೇಟಿಎಂ ಕಂಪನಿಗಳ ಸೇಲ್ಸ್‌ಮ್ಯಾನ್‌ನಂತೆ ಹಾಗೂ ವರ್ತಿಸುತ್ತಿರುವ ಮೋದಿಯ ಮತ್ತಾತನ ಭಕ್ತ ಗಣದ ಬೂಟಾಟಿಕೆ ಈಗಲಾದರೂ ನಿಲ್ಲಬೇಕಿದೆ.

ಮೋದಿ ಕೇವಲ ತನ್ನ ಭಾಷಣ ಕಲೆ ಹಾಗೂ ಸಾಮಾಜಿಕ ಮಿಡಿಯಾವನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಂಡು ರೂ. 18 ಸಾವಿರ ಕೋಟಿ ಭ್ರಷ್ಟ ಹಣ ಖರ್ಚು ಮಾಡಿ 2014 ರ ಚುನಾವಣೆ ಗೆದ್ದಿದ್ದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೆ ಇಂತಹ ಕಪಟ ತಂತ್ರ ರಾಹುಲ್ ಗಾಂಧಿಗೆ ಗೊತ್ತಿಲ್ಲ.

ಅದಕ್ಕೇ ಬಿಜೆಪಿಯವರು ರಾಹುಲರನ್ನು ಅಪ್ರಬುದ್ಧ ಎಂದು ಕರೆಯುವುದು. ರಾಹುಲ್ ಗಾಂಧಿ ಮೋದಿ ವಿರುದ್ಧ ಅದೇನೋ ಬಾಂಬ್ ಸಿಡಿಸುತ್ತೇನೆ ಎಂದು ಹೇಳಿದ್ದಕ್ಕೆ ಉತ್ತರವಾಗಿ ಮೋದಿಯವರು "ರಾಹುಲ್ ಪ್ರಬುದ್ಧರಲ್ಲ, ಜನ ಅವರನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ, ಈಗೀಗ ಅವರು ಭಾಷಣ ಮಾಡುವುದನ್ನು ಕಲಿಯುತ್ತಿದ್ದಾರೆ ಅಷ್ಟೇ" ಎಂದು ವ್ಯಂಗವಾಡಿದ್ದಾರೆ. ಹಾಗಾದರೆ ಪ್ರಧಾನಿ ಮೋದಿ ಪ್ರಬುದ್ಧರೇ?

ನಿಜವಾಗಿಯೂ ಮೋದಿ ಪ್ರಬುದ್ಧರೂ ಅಲ್ಲ; ಅವರು ಅರ್ಥಶಾಸ್ತ್ರದ ಪ್ರಾಥಮಿಕ ಜ್ಞಾನವನ್ನೂ ಹೊಂದಿಲ್ಲ, ಇದಕ್ಕೆ ಸಾಕ್ಷಿ ಅವರು ಯಾವುದೇ ಪೂರ್ವ ಸಿದ್ಧತೆ ಇಲ್ಲದೆ ಹಾಗೂ ತನ್ನ ಕ್ಯಾಬಿನೆಟ್ಟಿನ ಸಹೋದ್ಯೋಗಿಗಳನ್ನೂ ಕೇಳದೆ ಏಕಾಏಕಿ ನೋಟು ರದ್ದತಿ ಹೇರಿ ತಕ್ಷಣ ಜಪಾನಿಗೆ ಓಡಿಹೋಗಿದ್ದು.

ಅದಕ್ಕಾಗಿಯೇ ಒಂದೂವರೆ ತಿಂಗಳಿನಿಂದ ಸಂಸತ್ತಿನಲ್ಲಿ ವಿರೋಧ ಪಕ್ಷದವರನ್ನು ಎದುರಿಸುವ ನೈತಿಕ ಧೈರ್ಯವಿಲ್ಲದೇ ಮೋದಿಯವರು ಏನೇನೋ ಬಾಲಿಶ ನೆಪವೊಡ್ಡಿ ಪಲಾಯನ ಗೈಯುತ್ತಿರುವುದು. ಮೋದಿಯ ನೋಟು ರದ್ದತಿ ಯೋಜನೆ ಪ್ರಬುದ್ಧ ಯೋಜನೆ ಆಗಿದ್ದರೆ ಅವರು ಕೇವಲ 48 ದಿನಗಳಲ್ಲಿ 70 ಕ್ಕೂ ಹೆಚ್ಚು ತಿದ್ದುಪಡಿ ತರುತ್ತಿರಲಿಲ್ಲ, ಈಗ ಈ ತಿದ್ದುಪಡಿ ನೋಡಿದಾಗ ಒಬ್ಬ ತಿರುಕನ ತೇಪೆ ಹಚ್ಚಿದ ಕೊಳಕು ಅಂಗಿಗಿಂತ ಹೆಚ್ಚು ಅಸ್ತವ್ಯಸ್ತವಾಗಿ ಕಾಣುತ್ತಿದೆ.

ತಾನೇ ಮಹಾ ಬುದ್ಧಿವಂತ ಎಂದು ತಪ್ಪಾಗಿ ತಿಳಿದುಕೊಂಡಿರುವ ಮೂರ್ಖ ವ್ಯಕ್ತಿಯೇ ಅಪ್ರಬುದ್ಧ ವ್ಯಕ್ತಿಗಿಂತ ಹೆಚ್ಚು ಅಪಾಯಕಾರಿ ಎಂದು ದಾರ್ಶನಿಕರು ಹೇಳಿರುವುದು ಅಕ್ಷರಶಃ ಸತ್ಯವಾಗಿದೆ. ಹಾಗೆಯೇ ದ್ವಾರಕೆಯ ಶಂಕರಾಚಾರ್ಯರು ಹೇಳಿರುವಂತೆ ಸಮಯವೇ ಈ ಘೋರ ಕುಕರ್ಮದ ಲೆಕ್ಕಾಚಾರವನ್ನು ಇದೇ ಜನ್ಮದಲ್ಲಿ ಚುಕ್ತಾ ಮಾಡುತ್ತದಂತೆ.

- ಜೆ.ರವಿಕಿರಣ, ಮೈಸೂರು

'ನಗದು-ರಹಿತ'ವೋ 'ಮೆದುಳು-ರಹಿತ'ವೋ

'ಗೆಲುವಿಗೆ ಹತ್ತಾರು ಅಪ್ಪಂದಿರು, ಆದರೆ ಸೋಲು ಮಾತ್ರ ಅನಾಥ' ಎಂಬ ನಾಣ್ನುಡಿ ಇದೆ. ಈ ಮಾತು ಈಗಿನ ನೋಟು ರದ್ಧತಿಗೂ ಅನ್ವಯವಾಗುತ್ತದೆ. ನವಂಬರ್ 8ಕ್ಕೆ ಮೋದಿ ನೋಟು ರದ್ಧತಿ ಘೋಷಿಸಿದ ಮರುದಿನ ಅನೇಕ ರಾಜಕೀಯ ನೇತಾರರು ಇದು ಮೂಲತಃ ತಮ್ಮ ಐಡಿಯಾ ಆಗಿತ್ತು, ದೇಶದ ಹಿತದ ದೃಷ್ಟಿಯಿಂದ ತಾವೇ ಮೋದಿಗೆ ಈ ಸಲಹೆ ಕೊಟ್ಟಿದ್ದು ಎಂದು ಜಂಬದಿಂದ ಹೇಳಿಕೊಂಡಿದ್ದರು.



ನವೆಂಬರ್ ಎಂಟರ ರಾತ್ರಿ ಪ್ರಧಾನಿ ಮೋದಿ ನೋಟು ರದ್ಧತಿ ಘೋಷಿಸಿ ಮರುದಿನ ವಿದೇಶಕ್ಕೆ ಹಾರಿದ ಮೇಲೆ ಆಂಧ್ರದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು "ಈ ನೋಟು ರದ್ಧತಿ ಮೂಲತಃ ತನ್ನ ಐಡಿಯಾ ಆಗಿತ್ತು ಹಾಗೂ 2014 ರಲ್ಲಿಯೇ ಈ ಸಲಹೆಯನ್ನು ತಾನು ಹೊಸ ಎನ್‌ಡಿಎ ಸರಕಾರಕ್ಕೆ ಕೊಟ್ಟಿದ್ದೆ" ಎಂದು ತನ್ನ ಬೆನ್ನು ತಾನೇ ಚಪ್ಪರಿಸಿಕೊಂಡಿದ್ದರು. ಆದರೆ ಈಗ - ಒಂದೂವರೆ ತಿಂಗಳ ನಂತರ - ಅದೇ ನಾಯ್ಡು ತಿಪ್ಪರ ಲಾಗ ಹಾಕಿ "ನೋಟು ನಿಷೇಧ ನಮ್ಮ ಸಲಹೆಯಾಗಿರಲಿಲ್ಲ, ಮೋದಿಯ ಅಜ್ಞಾನ ಹಾಗೂ ಆತುರದಿಂದಾಗಿ 9ದು ಆಗಿಹೋಗಿದೆ. ನಗದು ಬಿಕ್ಕಟ್ಟು ಉಂಟಾಗಿದ್ದು ನಿಜ, ದೈನಂದಿನ ಅಗತ್ಯತೆಗಳಿಗೂ ಹಣ ಇಲ್ಲದಂತಾಗಿದೆ ಎಂಬುದೂ ನಿಜ" ಎಂದು ಒಪ್ಪಿಕೊಂಡಿದ್ದಾರೆ.


ನೋಟು ನಿಷೇಧದಿಂದ ಉಂಟಾಗಿರುವ ಬಿಕ್ಕಟ್ಟನ್ನು 1984ರ ಆಗಸ್ಟ್‌ನಲ್ಲಿ ಆಂಧ್ರದಲ್ಲಿ ಎನ್‌ಟಿಆರ್ ವಿರುದ್ಧ ತನ್ನ ಪಕ್ಷದಲ್ಲಿ ಉಂಟಾಗಿದ್ದ ದಂಗೆಗೆ ಹೋಲಿಕೆ ಮಾಡಿರುವ ನಾಯ್ಡು "ಆ ತೀವ್ರ ಬಿಕ್ಕಟ್ಟು ಸಹ ಕೇವಲ 30 ದಿನಗಳಲ್ಲಿ ಮುಗಿದುಹೋಗಿತ್ತು, ಆದರೆ ಈಗ ನೋಟು ನಿಷೇಧದಿಂದ ಉಂಟಾಗಿರುವ ಬಿಕ್ಕಟ್ಟು 45 ದಿನಗಳಾದರೂ ಮುಂದುವರೆದಿದೆ. ಈ ಘೋರ ಬಿಕ್ಕಟ್ಟು ಇನ್ನೂ ಮೂರು ನಾಲ್ಕು ತಿಂಗಳು ಮುಂದುವರಿಯುವಂತೆ ಕಾಣುತ್ತಿದೆ" ಎಂದು ಪಶ್ಚಾತ್ತಾಪದಿಂದ ಹೇಳಿದ್ದಾರೆ.

ನೋಟು ನಿಷೇಧ ತನ್ನದೇ ಐಡಿಯಾ ಎಂದು ಬೀಗುತ್ತಿದ್ದ ಹಾಗೂ ಮೊದಲಿಗೆ ಮೋದಿಯ ನಡೆಯನ್ನು ಸಂಪೂರ್ಣ ಬೆಂಬಲಿಸಿದ್ದ ಆಂಧ್ರ ಪ್ರದೇಶ ಮುಖ್ಯಮಂತ್ರಿ ನಾಯ್ಡು ಈಗ ತಲೆ ಚಚ್ಚಿಕೊಳ್ಳುತ್ತಿದ್ದಾರಂತೆ. ಸ್ವತಃ ಚಂದ್ರಬಾಬು ನಾಯ್ಡು ಅವರೇ ಪಕ್ಷದ ಶಾಸಕರು, ಸಂಸದರ ಸಮ್ಮುಖದಲ್ಲಿ ಇದನ್ನು ಹೇಳಿದ್ದಾರೆ.

ಇದಕ್ಕೆ ವ್ಯತಿರಿಕ್ತವಾಗಿ "ಆ ಚಂದ್ರಬಾಬು ನಾಯ್ಡು ಮಾತು ಕೇಳಿ ನಾನು ನೋಟು ರದ್ದತಿ ಮಾಡಿ ಜೀವನದ ಅತೀದೊಡ್ಡ ತಪ್ಪು ಮಾಡಿದ್ದೇನೆ. ನಾಯ್ಡು ಇಂಗ್ಲಿಷಿನಲ್ಲಿ ವಿವರಿಸಿದ್ದು ನನಗೆ ಸರಿಯಾಗಿ ಅರ್ಥ ಆಗಿರಲಿಲ್ಲ" ಎಂದು ಕಳೆದ ವಾರ ಪ್ರಧಾನಿ ಮೋದಿಯವರು ಹೈದರಾಬಾದಿಗೆ ಬಂದಿದ್ದಾಗ ತೆಲಂಗಾಣ ಮುಖ್ಯಮಂತ್ರಿ ಚಂದ್ರಶೇಖರ ರಾವ್ ಅವರಲ್ಲಿ ಅಲವತ್ತುಕೊಂಡಿದ್ದರು ಎಂದು ಹೈದ್ರಾಬಾದಿನ ಪತ್ರಿಕೆಗಳಲ್ಲಿ ಸುದ್ದಿಯಾಗಿತ್ತು, ಆ ಸುದ್ದಿಯಲ್ಲಿ ಸತ್ಯಾಂಶವಿರುವುದು ನಿಜ.

ನಾಯ್ಡು ಮತ್ತು ಮೋದಿ ತಾವು ಮಾಡಿರುವ ಭಯಂಕರ ತಪ್ಪನ್ನು, ಒಬ್ಬರು ಇನ್ನೊಬ್ಬರ ಮೇಲೆ ಹೊರಿಸಿ, ಜನರ ಕೋಪವನ್ನು ಬೇರೆಡೆ ತಿರುಗಿಸಿ ತಾವು ಬಚಾವಾಗಲು ವ್ಯರ್ಥ ಪ್ರಯತ್ನ ಮಾಡುತ್ತಿದ್ದಾರೆ ಅಷ್ಟೇ. ಈ ಇಬ್ಬರೂ ಭಾರತದ ಆರ್ಥಿಕ ವ್ಯವಸ್ಥೆಯ ಆಳ ಮತ್ತು ಅಗಾಧತೆಯ ಬಗ್ಗೆ ಸರಿಯಾದ ಜ್ಞಾನವಿಲ್ಲದೆ, ತಮ್ಮ ಅತಿ ಬುದ್ಧಿವಂತಿಕೆ ತೋರಿಸಲು ಹೋಗಿ, ಇಡೀ ದೇಶದ ಜನರ ಮೇಲೆ ಹೊರಿಸಿರುವ ಭಾರಿ ಅವಿವೇಕದ ಯೋಜನೆಯಿದೆ. ಈ ತಪ್ಪನ್ನು ಇನ್ನು ಎರಡು ಮೂರು ವರ್ಷ ಸುಲಭದಲ್ಲಿ ಸರಿ ಮಾಡಲು ಸಾಧ್ಯವಿಲ್ಲ, ಕಾರಣ ಈ ನೋಟು ರದ್ಧತಿಯಿಂದ ಅತೀಹೆಚ್ಚು ಕಷ್ಟ ನಷ್ಟಕ್ಕೆ ತುತ್ತಾಗಿರುವವರು ಬಡ ಜನರು, ಕೆಳ ಮಧ್ಯಮ ವರ್ಗದ ಸ್ವ-ಉದ್ಯೋಗಿಗಳು ಹಾಗೂ ಸಣ್ಣ ವ್ಯಾಪಾರಿಗಳು. ಮೇಲಾಗಿ ಎಂಬತ್ತಕ್ಕೂ ಹೆಚ್ಚು ಜನರು ಬ್ಯಾಂಕ್ ಅಥವಾ ಎಟಿಎಂ ಎದುರು ಗಂಟೆಗಟ್ಟಲೆ ಸರತಿ ನಿಂತು ಸಾವಿಗೀಡಾಗಿದ್ದಾರೆ. ಈ ಮೃತರ ಕುಟುಂಬದ ಕಣ್ಣೀರು ಮೋದಿ ಮತ್ತು ನಾಯ್ಡುಗೆ ತಟ್ಟದೇ ಇರದು.

ನೋಟು ರದ್ಧತಿಯ ಯೋಜನೆಯ ಬಗ್ಗೆ ಕೇವಲ 45 ದಿನಗಳಲ್ಲಿ ನೂರಾರು ತಿದ್ದುಪಡಿ ಕೇಂದ್ರ ಸರಕಾರ ತಂದಿದೆ. ಇದರಿಂದ ಸಾಬೀತಾಗುವುದೇನೆಂದರೆ - ನವಂಬರ್ 8 ರಂದು ಲಗುಬಗೆಯಿಂದ ತಂದ ನೋಟು ರದ್ಧತಿ ಯೋಜನೆಯು ಸಂಪೂರ್ಣ ಅರೆ-ಬೆಂದ ಯೋಜನೆಯಾಗಿತ್ತು ಹಾಗೂ ಯಾವುದೇ ಪೂರ್ವ ಸಿದ್ಧತೆಯಿಲ್ಲದೇ ಮತ್ತು ಯಾವುದೇ ಅನುಭವಿ ಅರ್ಥಶಾಸ್ತ್ರಜ್ಞರ ಸಲಹೆ ಪಡೆಯದೇ



ಕೇವಲ ಮೂರು ಮೂರ್ಖ ರಾಜಕಾರಣಿಗಳು ಕೂ... ಯೋಜಿಸಿದ ಬಾಲಿಶ ಯೋಜನೆ ಇದಾಗಿತ್ತು, ಅದ... ಇಷ್ಟೊಂದು ತಿದ್ದುಪಡಿ ತರಬೇಕಾಯಿತು ಎಂಬು... ಆದರೆ ಈ ಚಂಡ ಮುಂಡ ಭಂಡರು ತಮ್ಮ ತಪ್ಪ... ಒಪ್ಪಿಕೊಳ್ಳುವ ಬದಲು 'ನಗದು-ರಹಿತ' ಆರ್ಥಿಕ ವ್ಯವಸ್ಥೆ... ಹೆಸರಲ್ಲಿ 'ಮೆದುಳು-ರಹಿತ' ವ್ಯವಸ್ಥೆಯಾದ ಚೀನಾ... ಪೇಟಿಎಂ ಅಥವಾ ಅಂಬಾನಿಯ ಜಿಯೋ-ಮನಿಯಂತ... ಕಂಪನಿಗಳಿಗೆ ವಾರ್ಷಿಕ ಎರಡು ಲಕ್ಷ ಕೋಟಿ ರೂಪಾ... ಲಾಭ ತರುವಂತಹ ಡಿಜಿಟಲ್ ಕಾರ್ಡ್ ವ್ಯವಸ್ಥೆಯ... ಜನರ ಮೇಲೆ ಜಬರ್ದಸ್ತಿ ಹೇರುವ ಷಡ್ಯಂತ್ರ ಮೋ... ಸರಕಾರ ಮಾಡುತ್ತಿರುವುದು ಈ ಸರಕಾರ ಮಾನವೀ... ಸಂವೇದನೆ ಕಳೆದುಕೊಂಡು ಶುದ್ಧ ವ್ಯಾಪಾರಿ ಸಂಸ್ಥೆ ಆಗಿ... ಎಂಬುದಕ್ಕೆ ಸಾಕ್ಷಿ.

- ಪ್ರತೀಕ್ ಶೆಟ್ಟಿ, ಮಂಗಳೂರು

ಸೂಪರ್ ಮ್ಯಾನ್ ಮೋದಿ ಮತ್ತು ಪಾಪರ್ ಮ್ಯಾನ್ ಭಾರತೀಯ

ಕೇಂದ್ರ ಸರ್ಕಾರದ 2017ರ ಹೊಸ ವರ್ಷ... ಕ್ಯಾಲೆಂಡರ್ ಬಿಡುಗಡೆಯಾಗಿದ್ದು ಕ್ಯಾಲೆಂಡರ್‌ನ ಹನ್ನೆರಡು... ಪುಟಗಳಲ್ಲಿಯೂ ಪ್ರಧಾನಿ ಮೋದಿಯವರ ಚ... ರಾರಾಜಿಸುತ್ತಿದೆ. ಕ್ಯಾಲೆಂಡರ್‌ನ ಪ್ರತೀ ತಿಂಗಳ ಪುಟದ... ನರೇಂದ್ರ ಮೋದಿಯ ಫೋಟೋ ಇದ್ದು ಮೋದಿ... ಮಾತುಗಳನ್ನು ಉಲ್ಲೇಖಿಸಲಾಗಿದೆ. ಕ್ಯಾಲೆಂಡರ್ ಇಂಗ್ಲಿ... ಮತ್ತು ಹಿಂದಿ ಭಾಷೆಯಲ್ಲಿ ಪ್ರಕಟವಾಗಿದೆ ಎಂದು ಕೇಂ... ಸಚಿವ ವೆಂಕಯ್ಯ ನಾಯ್ಡು ಹೇಳಿದ್ದಾರೆ.

ಇಕಾನಾಮಿಕ್ಸ್ ಸ್ವಲ್ಪವೂ ಗೊತ್ತಿಲ್ಲದ ಮೋದಿ ಕಾಮಿ... ಆಗಲು ಮಾತ್ರ ಫಿಟ್ ಎಂಬುದು ನಿಜ. ಕಳೆದ ವ... ಮೋದಿಯ ಕಾಲ್ಪನಿಕ ಜೀವನಗಾಥೆಯ ಕಾಮಿಕ್ ಪು... ಬಂದಿತ್ತು. ಆ ಕಾಮಿಕ್ ಪುಸ್ತಕದ ಹೆಸರು 'ಬಾಲ ನರೇಂ... ಈ ಕಾಮಿಕ್ ಪುಸ್ತಕ ಹಿಂದಿ, ಇಂಗ್ಲಿಷ್ ಮತ್ತು ಗುಜ... ಭಾಷೆಗಳಲ್ಲಿ ಪ್ರಕಟವಾಗಿತ್ತು. ಆ ಕಾಮಿಕ್ ಪುಸ್ತಕದ... ಮೋದಿ ಹುಟ್ಟಿನಿಂದಲೇ ಅತಿಮಾನುಷ ಶಕ್ತಿಯುಳ್ಳ... ಎಂದು ಸಾಬೀತುಮಾಡಲು ಪ್ರಯತ್ನಿಸಲಾಗಿತ್ತು. ಚಿಕ್ಕಂದಿ... ಹನುಮಂತನಂತೆ ಅವರಿಗೆ ಬಾಲವಿತ್ತು ಹಾಗಾಗಿ ... ಊರಿನವರು ಈ ಮಗು ಹನುಮಂತನ ಅವತಾರ ಎಂ... ಭಾವಿಸಿ ಮಗುವಿಗೆ ವಾನರೇಂದ್ರ ಎಂದು ಹೆಸರಿಟ್ಟ... ಚಿಕ್ಕಂದಿನಿಂದಲೂ ಈ ಮಗುವಿಗೆ ಮಂಗ ಕೋತಿಗಳೆ... ಅತ್ಯಂತ ಅಚ್ಚುಮೆಚ್ಚು ಹಾಗೂ ಅವುಗಳಿಗೆ ಆ... ತಿನ್ನಿಸುತ್ತಾ, ಮರ ಹತ್ತಿ ಅವುಗಳೊಂದಿಗೆ ಮಾತನಾಡು... ಆಟ ಆಡುತ್ತಾ ಇರುತ್ತಿತ್ತು. ಆಗಲೇ ಆ ಮಗುವಿಗೆ ಈ... ಬಜರಂಗ ದಳದ ಕಲ್ಪನೆ ಹೊಳೆದಿದ್ದಂತೆ. ಬಜರಂಗ... ಎಂದರೆ ವಾನರ ಅರ್ಥಾತ್ ಹನುಮಂತ ತಾನೇ. ಹಾಗಾ... ಬಿಜೆಪಿ ನಂತರ ಕಟ್ಟಿದ ಬಜರಂಗದಳದ ಮೂಲ ಕ... ಬಾಲ ನರೇಂದ್ರನದ್ದು.

ಈ ವಾನರೇಂದ್ರ ಶಾಲೆಗೆ ಹೋಗುತ್ತಿದ್ದಾಗ ಒ... ಅವನ ಗೆಳೆಯರು ಕುಟ್ಟಿ ದೊಣ್ಣೆ ಆಡುವಾಗ ಅ... ಕುಟ್ಟಿ ಹೊಳೆಗೆ ಬಿತ್ತು ಆಗ ವಾನರೇಂದ್ರ ಕುಟ್ಟಿ ಹುಡುಕ... ಹೊಳೆಗೆ ಇಳಿದಾಗ ನೀರಿನಲ್ಲಿದ್ದ ಮೊಸಳೆ ಅವನ ಮೇ... ದಾಳಿ ಮಾಡಿತು. ಆಗ ಮೊಸಳೆಯೊಂದಿಗೆ ಹೊಡೆದಾ... ವಾನರೇಂದ್ರ ತನ್ನ ಗೆಳೆಯರ ಕುಟ್ಟಿ ಕೆರೆಯಿಂದ ತಂ... ಕೊಟ್ಟಿದ್ದ. ಆದರೆ ಮೊಸಳೆಯೊಂದಿಗಿನ ಅವನ ಕುಸ್ತಿಯ... ಅವನ ಬಾಲ ಕಟ್ಟಾಯಿತು. ಅದಕ್ಕಾಗಿ ಅವನ ಹೆಸರು... ವಾನರೇಂದ್ರದಿಂದ ನರೇಂದ್ರ ಎಂದು ಬದಲಾಯಿಸಲಾಯಿ...




ಎಲ್ಲರೂ ಸಮಾನರು ಆದರೆ ಕೆಲವರು ಸಮಾನಾತೀತರು

ಧರಣಿ ಮಂಡಲ ಮಧ್ಯದೊಳಗೆ ಮೆರೆಯುತಿಹ ನಮ್ಮೀ ಕರ್ನಾಟಕ ದೇಶದಲ್ಲಿ ಇತ್ತೀಚೆಗೆ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡಿದರೆ ಇಂತಹ ನಾಡಿನಲ್ಲಿ ಹುಟ್ಟಿದ ನಾವೆಷ್ಟು ಭಾಗ್ಯವಂತರು ಎಂದೆನ್ನಿಸದೇ ಇರದು.

ಅವತ್ತು ದಲಿತ ದಮನಿತರ ಚಲೋ ಉಡುಪಿ ಚಳವಳಿಯನ್ನು ಅವಮಾನಿಸಲು ಕೆಲ ಮತೀಯ ವ್ಯಕ್ತಿಗಳು ಕನಕ ನಡೆ ಎಂಬ ಕುತಂತ್ರಿ ನಡೆಯನ್ನು ಆಯೋಜಿಸಲು ಮುಂದಾಗಿ ದಲಿತರು ನಡೆದ ದಾರಿಯ "ಶುದ್ಧೀಕರಣ"ದ ಪ್ರಸ್ತಾಪವನ್ನು ಮಾಡಿದ್ದರು. ಆ ಮೂಲಕ ಸಂವಿಧಾನಕ್ಕೆ ವಿರುದ್ಧವಾಗಿ ದಲಿತರನ್ನು ಅವಮಾನಿಸಿದಾಗ ರೊಚ್ಚಿಗೆದ್ದ ಮುಖಂಡರು ಜಿಲ್ಲಾಧಿಕಾರಿಯನ್ನು ಕಂಡು ಈ ಹೀನಭಾವದ ನಡೆಯ ತಡೆಗೆ ಕ್ರಮ ಕೈಗೊಳ್ಳಲು ಮನವಿಯಿಟ್ಟಿದ್ದರು. ಮೇಲ್ನೋಟಕ್ಕೆ ಸಕಾರಾತ್ಮಕ ಸ್ಪಂದನೆ ದೊರೆತರೂ ಅಂತಿಮವಾಗಿ ಮತೀಯ ವ್ಯಕ್ತಿಗಳ ದುರುದ್ದೇಶದ ಕನಕ ನಡೆಗೆ ಅನುವು ಮಾಡಿಕೊಡಲಾಗಿತ್ತು.

ಆದರೆ, ಮೊನ್ನೆ ಮಡಿಕೇರಿಯ ದಿಡ್ಡಳ್ಳಿಯಲ್ಲಿ ಕಾಫಿ ಪ್ಲಾಂಟರ್‌ಗಳಂತಹ ಬಲಾಢ್ಯರ ದೌರ್ಜನ್ಯಕ್ಕೆ ಸಿಡಿದು ನಿಂತ



ಯಾವುದೇ ಹಣ-ರಾಜಕೀಯದ ಹಿನ್ನೆಲೆಯಿರದ ಆದಿವಾಸಿಗಳ ಹೋರಾಟಕ್ಕೆ ಬೆಂಬಲ ಸೂಚಿಸಲು ಪ್ರಗತಿಪರ ಸಂಘಟನೆಗಳು ದಿಡ್ಡಳ್ಳಿಗೆ ಹೊರಟಾಗ ಎಲ್ಲೂ ಇಲ್ಲದ ನಕ್ಸಲರ ನುಸುಳುವಿಕೆಯ ನೆಪವೊಡ್ಡಿ 144 ಸೆಕ್ಷನ್ ಜಾರಿ ಮಾಡಿ ಆದಿವಾಸಿಗಳ ಹೋರಾಟಕ್ಕೆ ಬೆಂಬಲ ದೊರೆಯದಂತೆ ಮಾಡಲು ಜಿಲ್ಲಾಧಿಕಾರ ಹವಣಿಸಿತ್ತು.

ದೇಶ ಕಂಡ ಅತ್ಯುನ್ನತ ಸಂಖ್ಯಾಶಾಸ್ತ್ರಜ್ಞ, ಮಂಡ್ಯದ ಗಂಡು ಗುರೂಜಿ ಆರ್ಯವರ್ಧನ ಮಾಜಿ ಕೇಂದ್ರ ಸಚಿವ ಮುರಳಿ ಮನೋಹರ ಜೋಷಿಯಿಂದ ಪ್ರೇರಣೆ ಪಡೆದು ರಾಜ್ಯದಲ್ಲಿ ಪ್ರತಿಷ್ಠಿತ 'ಮಚ್ಚೆ ಸಂಶೋಧನಾ ಪ್ರತಿಷ್ಠಾನ'ವನ್ನು ತೆರೆಯುವ ಸಲುವಾಗಿ ಆ ಬಗ್ಗೆ ಶೋಧನೆಗಾ... ಮಹಿಳೆಯೊಬ್ಬಳ ತೊಡೆಭಾಗಕ್ಕೆ ಸಣ್ಣದಾಗಿ ಕಣ್ಣು ಹಾಕಿ... ಆಗ ರಾಜ್ಯ ಪೊಲೀಸರು ಆಂಧ್ರದ ಮಹಿಳೆಯ ಈ ... ದೂರಿಗೆ ಸ್ಪಂದಿಸಿ ತಮಿಳುನಾಡಿನಲ್ಲಿ ಕಪ್ಪು ಮಚ್ಚೆಗಾ... ಭಾರೀ ತಲಾಷ್‌ನಲ್ಲಿದ್ದ ಆರ್ಯವರ್ಧನನ್ನು ಅಲ್ಲೇ ಹೋ... ಹಿಡಕೊಂಡು ಬಂದಿದ್ದರು.

ಭೇಷ್.. ಆದರೆ, ವರ್ಷಗಳ ಹಿಂದೆ ಹೆಣ್ಣೊಬ್ಬ... ಸೆರಗಿಗೆ ಕೈಹಾಕಿ ನಂತರ ಬ್ಲ್ಯಾಕ್ ಮೇಲ್ ಮೂಲ... ನಿರಂತರ ಅತ್ಯಾಚಾರವೆಸಗಿದ ಹೊಸನಗರದ ಸ್ವಾಮಿಯೊಬ್ಬ... ಕುರಿತು ದೂರು ದಾಖಲಾಗಿ ವರ್ಷಗಳೇ ಸಂದರೂ, ಪ್ರತಿಭಟನೆಗಳೇ ನಡೆದರೂ ಇಂದಿಗೂ ಆತನ ಕೂದಲನ್ನು ಕೊಂಕಿಸಲಾಗಿಲ್ಲ, ಇತ್ತೀಚೆಗಂತೂ ಮಹಿಳಾ ಹಾಗು ಮಕ್ಕಳ ದೌರ್ಜನ್ಯ ತಡೆ ಸಮಿತಿಯ ಅಧ್ಯಕ್ಷರನ್ನೇ ಕೆಟ್ಟದಾಗಿ ಆಡಿಕೊಂಡು "ಆತನ ಅಪ್ಪ ಯಾರು?" ಎಂದು ಧಿಮಾಕು ತೋರುವಷ್ಟರ ಮಟ್ಟಿಗೆ ಇವರ ಪಟಾಲಮ್ಮು ಬೆಳೆದಿದೆ. ಹೇಳಿ, ಹೊಸನಗರದವನಿಗೊಂದು ನ್ಯಾಯ ಬಡಪಾಯಿ ಬಾಯಿ ಬಡುಕ ಮಂಡ್ಯದ ಆರ್ಯವರ್ಧನನಿಗೊಂದು ನ್ಯಾಯ, ಇದು ಸರಿಯೇ?

- ಆರ್.ಪಿ, ಮಂಗಳೂರು

…ಕನ್ನಡದಲ್ಲಿ ಅವಕಾಶಕ್ಕಾಗಿ ಕಾರಣ ಹುಡುಕುತ್ತಿದ್ದೇನೆ: ಸಂಚಿತಾ ಶೆಟ್ಟಿ

ದಶಕಗಳ ಹಿಂದೆ ಸುರಿದ 'ಮುಂಗಾರು ಮಳೆ' ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ಗೆ ಪ್ರವೇಶ ಮಾಡಿದವರು ಕರಾವಳಿ ಹುಡುಗಿ ಸಂಚಿತಾ ಶೆಟ್ಟಿ. 'ಮುಂಗಾರು ಮಳೆ' ಸಿನಿಮಾದಲ್ಲಿ ಅವರದ್ದು ಚಿಕ್ಕ ಪಾತ್ರವಾಗಿದ್ದರೂ, ನಂತರ ನಾಯಕಿಯಾಗಿ ತೆರೆಯ ಮೇಲೆ ಮಿಂಚಿದ್ದರು. ಆದರೆ ಇದ್ದಕ್ಕಿದ್ದಂತೆ ಸ್ಯಾಂಡಲ್‌ವುಡ್‌ನಿಂದ ನಾಪತ್ತೆಯಾಗಿ ತಮಿಳು ಸಿನಿಮಾ ರಂಗದಲ್ಲಿ ಗುರುತಿಸಿಕೊಂಡರು. ತಮಿಳಿನಿಂದ ಕನ್ನಡಕ್ಕೆ ಬಂದಿದ್ದ ಇವರು ಈಗ ಮತ್ತೆ ತಮಿಳಿಗೆ ಹಾರಿದ್ದಾರೆ. ಈ ಕುರಿತು ಅವರು ಮಾತಾಡಿದ್ದಾರೆ.



'ಬದ್ಮಾಶ್' ಸಿನಿಮಾದ ಮೂಲಕ ಮತ್ತೆ …್ಯಾಂಡಲ್‌ವುಡ್‌ನಲ್ಲಿ ಕಾಣಿಸಿಕೊಂಡವರು ನಟಿ ಸಂಚಿತಾ …ಟ್ಟಿ. ಕನ್ನಡ ಸಿನಿಮಾರಂಗದಿಂದಲೇ ಬಣ್ಣ ಹಚ್ಚಿದ್ದ ಈ …ಡುಗಿ ಫೇಮಸ್ ಆಗಿದ್ದು ತಮಿಳಿನಲ್ಲಿ. ನಾಲ್ಕೈದು …ನ್ನಡ ಚಿತ್ರಗಳಲ್ಲಿ ನಾಯಕಿಯಾಗಿ ನಟಿಸಿದರೂ …್ಯಾಂಡಲ್‌ವುಡ್‌ನಲ್ಲಿ ಗಟ್ಟಿಯಾಗಿ ನೆಲೆಯೂರಲಿಲ್ಲ. ಹಾಗಾಗಿ …ಮಿಳು ಮತ್ತು ತೆಲುಗಿಗೆ ಹಾರಿದರು. ಅಲ್ಲಿ ಹದಿನೈದಕ್ಕೂ …ಚ್ಚು ಚಿತ್ರಗಳಲ್ಲಿ ನಾಯಕಿಯಾಗಿ ತಮ್ಮ ಪ್ರತಿಭೆ …ೋರಿದರು. ಕನ್ನಡದಲ್ಲಿ ಮತ್ತೆ ಅವಕಾಶ ಸಿಕ್ಕಿತು ಅಂತ …ದ್ಮಾಶ್' ಸಿನಿಮಾದ ಮೂಲಕ ತವರು ನೆಲಕ್ಕೆ …ಪಸ್ಸಾದರು. 'ಬದ್ಮಾಶ್' ನಂತರ ಮತ್ತೆ ಅವರನ್ನು ಕನ್ನಡ …ತ್ರರಂಗ ಗುರುತಿಸಲಿಲ್ಲ. ಹಾಗಾಗಿ ಮತ್ತೆ ತಮಿಳಿಗೆ …ಾರಿದ್ದಾರೆ. ಸದ್ಯ 'ರಮ್' ಚಿತ್ರದಲ್ಲಿ ನಟಿಸುತ್ತಿದ್ದಾರೆ. …ವರೊಂದಿಗಿನ ಮಾತುಕತೆ ಇಲ್ಲಿದೆ.

* ಕನ್ನಡ ಸಿನಿಮಾರಂಗದ ಅನುಭವ ಹೇಗಿತ್ತು?

ಮೊದಲು ನಾನು ನಟಿಸಿದ್ದು 'ಮುಂಗಾರು ಮಳೆ' …ನಿಮಾದಲ್ಲಿ. ನಿರ್ದೇಶಕ ಯೋಗರಾಜ್ ಭಟ್ ಅವರು …ಕ್ಕದೊಂದು ಪಾತ್ರ ನೀಡಿದ್ದರು. ನಂತರ ಮೂರ್‍ನಾಲ್ಕು …ನ್ನಡ ಚಿತ್ರಗಳಲ್ಲಿ ನಟಿಸಿದೆ. ಆದರೂ ನನಗೆ ಒಪ್ಪುವಂತಹ …ಾತ್ರಗಳು ಹುಡುಕಿಕೊಂಡು ಬರಲಿಲ್ಲ. ಹಾಗಾಗಿ ಚೆನ್ನೈ …ೇರಿಕೊಂಡೆ. ಅಲ್ಲಿ ನನಗೆ ಸಾಕಷ್ಟು ಅವಕಾಶಗಳು …ುಡುಕಿಕೊಂಡು ಸಿಕ್ಕಿದವು. ಇದೇ ಹೊತ್ತಿನಲ್ಲಿ ಮತ್ತೆ …ನ್ನಡ ಸಿನಿಮಾದಲ್ಲಿ ನಟಿಸುವಂತೆ ಆಫರ್ ಬಂತು. ನನ್ನ …ಾಷೆಯಲ್ಲಿ ಸಿನಿಮಾ ಮಾಡಬೇಕು ಅನ್ನುವುದು ನನ್ನ …ನಸು. ಹಾಗಾಗಿ ಮತ್ತೆ ಕನ್ನಡಕ್ಕೆ ಬಂದೆ.

* 'ಬದ್ಮಾಶ್' ಸಿನಿಮಾದ ಪಾತ್ರದಿಂದಲೂ ನಿಮ್ಮನ್ನು …ನ್ನಡಿಗರು ಗುರುತಿಸಲಿಲ್ಲವಾ?

ಗುರುತಿಸಲಿಲ್ಲ ಅಂತ ಹೇಳುವುದಕ್ಕೆ ಆಗುವುದಿಲ್ಲ. ಕೇವಲ ಅಭಿಮಾನಿಗಳು ಮಾತ್ರವಲ್ಲ, ಇಂಡಸ್ಟ್ರಿಯ ಅನೇಕರು ನನಗೆ ಕಾಲ್ ಮಾಡಿ 'ಬದ್ಮಾಶ್' ಪಾತ್ರದ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡಿದರು. ತುಂಬಾ ಚೆನ್ನಾಗಿ ಆ ಪಾತ್ರವನ್ನು ನಿರ್ವಹಿಸಿದ್ದೀಯ ಎಂದು ಹೇಳಿದರು. ಈ ಸಿನಿಮಾ ನನ್ನ ವೃತ್ತಿ ಬದುಕಿನಲ್ಲಿ ಏನಾದರೂ ತಿರುವು ನೀಡುತ್ತಾ ಅಂತ ನೋಡಬೇಕು.

* ತಮಿಳು ಸಿನಿಮಾ ರಂಗವು ನಿಮ್ಮನ್ನು ಗುರುತಿಸುತ್ತಿರುವುದಕ್ಕೆ ನಿಮ್ಮದೇ ಆದ ಕಾರಣ ಕೊಡಿ?

ಕನ್ನಡದಲ್ಲಿ ಅವಕಾಶ ಸಿಗಲಿಲ್ಲ ಅಂತ ನಾನು ತಮಿಳು ಸಿನಿಮಾರಂಗಕ್ಕೆ ಹೋಗಿದ್ದು. ಅಲ್ಲಿ 'ಸೂಧು ಕವ್ವಂ', 'ಪಿಜ್ಜಾ 2' ಸೇರಿದಂತೆ ಹಲವು ಹಿಟ್ ಚಿತ್ರಗಳು ನನಗೆ ಸಿಕ್ಕವು. ಈ ಪಾತ್ರಗಳೇ ನನಗೆ ಹೆಚ್ಚೆಚ್ಚು ಅವಕಾಶಗಳನ್ನು ಕೊಡಿಸಿದವು. ಕನ್ನಡದಲ್ಲಿ ನನಗೆ ಆ ರೀತಿಯ ಪಾತ್ರಗಳು ಸಿಗಲಿಲ್ಲ ಅನಿಸುತ್ತೆ.

ಅಥವಾ ಪಾತ್ರ ಸಿಕ್ಕಿದ್ದರೂ, ಸಿನಿಮಾಗಳು ಜನರನ್ನು ತಲುಪಲಿಲ್ಲ ಅಂತ ಕಾಣತ್ತೆ. ಈ ವಿಷಯದಲ್ಲಿ ನನಗೆ ಈಗಲೂ ಗೊಂದಲವಿದೆ. ಕನ್ನಡದಲ್ಲಿ ಅವಕಾಶ ಸಿಗದೇ ಇರುವುದಕ್ಕೆ ಈಗಲೂ ನಾನು ಕಾರಣ ಹುಡುಕುತ್ತಿದ್ದೇನೆ.

* ಒಂದು ಸಿನಿಮಾದ ನಂತರ ಒಂದಷ್ಟು ಗ್ಯಾಪ್ ಆಗುವುದು ನಾಯಕಿಯರಲ್ಲಿ ಕಾಮನ್. ಇದು ಹೀರೋಗಳಿಗೆ ಅನ್ವಯಿಸುವುದಿಲ್ಲ. ಈ ಕುರಿತು ಏನು ಹೇಳುತ್ತೀರಿ?


ಯಾಕೆ ಹೀಗೆ ಆಗುತ್ತದೆ ಅಂತ ಗೊತ್ತೇ ಆಗುವುದಿಲ್ಲ. ಒಂದೊಂದು ಸಲ ನೀವು ಹೇಳಿದಂತೆ ಗ್ಯಾಪ್ ಸೃಷ್ಟಿ ಆಗುತ್ತದೆ. ಮತ್ತೊಂದು ಸಲ ವರ್ಷಕ್ಕೆ ಮೂರ್‍ನಾಲ್ಕು ಚಿತ್ರಗಳು ಒಟ್ಟಿಗೆ ಬರುತ್ತವೆ. ಹೀರೋಗಳ ಸಿನಿಮಾಗಳಾದರೆ, ಮೊದಲೇ ಬುಕ್ ಆಗಿರುತ್ತವೆ. ಹಾಗಾಗಿ ಅದು ಕಾಣಿಸುವುದಿಲ್ಲ. ಹೀರೋಗಳ ಆಯ್ಕೆಯ ನಂತರವೇ ನಾಯಕಿಯರ ಆಯ್ಕೆ ನಡೆಯುವುದರಿಂದ ಇದು ಗೊತ್ತಾಗುತ್ತದೆ.

* ಮತ್ತೆ ತಮಿಳಿನತ್ತ ಮುಖ ಮಾಡಿದ್ದೀರಿ. ಸದ್ಯ ಯಾವ ಸಿನಿಮಾದಲ್ಲಿ ನಟಿಸುತ್ತಿದ್ದೀರಿ?

ತಮಿಳಿನಲ್ಲಿ ಎರಡು ಚಿತ್ರಗಳನ್ನು ಒಪ್ಪಿಕೊಂಡಿದ್ದೇನೆ. ತೆಲುಗು ಮತ್ತು ಮಲೆಯಾಳಂನಲ್ಲೂ ಒಂದೊಂದು ಸಿನಿಮಾದ ಕತೆ ಕೇಳಿದ್ದೇನೆ. ತಮಿಳಿನಲ್ಲಿ ಸದ್ಯ 'ರಮ್' ಅನ್ನುವ ಚಿತ್ರದ ಶೂಟಿಂಗ್ ನಡೆಯುತ್ತದೆ. ಅಲ್ಲದೇ ಮುಂದಿನ ವರ್ಷದಲ್ಲಿ ನನ್ನ ಮೂರು ಚಿತ್ರಗಳು ರಿಲೀಸ್ ಆಗಲಿವೆ.

* ಬಾಲಿವುಡ್‌ನಲ್ಲಿ ನಟಿಸುವ ಆಸೆ ಇದೆಯಾ?

ಖಂಡಿತಾ ಇದೆ. ಅವಕಾಶ ಸಿಕ್ಕರೆ ಯಾವುದೇ ಕಾರಣಕ್ಕೂ ಮಿಸ್ ಮಾಡಿಕೊಳ್ಳುವುದಿಲ್ಲ. ಕನ್ನಡದ ಅನೇಕ ಹುಡುಗಿಯರು ಈಗಾಗಲೇ ಬಾಲಿವುಡ್‌ನಲ್ಲಿ ತಮ್ಮದೇ ಆದ ಸ್ಥಾನ ಪಡೆದುಕೊಂಡಿದ್ದಾರೆ. ಹಾಗಾಗಿ ನನಗೂ ಬಾಲಿವುಡ್ ಸಿನಿಮಾದಲ್ಲಿ ನಟಿಸುವ ಆಸೆ ಇದೆ. ಆದಷ್ಟು ಬೇಗ ಅಂತಹ ಅವಕಾಶ ಸಿಗಲಿ ಎಂಬ ನಿರೀಕ್ಷೆ ಕೂಡ ಇದೆ. ■



…ದು ಕಾಮಿಕ್ ಪುಸ್ತಕದಲ್ಲಿ ಸಚಿತ್ರವಾಗಿ ವರ್ಣಿಸಲಾಗಿದೆ.

ನರೇಂದ್ರ ತನ್ನ ಶಾಲೆಯ ಮೇಷ್ಟ್ರಿಗೆ ಬಹಳ ಸಹಾಯ …ಡುತ್ತಿದ್ದ, ಪೋಕರಿ ವಿದ್ಯಾರ್ಥಿಗಳಿಗೆ ಬಡಿದು ಬುದ್ಧಿ …ಸುತ್ತಿದ್ದ ಹಾಗೂ ಕೆಲವೊಮ್ಮೆ ಪೋಕರಿಗಳಿಂದ ಒದೆ …ನ್ನುತ್ತಿದ್ದ. ಹುಟ್ಟುವಾಗಲೇ ಅವನ ಎದೆ 56 ಇಂಚು …ದ್ದ-ಅಗಲವಿತ್ತು. ಆದರೂ ಅವನನ್ನು ಹೆರುವಾಗ ತಾಯಿಗೆ …ಸ್ವಲ್ಪವೂ ನೋವಾಗಲಿಲ್ಲ. ಹುಟ್ಟುವಾಗ ಅಳುವ ಬದಲು … ಮಗು ರಾಮನಾಮ ಪಠಿಸುತ್ತಿತ್ತು. ಇಂತಹ ವಿಶಾಲ …ೆಯ ಮಗು ಶಾಲೆ ಮುಗಿದನಂತರ ರೈಲಿನಲ್ಲಿ ಚಹ …ಾರುತ್ತಿತ್ತು ಎಂದು ಕಾಮಿಕ್ ಪುಸ್ತಕದಲ್ಲಿ ಬಣ್ಣಿಸಲಾಗಿದೆ. …ವಲ ಚಹ ಮಾರುತ್ತಿದ್ದ ಬಾಲಕ ಮೋದಿಗೆ ಕಾಫಿ …ುಡಿಯುವವರನ್ನು ಕಂಡರೆ ಸಿಟ್ಟು ಬರುತ್ತಿತ್ತಂತೆ. ಕಾರಣ …ಫಿ ಬ್ರಿಟಿಷರ ಗುಲಾಮಿಯ ಸಂಕೇತವಾಗಿತ್ತು. ಹಾಗಾಗಿ …ಫಿ ಕುಡಿಯುತ್ತಿದ್ದವರಲ್ಲಿ ದೇಶ ಭಕ್ತಿ ಹುಟ್ಟಿಸಿ ಅವರು …ದೇಶಿ ಗುಲಾಮಿಯ ಸಂಕೇತವಾದ ಕಾಫಿ …ುಡಿಯುವುದನ್ನು ನಿಲ್ಲಿಸಿ ದೇಶೀ ಚಹ ಕುಡಿಯುವಂತೆ … ಬಾಲಕ ಮಾಡಿದ್ದ. ರೈಲಿನಲ್ಲಿ ಯಾರಾದರೂ ಮಿಲಿಟರಿ …ೋಧರು ಕಂಡರೆ ಅವರಿಗೆ ಜೋರಾಗಿ ಸೆಲ್ಯೂಟ್ …ಹೊಡೆದು ಉಚಿತವಾಗಿ ಚಹ ಕೊಡುತ್ತಿದ್ದ. ತನ್ನ ಭಯಂಕರ …ಶಭಕ್ತಿ ತೋರುವ ಸಲುವಾಗಿ ಈ 'ಬಾಲ ಮೋದಿ' …ಟ್-ಗೈಡ್ ಸೇರಿದ್ದ. ಕೊನೆಗೆ ಮೆಟ್ರಿಕ್‌ನಲ್ಲಿದ್ದಾಗ ವೈರಾಗ್ಯ …ಟ್ಟಿ ಬೈರಾಗಿಯಾಗಿ ಮನೆಬಿಟ್ಟು ಹಿಮಾಲಯಕ್ಕೆ ಹೋಗಿ … ವರ್ಷ ಅನ್ನ ನೀರು ಬಿಟ್ಟೆ ತ್ಯಾಗ ಮಾಡಿ ಕೇವಲ …ುಗಡ್ಡೆ ಸೇವಿಸಿ ಬಿಕ್ಕಟ್ಟಿಯಾಗಿ ತಪಸ್ಸು ಮಾಡಿದ್ದ. ಘೋರ …ಸ್ಸು ಮಾಡುವಾಗ ಅವನ ಸುತ್ತ ಗೆದ್ದಲು ಹುತ್ತ ಕಟ್ಟಿತ್ತು. …ಲಿಗೆ ಸಂಸ್ಕೃತದಲ್ಲಿ ಪುತ್ತಿಕಾ ಅಥವಾ ವಾಲ್ಮೀಕಾ ಎಂದು …ಲುವುದರಿಂದ ನರೇಂದ್ರನಿಗೆ ಪುತ್ತೇಂದ್ರ ಮಹಾರಾಜ್ …ರ್‍ನಾಥ್ ವಾಲ್ಮೀಕಿ ಸ್ವಾಮೀ ಎಂಬ ಹೆಸರೂ ಬಿದ್ದಿತ್ತು. …ಮಾಲಯದಲ್ಲಿ ತಪಸ್ಸು ಮಾಡುವಾಗ ಹಿಮ ಕರಡಿಯೊಂದಿಗೆ ಹೋರಾಡಿ ಅದನ್ನು ಸಸ್ಯಾಹಾರಿಯಾಗಿ ಪರಿವರ್ತಿಸಿದ ಹೆಗ್ಗಳಿಕೆಯೂ ಈತನಿಗಿತ್ತು. ಕೊನೆಗೆ ದೇವರು ಒಲಿದಾಗ ಆ ದೇವರ ಒಂದು ಕೈಯಲ್ಲಿ ಕ್ರೈಸ್ತರ ಶಿಲುಬೆ ಹಾಗೂ ಇನ್ನೊಂದು ಕೈಯಲ್ಲಿ ಮುಸ್ಲಿಮರ ಅರ್ಧ ಚಂದ್ರ, ತಲೆಯಲ್ಲಿ ಸಾಬಿಗಳ ಲೇಸ್ ಟೋಪಿ ಇದ್ದಿದ್ದನ್ನು ನೋಡಿ ಮೋದಿ ಆ ದೇವರೊಂದಿಗೂ ವಾದ-ಪ್ರತಿವಾದ ಮಾಡಿ ಗೆದ್ದು, ದೇವರು ತನ್ನ ಕೈಯಲ್ಲಿ ಇತರ ಧರ್ಮದ ಸಂಕೇತ ಹಿಡಿಯುವುದನ್ನು ಬಿಟ್ಟು ಹಾಗೂ ತಲೆಯಲ್ಲಿ ಮಕ್ಮಲ್ ಟೋಪಿ ಅಥವಾ ಹ್ಯಾಟ್ ಇಡುವುದನ್ನು ತೊರೆದು ಕೇವಲ ಹಿಂದೂ ಮಾದರಿಯ ಭಾರಿ ಕಿರೀಟ ಮಾತ್ರ ಇಡುವಂತೆ ಹಾಗೂ ಕೇಸರಿ ಬಟ್ಟೆ ಮಾತ್ರ ಉಡುವಂತೆ ಬಾಲಕ ಮೋದಿ ದೇವರನ್ನೇ ಮನವೊಲಿಸಿದ್ದ ಎಂದು ಕಾಮಿಕ್ ಪುಸ್ತಕದಲ್ಲಿ ಬರೆಯಲಾಗಿದೆ.

ಹಿಮಾಲಯದಲ್ಲಿ ಬಹಳಷ್ಟು ಚಿಂಕಿ ಕಣ್ಣಿನ ರಾಕ್ಷಸರಿದ್ದು ಅವರು ನಮ್ಮ ಆರ್ಯ ಋಷಿಗಳಿಗೆ ವಿಪರೀತ ಕಾಟ ಕೊಡುತ್ತಿದ್ದರು. ಹಾಗಾಗಿ ಆ ಋಷಿಮುನಿಗಳು ನರೇಂದ್ರನ ಶರಣಲ್ಲಿ ಬಂದಾಗ ಬಾಲ ನರೇಂದ್ರ ಬಾಲ ಪರಿಕ್ಕರ್ ಜತೆ ಸೇರಿ ಸರ್ಜಿಕಲ್ ಸ್ಟ್ರೈಕ್ ಮಾಡಿ ಆ ಚಿಂಕಿ ರಾಕ್ಷಸರೊಂದಿಗೆ ಹೊಡೆದಾಡಿ ಅವರನ್ನು ಚೀನಾಕ್ಕೆ ಓಡಿಸಿ ಆರ್ಯ ಸಂತರನ್ನು ರಕ್ಷಿಸಿದನಂತೆ. ಇದು ಜಗತ್ತಿನ ಮೊಟ್ಟ ಮೊದಲ ಸರ್ಜಿಕಲ್ ಸ್ಟ್ರೈಕ್ ಆಗಿತ್ತು ಎಂಬ ಹೆಗ್ಗಳಿಕೆ ಸಹ ಬಾಲ ನರೇಂದ್ರನದು ಎಂದೆಲ್ಲಾ ಕಾಮಿಕ್ ಪುಸ್ತಕದಲ್ಲಿ ಸಚಿತ್ರ ಹೇಳಲಾಗಿದೆ.

ಆಗಲೂ ಬಾಲ ನರೇಂದ್ರನಿಗೆ, ಬಾಲ ಅಮಿತ ಶಾ, ಬಾಲ ಜೇಟ್ಲಿ, ಬಾಲ ರಾಜನಾಥ್ ಸ್ನೇಹಿತರಾಗಿದ್ದರಂತೆ. ಇಂತಹ ಕಾಲ್ಪನಿಕ ಘಟನೆಗಳನ್ನು ಒಳಗೊಂಡ 'ಬಾಲ ನರೇಂದ್ರ' ಎಂಬ ಹೆಸರಿನ ಬಾಲಿಶ ಕಾಮಿಕ್ ಪುಸ್ತಕ ಕಳೆದ ವರ್ಷ ಪ್ರಕಟವಾಗಿದ್ದು ಅದು ಈಗಲೂ ಗುಜರಾತಿನಲ್ಲಿ ಮಾರಾಟಕ್ಕೆ ಲಭ್ಯವಿದೆ.

ಇದಕ್ಕೆ ಹೋಲಿಸಿದರೆ ಈಗಿನ ಬಿಜೆಪಿ ಸರಕಾರದ ಹೊಸ 2017ರ ಕ್ಯಾಲೆಂಡರ್‌ನಲ್ಲಿ ಮೋದಿಯ ವೈಭವೀಕರಣ ಅಷ್ಟಾಗಿ ಇಲ್ಲ, ಯಾಕೆ ಗೊತ್ತೇ? ನೋಟು ರದ್ಧತಿಯ ಮೂರ್ಖತನದಿಂದಾಗಿ ಈಗ ಇಡೀ ದೇಶವೇ ಕೆರಳಿ ನಿಂತಿರುವಾಗ ಹಾಗೂ ಕ್ಯಾಲೆಂಡರ್‌ನಲ್ಲಿರುವ ಮೋದಿಯ ಘೋಷವಾಕ್ಯ 'ಮೇರಾ ದೇಶ್ ಬದಲ್ ರಹಾ ಹೈ, ಆಗೇ ಬಢ್ ರಹಾ ಹೈ' ಎಂಬುದು 'ಮೇರಾ ದೇಶ ಬಂಡಲ್ ಹೊ ರಹಾ ಹೈ, ಔರ್ ಡೂಬ್ ರಹಾ ಹೈ' ಎಂದು ಬದಲಾಗಿರುವಾಗ, ಹೊಸ ಕ್ಯಾಲೆಂಡರಿನಲ್ಲಿ ಮೋದಿಯ ವೈಭವೀಕರಣದಿಂದ ಪ್ರಯೋಜನ ಇಲ್ಲ ಎಂದು ಕೇಂದ್ರ ಸರಕಾರ ಮನಗಂಡಿರುವಂತಿದೆ.

ಮೋದಿಯನ್ನು ಸೂಪರ್ ಮ್ಯಾನ್ ಅನ್ನುವವರಿಗೆ ಈಗ ಗೊತ್ತಾಗಿದೆ ಈ ಗುಜ್ಜು ಸೂಪರ್ ಮ್ಯಾನ್ ಭಾರತೀಯರನ್ನು ಪಾಪರ್ ಮ್ಯಾನ್ ಮಾಡಿದ್ದಾರೆ ಎಂದು.

- ರಾಮಕೃಷ್ಣ ಎ ಕುಲಾಲ್, ಬೆಂಗಳೂರು

ಹೀಗೊಬ್ಬ ಅಭೂತಪೂರ್ವ 'ಅನರ್ಥ'ಶಾಸ್ತ್ರಜ್ಞ

ನೆರೆಯ ಪಾಕಿಸ್ತಾನ ಜಿಯಾ ಉಲ್ ಹಕ್ ಮತ್ತು ಮುಷರಫ್‌ರಂತಹ ಸರ್ವಾಧಿಕಾರಿ ಮನೋಭಾವದ ರಾಷ್ಟ್ರನಾಯಕರುಗಳನ್ನು ಕಂಡಿದೆ. ಇಂಥ ವಿಚಾರ ನಮ್ಮ ಮುಂದೆ ಬಂದಾಗ ದೊಡ್ಡದಾದ ಹಾಗು ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಭಾರತವನ್ನು ಸರ್ವಾಧಿಕಾರಿಯೊಬ್ಬ ಯಾವ ಕಾರಣಕ್ಕೂ ಕೈವಶ ಮಾಡಿಕೊಂಡು ಆಡಳಿತ ನಡೆಸಲು ಸಾಧ್ಯವಿಲ್ಲ ಎಂಬ ಮಾತನ್ನು ಸಾಮಾನ್ಯವಾಗಿ ಎಲ್ಲರೂ ಹೇಳುತ್ತಾರೆ. (ಇಂದಿರಾ ಗಾಂಧಿ ತುರ್ತು ಪರಿಸ್ಥಿತಿ ಹೇರಿದ್ದ ಕಳಂಕ ಹೊತ್ತಿದ್ದರೂ ಆಕೆ ಎಂದೂ ನಾನು ಹೇಳಿದಂತೆಯೇ ಆಗಬೇಕು; ಜನತೆ ಎಲ್ಲವನ್ನು ಬಾಯಿಮುಚ್ಚಿ ಸಹಿಸಿಕೊಳ್ಳಬೇಕೆಂಬ ಸರ್ವಾಧಿಕಾರಿತನವನ್ನು ತೋರಿಸ ಹೋಗಲಿಲ್ಲ) ಆದರೆ ಇತ್ತೀಚಿನ ದಿನಗಳಲ್ಲಿ ಆ ನಂಬಿಕೆ ಪೂರ್ತಿಯಾಗಿ ಹುಸಿಯಾಗತೊಡಗಿದೆ.

ದೇಶದಲ್ಲಿ ದೊಡ್ಡ ಮಟ್ಟದಲ್ಲಿ ಚಾಲ್ತಿಯಲ್ಲಿದ್ದ ನೋಟುಗಳು ಅಮಾನ್ಯಗೊಂಡು 50 ದಿನಗಳು ಹತ್ತಿರವಾಗುತ್ತಿದೆ. ಇದರ ರೂವಾರಿಗಳೇ ಸ್ವಯಂ ವಿಧಿಸಿಕೊಂಡ ಗಡುವು ಕೂಡ ಇದೀಗ ಮುಗಿಯುತ್ತಾ ಬಂದಿದೆ. ಆದರೆ ದೇಶಾದ್ಯಂತ ಕೋಟಿಗಟ್ಟಲೆ ಖರ್ಚು ಮಾಡಿ ಹಾಕಿದ ನೋಟು ಅಮಾನ್ಯಕರಣವನ್ನು ಹೊಗಳುವ ಬ್ಯಾನರ್‌ಗಳಲ್ಲಿ ಹೇಳಲಾದ ಅಥವ ಟಿವಿ, ಪೇಪರ್ ಮತ್ತು ಇತರೆ ಮಾಧ್ಯಮಗಳ ಮೂಲಕ ಪ್ರಚಾರ ಮಾಡಿದಂತಹ ಕಪ್ಪು ಹಣ, ಖೋಟಾ ನೋಟು, ಭಯೋತ್ಪಾದನೆ ನಿರ್ಮೂಲನದ ಯಾವ ಅಂಶಗಳೂ ಒಂದಿನಿತೂ ಕಾರ್ಯರೂಪಕ್ಕೆ ಬಂದಂತೆ ತೋರುತ್ತಿಲ್ಲ.

'ಒಡೆಯ'ನೊಂದಿಗೆ ಯಾರೋ ಮೂರು ನಾಲ್ಕು ಜನರ ಗುಂಪು ಸೇರಿಕೊಂಡು ದೇಶವನ್ನೇ - ಅದರಲ್ಲೂ ಮುಖ್ಯವಾಗಿ ಬಡ ಶ್ರಮಿಕವರ್ಗವನ್ನೇ - ಹೆಚ್ಚು ತಲ್ಲಣಿಸಿದ ಈ ನೋಟು ರದ್ಧತಿ ಪ್ರತ್ಯಕ್ಷ ಯಾ ಪರೋಕ್ಷವಾಗಿ ದೇಶದ ಆರ್ಥಿಕ ವ್ಯವಸ್ಥೆಯನ್ನೇ ಕಂಗೆಡಿಸಿತ್ತು. ಇದೀಗ ಈ ತಲ್ಲಣದ ಹೊಣೆಯನ್ನು ಬ್ಯಾಂಕಿನವರ ತಲೆಗೆ ಜೇಟ್ಲಿಯಂತವರು ಕಟ್ಟುತ್ತಿದ್ದಾರೆ.

ಈ ನೋಟು ರದ್ಧತಿಯಿಂದಾಗಿ ಬ್ಯಾಂಕ್‌ಗಳಲ್ಲಿ ಏಕಾಏಕಿ ಜಮೆಯಾದ ಹಣವನ್ನೇ ಇದೀಗ ಜಮೆಯಾದಂತಹ ಕಪ್ಪು ಹಣವೆಂದು ಅನೇಕ ಭಕ್ತರು ಬಿಂಬಿಸುತ್ತಿದ್ದಾರೆ. ಅಕ್ಕಿ, ತರಕಾರಿ, ಸಿಮೆಂಟು, ಪೆಟ್ರೋಲ್, ಕೂಲಿ ಹಣ, ಕರೆಂಟು ಬಿಲ್ ಇನ್ನೇನಕ್ಕೆಂದೋ ದೇಶದ ಕೋಟ್ಯಾಂತರ ಜನಸಾಮಾನ್ಯರ ಕಿಸೆಯಲ್ಲಿದ್ದ ಅವರ ಬೆವರಿನಿಂದ ಹುಟ್ಟಿ ಏಕಾಏಕಿ ಬೆಲೆ ಕಳೆಕೊಂಡಂತಹ ಐನೂರು-ಸಾವಿರದ ನೋಟುಗಳೆಲ್ಲ ಪ್ರಾಮಾಣಿಕವಾಗಿ ಬದಲಾವಣೆಗಾಗಿ ಜಮೆಗೊಂಡು ಈ ಭಾರೀ ಮೊತ್ತ ಉಂಟಾಯಿತೇ ಹೊರತು ಇದನ್ನೇ ಸಂಗ್ರಹವಾದ ಕಪ್ಪುಹಣವೆಂದು ಬಿಂಬಿಸುವುದು ಮೂರ್ಖತನ.

ಯಾಕೆಂದರೆ, ಈ ತನಕವೂ ಭಾರೀ ಸಿರಿವಂತರು ಹಾಗು ಕಪ್ಪು ಕುಳಗಳು ಎಲ್ಲೂ ಕ್ಯೂನಲ್ಲಿ ಕಾಣಿಸಿಕೊಳ್ಳಲೇ ಇಲ್ಲ, ಬ್ಯಾಂಕ್ ಅಥವ ಬ್ಯಾಂಕಿಗೆ ಹಣ ಜಮಾ ಆಗುವ ಮುನ್ನವೇ ಕಮಿಷನ್ ಮೂಲಕ ಅಂತವರೆಲ್ಲ ತಮ್ಮ ಹಣವನ್ನು 'ಬಿಳಿಯನ್ನಾಗಿಸಿದ' ಲೆಕ್ಕವಿಲ್ಲದಷ್ಟು ನಿದರ್ಶನಗಳು ದೇಶದ ಹಲವೆಡೆ ಜಾಹೀರಾಗಿದ್ದವು. ಇನ್ನು ಭಯೋತ್ಪಾದನೆ ವಿರುದ್ಧದ ಹೋರಾಟವೂ ಉಗ್ರನೊಬ್ಬನ ಕೈಯಲ್ಲೇ ಹೊಸನೋಟು ಪತ್ತೆಯಾಗಿ ಟುಸ್ಸೆಂದಿತ್ತು. ಅದೇ ರೀತಿ ಹೊಸಖೋಟಾ ನೋಟೂ ಸೃಷ್ಟಿಯಾಗಿತ್ತು. ಇದನ್ನೆಲ್ಲ ನೋಡಿದ ಭಕ್ತ ಗಣ ಇದೀಗ ನವೆಂಬರ್ ಎಂಟರ ಭಾಷಣ ಹಾಗು ಬ್ಯಾನರ್‌ಗಳಲ್ಲಿ ಕೊಚ್ಚಿಕೊಂಡಂತಹ ಕಪ್ಪು ಹಣ, ಭಯೋತ್ಪಾದನೆಯಂತಹ ವಿಚಾರಗಳನ್ನು ಬದಿಗೆ ಸರಿಸಿ ಕ್ಯಾಶ್ ಲೆಸ್ ವಿಚಾರವನ್ನೇ ದೊಡ್ಡದಾಗಿ ಎತ್ತಿ ಎಲ್ಲರ ದಿಕ್ಕು ತಪ್ಪಿಸುತ್ತಿದ್ದಾರೆ.

ತಮಾಷೆಯೆಂದರೆ ದೇಶಕಂಡ ಉನ್ನತ ಅರ್ಥಶಾಸ್ತ್ರಜ್ಞ ಹಾಗು ಮಾಜಿ ಪ್ರಧಾನಿ ಮನಮೋಹನ ಸಿಂಗರನ್ನು ಆಗಾಗ ಬೇಕಾಬಿಟ್ಟಿ ಲೇವಡಿ ಮಾಡುವ ಈ "ಅನರ್ಥಶಾಸ್ತ್ರಜ್ಞ"ರ ಪಡೆ ಐನೂರು ಹಾಗು ಸಾವಿರ ನೋಟನ್ನು ಬ್ಯಾನ್ ಮಾಡಿ ಜನರಿಗೆ ಚಿಲ್ಲರೆಯೇ ಸಿಗದಂತಹ ಎರಡು ಸಾವಿರ ಮುಖಬೆಲೆಯ ನೋಟನ್ನಷ್ಟೇ ಛಾಪಿಸಿದ್ದನ್ನು ಮುಚ್ಚಿಹಾಕಿತ್ತು. ಈಗ ಜ್ಞಾನೋದಯವಾದಂತೆ ಐನೂರು ಹಾಗು ನೂರರ ನೋಟುಗಳನ್ನು ಪುರುಸೊತ್ತಿಲ್ಲದಂತೆ ಮಿಲಿಯನ್ ಗಟ್ಟಲೆ ಛಾಪಿಸಲು ಆಜ್ಞೆಯಿತ್ತಿದೆ ಕೇಂದ್ರ ಸರ್ಕಾರ. ಇದು "ಕ್ಯಾಶ್‌ಲೆಸ್" ದುನಿಯಾದಲ್ಲಿನ ಅನರ್ಥ ಶಾಸ್ತ್ರಜ್ಞರ ವರಸೆ.

ಹಿಂದೆ ಅದ್ಯಾವನೋ ಡ್ರಾಕುಲಾ ಅಂತ ರಾಜನೊಬ್ಬನಿದ್ದನಂತೆ. ಆತ ತನ್ನ ದೇಶದಲ್ಲಿ ಬಡವರು ಹಾಗು ಭಿಕ್ಷುಕರೇ ಇರಬಾರದೆಂದು ಅವರನ್ನೆಲ್ಲ ಊಟಕ್ಕೆ ಕರೆದು ಊಟದ ಬಳಿಕ ಕೋಣೆಯ ಚಿಲಕ ಹಾಕಿ ಕೋಣೆಗೆ ಬೆಂಕಿ ಕೊಟ್ಟು



ಬಡತನ ನಿರ್ಮೂಲನ ಮಾಡಿದನಂತೆ. ಹಾಗಿದೆ ಈ ಕತೆ.

ದಕ್ಷಿಣ ಭಾರತದಲ್ಲಿ ಮೊದಲಬಾರಿ ಅಧಿಕಾರಕ್ಕೇರಿದ ಬಿಜೆಪಿಗೆ ಹಣದ ಆಧಾರಸ್ತಂಭವಾಗಿ, ರೆಸಾರ್ಟ್ ರಾಜಕಾರಣಕ್ಕೆ ಬೆಂಬಲವಾಗಿ ನಿಂತು ಸುಷ್ಮಮ್ಮನ ಮಚ್ಚಿನ ಪುತ್ರರಾದ ರೆಡ್ಡಿ ಪಟಾಲಮ್ ಯಾರಿಗೂ ಹಣ ಸಿಗದ ಈ ದುರ್ಭಿಕ್ಷ ಕಾಲದಲ್ಲೂ ಭರ್ಜರಿ ಮದುವೆ ನಡೆಸಿತು. ಅಷ್ಟೇ ಅಲ್ಲ, ಐವತ್ತರಷ್ಟು ವಿಮಾನಗಳನ್ನು ತಂದು ಈ ಸಮಯದಲ್ಲೇ ಮಗಳ ಭರ್ಜರಿ ಮದುವೆ ಮಾಡಿಸಿದ್ದು ಬಿಜೆಪಿ ಮಾಜಿ ಅಧ್ಯಕ್ಷ ಗಡ್ಕರಿ.

ಮಕ್ಕಳಿಗೆ, ಅಶಕ್ತರಿಗೆ ಹಾಲು ಹಾಗು ಅಗತ್ಯ ಔಷಧಕ್ಕೆ ದುಡ್ಡಿಲ್ಲದಿದ್ದರೂ ತಿಳಿ ಮುಚ್ಚೊಂಡು ಅಚ್ಛೇದಿನದ ಜಪ ಮಾಡುತ್ತಾ ದೇಶಸೇವಕರಂತೆ ಪೋಜು ಕೊಡುತ್ತಿರುವುದು ಯಾವರೀತಿಯ ದೇಶಸೇವೆ ಸ್ವಾಮಿ?

- ಓದುಗ, ಬೆಂಗಳೂರು

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price

ಗೆಳೆಯರಿಗಾಗಿ ಮಿಡಿದ 'ಸಾರಥಿ'



ತನ್ನನ್ನು ನೆಚ್ಚಿಕೊಂಡವರಿಗೆ ಯಾವುದಾದರೂ ಒಂದು ರೂಪದಲ್ಲಿ ಸಹಾಯ ಮಾಡುತ್ತಲೇ ಇರುತ್ತಾರೆ 'ಚಾಲೆಂಜಿಂಗ್ ಸ್ಟಾರ್ ದರ್ಶನ್'. ತನ್ನೊಟ್ಟಿಗೆ ಈವರೆಗೂ ಕೆಲಸ ಮಾಡಿದ್ದ ತಂತ್ರಜ್ಞರಿಗಾಗಿ 'ಬುಲ್‌ಬುಲ್' ಚಿತ್ರದಲ್ಲಿ ನಟಿಸಿದ್ದ ದರ್ಶನ್, ಈ ಬಾರಿ ಮೈಸೂರಿನ ಮಿತ್ರರಿಗಾಗಿ ಚಿತ್ರವೊಂದನ್ನು ಮಾಡುತ್ತಿದ್ದಾರೆ. ಈ ಚಿತ್ರದಿಂದ ಬರುವ ಅಷ್ಟೂ ದುಡ್ಡನ್ನು ಮೈಸೂರಿನಲ್ಲಿರುವ ತನ್ನ ಸ್ನೇಹಿತರಿಗೆ ನೀಡಲಿದ್ದಾರಂತೆ. ಅಲ್ಲದೇ ಸ್ನೇಹಿತರ ಮಕ್ಕಳ ವಿದ್ಯಾಭ್ಯಾಸಕ್ಕಾಗಿಯೂ ಡಿಪಾಸಿಟ್ ಮಾಡಲಿದ್ದಾರಂತೆ. ಇದು ದರ್ಶನ್ ಅವರ ಐವತ್ತನೇ ಸಿನಿಮಾವಾದ್ದರಿಂದ ಸಾಕಷ್ಟು ಹಣ ಹರಿದುಬರಲಿದೆ ಅಂತಾರೆ ದರ್ಶನ್ ಆಪ್ತರು.

ಈಗಾಗಲೇ ಜನರಿಗೆ ಗೊತ್ತಿಲ್ಲದೇ ಸಾಕಷ್ಟು ಸಹಾಯ ಮಾಡಿದ್ದಾರಂತೆ ದರ್ಶನ್. ಪ್ರತಿ ವರ್ಷವೂ ಓದುವ ಮಕ್ಕಳಿಗೆ ಶಾಲಾ ಫೀಸ್ ಕಟ್ಟುತ್ತಾರಂತೆ. ಆಸ್ಪತ್ರೆಯ ಬಿಲ್ಲುಗಳನ್ನು ಕಟ್ಟಿದ್ದಾರಂತೆ. ಅಲ್ಲದೇ ಸಾಕಷ್ಟು ಅಶಕ್ತ ಕಲಾವಿದರಿಗೆ ನೆರವಿನ ಹಸ್ತ ಚಾಚಿದ್ದಾರಂತೆ. ಅದರ ಜತೆ ತನ್ನೊಂದಿಗೆ ಬೆಳೆದವರ ಜೀವನವೂ ಸುಖವಾಗಿರಲೆಂದು ಸಿನಿಮಾ ಮಾಡುತ್ತಿದ್ದಾರಂತೆ. ಇವರ ಐವತ್ತನೇ ಸಿನಿಮಾವನ್ನು ಸಹೋದರ ದಿನಕರ್ ತೂಗುದೀಪ್ ನಿರ್ದೇಶನ ಮಾಡಬೇಕಿತ್ತು, ಚಿತ್ರಕ್ಕೆ ಸರ್ವಾಂತರ್ಯಾಮಿ ಎಂದು ಹೆಸರೂ ಇಡಲಾಗಿತ್ತು, ಈಗ ಎರಡೂ ಬದಲಾಗಿವೆ. ಐವತ್ತನೇ ಚಿತ್ರವನ್ನು ಎಂ.ಡಿ.ಶ್ರೀಧರ್ ನಿರ್ದೇಶನ ಮಾಡಲಿದ್ದು, ರೀಮೇಕ್ ಸಿನಿಮಾವನ್ನು ಕೈಗೆತ್ತಿಕೊಂಡಿದ್ದಾರೆ. ಈ ಚಿತ್ರದ ನಂತರ ದಿನಕರ್ ತಮ್ಮ ಸಿನಿಮಾವನ್ನು ಕೈಗೆತ್ತಿಕೊಳ್ಳಲಿದ್ದಾರೆ.

ನೀರಿಗಾಗಿ ಒಂದಾದ ಜೋಡಿ

ಜನಪ್ರಿಯ ಜೋಡಿ ಅನಂತ್‌ನಾಗ್ ಮತ್ತು ಲಕ್ಷ್ಮಿ ಜೋಡಿ ಬಹುವರ್ಷಗಳ ನಂತರ ಒಂದಾಗಿದೆ. ನೀರಿನ ಜಾಗೃತಿಗಾಗಿ ತಯಾರಾಗುತ್ತಿರುವ 'ಮಾರ್ಚ್ 22' ಚಿತ್ರದಲ್ಲಿ ಇವರು ಮತ್ತೆ ಒಟ್ಟಾಗಿ ನಟಿಸುತ್ತಿದ್ದಾರೆ. ಈ ಸಿನಿಮಾ ಕೊಡ್ಲು



ರಾಮಕೃಷ್ಣ ನಿರ್ದೇಶನದಲ್ಲಿ ಮೂಡಿಬರುತ್ತಿದೆ.

ಇಡೀ ಜಗತ್ತಿಗೆ ತಲೆನೋವಾಗಿದೆ ಜಲಕ್ಷಾಮ. ಈ ನೀರಿನ ಸಮಸ್ಯೆ ಅಂತಾರಾಷ್ಟ್ರೀಯ ಮಟ್ಟದಲ್ಲೂ ಸದ್ದು ಮಾಡುತ್ತಿದೆ. ಈ ಕುರಿತಾಗಿ ಜಾಗ ಮೂಡಿಸಲೆಂದೇ ಸಿನಿಮಾ ಮಾಡಿದ್ದಾರಂತೆ ನಿರ್ದೇಶಕರು. ಹಾಗಾಗಿ ಜಲದಿನವನ್ನೇ ತಮ್ಮ ಸಿನಿಮಾದ ಟೈಟಲ್ ಆಗಿ ಇಟ್ಟಿದ್ದಾರಂತೆ.

ಈ ಚಿತ್ರದ ಕತೆಯೇ ಸಂಕೀರ್ಣ. ನೀರಿನ ಸಮಸ್ಯೆಯ ವಿವಿಧ ಆಯಾಮಗಳ ಇಲ್ಲಿವೆ. "ನೀರಿನಿಂದಾಗುವ ಸಮಸ್ಯೆಗಳನ್ನು ಮತ್ತು ಅದಕ್ಕಿರುವ ಪರಿಹಾರಗಳ ಚಿತ್ರಕತೆಯಲ್ಲಿ ಹೇಳಿದ್ದೇವೆ. ಅಲ್ಲದೇ ಮುಂದೊಂದು ದಿನ ನೀರಿಗಾಗಿ ಯುದ್ಧ ನಡೆಯಬಹುದು ಎಂಬ ಎಚ್ಚರಿಕೆಯೂ ಇಲ್ಲಿದೆ. ಅದು ಆಗದಿರಲೆಂದು ಸಿನಿಮಾದಲ್ಲಿ ಹೇಳುತ್ತಿದ್ದೇವೆ" ಅಂತಾರೆ ನಿರ್ದೇಶಕರು.

ಅನಂತ್‌ನಾಗ್ ಮತ್ತು ಲಕ್ಷ್ಮಿ ಜೋಡಿಯ ಜತೆಗೆ ವಿನಯಾ ಪ್ರಸಾದ ಕೂಡ ತಾರಾಗಣದಲ್ಲಿದ್ದಾರೆ. ಉತ್ತರ ಕರ್ನಾಟಕ ಸೇರಿದಂತೆ ರಾಜ್ಯದ ಹಲ ಕಡೆ ಸಿನಿಮಾದ ಶೂಟಿಂಗ್ ನಡೆದಿದೆ.

ಸ್ಯಾಂಡಲ್‌ವುಡ್‌ಗೆ ಬಂದ ಹಾಲಿವುಡ್ ತಂತ್ರಜ್ಞರು






ಕನ್ನಡ ಸಿನಿಮಾ ರಂಗ ಹಲವು ಸಾಧ್ಯತೆಗಳಿಗೆ ಸಾಕ್ಷಿ ಆಗುತ್ತಿದೆ. ಹಾಗಾಗಿಯೇ ಹೊಸ ಹೊಸ ಪ್ರಯೋಗಗಳು ನಡೆಯುತ್ತಿವೆ. ಮಾರುಕಟ್ಟೆಯ ದೃಷ್ಟಿಯಿಂದ ಸ್ಯಾಂಡಲ್‌ವುಡ್ ವ್ಯಾಪ್ತಿ ಚಿಕ್ಕದಾಗಿದ್ದರೂ, ಬಜೆಟ್ ಹಿಗ್ಗಿಸಿಕೊಂಡು ಗುಣಮಟ್ಟದ ಸಿನಿಮಾ ನೀಡುತ್ತಿದ್ದಾರೆ. ಒಳ್ಳೆಯ ಸಿನಿಮಾ ತಯಾರಿಕೆಗಾಗಿಯೇ ಬೇರೆ ಬೇರೆ ಸಿನಿಮಾರಂಗದಿಂದ ಹೆಸರಾಂತ ತಂತ್ರಜ್ಞರನ್ನು ಕರೆತರುತ್ತಿದ್ದಾರೆ. ಈವರೆಗೂ ಕಾಲಿವುಡ್, ಬಾಲಿವುಡ್‌ನಿಂದ ಕನ್ನಡ ಸಿನಿಮಾ ಚಿತ್ರರಂಗಕ್ಕೆ ಟೆಕ್ನಿಷಿಯನ್‌ಗಳು ಬಂದಾಗಿದೆ. ಈ ಬಾರಿ ಹಾಲಿವುಡ್‌ನಿಂದ ತಂತ್ರಜ್ಞರನ್ನು ಕರೆತರುತ್ತಿದ್ದಾರೆ ನಿರ್ದೇಶಕ ಕೆ.ಎಂ.ಚೈತನ್ಯ. ಇವರ ಹೊಸ ಸಿನಿಮಾ 'ಆಕೆ'ಗಾಗಿ ಈ ತಂತ್ರಜ್ಞರು ಕೆಲಸ ಮಾಡಿದ್ದಾರೆ. 'ಪ್ರವೋಕ್ಡ್' ಚಿತ್ರಕ್ಕೆ ಸ್ಕ್ರೀನ್ ಪ್ಲೇ ಬರೆದ ಕಾರ್ಲ್ ಆಸ್ಟಿನ್, 'ಹ್ಯಾರಿ ಪಾಟರ್' ಚಿತ್ರಕ್ಕಾಗಿ ಕೆಲಸ ಮಾಡಿದ ಹಾಪ್ಸ್, 'ಗೇಮ್ ಆಫ್ ಥ್ರೋನ್ಸ್'ನ ನಿರ್ಮಾಣ ವಿನ್ಯಾಸಕಾರ ಪಾಲ್ ಬರ್ನ್ಸ್ ಮುಂತಾದವರು ಚೈತನ್ಯ ಅವರ ಚಿತ್ರಕ್ಕಾಗಿ ದುಡಿದಿದ್ದಾರೆ.

ಈಗಾಗಲೇ ಬಹುತೇಕ ಶೂಟಿಂಗ್ ಮುಗಿದಿದೆ. ಚಿರಂಜೀವಿ ಸರ್ಜಾ ಈ ಚಿತ್ರಕ್ಕೆ ನಾಯಕನಾದರೆ, ಶರ್ಮಿಳಾ ಮಾಂಡ್ರೆ ನಾಯಕಿ. ಐವತ್ತು ದಿನಗಳ ಕಾಲ ಲಂಡನ್ ಮತ್ತು ಬೆಂಗಳೂರಿನಲ್ಲಿ ಚಿತ್ರೀಕರಣ ಮಾಡಿದ್ದಾರೆ ನಿರ್ದೇಶಕರು. ಯೋಗೀಶ್ ದ್ವಾರಕೀಶ್ ಜತೆ ಲಂಡನ್ ಮೂಲದವರು ಈ ಚಿತ್ರಕ್ಕೆ ಹಣ ಹೂಡಿದ್ದಾರಂತೆ.

ಚಿಕ್ಕಣ್ಣ ಹೀರೋ



ಕಾಮಿಡಿ ಕಲಾವಿದ ಚಿಕ್ಕಣ್ಣ ಈಗ ಹೀರೋ ಆಗಿದ್ದಾರೆ. ನಾಗರಾಜ್ ಪೀಣ್ಯ ನಿರ್ದೇಶನದ 'ಭೂತಯ್ಯನ ಮೊಮ್ಮಗ ಅಯ್ಯು' ಸಿನಿಮಾದಲ್ಲಿ ಅವರು ನಾಯಕರಾಗಿ ನಟಿಸುತ್ತಿದ್ದಾರೆ. ಅಯ್ಯು ಪಾತ್ರವನ್ನು ಚಿಕ್ಕಣ್ಣ ನಿರ್ವಹಿಸುತ್ತಿದ್ದು, ಅದು ಮದುವೆಗಾಗಿ ಸರ್ಕಸ್ ಮಾಡುವ ಕ್ಯಾರೆಕ್ಟರ್ ಅಂತೆ. ಅಯ್ಯು ಮದುವೆಯಾಗಲು ಯಾವ ರೀತಿ ಕಷ್ಟ ಪಡುತ್ತಾನೆ ಅನ್ನುವುದೇ ಚಿತ್ರದ ವಿಶೇಷತೆ.

ಚಿಕ್ಕಣ್ಣ ಈವರೆಗೂ ಕಾಮಿಡಿ ಪಾತ್ರದಲ್ಲಿ ನಟಿಸಿದವರು. ಅಲ್ಲದೇ ಚಿಕ್ಕಪುಟ್ಟ ಪಾತ್ರಗಳನ್ನು ಮಾಡುತ್ತಾ ಬಂದವರು. ಈ ಸಿನಿಮಾದ ಮೂಲಕ ಹೀರೋ ಆಗಿ ಭಡ್ತಿ ಪಡೆದಿದ್ದಾರೆ. ಇದೊಂದು ಪಕ್ಕಾ ಕಾಮಿಡಿ ಸಿನಿಮಾವಾದ್ದರಿಂದ ತಮ್ಮ ಚಿತ್ರಕ್ಕೆ ಚಿಕ್ಕಣ್ಣ ಅವರನ್ನು ನಾಯಕನನ್ನಾಗಿ ಆಯ್ಕೆ ಮಾಡಿಕೊಂಡಿದ್ದಾರಂತೆ ನಿರ್ದೇಶಕರು. ಚಿತ್ರಕ್ಕೆ 'ಭೂತಯ್ಯನ ಮೊಮ್ಮಗ ಅಯ್ಯು' ಅಂತ ಹೆಸರಿಟ್ಟಿದ್ದರೂ, 'ಭೂತಯ್ಯನ ಮಗ ಅಯ್ಯು' ಸಿನಿಮಾಗೂ ಮತ್ತು ತಮ್ಮ ಸಿನಿಮಾಗೂ ಯಾವುದೇ ಸಂಬಂಧವಿಲ್ಲ ಎನ್ನುತ್ತಾರೆ ನಿರ್ದೇಶಕರು. ಅಂದಮಾತ್ರಕ್ಕೆ ಇದು ಗಂಭೀರವಾದ ಸಿನಿಮಾವಲ್ಲ ಎಂದು ಸ್ಪಷ್ಟಪಡಿಸಿದ್ದಾರೆ ಕೂಡ. ಕನ್ನಡದ ಅಷ್ಟೂ ಕಾಮಿಡಿ ಕಲಾವಿದರು ಈ ಸಿನಿಮಾದಲ್ಲಿ ನಟಿಸುತ್ತಿರುವುದು ಈ ಚಿತ್ರದ ವಿಶೇಷತೆಗಳಲ್ಲೊಂದು. ಅಲ್ಲದೇ ಚಿತ್ರವನ್ನು ಪಕ್ಕಾ ಹಳ್ಳಿಯ ಸೊಗಡಿನಲ್ಲಿ ಕಟ್ಟಿಕೊಡುತ್ತಿದ್ದಾರಂತೆ.

ಶೂಟಿಂಗ್ ಮಧ್ಯೆ ಹೋರಾಟ

ಆದಿವಾಸಿಗಳಿಗೆ ವಸತಿ ಕಲ್ಪಿಸುವ ವಿಚಾರದಲ್ಲಿ ಬಹುದೊಡ್ಡ ಧ್ವನಿ ಎತ್ತಿದವರು ನಟ ಚೇತನ್. ತಾನು ಸಿನಿಮಾ ಮಧ್ಯೆ ಹೋರಾಟ ಮಾಡುತ್ತಿಲ್ಲ; ಹೋರಾಟದ ನಡುವೆ ಸಿನಿಮಾ ಮಾಡುತ್ತಿದ್ದೇನೆಂದು ಹೇಳುವ ಮೂಲಕ ಅಚ್ಚರಿಗೆ ಕಾರಣವಾದರು. ಈಗ ಹೋರಾಟದ ನಡುವೆಯೇ ಒಂದು ಸಿನಿಮಾ ಮಾಡುತ್ತಿದ್ದಾರೆ. ಆ ಚಿತ್ರಕ್ಕೆ ಮಹೇಶ್ ಬಾಬು ಆಕ್ಷನ್ ಕಟ್ ಹೇಳುತ್ತಿದ್ದಾರೆ.

ಸದ್ಯ ಮೈಸೂರಿನಲ್ಲಿ ಬೀಡು ಬಿಟ್ಟಿರುವ ಸಿನಿಮಾ ತಂಡ, ಚಿತ್ರದ ಪ್ರಮುಖ ದೃಶ್ಯಗಳನ್ನು ಚಿತ್ರೀಕರಿಸಿಕೊಳ್ಳುತ್ತಿದೆ. ಶೂಟಿಂಗ್‌ಗೆ ಕೊಂಚ ವಿರಾಮ ಹೇಳಿ ಚೇತನ್ ಹೋರಾಟದಲ್ಲಿ ತೊಡಗಿದ್ದಾರೆ. ಚೇತನ್ ನಟನೆಯ ಈ ಸಿನಿಮಾದಲ್ಲಿ ಸಾಕಷ್ಟು ವಿಶೇಷತೆಗಳು ಇವೆಯಂತೆ. ಪ್ರಸ್ತುತ ಸಮಾಜದಲ್ಲಿ ನಡೆಯುತ್ತಿರುವ ಕೆಲವು ಘಟನೆಗಳನ್ನು ಚಿತ್ರಕತೆಯಲ್ಲಿ ಬಳಸಿಕೊಂಡಿದ್ದಾರಂತೆ. ಚೇತನ್ ಇಲ್ಲಿ ಟಿವಿ ಚಾನೆಲ್‌ವೊಂದರ ರಿಪೋರ್ಟರ್ ಆಗಿ ಕಾಣಿಸಿಕೊಂಡಿದ್ದು, ಅನ್ಯಾಯದ ವಿರುದ್ಧ ಏಕಾಂಗಿಯಾಗಿಯೇ ಹೋರಾಡುವ ಪಾತ್ರ ಅದಾಗಿದೆಯಂತೆ. ಸಮಾಜದಲ್ಲಿ ನಡೆಯುತ್ತಿರುವ ಘಟನೆಗಳೇ ಸಿನಿಮಾದ ಜೀವಾಳ. ಇದು ಔಟ್ ಅಂಡ್ ಔಟ್ ಕಮರ್ಷಿಯಲ್ ಸಿನಿಮಾ ಅಂದಿದ್ದಾರೆ ನಿರ್ದೇಶಕರು.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com